ನವೆಂಬರ್ 2016 ಸಂಚಿಕೆ – 4 ಸಂಪುಟ – 32

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ ........ 2

ಆಡಳಿತದಲ್ಲಿ ಕನ್ನಡ ........ 3
* **ಡಾ. ಕೆ. ಮುರಳೀಧರ**

ಕನ್ನಡ ತಂತ್ರಾಂಶ ಮತ್ತು ಸಂಪರ್ಕ ವೇದಿಕೆ ........ 5
* **ಜಿ. ಎನ್. ನರಸಿಂಹಮೂರ್ತಿ**

ಬಯಲು ಬಹಿರ್ದೆಸೆಮುಕ್ತದತ್ತ ದೃಢ ಹೆಜ್ಜೆ ........ 10
* **ಸ್ವಚ್ಛ ಭಾರತ್ ಮಿಷನ್, ಕರ್ನಾಟಕ ಸರ್ಕಾರ**

ತೆರಿಗೆ : ಭೂತ, ವರ್ತಮಾನ ಮತ್ತು ಭವಿಷ್ಯ ........ 12
* **ಟಿ. ಎನ್ . ಅಶೋಕ್**

ಜಿಎಸ್‌ಟಿ; ಭಾರತೀಯ ಆರ್ಥಿಕತೆಯ ಮನ್ವಂತರ ........ 16
* **ಡಾ. ರಂಜಿತ್ ಮೆಹತ**

ಸರಕು, ಸೇವಾ ತೆರಿಗೆ; ಸಾಂವಿಧಾನಿಕ ಸವಾಲು ........ 22
* **ಜಯಂತ್ ರಾಯ್ ಚೌಧುರಿ**

ಭಾರತದಲ್ಲಿ ತೆರಿಗೆ; ಪ್ರಗತಿಪರ ದಾಪುಗಾಲು ........ 24
* **ಮಾಲಿನಿ ಚಕ್ರವರ್ತಿ**

ಜಿಎಸ್‌ಟಿ; ಅಂತಾರಾಷ್ಟ್ರೀಯ ಅನುಭವ ........ 27
* **ಪ್ರವಾಕರ್ ಸಾಹೂ ಮತ್ತು ಅಶ್ವನಿ ಬಿಷ್ಣೋಯಿ**

ಕಪ್ಪು ಹಣದ ನಿವಾರಣೆಗೆ ಸರ್ಕಾರದ ಕ್ರಮ ........ 33
* **ದಿಲಾಶಾ ಸೇಠ್**

ಜಿಎಸ್‌ಟಿ: ಒಂದು ದೇಶ, ಒಂದು ತೆರಿಗೆ ........ 37
* **ಶಿಶಿರ್ ಸಿನ್ಹಾ**

ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ತೆರಿಗೆ ವ್ಯವಸ್ಥೆಯ ಸುಧಾರಣೆ.. 42
* **ಡಾ. ಟಿ. ಆರ್. ಚಂದ್ರಶೇಖರ**

ತೆರಿಗೆ ಸುಧಾರಣೆ: ಜಿ.ಎಸ್.ಟಿ–ಒಂದು ಮಹತ್ತರ ಹೆಜ್ಜೆ ........ 46
* **ಜಿ. ಸತೀಶ್**

ನಿಮಗಿದು ತಿಳಿದಿದೆಯೇ? ........ 51

ವಾರ್ತಾ ವಿಶೇಷ ........ 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |

**ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಮ್ಮ ಬೆಂಗಳೂರು ವಿಳಾಸಕ್ಕೆ ಕಳಿಸಬಹುದಾಗಿದೆ.**

**ಆನ್‌ಲೈನ್ ಮೂಲಕ ಚಂದಾದಾರರಾಗಲು ಸಂಪರ್ಕಿಸಬೇಕಾದ ವೆಬ್‌ಸೈಟ್**
Log on to
http://publicationsdivision.nic.in/,
in collaboration with bharatkosh.gov.in

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ಬೆಂಗಳೂರು ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಯೋಜನಾ

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಪಾದಕೀಯ




ತೆರಿಗೆ ಅಂದ ಕೂಡಲೆ ಅದು ಒಂದು ಬಗೆಯ ಹೊರೆ ಎನ್ನುವ ಭಾವನೆ ಸರ್ವೆ ಸಾಮಾನ್ಯವಾಗಿ ಕಂಡು ಬರುವ ಅಭಿಪ್ರಾಯವಾಗಿದೆ. ವ್ಯಕ್ತಿಯೊಬ್ಬ ತನ್ನ ವೈಯಕ್ತಿಕ ಆದಾಯದ ಮೇಲಿನ ತೆರಿಗೆಯನ್ನು ಪಾವತಿಸಲು ಧಾವಂತ ತೋರುವ ಚಿತ್ರಣ ಕಣ್ಣು ಮುಂದೆ ಬರುತ್ತದೆ ಅಥವಾ ದೊಡ್ಡ ವ್ಯಾಪಾರಿಯೊಬ್ಬನ ಮನೆ ಮೇಲೆ ಆದಾಯ ಕರ ಅಧಿಕಾರಿಗಳು ದಾಳಿ ಮಾಡಿ ಅಕ್ರಮ ಹಣ, ಸಂಪತ್ತು ಬಯಲಿಗೆಳೆಯುವ ದೃಶ್ಯ ಬರುತ್ತದೆ. ತೆರಿಗೆ ಎನ್ನುವುದು ಅನೇಕರಿಗೆ ಒಂದು ರೀತಿಯ ಭಯಬೀಳುವ, ಆತಂಕದ ವಿಚಾರ. ಆದರೆ ಯಾವುದೇ ಆರ್ಥಿಕತೆಯ ಅಭಿವೃದ್ಧಿಗೆ ತೆರಿಗೆ ಅತ್ಯಗತ್ಯ, ಅನಿವಾರ್ಯ ಕೂಡ. ಜನರು ಪಾವತಿಸುವ ಈ ತೆರಿಗೆಯೇ ರಸ್ತೆ, ಕಟ್ಟಡ, ಅಣೆಕಟ್ಟು ನಿರ್ಮಾಣ, ರೈಲ್ವೆ ಜಾಲ ನಿರೂಪಣೆ, ಆರೋಗ್ಯ – ಹೀಗೆ ಎಲ್ಲದಕ್ಕೂ ಹಣಕಾಸು ಒದಗಿಸುವ ಮೂಲವಾಗಿದೆ. ಹಿಂದೆ ರಾಜ ಮಹಾರಾಜರೂ ಕೂಡ ತೆರಿಗೆಯನ್ನು ಹಾಕುತ್ತಿದ್ದರು. ಅಶೋಕ ಮತ್ತು ಅಕ್ಬರ್ ನಂತಹ ಉತ್ತಮ ಆಡಳಿತಗಾರರು ವ್ಯವಸ್ಥಿತವಾದ ತೆರಿಗೆ ನೀತಿ ಮತ್ತು ತೆರಿಗೆ ಸಂಗ್ರಹಣಾ ಪದ್ಧತಿ ರೂಪಿಸಿದ್ದರು. ಈ ವ್ಯವಸ್ಥಿತ ಕ್ರಮದಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ತೊಂದರೆಯಾಗದೆ ತೆರಿಗೆ ಸಂಗ್ರಹಿಸಲು ಸಾಧ್ಯವಾಯಿತು. ಕೆಲ ಅರಸರು ತಮ್ಮ ವಿಲಾಸಿ ಜೀವನ ಹಾಗೂ ಮೇಲೇರಿ ಯುದ್ಧ ಮಾಡುವ ಚಾಳಿಯಿಂದಾಗಿ ಮನಬಂದಂತೆ ತೆರಿಗೆ ಹೇರುವ ಪ್ರವೃತ್ತಿ ರೂಢಿಸಿಕೊಂಡಿದ್ದರು. ಆಧುನಿಕ ಆರ್ಥಿಕತೆಯಲ್ಲಿ ವಿವಿಧ ನೀತಿ ನಿಯಮಾವಳಿಗಳ ಮೂಲಕ ತೆರಿಗೆಯನ್ನು ನಿಯಂತ್ರಿಸಲಾಗುತ್ತದೆ ಮತ್ತು ಜನ ಪ್ರತಿನಿಧಿಗಳು ಈ ನೀತಿಗಳ ಬಗ್ಗೆ ನಿಗಾ ವಹಿಸುತ್ತಾರೆ.

ಭಾರತದ ತೆರಿಗೆ ಪದ್ಧತಿ ಜಗತ್ತಿನಲ್ಲೇ ಅತಿ ಸಂಕೀರ್ಣ ಎನಿಸಿದೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ,ಸ್ಥಳೀಯ ಸಂಸ್ಥೆ ಆಡಳಿತಗಳು ವಿವಿಧ ರೀತಿಯ ತೆರಿಗೆಗಳನ್ನು ವಿಧಿಸಿ ಆದಾಯವನ್ನು ಕ್ರೋಢೀಕರಿಸುತ್ತವೆ. ವಿವಿಧ ಹಂತಗಳಲ್ಲಿ ವಿವಿಧ ರೀತಿಯ ತೆರಿಗೆಗಳನ್ನು ಹಾಕಲಾಗುತ್ತಿದೆ. ಜನಸಾಮಾನ್ಯರಿಗೆ ನೇರವಾಗಿ ಸಂಬಂಧಿಸಿದ ಆದಾಯ ತೆರಿಗೆ, ಸಂಪತ್ತು ತೆರಿಗೆಗಳಂತಹ ನೇರ ತೆರಿಗೆಗಳು, ವ್ಯಾಟ್, ಸೇವಾ ತೆರಿಗೆ, ಕಾರ್ಪೊರೆಟ್ ತೆರಿಗೆ ಮೂಲಕ ಸರಕು ಮತ್ತು ಸೇವೆಗಳಿಗಾಗಿ ತೆರುವ ಪರೋಕ್ಷ ತೆರಿಗೆಗಳೂ ಇದರಲ್ಲಿ ಸೇರಿವೆ. ಪ್ರತಿ ಬಜೆಟ್‌ನಲ್ಲಿಯೂ ಜನ ಸಾಮಾನ್ಯರು ಮತ್ತು ಕಾರ್ಪೊರೆಟ್‌ಗಳು ತೆರಿಗೆ ಸುಧಾರಣೆಯ ಕ್ರಮಗಳನ್ನು ನಿರೀಕ್ಷಿಸುತ್ತಾರೆ. ಜನ ಸಾಮಾನ್ಯರು ತೆರಿಗೆಯಲ್ಲಿ ಕನಿಷ್ಠ ಏರಿಕೆ ಬಯಸಿದರೆ, ಕಾರ್ಪೊರೆಟ್ ರಂಗ ತೆರಿಗೆಯಲ್ಲಿ ಪರಿಹಾರ ಬಯಸುತ್ತದೆ. ಸರ್ಕಾರ ಆರ್ಥಿಕ ಅಗತ್ಯಗಳಿಗೆ ತಕ್ಕಂತೆ ಈ ಬೇಡಿಕೆಗಳಿಗೆ ಸ್ಪಂದಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಭಾರತ ಸತತ ಆರ್ಥಿಕಾಭಿವೃದ್ಧಿ ದಾಖಲಿಸಿದೆ. ಆದರೂ ವಿದೇಶಿ ಮತ್ತು ಸ್ಥಳೀಯ ಬಂಡವಾಳ ಆಕರ್ಷಿಸಲು ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ ಸುಧಾರಣೆ ಅತ್ಯಗತ್ಯ.

ಜಾಗತಿಕ ರಂಗದಲ್ಲಿನ ಬದಲಾವಣೆಗಳಿಗೆ ಅನುಗುಣವಾಗಿ ಭಾರತೀಯ ತೆರಿಗೆ ವ್ಯವಸ್ಥೆಯಲ್ಲಿ ಕಳೆದ ದಶಕದಲ್ಲಿ ಕಾನೂನು ಉಪಕ್ರಮ ಸೇರಿದಂತೆ ಗಮನಾರ್ಹ ಸುಧಾರಣೆ ತರಲಾಗಿದೆ. ಇತ್ತೀಚೆಗೆ ಅನುಮೋದನೆ ಪಡೆದ ಸರಕು ಮತ್ತು ಸೇವಾ ತೆರಿಗೆ ಉಪಕ್ರಮ ಭಾರತೀಯ ತೆರಿಗೆ ಇತಿಹಾಸದಲ್ಲಿ ಅಭೂತಪೂರ್ವ ಎನಿಸಿದೆ. ಇದು ತೆರಿಗೆ ವ್ಯವಸ್ಥೆಯನ್ನು ಸುಧಾರಿಸುವ ಉಪಕ್ರಮವಾಗಿದೆ. ಇದರಿಂದ ಸರಕು ಮತ್ತು ಸೇವೆಗಳಿಗೆ ಒಂದೇ ಹಂತದಲ್ಲಿ ಮಾತ್ರ ತೆರಿಗೆ ವಿಧಿಸಿದಂತಾಗುತ್ತದೆ. ಈ ವಿಧೇಯಕಕ್ಕೆ ಕನಿಷ್ಠ ಅರ್ಧದಷ್ಟು ರಾಜ್ಯ ಸರ್ಕಾರಗಳಿಂದ ಸ್ಥಿರೀಕರಣ ಅಗತ್ಯವಿತ್ತು. ಈಗಾಗಲೇ 16 ರಾಜ್ಯಗಳು ಜಿಎಸ್‌ಟಿ ವಿಧೇಯಕವನ್ನು ಸ್ಥಿರೀಕರಿಸಿರುವುದರಿಂದ ಸಾಂವಿಧಾನಿಕ ಅಗತ್ಯ ಪೂರ್ತಿಗೊಂಡಂತಾಗಿದೆ. ಸರ್ಕಾರ ಏಪ್ರಿಲ್, 2017 ರಿಂದ ಸರಕು ಮತ್ತು ಸೇವಾ ತೆರಿಗೆ ಜಾರಿಗೊಳಿಸಲು ಸನ್ನದ್ಧವಾಗಿದೆ. ಈ ಕ್ರಮದಿಂದ ದೇಶದಲ್ಲಿ ವ್ಯಾಪಾರ ವಹಿವಾಟು ಪ್ರಕ್ರಿಯೆ ಸುಲಲಿತಗೊಂಡು ಭಾರತ ಜಾಗತಿಕ ವಾಣಿಜ್ಯ ಕ್ಷೇತ್ರದಲ್ಲಿ ಸ್ಪರ್ಧಿಸುವಂತಾಗುತ್ತದೆಯೆಂದು ನಿರೀಕ್ಷಿಸಲಾಗಿದೆ.


ಜಿಎಸ್‌ಟಿ, ತೆರಿಗೆ ಸರಳೀಕರಣದೆಡೆಯ ಬೃಹತ್ ಹೆಜ್ಜೆಯಾಗಿದೆ. ಇದುವರೆಗಿದ್ದ ಸಂಕೀರ್ಣ ತೆರಿಗೆ ವ್ಯವಸ್ಥೆಯಿಂದಾಗಿ, ತೆರಿಗೆಗಳ್ಳತನ, ಕಪ್ಪುಹಣಕ್ಕೆ ಅವಕಾಶವಾಗುತ್ತಿತ್ತು. ದೇಶದಲ್ಲಿ ಕಪ್ಪುಹಣದ್ದೇ ಸಮಾನಾಂತರ ಆರ್ಥಿಕತೆ ನಡೆಯುತ್ತಿದೆ ಎನ್ನುವಷ್ಟರ ಮಟ್ಟಿಗೆ ಅದರ ಪ್ರಮಾಣ ಬೆಳೆದಿತ್ತು. ಸರ್ಕಾರ ಕಪ್ಪುಹಣ ತಡೆಗಟ್ಟಲು ಮತ್ತು ಕಪ್ಪುಹಣ ಬಯಲಿಗೆಳೆಯಲು, ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಬಹುಮುಖ ಶಾಸನಾತ್ಮಕ ಆಡಳಿತಾತ್ಮಕ ಕಾರ್ಯತಂತ್ರ ರೂಪಿಸಿದೆ. ಸ್ವಯಂ ಆದಾಯ ಘೋಷಣೆ ಯೋಜನೆ, ವಿಶೇಷ ತನಿಖಾ ದಳ ರಚನೆ, ಹೊಸ ಸಮಗ್ರ ಕಾಯ್ದೆ – ಕಪ್ಪುಹಣ (ಅಘೋಷಿತ ವಿದೇಶಿ ಆದಾಯ ಮತ್ತು ಆಸ್ತಿ) ಮತ್ತು ಕರ ಕಾಯ್ದೆ ಹೇರಿಕೆ 2015, ಬೇನಾಮಿ ವಹಿವಾಟು (ನಿಷೇಧ) ತಿದ್ದುಪಡಿ ವಿಧೇಯಕ ಮೊದಲಾದವು ಸರ್ಕಾರ ಇತ್ತೀಚೆಗೆ ಕೈಗೊಂಡ ಪ್ರಮುಖ ಕ್ರಮಗಳಾಗಿವೆ.

ಭಾರತೀಯ ತೆರಿಗೆ ವ್ಯವಸ್ಥೆ, ಸಂಕೀರ್ಣ ರಚನೆಯಿಂದ ಮುಕ್ತ, ಸರಳ ಮತ್ತು ಭವಿಷ್ಯತ್ತನ್ನು ದೃಷ್ಟಿಯಲ್ಲಿಟ್ಟುಕೊಂಡ ವಿನ್ಯಾಸವಾಗಿ ಹೊರಹೊಮ್ಮುತ್ತಿದೆ. ಆ ಮೂಲಕ ಭಾರತವನ್ನು ಆದರ್ಶ, ಆಕರ್ಷಕ ಬಂಡವಾಳ ಹೂಡಿಕೆ ಮತ್ತು ತಯಾರಿಕಾ ತಾಣವನ್ನಾಗಿ ಹೊರಹೊಮ್ಮಿಸಲು ಬದ್ಧವಾಗಿದೆ.

❑

# ಆಡಳಿತದಲ್ಲಿ ಕನ್ನಡ

* ಡಾ. ಕೆ. ಮುರಳೀಧರ




ಯಾವುದೇ ಭಾಷೆ ಜೀವಂತವಾಗಿ ಉಳಿಯಬೇಕಾದರೆ ಅದಕ್ಕೆ ಪೂರಕವಾದ ಆಡಳಿತ ವ್ಯವಸ್ಥೆಯ ಕನಿಷ್ಠ ಅಗತ್ಯತೆ ಇದೆ. ಆಡಳಿತದಲ್ಲಿ ಭಾಷೆ ಎನ್ನುವುದು ಒಂದು ರೀತಿಯ ಕೊಡು–ಕೊಳ್ಳುವಿಕೆಯ ಸಂಬಂಧ. ಸರ್ಕಾರದ ಮೇಲೆ ಜನತೆಯ ಅಭಿಮಾನ ಉಳಿಯಬೇಕಾದರೆ ಪ್ರಾದೇಶಿಕ ಭಾಷೆಯನ್ನು ಸರ್ಕಾರ ಆಡಳಿತದಲ್ಲಿ ಜಾರಿಗೆ ತರಬೇಕು. ಹಾಗೆಯೇ ಜನತೆ ತಮ್ಮ ನಡೆನುಡಿಯಲ್ಲಿ ಭಾಷಾ ಪ್ರೀತಿಯನ್ನು ಸಮರ್ಥಿಸಬೇಕು.

ಕನ್ನಡಕ್ಕೆ 2008 ರಲ್ಲಿ ಕೇಂದ್ರ ಸರ್ಕಾರದ ವತಿಯಿಂದ ಸಿಕ್ಕ ಶಾಸ್ತ್ರೀಯ ಸ್ಥಾನಮಾನ, ಭಾಷೆಯೊಂದಕ್ಕೆ ಹಾಗೂ ಅದರ ಐತಿಹಾಸಿಕ ನಮ್ಯತೆಗೆ ಸಿಗಬಹುದಾದ ಉತ್ಕೃಷ್ಟ ಗರಿಮೆಯೇ ಹೌದು. ಕೆಲವು ಸಂಕುಚಿತ ಮನಸ್ಥಿತಿಗಳು, ಕಾನೂನಿನ ಚೌಕಟ್ಟಿನಲ್ಲಿ ಪ್ರಶ್ನಿಸಿದ ಇಂತಹ ಗೌರವವನ್ನು ಚೆನ್ನೈ ಉಚ್ಚನ್ಯಾಯಾಲಯ ಆಗಸ್ಟ್ 2016ರಲ್ಲಿ ವಜಾ ಮಾಡಿದ ಬಳಿಕ, ಕನ್ನಡ ಭಾಷೆಯ ಶಾಸ್ತ್ರೀಯ ಸ್ಥಾನಮಾನಕ್ಕೆ ಕಾನೂನು ಅಂಕಿತವೂ ದೊರಕಿದೆ. ಚೆನ್ನೈ ನ್ಯಾಯಾಲಯದ ಈ ನಿರ್ಧಾರ ಹಲವು ಆಯಾಮಗಳಲ್ಲಿ ಪ್ರಾಮುಖ್ಯತೆಯನ್ನು ಗಳಿಸಿಕೊಳ್ಳುತ್ತದೆ. ಕನ್ನಡ ಜನರಿಗೆ ಇದೊಂದು ಭಾವನಾತ್ಮಕ ಯಶಸ್ಸು. ತಮ್ಮ ಅಭಿವ್ಯಕ್ತಿ ಮಾಧ್ಯಮಕ್ಕೆ ಎರಡೂವರೆ ಸಾವಿರ ವರ್ಷಗಳ ಇತಿಹಾಸವಿದೆ ಎನ್ನುವುದು ಹಾಗೂ ಶತ ಶತಮಾನಗಳ ನಂತರವೂ ತಮ್ಮ ತಾಯಿ ಭಾಷೆ ಇಷ್ಟು ಸಮೃದ್ಧವಾದ ಜೀವಂತಿಕೆಯನ್ನು ಉಳಿಸಿಕೊಂಡಿದೆ ಎನ್ನುವುದು ಭಾಷಾಭಿಮಾನ ಹೊಂದಿರುವ ಯಾವುದೇ ವ್ಯಕ್ತಿಯನ್ನು ಅಚ್ಚರಿಯ ಹೆಮ್ಮೆಗೆ ಒಳಪಡಿಸುತ್ತದೆ.

### ಕನ್ನಡ ಶಾಶ್ವತ

20ನೇ ಶತಮಾನದಲ್ಲಿ ಸುಮಾರು 110 ಭಾಷೆಗಳು ಆಡುವವರಿಲ್ಲದೇ ಅಳಿದಿವೆ. ಪ್ರಸ್ತುತ ಶತಮಾನದ ಹದಿನಾರು ವರ್ಷಗಳಲ್ಲಿ ಈಗಾಗಲೇ 12 ಭಾಷೆಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡಿದೆ ಎಂದು ಎಥ್ನೋಲಾಗ್ ವರದಿ ಶೃತಪಡಿಸುತ್ತದೆ. ಜಗತ್ತಿನಲ್ಲಿರುವ 200 ದೇಶಗಳಲ್ಲಿ 7000ಕ್ಕೂ ಮೀರಿದ ಸಂಖ್ಯೆಯ ಭಾಷೆಗಳು; ಭಾರತವೊಂದರಲ್ಲೇ ಮಾತನಾಡುವ ಸುಮಾರು 200 ಭಾಷೆಗಳು, 600 ಉಪಭಾಷೆಗಳು, ಅಳಿಯುವ ಅಂಚಿನಲ್ಲಿಯೇ ಇರುವ ಸಾವಿರಾರು ಆಡುವ ಭಾಷೆಗಳ ನಡುವೆ ಕನ್ನಡವೆನ್ನುವುದು ಎರಡೂವರೆ ಸಾವಿರ ವರ್ಷಗಳಲ್ಲಿ ಹಲವು ಟಿಸಿಲುಗಳನ್ನೊಡೆಯುತ್ತಾ ಜೀವಂತ ಭಾಷೆಯಾಗಿ ಉಳಿದಿದೆ ಎನ್ನುವುದೇ ಅಭಿಮಾನದ ಸಂಗತಿ. ಚಾರಿತ್ರಿಕ ದೃಷ್ಟಿಕೋನದಿಂದ ನೋಡುವುದಾದರೆ, ಸಂವಹನ ಭಾಷೆಯ ಜೊತೆ ಜೊತೆಗೇ ನಾಗರಿಕತೆ ಬೆಳೆಯಿತು. ಹಾಗಾಗಿ, ಸಾಮಾಜಿಕ ಚಟುವಟಿಕೆಗಳು ಮನುಷ್ಯರನ್ನು ಹಲವು ರೀತಿಗಳಲ್ಲಿ ನಿಯಂತ್ರಿಸತೊಡಗಿದವು. ಸಾಮಾಜಿಕ ಜೀವನದ ಕಟ್ಟುಪಾಡುಗಳ ನಡುವೆ ಸಮಾಜ ನಿರ್ವಹಣಾ ವ್ಯವಸ್ಥೆ ಜಾರಿಯಾಗುತ್ತಾ ಬಂದಿತು. ಪರಿಣಾಮ ಹಲವು ಸಾಮ್ರಾಜ್ಯಗಳು ನಮ್ಮ ನೆಲವನ್ನು ಆಳಿದವು. ಕದಂಬರು, ಚಾಲುಕ್ಯರು, ಹೊಯ್ಸಳರು, ವಿಜಯನಗರ, ಮೈಸೂರು ಅರಸರಾದಿಯಾಗಿ ಎಲ್ಲರೂ ಕನ್ನಡವನ್ನು ಪೋಷಿಸಿದರು. ಆಡಳಿತ ವ್ಯವಸ್ಥೆಯ ಭಾಗವಾಗಿ ಭಾಷೆಯ ಮೂಲಕವೇ ವಚನವೆಂಬ ಸಂಸ್ಕೃತಿಯನ್ನು ಹುಟ್ಟು ಹಾಕಿದ ಬಸವಣ್ಣನನ್ನು ಈ ನಾಡು ಕಂಡಿತು. ಶಿಶುನಾಳ ಷರೀಫರಾದಿಯಾಗಿ ಹಲವಾರು ಸಂತರು ಭಾಷೆಯ ಮೂಲಕವೇ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಪರ್ಸಿಯನ್, ಉರ್ದು ವಿಜೃಂಭಿಸಿದ ಹಾಗೂ ಒಂದು ರೀತಿಯಲ್ಲಿ ಕನ್ನಡದ ಪ್ರದೇಶಗಳೆಲ್ಲವೂ ಮೊದಲ ಬಾರಿಗೆ ಒಂದೇ ಆಡಳಿತದಡಿ ಬಂದ ಟಿಪ್ಪು ಸುಲ್ತಾನನ ಕಾಲದಲ್ಲಿಯೂ ಕನ್ನಡ ಉಳಿಯಿತು. ಕನ್ನಡ ಭಾಷೆಯ ಸಮಗ್ರತೆ ಹಾಗೂ ಗಟ್ಟಿತನವನ್ನು ಅರಿತಿದ್ದ ರೈಸ್, ಕಿಟ್ಟೆಲ್, ಜೀಗ್ಲರ್‌ರಂಥಹ ಆಡಳಿತಗಾರರೂ ಸಹ ತಮ್ಮ ಆಡಳಿತದಲ್ಲಿ ಜನರನ್ನು ತಲುಪಲು ಜನರಾಡುವ ಕನ್ನಡ ಭಾಷೆಗೆ

* ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ. ಬೆಂಗಳೂರು. Email : secretary.kanpra@gmail.com

ಆದ್ಯತೆ ನೀಡಿ ಪೋಷಿಸಿ ಕನ್ನಡ ಭಾಷಾ ಬೆಳವಣಿಗೆಗೆ ತಮ್ಮ ಕೊಡುಗೆ ನೀಡಿರುತ್ತಾರೆ. ಇದು ಇಂದಿನ ದಿನಮಾನಗಳಲ್ಲಿಯೂ ಕನ್ನಡಿಗರಿಗೆ ಮಾದರಿಯಾಗಬಹುದಾಗಿದೆ. ಬಹಳ ಪ್ರಮುಖವಾದುದೆಂದರೆ, ಬ್ರಿಟಿಷ್ ಆಡಳಿತದ ಬಳಿಕ ಕರ್ನಾಟಕ ಎಂಬ ಕನ್ನಡ ನೆಲ, 22ಕ್ಕೂ ಹೆಚ್ಚು ಆಡಳಿತಗಳಲ್ಲಿ ಹಂಚಿ ಹೋಗಿದ್ದ ಭಾಗಗಳಿಂದ ಒಗ್ಗೂಡಿತು. ನುಡಿಯ ಮೂಲಕವೇ ಇಷ್ಟು ದೊಡ್ಡ ಸಂಖ್ಯೆಯ ವಿಭಿನ್ನ ಆಡಳಿತ ಪ್ರಾಂತಗಳಿಂದ ಒಂದು ನಾಡಾದ ಕರ್ನಾಟಕಕ್ಕೆ ಇರುವ ಆಂತರಿಕ ಸಮಗ್ರತೆ ಹಾಗೂ ಸಾಮರ್ಥ್ಯಗಳು ದೇಶದ ಯಾವುದೇ ಭಾಗಗಳ ಪ್ರದೇಶಗಳಿಗೆ ಇರಲು ಸಾಧ್ಯವಿಲ್ಲ.

### ಭಾಷೆ ಉಳಿಯಬೇಕಾದರೆ ವ್ಯವಸ್ಥೆ ಮುಖ್ಯ

ಯಾವುದೇ ಭಾಷೆ ಜೀವಂತವಾಗಿ ಉಳಿಯಬೇಕಾದರೆ ಅದಕ್ಕೆ ಪೂರಕವಾದ ಆಡಳಿತ ವ್ಯವಸ್ಥೆಯ ಕನಿಷ್ಠ ಅಗತ್ಯತೆ ಇದೆ. ಆಡಳಿತದಲ್ಲಿ ಭಾಷೆ ಎನ್ನುವುದು ಒಂದು ರೀತಿಯ ಕೊಡು–ಕೊಳ್ಳುವಿಕೆಯ ಸಂಬಂಧ. ಸರ್ಕಾರದ ಮೇಲೆ ಜನತೆಯ ಅಭಿಮಾನ ಉಳಿಯಬೇಕಾದರೆ ಪ್ರಾದೇಶಿಕ ಭಾಷೆಯನ್ನು ಸರ್ಕಾರ ಆಡಳಿತದಲ್ಲಿ ಜಾರಿಗೆ ತರಬೇಕು. ಹಾಗೆಯೇ ಜನತೆ ತಮ್ಮ ನಡೆನುಡಿಯಲ್ಲಿ ಭಾಷಾ ಪ್ರೀತಿಯನ್ನು ಸಮರ್ಥಿಸಬೇಕು. ಹಾಗಾದಾಗ, ಭಾಷೆ ಸಾಮಾಜಿಕವಾಗಿಯೂ ಇನ್ನೂ ಹೆಚ್ಚು ಸತ್ವಯುತವಾಗಿ ಬೆಳೆಯುತ್ತದೆ. ಈ ನಿಟ್ಟಿನಲ್ಲಿ ಸಾರ್ವಕಾಲಿಕ ಅರ್ಹತೆಯನ್ನು ಪಡೆಯುವ ಕುವೆಂಪುರವರ ಹೇಳಿಕೆ ಬಹಳ ಪ್ರಮುಖವಾಗುತ್ತದೆ. ಯಾವಾಗ ಅಧಿಕೃತ ಭಾಷೆಯಾಗಿ ಎಲ್ಲ ವ್ಯವಹಾರ ಕನ್ನಡದಲ್ಲಿ ನಡೆಯುವುದೋ, ಕೆಲಸಕ್ಕೆ ಸೇರಬೇಕಾದರೆ ಕನ್ನಡ ಕಲಿತಿರಬೇಕು ಎಂದಾಗುತ್ತದೋ ಆಗ ಕರ್ನಾಟಕದಲ್ಲಿ ಇರುವಂಥ ಎಲ್ಲ ಜನರೂ ಕನ್ನಡ ಕಲಿಯಬೇಕಾಗುತ್ತದೆ ಎಂದು ಅಂದೇ ಅವರು ಹೇಳಿದ್ದರು.

### ಈಗ ನಾವೇನಾಗಿದ್ದೇವೆ?

ವಸಾಹತುಶಾಹಿ ಆಡಳಿತ ನಂತರ ಸಂವಿಧಾನವು ಪ್ರಾರಂಭವಾದ ಹದಿನೈದು ವರ್ಷಗಳ ಅವಧಿಯ ಬಳಿಕ 1963ರಲ್ಲಿ ಅಂದಿನ ರಾಜ್ಯ ಸರ್ಕಾರವು ಆಡಳಿತ ವ್ಯವಸ್ಥೆಯಲ್ಲಿ ಕನ್ನಡವನ್ನು ಉಪಯೋಗಿಸಲೇಬೇಕಾದ ಭಾಷೆಯೆಂದು ಅಂಗೀಕರಿಸಿತು. ಅದರಂತೆ ಕನ್ನಡವು ಕರ್ನಾಟಕದ ರಾಜ್ಯಭಾಷೆಯಾಯಿತು. ಅಂದಿನಿಂದ, ಆಡಳಿತದಲ್ಲಿ ಹಂತ ಹಂತವಾಗಿ ಕನ್ನಡ ಬಳಕೆಯಾಗುವಂತೆ ಮಾಡುವ ಸರ್ವತೋಮುಖ ಪ್ರಯತ್ನಗಳು ನಡೆದವು. 1970ರಲ್ಲಿ ತಾಲ್ಲೂಕು ಮಟ್ಟದ ಎಲ್ಲಾ ಕಚೇರಿಗಳಲ್ಲಿ ಕನ್ನಡ ಬಳಕೆಯನ್ನು ಕಡ್ಡಾಯ ಮಾಡಲಾಯಿತು. 1972ರಲ್ಲಿ ಜಿಲ್ಲಾ ಹಂತದ ಕಚೇರಿಗಳನ್ನು ಸಹಾ ಕನ್ನಡ ಬಳಕೆಯ ವ್ಯಾಪ್ತಿಗೆ ತರಲಾಯಿತು. 1983ರಲ್ಲಿ ಸಚಿವಾಲಯವೂ ಸೇರಿದಂತೆ ಆಡಳಿತದ ಎಲ್ಲ ಹಂತದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕೆಂಬ ಆದೇಶವನ್ನು ಸರ್ಕಾರ ಹೊರಡಿಸಿತು. ಇಂತಹುದೊಂದು ಕ್ರಾಂತಿಕಾರಕ ತೀರ್ಮಾನ ಕರ್ನಾಟಕ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬಹಳ ದೊಡ್ಡ ಸಂಚಲನವನ್ನು ಸೃಷ್ಟಿ ಮಾಡಿತು. ಹಲವು ಸಮಸ್ಯೆಗಳು, ಪರಿಹಾರೋಪಾಯಗಳು, ಸರ್ಕಾರಗಳ ದೂರದೃಷ್ಟಿಯ ನಿರ್ಧಾರಗಳ ಕಾರಣ ಇಂದು ಕರ್ನಾಟಕದ ಆಡಳಿತ ತನ್ನ ವ್ಯವಸ್ಥೆಯಲ್ಲಿ ಕನ್ನಡವನ್ನು ಸಮರ್ಥವಾಗಿ ಅಳವಡಿಸಿಕೊಂಡಿರುವುದರಲ್ಲಿ ಹೆಚ್ಚು ಸಂಶಯ ಕಾಣಬರುವುದಿಲ್ಲ. ಈಗ ಕನ್ನಡ ಬಳಸದ ನೌಕರರು/ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಜರುಗಿಸುವ ಸ್ಪಷ್ಟ ಆದೇಶ ನಮ್ಮ ರಾಜ್ಯದಲ್ಲಿದೆ. ಆಡಳಿತದಲ್ಲಿ ಕನ್ನಡವನ್ನು ಕಾಯಲು ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದೆ. ಕನ್ನಡವನ್ನು ಬಳಸದಿರುವ ಅಧಿಕಾರಿಗಳ ಸಂಖ್ಯೆ ಕಡಿಮೆಯಿದೆ. ಕನ್ನಡವನ್ನು ಕಡೆಗಣಿಸಿರುವುದು ಗಮನಕ್ಕೆ ಬಂದ ಮರುಕ್ಷಣ ಅಂತಹ ಅಧಿಕಾರಿಗಳ ವಿರುದ್ಧ ಪ್ರಾಧಿಕಾರ ಅಂದಂದೇ ಶಿಸ್ತುಕ್ರಮದ ಚಾಟಿ ಬೀಸುತ್ತಿರುತ್ತದೆ. ಇದೆಲ್ಲದರ ಪರಿಣಾಮ, ಇಂದು ಪ್ರಾದೇಶಿಕ ಭಾಷೆಯನ್ನು ಸಮರ್ಥವಾಗಿ ತನ್ನ ಆಡಳಿತದಲ್ಲಿ ಬಳಸುತ್ತಿರುವ ಕೆಲವೇ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ. ಕರ್ನಾಟಕ ಸರ್ಕಾರದ ಭಾಷೆಗೆ ಸಂಬಂಧಿಸಿದ ಆದೇಶಗಳಿಂದ ಪ್ರಭಾವಿತರಾಗಿ ಬೇರೆ ರಾಜ್ಯಗಳು ಅದೇ ಮಾದರಿಯನ್ನು ಅನುಸರಿಸುವ ನಿದರ್ಶನಗಳು ನಮ್ಮ ಮುಂದಿವೆಯೆಂದಾಗ, ಅವು ಸಾಧನೆಯ ಸಾಕ್ಷಿಯಾಗಿ ನಮ್ಮನ್ನು ತಟ್ಟುತ್ತವೆ.

### ಮುಂದೇನಾಗಬೇಕು?


ಕೆಳಹಂತದ ಅಧಿಕಾರಿಗಳ ಕನ್ನಡ ಬದ್ಧತೆ ಸಾಮಾನ್ಯವಾಗಿ ಇಂದು ಪ್ರಶ್ನಾರ್ಹವೇನಲ್ಲ, ಇನ್ನು, ರಾಜ್ಯದ ಸೇವೆಯಲ್ಲಿರುವ ಅಖಿಲ ಭಾರತಸೇವೆಯ ಅಧಿಕಾರಿಗಳಿಗೆ ಕನ್ನಡ ಭಾಷಾ ತರಬೇತಿಯನ್ನು ಕಾಲಕಾಲಕ್ಕೆ ಪ್ರಾಧಿಕಾರ ನೀಡಿದೆ. ಮುಂದೆಯೂ ನೀಡಲಿದೆ. ಆದರೂ, ಹೊರರಾಜ್ಯಗಳಿಂದ ರಾಜ್ಯ ಸೇವೆಗೆ ನಿಯುಕ್ತಿಗೊಂಡು ನಮ್ಮ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಅಧಿಕಾರಿಗಳಲ್ಲಿ ಕನ್ನಡ ಭಾಷೆಯ ಬಗ್ಗೆ ಇನ್ನೂ ಹೆಚ್ಚಿನ ಬದ್ಧತೆ ಮೂಡಿದಲ್ಲಿ ರಾಜ್ಯ ಹೆಚ್ಚು ಅಭಿವೃದ್ಧಿ ಪರವಾಗುತ್ತದೆ ಎನ್ನುವುದು ನಿಸ್ಸಂಶಯ. ಈ ನಿಟ್ಟಿನಲ್ಲಿ ಡಾ. ಚಿರಂಜೀವಿ ಸಿಂಗ್, ಡಾ. ಅಜಯ್‌ಕುಮಾರ್ ಸಿಂಗ್‌ರಂಥ ಅನೇಕ ಅಧಿಕಾರಿಗಳನ್ನು ನೆನೆಸಿಕೊಳ್ಳಬಹುದು. ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದ ಇಷ್ಟು ದಶಕಗಳಲ್ಲಿ ಸರ್ಕಾರಗಳ ಭಾಷಾ ಬದ್ಧತೆಗೆ ಕುರುಹಾಗಿ ನೂರಾರು ಆದೇಶಗಳಿವೆ. ಈ ಆದೇಶಗಳು "ಆಡಳಿತದಲ್ಲಿ ಕನ್ನಡ" ಎಂಬ ಹೇಳಿಕೆಯ ವ್ಯಾಪ್ತಿಯನ್ನು ಮೀರಿದೆಯೆಂದೇ ಭಾವಿಸೋಣ. ಇದಕ್ಕೆ ಚೈತನ್ಯ ದ್ರವದ ಹಾಗೆ ಮೇಲ್ವರ್ಗದ ಆಡಳಿತ ಯಂತ್ರದಲ್ಲಿ ಭಾಷಾ ಬದ್ಧತೆ ಮೂಡಬೇಕು. ಇದಕ್ಕಾಗಿ ರಾಜಕೀಯ ಪಕ್ಷಗಳು ಇನ್ನೂ ಹೆಚ್ಚಿನ ಇಚ್ಛಾ ಶಕ್ತಿಯನ್ನು ಪ್ರದರ್ಶಿಸಬೇಕು. ಶಿಕ್ಷಣದಲ್ಲಿ ಕನ್ನಡ, ಉದ್ಯೋಗದಲ್ಲಿ ಕನ್ನಡ ಎನ್ನುವ ಆಶಯಗಳು, ಘೋಷಣೆಗಳ ವ್ಯಾಪ್ತಿಯನ್ನು ದಾಟಿ ಸಮರ್ಥವಾಗಿ ಅನುಷ್ಠಾನವಾಗಬೇಕು. ಆಗ ಆಡಳಿತದಲ್ಲಿ ಕನ್ನಡವೆಂಬುದು ಸಮರ್ಥ ಪ್ರತಿಫಲವಾಗಿ ನಮ್ಮ ರಾಜ್ಯವನ್ನು ಹೊಸ ಮನ್ವಂತರಕ್ಕೆ ಅನುವು ಮಾಡುತ್ತದೆ. ಸಮಾಜ – ಸರ್ಕಾರಗಳ ನಡುವೆ ಇನ್ನೂ ಹೆಚ್ಚಿನ ಆಪ್ತತೆ ಚಿಗುರೊಡೆಯುತ್ತದೆ. ❑

**ಪ್ರಧಾನ ಮಂತ್ರಿಯವರು ಕನ್ನಡದಲ್ಲಿ ಕಳುಹಿಸಿದ ಟ್ವೀಟ್ ಸಂದೇಶ**



# ಕನ್ನಡ ತಂತ್ರಾಂಶ ಮತ್ತು ಸಂಪರ್ಕ ವೇದಿಕೆ

* ಜಿ. ಎನ್. ನರಸಿಂಹಮೂರ್ತಿ




ಮಾಹಿತಿ ತಂತ್ರಜ್ಞಾನ ಜಗತ್ತಿನ ಎಲ್ಲೆಡೆಯಂತೆ ಕರ್ನಾಟಕದಲ್ಲಿಯೂ ವ್ಯಾಪಿಸಿ ನಮ್ಮ ಜೀವನಕ್ರಮವನ್ನು ಪ್ರಭಾವಿಸಿದೆ. ಇಲ್ಲೆಲ್ಲ ಕನ್ನಡವನ್ನು ಬಳಸಬಹುದು ಎಂಬುದು ಸಂತೋಷದ ಸಂಗತಿಯಾಗಿದೆ.

ಕನ್ನಡ ತಂತ್ರಾಂಶದ ಇತಿಹಾಸ 1980ರ ದಶಕದಷ್ಟು ಹಳೆಯದು. ಅಮೆರಿಕದ ಪರ್ಡ್ಯೂ ವಿಶ್ವವಿದ್ಯಾನಿಲಯದ ಕಸ್ತೂರಿ ರಂಗಾಚಾರ್, ಉಡುಪಿಯ ಕೆ.ಪಿ.ರಾವ್ ಮತ್ತು ಕೇಂದ್ರ ಸರ್ಕಾರದ ಸಿ–ಡಾಕ್ ಸಂಸ್ಥೆ ಇಂತಹ ತಂತ್ರಾಂಶಗಳನ್ನು ರೂಪಿಸಿದರು. ಆದರೆ ತೊಂಭತ್ತರ ದಶಕದತನಕ ಇದ್ದಂತಹ ಡಿಸ್ಕ್ ಆಪರೇಟಿಂಗ್ ಸಿಸ್ಟಮ್ ಎಂಬ ಕಾರ್ಯಾಚರಣೆ ವ್ಯವಸ್ಥೆಯಲ್ಲಿ ಇವನ್ನು ಬಳಸಬೇಕಾಗಿತ್ತು. ಆದರೆ ವಿಂಡೋಸ್ ಕಾರ್ಯಾಚರಣೆ ಲಭ್ಯವಾದ ಕೂಡಲೇ ಅನೇಕ ಉತ್ಸಾಹಿಗಳು ಬೇರೆಬೇರೆ ಬಗೆಯ ತಂತ್ರಾಂಶಗಳನ್ನು ರೂಪಿಸಿಲು ಪ್ರಾರಂಭಿಸಿದರು. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮೊದಲಿಂದ ಕಡೆಯವರೆಗೂ ಯಾವುದೇ ಕಾರ್ಯ ಒಬ್ಬ ವ್ಯಕ್ತಿಯಿಂದ ಅಥವಾ ಒಂದು ಸ್ಥಳದಲ್ಲಿ ನಡೆಯುವುದಿಲ್ಲ. ಆದರೂ. ಹಾಗೆಯೇ 1987ರಲ್ಲಿ ತಯಾರಿಸಿದ ಶಬ್ದರತ್ನ ತಂತ್ರಾಂಶವನ್ನು ಕನ್ನಡದ ಪ್ರಪ್ರಥಮ ಪದಸಂಸ್ಕರಣವೆಂದು ಗುರುತಿಸಲಾಗಿದೆ. ಇದೇ ಸಂಸ್ಥೆಯ 'ವೀನಸ್' ಕನ್ನಡ ಡಿ ಟಿ ಪಿ ತಂತ್ರಾಂಶ 1989ರಲ್ಲಿ, ಐನೆಕ್ಸ್ ಎಂಬ ದತ್ತಾಂಶ ತಂತ್ರಾಂಶ 1993ರಲ್ಲಿ ಬಿಡುಗಡೆಯಾದವು. ಮುಂದೆ ವಿಂಡೋಸ್ ವಾತಾವರಣದಲ್ಲಿ ಬಳಸಲು 1994ರಲ್ಲಿ 'ವಿನ್‌ಕೀ' ತಂತ್ರಾಂಶ, 1999ರಲ್ಲಿ ಭಾರತೀಯ ಭಾಷೆಗಳಿಗಾಗಿ ಎಂ ಎಸ್ ಆಫೀಸ್ ತಂತ್ರಾಂಶವನ್ನೇ ಹೋಲುವ 'ಕಾರ್ಯಾಲಯ' ತಂತ್ರಾಂಶವನ್ನು ಸಿದ್ಧಪಡಿಸಿದರು. ಬೆಂಗಳೂರಿನಲ್ಲಿ ಸೊನಾಟಾ ಎಂಬ ಸಂಸ್ಥೆ ಪ್ರಕಾಶಕ್ ಎನ್ನುವ ತಂತ್ರಾಂಶವನ್ನು ರೂಪಿಸಿ ಅತ್ಯಂತ ಜನಪ್ರಿಯವಾದ ತಂತ್ರಾಂಶ ಎನಿಸಿಕೊಂಡಿತು. ಈಗಲೂ ಮೈಸೂರಿನಲ್ಲಿ ಹಲವಾರು ಮುದ್ರಕರು ಇದನ್ನು ತಮ್ಮ ಪುಸ್ತಕಗಳ ಪ್ರಕಟಣೆಗೆ ಬಳಸುತ್ತಿದ್ದಾರೆ. ಏಸಸ್ ಕನ್ಸಲ್ಟೆಂಟ್ಸ್ ಎಂಬ ಪುಣೆಯ ಸಂಸ್ಥೆ ಬೆಂಗಳೂರಿನಲ್ಲಿ ಕಚೇರಿಗಳನ್ನು ತೆರೆದು ಆಕೃತಿ ಎಂಬ ತಂತ್ರಾಂಶವನ್ನು ರೂಪಿಸಿ ಕನ್ನಡಿಗರಿಗೆ ಒದಗಿಸಿತು. ಕಡೆಗೆ ಅದು ಸೈಬರ್‌ಸ್ಕೇಪ್ ಮಲ್ಟಿಮೀಡಿಯಾ ಎಂಬ ಹೆಸರಿನಲ್ಲಿ ಬೆಂಗಳೂರಿನಲ್ಲಿ ನೆಲೆ ನಿಂತಿತು. ಸುಂದರವಾದ ಅಕ್ಷರಶೈಲಿಗಳಿಂದಾಗಿ ಇದನ್ನು ಬೆಂಗಳೂರಿನಲ್ಲಿ ಅನೇಕ ಮುದ್ರಕರು ಪುಸ್ತಕ ಪ್ರಕಟಣೆಯಲ್ಲಿ ಹೆಚ್ಚಾಗಿ ಬಳಸುತ್ತಿದ್ದರು.

ಇನ್ನೊಂದು ಸಂಸ್ಥೆ ಆಪಲ್ ಸಾಫ್ಟ್ ತಯಾರಿಸಿದ ಸುರಭಿ ತಂತ್ರಾಂಶ ಕೂಡ ಸರ್ಕಾರಿ ಕಚೇರಿಗಳಲ್ಲಿ ಹೆಚ್ಚಿನ ಮಟ್ಟಿಗೆ ಬಳಕೆಯಾಯಿತು. ಕೇರಳ ಮೂಲದ ಸಂಸ್ಥೆಯೊಂದು ಬೆಂಗಳೂರಿನಲ್ಲಿ ಕೈರಳಿ ಎಂಬ ತಂತ್ರಾಂಶವನ್ನು ಸಿದ್ಧಪಡಿಸಿ ಮಾರಾಟಕ್ಕೆ ಲಭ್ಯವಾಗಿಸಿತು. ಬೆಂಗಳೂರಿನವರಾದ, ಸದ್ಯ ಅಮೆರಿಕದಲ್ಲಿ ನೆಲೆಸಿರುವ, ಕನ್ನಡದ ಬಗ್ಗೆ ವಿಶೇಷ ಒಲವಿರುವ ಶ್ರೀ ಶೇಷಾದ್ರಿವಾಸು ಚಂದ್ರಶೇಖರನ್‌ರವರು ಜನವರಿ 1998ರಲ್ಲಿ 'ಬರಹ' ಕನ್ನಡ ತಂತ್ರಾಂಶದ ಮೊದಲ ಆವೃತ್ತಿಯನ್ನು ತಯಾರಿಸಿ ಕನ್ನಡಿಗರಿಗೆ ನೀಡಿದರು. ಇದು ವಿಂಡೋಸ್ ತಂತ್ರಾಂಶದಲ್ಲಿ ದೊರೆತ ಮೊದಲ ಉಚಿತ ಕನ್ನಡ ತಂತ್ರಾಂಶ. ಈಗ ಇದು ಉಚಿತವಾಗಿ ದೊರೆಯುವುದಿಲ್ಲ. 1997ರಲ್ಲಿ ಕನ್ನಡ ಗಣಕ ಪರಿಷತ್ತು ಸಂಸ್ಥೆ ಪ್ರಾರಂಭವಾಗಿ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಕೆಲಸ ಮಾಡಲಾರಂಭಿಸಿತು. ನವೆಂಬರ್ 2001ರಲ್ಲಿ ಕನ್ನಡ ಗಣಕ ಪರಿಷತ್ತು ಕಲಿತ (ಕನ್ನಡ ಲಿಪಿ ತಂತ್ರಾಂಶ) ಎಂಬ ಕನ್ನಡ ತಂತ್ರಾಂಶವನ್ನು ಬಿಡುಗಡೆ

* ಕಾರ್ಯದರ್ಶಿ, ಕರ್ನಾಟಕ ಗಣಕ ಪರಿಷತ್, ಬೆಂಗಳೂರು. E-mail : gnnarasimha@gmail.com

ಮಾಡಿತು. ಇದರ ಕುರಿತಾಗಿ ಬಂದ ಸಲಹೆ ಸೂಚನೆಗಳನ್ನು ಆಧರಿಸಿ ಮುಂದಿನ ಆವೃತ್ತಿಯನ್ನು ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ ಅದನ್ನು ನುಡಿ 2.0 ಎಬ ಹೆಸರಿನಲ್ಲಿ ಬಿಡುಗಡೆ ಮಾಡಲಾಯಿತು. ನವಂಬರ್ 2002ರಲ್ಲಿ ನುಡಿ3.0 ಆವೃತ್ತಿ ಬಿಡುಗಡೆ ಆಯಿತು. ಡಿಸೆಂಬರ್ 2003ರಲ್ಲಿ ನುಡಿ 4.0 ಆವೃತ್ತಿ ಬಿಡುಗಡೆಯಾಯಿತು. ಹತ್ತು ವರ್ಷಗಳ ನಂತರ ಜನವರಿ 2014ರಲ್ಲಿ ನುಡಿ 5.0 ಆವೃತ್ತಿ ಬಿಡುಗಡೆಯಾಯಿತು. ನುಡಿ ತಂತ್ರಾಂಶಕ್ಕೆ ರಾಷ್ಟ್ರೀಯ ನೆಲೆಯ **"ಮಂಥನ್"** ಪ್ರಶಸ್ತಿ ಲಭಿಸಿದೆ. ಕನ್ನಡದಲ್ಲಿ ಅನ್ವಯ ತಂತ್ರಾಂಶವನ್ನು ರೂಪಿಸಲು ಅಗತ್ಯವಾದ ತಂತ್ರಾಂಶ ಸಲಕರಣೆಗಳ ಗುಚ್ಛವೊಂದನ್ನು ಒದಗಿಸಿದ್ದು ನುಡಿಯ ವೈಶಿಷ್ಟ್ಯ. ಇದನ್ನು ಬಳಸಿ ಅನೇಕರು ಯಶಸ್ವಿಯಾಗಿ ಬ್ಯಾಂಕಿಂಗ್ ವ್ಯವಹಾರಗಳ ನಿರ್ವಹಣೆ, ಶಾಲಾ ಆಡಳಿತ ಮತ್ತು ಇತರ ಅಂಶಗಳ ನಿರ್ವಹಣೆ ಮುಂತಾದ ಕ್ಷೇತ್ರಗಳಲ್ಲಿ ತಂತ್ರಾಂಶಗಳನ್ನು ರೂಪಿಸಿದ್ದಾರೆ. ಶ್ರೀ ಕೆ.ಜಿ.ಚಂದ್ರಶೇಖರ್ ಎನ್ನುವ ತಂತ್ರಾಂಶ ಪರಿಣತರು **"ಕನ್ನಡ ಕಚೇರಿ"** ಎನ್ನುವ ಅನ್ವಯ ತಂತ್ರಾಂಶವೊಂದನ್ನು ಸರ್ಕಾರಿ ಕಚೇರಿಗಳಿಗಾಗಿ ಸಿದ್ಧಪಡಿಸಿದರು.

ಆಡಳಿತ ಕ್ಷೇತ್ರಗಳಲ್ಲಿಯೂ ತಂತ್ರಾಂಶ ಯಶಸ್ವಿಯಾಗಿ ಬಳಕೆಯಾಗಿದೆ. ಕರ್ನಾಟಕ ಸರ್ಕಾರ ತೊಂಭತ್ತರ ದಶಕದಲ್ಲಿಯೇ ಸಿ–ಡಾಕ್ ಮತ್ತು ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ಭೂಮಿ ಎಂಬ ತಂತ್ರಾಂಶವನ್ನು ಸಿದ್ಧಪಡಿಸಿತ್ತು. ಈಗ ಇದು ಮತ್ತಷ್ಟು ವಿಸ್ತೃತವಾಗಿ ಇದು ಕರ್ನಾಟಕದ ರೈತರ ಭೂ ಹಿಡುವಳಿಗಳ ದಾಖಲೆಗಳ ನಿರ್ವಹಣೆ ಮಾಡುತ್ತಿದೆ. ಇದಕ್ಕೆ ಒಂದು ಜಾಗತಿಕ ಪ್ರಮುಖ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ) ಕಡತ ಚಲನೆಯ ಪಥದ ಅನುಸರಣೆಗೆ ಒಂದು ತಂತ್ರಾಂಶವನ್ನು ಸಿದ್ಧಪಡಿಸಿತು. ಈಗಲೂ ಅದು ಯಶಸ್ವಿಯಾಗಿ ಬಳಕೆಯಾಗುತ್ತಿದೆ. ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶನಾಲಯ ರಾಜ್ಯದಲ್ಲಿಯೇ ಪ್ರಥಮ ಎನ್ನಿಸಿಕೊಂಡ ಕಾಗದರಹಿತ ಕಚೇರಿಯಾಗಿ ಕೆಲಸ ನಿರ್ವಹಿಸುತ್ತಿರುವುದು ಒಂದು ಹೆಮ್ಮೆಯ ಸಂಗತಿ. ಇತ್ತೀಚೆಗೆ ಒಂದು ಕಾರ್ಯಕ್ರಮದ




ಎಲ್ಲ ಕಲಾವಿದರಿಗೂ ನೇರವಾಗಿ ಅವರ ಖಾತೆಗೇ ಹಣ ಸಂದಾಯ ಮಾಡಲಾಯಿತು. ಇಂತಹ ಒಳ್ಳೆಯ ಪ್ರವೃತ್ತಿಯನ್ನು ಈ ವ್ಯವಸ್ಥೆ ಹುಟ್ಟುಹಾಕಿದೆ. ನಮ್ಮ ಪಂಚಾಯಿತಿಗಳೂ ಈಗ ಗಣಕಗಳನ್ನು ಬಳಸುವುದರಲ್ಲಿ ಹಿಂದೆ ಬಿದ್ದಿಲ್ಲ. ಅವುಗಳಲ್ಲಿ "ಪಂಚತಂತ್ರ" ಎಂಬ ತಂತ್ರಾಂಶ ಬಳಕೆಯಾಗುತ್ತಿದೆ. ಇದರಲ್ಲಿ ಪಂಚಾಯಿತಿಯ ಆಡಳಿತ ನಿರ್ವಹಣೆಯ ಎಲ್ಲಾ ಅಂಶಗಳನ್ನೂ ಅಳವಡಿಸಲಾಗಿದೆ. ಈ ತಂತ್ರಾಂಶಕ್ಕೂ ವಿದ್ಯುನ್ಮಾನ ಆಡಳಿತ 2011ರ ರಾಷ್ಟ್ರೀಯ ನೆಲೆಯ ಸ್ವರ್ಣ ಪ್ರಶಸ್ತಿ ದೊರೆತಿದೆ. ಇವುಗಳ ಜೊತೆಗೆ ಮೋಜಿಣಿ ಎಂಬ ತಂತ್ರಾಂಶವನ್ನೂ ಬಳಸಲಾಗುತ್ತಿದೆ

ಜನರಿಗೆ ಆಗಿಂದ್ದಾಗ್ಗೆ ಅನೇಕ ಬಗೆಯ ಮಾಹಿತಿಗಳು ಅಗತ್ಯವಾಗುತ್ತವೆ. ಅವುಗಳನ್ನು ಸರ್ಕಾರದಿಂದ ಪಡೆದುಕೊಳ್ಳಲು ಅವರು ಪಡಿಪಾಟಲು ಪಡುತ್ತಿದ್ದರು. ಜನರ ಈ ಕಷ್ಟಗಳನ್ನು ತಪ್ಪಿಸಲು ರಾಷ್ಟ್ರಾದ್ಯಂತ ಅಟಲ್‌ಜಿ ಜನಸ್ನೇಹಿ ಕೇಂದ್ರ ಪರಿಯೋಜನೆಯನ್ನು ಜಾರಿಗೆ ತರಲಾಯಿತು. ಕರ್ನಾಟಕ ರಾಜ್ಯದಾದ್ಯಂತ 777 ಹೋಬಳಿ ಕೇಂದ್ರಗಳಲ್ಲಿ 25.12.2012 ರಂದು ಇದನ್ನು ಪ್ರಾರಂಭಿಸಲಾಗಿದೆ. ಅನುಸ್ಥಾಪಿತವಾಗಿರುವ 777 ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲಿ 176 ಕೇಂದ್ರಗಳು ತಾಲ್ಲೂಕು ಸ್ಥಳಗಳಲ್ಲಿ, 329 ಕೇಂದ್ರಗಳು ಈಗಿರುವ ನಾಡಕಚೇರಿಗಳಲ್ಲಿ ಇವೆ. ಹೊಸದಾಗಿ 272 ನಾಡಕಚೇರಿಗಳನ್ನು ಪ್ರಾರಂಭಿಸಲಾಗಿದೆ. ಈ 272 ಕಚೇರಿಗಳಿಗೆ ಉಪ ತಹಸೀಲ್ದಾರ್ ಮತ್ತು ಗ್ರಾಮಲೆಕ್ಕಾಧಿಕಾರಿ ಹುದ್ದೆಗಳನ್ನು ಸೃಜಿಸಿ ಎಲ್ಲಾ 777 ಕೇಂದ್ರಗಳಲ್ಲಿಯೂ ಸಿಬ್ಬಂದಿ ಹಾಜರಾಗಲು ವ್ಯವಸ್ಥೆ ಮಾಡಿದೆ. ಇದು ಈ ಹಿಂದೆ ಇದ್ದ ನೆಮ್ಮದಿ ಎಂಬ ತಂತ್ರಾಂಶ ವ್ಯವಸ್ಥೆಯ ಪರಿಷ್ಕೃತ ರೂಪ. ಈ ವ್ಯವಸ್ಥೆಯ ಮೂಲಕ ಈಗ ಜನರಿಗೆ ಈ ಮುಂದೆ ನಮೂದಿಸಿರುವ ಮಾಹಿತಿಗಳು ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲಿ ತತ್‌ಕ್ಷಣ ಲಭ್ಯವಾಗುತ್ತವೆ.

* ಜಾತಿ ಮತ್ತು ವರಮಾನ ಪ್ರಮಾಣ ಪತ್ರಗಳು. * ಜಾತಿ ಪ್ರಮಾಣ ಪತ್ರ (ಎ – ವರ್ಗ). * ಜಾತಿ ಪ್ರಮಾಣ ಪತ್ರ (ಪರಿಶಿಷ್ಟ ಜಾತಿ/ ಪಂಗಡ). * ಇತರ ಹಿಂದುಳಿದ ಜನಾಂಗ ಪ್ರಮಾಣ ಪತ್ರ (ಕೇಂದ್ರ). * ಉದ್ಯೋಗಕ್ಕಾಗಿ ವರಮಾನ ಪ್ರಮಾಣ ಪತ್ರ. * ಅನುಕಂಪಾಧಾರಿತ ಉದ್ಯೋಗಕ್ಕಾಗಿ ವರಮಾನ ಪ್ರಮಾಣ ಪತ್ರ. *ಜನಸಂಖ್ಯಾ ಪ್ರಮಾಣ ಪತ್ರ. * ಜಾತಿ ಮತ್ತು ವರಮಾನ ಪ್ರಮಾಣ ಪತ್ರಗಳು. * ಗುತ್ತಿಗೇರಾಹಿತ್ಯ ಪ್ರಮಾಣಪತ್ರ. * ಭೂರಾಹಿತ್ಯ ಪ್ರಮಾಣಪತ್ರ. * ಸಣ್ಣ / ಸೀಮಾಂತ ರೈತ ಪ್ರಮಾಣಪತ್ರ. * ಕೃಷಿ ಕಾರ್ಮಿಕ ಪ್ರಮಾಣಪತ್ರ. * ಭೂ ಹಿಡುವಳಿ ಪ್ರಮಾಣ ಪತ್ರ. * ಋಣ ಪರಿಹಾರ ಸಾಮರ್ಥ್ಯ ಪ್ರಮಾಣ ಪತ್ರ. * ರಾಷ್ಟ್ರೀಯ ಕುಟುಂಬ ಅನುಕೂಲ ಯೋಜನೆ ಪ್ರಮಾಣ ಪತ್ರ.

ಗಣಕಗಳ ಮೂಲಕ ಕನ್ನಡದ ಬೇರೆಬೇರೆ ಕೆಲಸಗಳನ್ನು ಮಾಡುವತ್ತಲೂ ತಂತ್ರಾಂಶ ಪರಿಣತರ ಗಮನ ಹರಿಯಿತು. ಕನ್ನಡದಲ್ಲಿ ದತ್ತ ಸಂಸ್ಕರಣೆ, ಬಹುಮಾಧ್ಯಮ ಅನ್ವಯಗಳು ಮತ್ತು ಅಂತರಜಾಲತಾಣಗಳನ್ನು ರೂಪಿಸುವುದು ಮುಂತಾದವುಗಳನ್ನು ಮಾಡುವುದು ಸಾಧ್ಯ ಎಂಬುದು ನಿರೂಪಿತವಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ಕನ್ನಡ ಸಂಕ್ಷಿಪ್ತ ನಿಘಂಟು, ಪಂಪನ ಎರಡು ಕಾವ್ಯಗಳು ಮುಂತಾದವನ್ನು ಅಡಕ ಮುದ್ರಿಕೆಯ ರೂಪದಲ್ಲಿ ಪ್ರಸ್ತುತಪಡಿಸಲಾಯಿತು. ಕನ್ನಡ ಗಣಕಪರಿಷತ್ತು,ಮೈಸೂರು ವಿಶ್ವವಿದ್ಯಾನಿಲಯ ಸಿದ್ಧಪಡಿಸಿರುವ ಹದಿನಾಲ್ಕು ಸಂಪುಟಗಳ ಕನ್ನಡ ವಿಶ್ವಕೋಶವನ್ನು ಅಂಕೀಕರಿಸಿ ಅಡಕಮುದ್ರಿಕೆಯ ರೂಪದಲ್ಲಿ ಸಿದ್ಧಪಡಿಸಿದೆ. ಅದನ್ನು ಅನುಸ್ಥಾಪಿಸಿಕೊಂಡರೆ ಇಡೀ ವಿಶ್ವಕೋಶ ಗಣಕದಲ್ಲಿ ಲಭ್ಯವಾಗುತ್ತದೆ. ಇದರಲ್ಲಿ ಸುಮಾರು 50,000 ಪುಟಗಳ ಪಠ್ಯ, ಹತ್ತು ಸಾವಿರಕ್ಕೂ ಹೆಚ್ಚಿನ ಚಿತ್ರಗಳು, ಐವತ್ತಕ್ಕೂ ಹೆಚ್ಚಿನ ವಿಶಿಷ್ಟ ಧ್ವನಿಗಳು ಮತ್ತು ಸುಮಾರು ನಾನ್ನೂರು ವಿಡಿಯೊ ತುಣುಕುಗಳು ಇವೆ. ಇವಿಷ್ಟು ಒಂದು ಡಿವಿಡಿಯಲ್ಲಿ ಅಡಕವಾಗಿವೆ ಎಂದರೆ ಗಣಕಗಳು ಮಾಹಿತಿಯ

ಆಕರವಾಗಿ ಎಷ್ಟು ಕಾರ್ಯ ನಿರ್ವಹಿಸುತ್ತವೆ ಎಂಬುದು ಅರಿವಿಗೆ ಬರುತ್ತದೆ. ಇದೇ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ನಾಲ್ಕು ಸಂಪುಟಗಳ ಇಂಗ್ಲಿಷ್ – ಕನ್ನಡ ನಿಘಂಟು ಬೆಂಗಳೂರಿನ ಪ್ರಿಸ್ಮ್ ಸಂಸ್ಥೆಯಿಂದ ಅಂಕೀಕರಣವಾಗಿ ಅಡಕಮುದ್ರಿಕೆಯ ರೂಪದಲ್ಲಿ ದೊರೆಯುತ್ತಿದೆ. ಕನ್ನಡ ಕಲಿಕೆಗಾಗಿ ಕನ್ನಡ ಗಣಕ ಪರಿಷತ್ತು ಮತ್ತು ಶ್ರೀ ಬಾಗೂರು ಮಾರ್ಕಂಡೇಯ ಅವರುಗಳಿಂದ ಬಹುಮಾಧ್ಯಮ ತಂತ್ರಾಂಶಗಳು ಲಭ್ಯವಾಗಿವೆ. ಬಹುಮಾಧ್ಯಮ ಕ್ಷೇತ್ರದಲ್ಲಿ ಬಹಳ ಕೆಲಸಗಳು ನಡೆದಿವೆ. ಈ ಪೈಕಿ ಅಜೀಮ್ ಪ್ರೇಮ್‌ಜಿ ಪ್ರತಿಷ್ಠಾನದವರು ತಯಾರಿಸಿರುವ ಬಹುಮಾಧ್ಯಮ ತಂತ್ರಜ್ಞಾನ ಮತ್ತು ಪ್ರತಿಸ್ಪಂದನಾತ್ಮಕ ವಿಧಾನಗಳಿಂದ ಕೂಡಿದ, ಕನ್ನಡ–ಇಂಗ್ಲಿಷ್–ಹಿಂದಿ ಭಾಷೆಗಳಿಂದ ಆಯ್ಕೆ ಮಾಡಿಕೊಂಡು ಆಟಗಳ ಮೂಲಕ ಕಲಿಯುವಂತೆ ರೂಪಿಸಲಾಗಿರುವ 80ಕ್ಕೂ ಹೆಚ್ಚು ಅಡಕ ಮುದ್ರಿಕೆಗಳನ್ನು ಹೆಸರಿಸಬಹುದು. ಕನ್ನಡ ಅಕ್ಷರ ಕಲಿಕೆಗಾಗಿಯೇ ಆಟ–ಪಾಠ, ಅಕ್ಷರ ಬಂಡಿ, ವರ್ಣಮಾಲೆ, ಒತ್ತಕ್ಷರ, ಪ್ರಯಾಣ, ಶೈಕ್ಷಣಿಕ ಪ್ರವಾಸ ಎಂಬ ಐದು ಅಡಕ ಮುದ್ರಿಕೆಗಳಿವೆ. ಸ್ವಾತಂತ್ರ್ಯ ದಿನಾಚರಣೆ, ಜನಪದ ಸಂಪತ್ತು, ಕಥೆ ಉಪಕಥೆ, ಊರಿಗೆ ಬಂತು ಸರ್ಕಸ್, ವಿಕ್ರಮನ ಪರಾಕ್ರಮ ಮುಂತಾದವು ಕನ್ನಡ ಭಾಷೆ ಕಲಿಸುತ್ತವೆ.

ಶಿಕ್ಷಣ ಅಭಿವೃದ್ಧಿ ಕೇಂದ್ರ – ಇ.ಡಿ.ಸಿ.ಯವರು ಕೂಡ ಅನೇಕ ಶೈಕ್ಷಣಿಕ ಅಡಕ ಮುದ್ರಿಕೆಗಳನ್ನು ತಯಾರಿಸಿದ್ದಾರೆ. ಇದರಲ್ಲಿಯೂ ಮಕ್ಕಳೇ ಭಾಗವಹಿಸಿ ವಿವಿಧ ಪರಿಸರದಲ್ಲಿ ವಿಷಯಗಳನ್ನು ತಿಳಿದುಕೊಳ್ಳುವಂತೆ ಬಹಳ ಪರಿಣಾಮಕಾರಿಯಾಗಿ ಬಹುಮಾಧ್ಯಮ ತಂತ್ರವನ್ನು ಬಳಸಿಕೊಳ್ಳಲಾಗಿದೆ.

**ಅಂತರಜಾಲದಲ್ಲಿ ಕನ್ನಡ**

ಕನ್ನಡದ ಮೊದಲ ಅಂತರಜಾಲ ತಾಣವೆಂದರೆ ಸಂಜೆವಾಣಿಯದು. ಆದರೆ ಅದು ಕೇವಲ ಚಿತ್ರರೂಪದಲ್ಲಿ ಪ್ರಕಟವಾಗುತ್ತಿತ್ತು. ಸ್ವಲ್ಪಕಾಲದಲ್ಲಿಯೇ ಡಾ. ಯು.ಬಿ.ಪವನಜ ಅವರು ತಮ್ಮ ವಿಶ್ವಕನ್ನಡ ಅಂತರಜಾಲವನ್ನು ಪ್ರಾರಂಭಿಸಿದರು. ಅದು ಪಠ್ಯರೂಪದಲ್ಲಿ ಮಾಹಿತಿಯನ್ನಿರಿಸಿಕೊಂಡ ಮೊದಲ ಕನ್ನಡ ಅಂತರಜಾಲತಾಣ. ಅನಂತರದಲ್ಲಿ ಸಾವಿರಾರು ಅಂತರಜಾಲತಾಣಗಳು ನಿರ್ಮಾಣಗೊಂಡಿವೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು, ಬಿಎಂಶ್ರೀ ಪ್ರತಿಷ್ಠಾನ, ಕರ್ನಾಟಕ ಇತಿಹಾಸ ಅಕಾಡೆಮಿ, ಮುಂತಾದ ಕೆಲವನ್ನು ಹೆಸರಿಸಬಹುದು. ಬಿಎಂಶ್ರೀ ಪ್ರತಿಷ್ಠಾನದ ತಾಣದಲ್ಲಿ ಶ್ರೀ ಅವರ ಸಮಗ್ರ ಕೃತಿಗಳೂ ಲಭ್ಯವಿವೆ.

ಅಂತರಜಾಲ ಪ್ರಾರಂಭವಾದ ದಿನಗಳಲ್ಲಿ ಕನ್ನಡದ ತಾಣಗಳನ್ನು ರೂಪಿಸುವುದು ಸಾಧ್ಯವಿರಲಿಲ್ಲ. ಕ್ರಮೇಣ ಪರಿಣತರು ಅದನ್ನು ಸಾಧ್ಯವಾಗಿಸಿದರು. ಪರಿಣಾಮವಾಗಿ ಅನೇಕ ಕನ್ನಡ ತಾಣಗಳು ಅಂತರಜಾಲದಲ್ಲಿ ಲಭ್ಯವಿವೆ. ಸಂಜೆವಾಣಿ ಅಂತರಜಾಲದಲ್ಲಿ ಲಭ್ಯವಾದ ಮೊಟ್ಟಮೊದಲ ಪತ್ರಿಕೆ. ಆನಂತರ ಕನ್ನಡದ ಪ್ರಮುಖ ಪತ್ರಿಕೆಗಳು ಸಹ ಅಂತರಜಾಲ ತಾಣ ಆವೃತ್ತಿಗಳನ್ನು ಪ್ರಾರಂಭಿಸಿವೆ. ಇಷ್ಟಲ್ಲದೆ ಅಂತರಜಾಲದಲ್ಲಿ ಮಾತ್ರವೇ ದೊರೆಯುವ ದಟ್ಸ್ ಕನ್ನಡ ಡಾಟ್‌ಕಾಂ, ಕನ್ನಡ ರತ್ನಡಾಟ್ ಕಾಂ ಮುಂತಾದ ಹಲವು ಕನ್ನಡ ಪತ್ರಿಕೆಗಳಿವೆ. ಬರಹ ತಂತ್ರಾಂಶವನ್ನು ರೂಪಿಸಿದ ಶೇಷಾದ್ರಿ ವಾಸು ಅವರ ಬರಹ ಡಾಟ್ ಕಾಂ ತಾಣದಲ್ಲಿ ಅವರ ತಂತ್ರಾಂಶವನ್ನು ಪಡೆದುಕೊಳ್ಳಬಹುದು. ವಿಶ್ವಕನ್ನಡ ಡಾಟ್‌ಕಾಂ ಎಂಬುದು ಮೊದಮೊದಲಲ್ಲಿಯೇ ರೂಪಿತವಾದ ಜಾಲತಾಣಗಳಲ್ಲಿ ಒಂದು. ಕನ್ನಡ ಗಣಕ ಪರಿಷತ್ತು ತನ್ನ ಕಗಪ ಡಾಟ್ ಐ ಎನ್ ಎಂಬ ತಾಣವನ್ನು ಹೊಂದಿದೆ. ಇದರಲ್ಲಿ ಅವರು ಅಭಿವೃದ್ಧಿಪಡಿಸಿರುವ ಎಲ್ಲತಂತ್ರಾಂಶಗಳೂ ಸಾರ್ವಜನಿಕರಿಗೆ ಲಭ್ಯವಿವೆ. ಕರ್ನಾಟಕ ಸರ್ಕಾರ ರೂಪಿಸಿರುವ ದಾಸಸಾಹಿತ್ಯ (www.dasasahitya.gov.in/) ಎಂಬ ತಾಣದಲ್ಲಿ ಕರ್ನಾಟಕದ ಸಮಗ್ರ ದಾಸ ಸಾಹಿತ್ಯ ಲಭ್ಯವಿದ್ದು, ಕಠಿಣಪದಗಳ ಅರ್ಥ, ಬೇಕಾದ ದಾಸರ ಬೇಕಾದ ಕೃತಿಯನ್ನು ಹುಡುಕಿಕೊಳ್ಳಲು ಸಾಧ್ಯವಿದೆ. ಅನೇಕ ಕೃತಿಗಳನ್ನು ಹಾಡಿಸಿ ಹಾಡುಗಳ ರೂಪದಲ್ಲಿಯೇ ತಾಣದಲ್ಲಿ ಇರಿಸಿರುವುದರಿಂದ ಅವನ್ನು ಕೇಳಲೂ ಸಾಧ್ಯವಿದೆ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವೂ ಅಂತರಜಾಲ ತಾಣವನ್ನು ಹೊಂದಿದೆ. ಮಾಧ್ಯಮ ಅಕಾಡೆಮಿ ತನ್ನ ಜಾಲತಾಣವನ್ನು ಹೊಂದಿದ್ದು ಕನ್ನಡದ ಪತ್ರಿಕೆಗಳ, ಪತ್ರಕರ್ತರ ಕುರಿತಾದ ಮಾಹಿತಿ ಇದೆ. ವಿಶ್ವವಿದ್ಯಾನಿಲಯಗಳು ತಮ್ಮ ಅಂತರಜಾಲತಾಣಗಳಲ್ಲಿ ಕನ್ನಡದ ಪುಟಗಳನ್ನು ಇರಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ ತನ್ನ ಜಾಲತಾಣವನ್ನು ರೂಪಿಸಿಕೊಂಡಿದೆ. ಕನ್ನಡ ಕಸ್ತೂರಿ ಡಾಟ್‌ಕಾಂ ಎಂಬ ತಾಣದಲ್ಲಿ ನಿಮಗೆ ಕನ್ನಡ–ಕನ್ನಡ–ಇಂಗ್ಲಿಷ್ ತಾಕ್ಷಣಿಕ ನಿಘಂಟು ದೊರೆಯುತ್ತದೆ. ಪ್ರಪಂಚದ ಯಾವುದೇ ಮೂಲೆಯಿಂದ ಕನ್ನಡ ಪದಗಳ ಇಂಗ್ಲಿಷ್ ಅರ್ಥವನ್ನು ಹುಡುಕಿಕೊಳ್ಳಬಹುದು. ಅನೇಕ ತಾಣಗಳಲ್ಲಿ ಸಂಕೀರ್ಣ ಮಾಹಿತಿ ಲಭ್ಯವಿದೆ.

ತರಳಬಾಳು ಮಠದವರು ರೂಪಿಸಿರುವ ತಾಣದಲ್ಲಿ ಆಯ್ದ ವಚನಗಳು ಮತ್ತು ಪಾಣಿನಿಯ ಅಷ್ಟಾಧ್ಯಾಯೀ ಸಂಸ್ಕೃತ ಕೃತಿ ಲಭ್ಯವಿವೆ. ಕೆಲವು ಕನ್ನಡ ತಾಣಗಳಲ್ಲಿ ಸಂಕೀರ್ಣವಾದ ಮಾಹಿತಿ ಲಭ್ಯವಿದೆ. ಅವರ್ ಕನ್ನಡ ಡಾಟ್ ಕಾಂ ಎಂಬ ತಾಣದಲ್ಲಿ ಕನ್ನಡ ಗಾದೆಗಳು, ಒಗಟುಗಳು ಲಭ್ಯವಿದೆ. ಟೋಟಲ್ ಕನ್ನಡ ಡಾಟ್ ಕಾಂ ಎಂಬುದರಲ್ಲಿ ಕನ್ನಡ ಚಲನಚಿತ್ರಗಳ, ಎಲ್ಲ ಬಗೆಯ ಸಂಗೀತದ ಅಡಕ ಮುದ್ರಿಕೆ (ಸಿಡಿ ರೋಮ್) ಮತ್ತು ಡಿವಿಡಿ ರೋಮ್‌ಗಳು ಲಭ್ಯವಿವೆ. ವಿಕಿಪೀಡಿಯ ಡಾಟ್ ಓಆರ್‌ಜಿ ಎಂಬ ತಾಣದಲ್ಲಿ ಸಾವಿರಕ್ಕೂ ಹೆಚ್ಚಿನ ಲೇಖನಗಳಿರುವ ಮುಕ್ತ ವಿಶ್ವಕೋಶ ಲಭ್ಯವಿದೆ.

ಮೈಸೂರಿನ ಡಾ. ಯೋಗಾನಂದ ಅವರು ಈ ನಿಟ್ಟಿನಲ್ಲಿ ಮಹತ್ವದ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರು ಈಗಾಗಲೇ ಮೈಸೂರು ಅರಮನೆಯಿಂದ ಪ್ರಕಟವಾದ ವೇದ ಸಂಪುಟಗಳು ಮತ್ತು ಪುರಾಣಗಳು, ಅಡಿಗರು ಸಂಪಾದಿಸಿದ ಸಾಕ್ಷಿ ಪತ್ರಿಕೆಯ ಸಂಚಿಕೆಗಳು, ಹಲವು ಸಂಸ್ಕೃತ ಕೃತಿಗಳು ಮತ್ತು ಅಧ್ಯಾತ್ಮ ಪ್ರಕಾಶನದವರ ಪ್ರಕಟಣೆಗಳ ಪೈಕಿ ಹಲವು ಇವೆಲ್ಲವನ್ನೂ ಅಂಕೀಕರಿಸಿ ಅಂತರಜಾಲದಲ್ಲಿ ಇರಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಭಾಗ ಒಂದು ಮಹತ್ವದ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಎಲ್ಲ ವಿಷಯಗಳ ಕುರಿತು ಭಾರತದ ಯಾವುದೇ ವಿಶ್ವವಿದ್ಯಾನಿಲಯ ಅನುಮೋದಿಸಿರುವ ಪಿಹೆಚ್.ಡಿ. ಕೃತಿಗಳನ್ನು ಅಂತರಜಾಲದಲ್ಲಿ ಇರಿಸುವ ಉದ್ದೇಶವನ್ನು ಹೊಂದಿದ್ದು 'ವಿದ್ಯಾನಿಧಿ' ಎನ್ನುವ ಹೆಸರಿನ ಅಂತರಜಾಲ ತಾಣವನ್ನು ಇದಕ್ಕಾಗಿ ರೂಪಿಸಲಾಗಿದೆ. ಇದರಲ್ಲಿ ಬಹಳ ಹಳೆಯ ಪಿ

ಹೆಚ್‌ಡಿ ಪ್ರಬಂಧಗಳೂ ಲಭ್ಯವಿವೆ. ಅವುಗಳ ಪೈಕಿ ಹಲವು ಕೈಬರಹದ ರೂಪದಲ್ಲಿಯೇ ಇವೆ. ಇದರಿಂದಾಗಿ ಆ ಸಂಶೋಧಕರ ಕೈಬರಹವನ್ನೂ ದಾಖಲೀಕರಿಸಿದಂತಾಗಿದೆ. ಕರ್ನಾಟಕ ಸರ್ಕಾರದ ಜ್ಞಾನ ಆಯೋಗ ಕಣಜ (www.kanaja.in) ಎಂಬ ಅಂತರಜಾಲತಾಣವನ್ನು ಪ್ರಾರಂಭಿಸಿದೆ. ಇದರಲ್ಲಿ ಕನ್ನಡದ ಅನೇಕ ಮಾಹಿತಿಗಳು ದೊರೆಯುತ್ತಿವೆ. ಖ್ಯಾತ ಸಾಹಿತಿಗಳ ಸಂಪೂರ್ಣ ಕೃತಿಗಳನ್ನು ಇಲ್ಲಿ ಇರಿಸಲಾಗಿದೆ. ಕನ್ನಡದಲ್ಲಿ ಒಂದು ಮಾಹಿತಿಯ ಆಕರವಾಗಬೇಕೆಂಬ ಆಶಯದಿಂದ ಈ ತಾಣ ಪ್ರಾರಂಭವಾಗಿದೆ. ಅಮೆರಿಕದ ವಿಶ್ವವಿದ್ಯಾನಿಲಯವೊಂದರ ಬೆಂಬಲದಿಂದ ಅಸ್ತಿತ್ವಕ್ಕೆ ಬಂದ ಮಿಲಿಯನ್ ಬುಕ್ ಪ್ರಾಜೆಕ್ಟ್ ಯೋಜನೆಯಲ್ಲಿ ಇಲ್ಲಿಯವರೆಗೆ (http://www.dli.ernet.in) ಸುಮಾರು ಮೂರು ಸಾವಿರಕ್ಕೂ ಹೆಚ್ಚಿನ ಕನ್ನಡ ಕೃತಿಗಳನ್ನು ಅಂಕೀಕರಿಸಿ ಜನರಿಗೆ ಸುಲಭವಾಗಿ ದೊರೆಯುವ ಹಾಗೆ ಇರಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಅಂತರಜಾಲವನ್ನು ಸಿದ್ಧಪಡಿಸಿದ್ದು ಅದರಲ್ಲಿ ಇಲ್ಲಿಯವರೆಗಿನ ಎಲ್ಲಾ ಸಮ್ಮೇಳನಾಧ್ಯಕ್ಷರ ಮಾಹಿತಿಯನ್ನು ಇರಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಒಂದು ಅಂತರಜಾಲತಾಣವನ್ನು ಆರಂಭಿಸಿದೆ. ಇಲ್ಲಿ ಕನ್ನಡ ಸಾಹಿತಿಗಳ ವಿಳಾಸಗಳಿದ್ದು ಹೆಸರನ್ನು ಬೆರಳಚ್ಚು ಮಾಡಿ ಅದನ್ನು ಹುಡುಕಬಹುದಾದ ಶೋಧನಾ ಸೌಲಭ್ಯವನ್ನು ಒದಗಿಸಿದೆ. ಸುಮಾರು ನೂರೈವತ್ತು ಕವಿಗಳು ತಮ್ಮ ಐದೈದು ಕವಿತೆಗಳನ್ನು ವಚನ ಮಾಡುವುದರ ವಿಡಿಯೊ ದೃಶ್ಯಗಳು ಅಂತರಜಾಲತಾಣದಲ್ಲಿ ಲಭ್ಯವಿದೆ. ವಿಡಿಯೊದ ಜೊತೆಗೆ ಆ ಕವನಗಳ ಪಠ್ಯಗಳೂ ಎಲ್ಲರಿಗೆ ದೊರೆಯುವ ಹಾಗೆ ವ್ಯವಸ್ಥೆ ಮಾಡಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿ, ಸಂಗೀತ ಮತ್ತು ನೃತ್ಯ ಅಕಾಡೆಮಿ, ಕರ್ನಾಟಕ ನಾಟಕ ಅಕಾಡೆಮಿಗಳೂ ತಮ್ಮ ಅಂತರಜಾಲ ತಾಣಗಳನ್ನು ನಿರ್ಮಿಸಿಕೊಂಡಿವೆ. ಕರ್ನಾಟಕದ ಬಹುತೇಕ ವಿಶ್ವವಿದ್ಯಾನಿಲಯಗಳು ತಮ್ಮ ಅಂತರಜಾಲ ತಾಣಗಳನ್ನು ನಿರ್ಮಿಸಿಕೊಂಡಿವೆ. ಕೆಲವು ಕವಿಗಳು ವೈಯಕ್ತಿಕವಾಗಿ ತಮ್ಮ ಅಂತರಜಾಲ ತಾಣಗಳನ್ನು ನಿರ್ಮಿಸಿಕೊಂಡಿದ್ದಾರೆ. 2013ರಲ್ಲಿ ವಚನಸಾಹಿತ್ಯದ ಸಮಗ್ರ




ಮಾಹಿತಿ ಲಭ್ಯವಾಗುವ ಹಾಗೆ http://vachana.sanchaya.net/ ಎಂಬ ಅಂತರಜಾಲತಾಣ ರೂಪುಗೊಂಡಿದೆ. ಈ ಅಂತರಜಲತಾಣದಲ್ಲಿ ಎಲ್ಲ ಬಗೆಯ ಶೋಧನೆಗಳಿಗೂ ಅವಕಾಶವಿದೆ. “ಈ ವಚನ ಸಂಗ್ರಹದಲ್ಲಿ 218 ವಚನಕಾರರು, 31 ವಚನಕಾರ್ತಿಯರೂ ಒಳಗೊಂಡಂತೆ ಒಟ್ಟು 249 ವಚನಕಾರರ, 20929ಕ್ಕೂ ಹೆಚ್ಚು ವಚನಗಳಿವೆ. ವಚನಗಳಲ್ಲಿರುವ ಒಟ್ಟು ಪದಗಳ ಸಂಖ್ಯೆ 209876ಕ್ಕೂ ಹೆಚ್ಚು. ಅಲ್ಲದೆ ಅಂತರಜಾಲದಲ್ಲಿ ಹಲವು ವರ್ಷಗಳ ಹಿಂದೆ ಪ್ರಾರಂಭವಾದ ಬ್ಲಾಗುಗಳೆಂಬ ಹೊಸ ಅಭಿವ್ಯಕ್ತಿ ಮಾಧ್ಯಮವನ್ನೂ ಬೆಂಗಳೂರಿನ ಕನ್ನಡಿಗರು ಬಹು ಸಂಖ್ಯೆಯಲ್ಲಿ ಸೊಗಸಾಗಿ ಬಳಸಿಕೊಳ್ಳುತ್ತಿದ್ದಾರೆ. ಅನೇಕರು ತಮ್ಮ ಕೃತಿಗಳನ್ನೆಲ್ಲ ಅಲ್ಲಿ ಲಭ್ಯವಾಗಿಸುತ್ತಿದ್ದಾರೆ. ಅನೇಕ ಕನ್ನಡದ ವಿದ್ವಾಂಸರು ತಮ್ಮ ಬ್ಲಾಗುಗಳನ್ನು ರಚಿಸಿಕೊಂಡು ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ. ಈಚಿನ ದಿನಗಳಲ್ಲಿ ಹೊಸ ಬಗೆಯ ಸಾಮಾಜಿಕ ಸಂಪರ್ಕ ವೇದಿಕೆಗಳು ಎಲ್ಲರಿಗೂ ಲಭ್ಯವಾಗುತ್ತಿವೆ. ಅವುಗಳ ಸ್ಥೂಲ ಪರಿಚಯವನ್ನು ಇಲ್ಲಿ ನೀಡಲಾಗಿದೆ.

### ಟ್ವಿಟರ್

ಇದು ಬ್ಲಾಗಿನ ಇನ್ನೊಂದು ರೂಪವೆ. ಇದರಲ್ಲಿ ಚಿಕ್ಕ ಸಂದೇಶಗಳಿಗೆ ಮಾತ್ರ ಅವಕಾಶ. ಒಟ್ಟು 140 ಅಕ್ಷರಗಳಿಗಿಂತ ಕಡಿಮೆ ಇರುವ ಸಂದೇಶಗಳು ಮಾತ್ರ ಪ್ರಕಟವಾಗುತ್ತವೆ. ಬಹುತೇಕ ಮೊಬೈಲ್ ಫೋನಿನ ಎಸ್ ಎಂ ಎಸ್ ನಂತೆ ಇದು ಕಾರ್ಯ ನಿರ್ವಹಿಸುತ್ತದೆ ಎನ್ನಬಹುದು.

### ವೆಬ್‌ಕಾಸ್ಟ್

ಅಂತರಜಾಲದ ಮೂಲಕ ವಿಡಿಯೊಗಳನ್ನು ಪ್ರಸಾರ ಮಾಡುವುದಕ್ಕೆ ಹೀಗೆ ಹೇಳುತ್ತಾರೆ. ಬ್ರಾಡ್‌ಕಾಸ್ಟ್ ಎನ್ನುವ ಪದದ ನೆರವಿನಿಂದ ಇದು ಜನಿಸಿದೆ. ನೇರವಾಗಿ ಬೇರೆ ಯಾವುದೇ ಮಾಧ್ಯಮದ ಹಂಗಿಲ್ಲದೆ ಯಾರೇ ತೆಗೆದ ವಿಡಿಯೊ ತುಣುಕೊಂದನ್ನು ಅಂತರಜಾಲದ ಮೂಲಕ ಜಗತ್ತಿಗೆ ತೆರೆದಿಡಲು ವೆಬ್‌ಕಾಸ್ಟ್ ಸಹಾಯಕವಾಗುತ್ತದೆ. ಮಾಧ್ಯಮ ಬಿತ್ತರ (ಮಿಡಿಯಾ ಸ್ಟ್ರೀಮಿಂಗ್) ಇದರ ವೈಶಿಷ್ಟ್ಯ.

### ಪಾಡ್‌ಕಾಸ್ಟ್

ಇಲ್ಲಿಯೂ ಕೂಡಾ ನೀವು ಧ್ವನಿ ಅಥವಾ ವಿಡಿಯೊ ಕಡತಗಳನ್ನು ಅಂತರಜಾಲದ ಮೂಲಕ ರವಾನಿಸಬಹುದಾಗಿದೆ. ವೆಬ್‌ಕಾಸ್ಟ್‌ಗಿಂತ ಇದು ಒಂದು ರೀತಿಯಲ್ಲಿ ಭಿನ್ನ. ಪಾಡ್‌ಕಾಸ್ಟ್‌ನಲ್ಲಿ ಕಡತಗಳು ಗಣಕಕ್ಕೆ ಇಳಿಸಿಕೊಳ್ಳಬಲ್ಲದ್ದಾಗಿರಬೇಕು, ಕಂತುಗಳಲ್ಲಿ ಇರುವಂತಹದಾಗಿರಬೇಕು, ಕ್ರಮವಿಧಿಯ ಅಂಶಗಳಿರಬೇಕು ಮತ್ತು ವೆಬ್‌ಕಾಸ್ಟ್‌ನಂತೆ ಇದನ್ನು ಸಾರ್ವಜನಿಕವಾಗಿ ಏಕಕಾಲದಲ್ಲಿ ಲಭ್ಯವಾಗುವಂತೆ ಮಾಡಲು ಅವಕಾಶವಿರುವುದಿಲ್ಲ.

### ಫೇಸ್‌ಬುಕ್

ಫೇಸ್‌ಬುಕ್ ಎಂಬುದು ಒಂದು ಸಾಮಾಜಿಕ ಸಂಪರ್ಕ ಕಲ್ಪಿಸುವ ಅಂತರಜಾಲ ತಾಣ. ಇದು ಪೂರ್ಣವಾಗಿ ಖಾಸಗಿ ಒಡೆತನದಲ್ಲಿದೆ. ಜುಲೈ 2011 ರಂತೆ ಫೇಸ್‌ಬುಕ್ ಸಂಪರ್ಕ ವ್ಯವಸ್ಥೆಯಲ್ಲಿ ಎಂಟು ಕೋಟಿಗೂ ಹೆಚ್ಚು ಜನ ಸೇರಿಕೊಂಡಿದ್ದಾರೆ. ಇದು ಎಲ್ಲ ವಿಚಾರಗಳ ಚರ್ಚೆಗೆ, ಸಂದೇಶಗಳ ರವಾನೆಗೆ, ಸುದ್ದಿ ಬಿತ್ತರಕ್ಕೆ, ವಿಡಿಯೊ ತುಣುಕುಗಳನ್ನು ರವಾನಿಸುವುದಕ್ಕೆ, ಉತ್ಪನ್ನವೊಂದರ ವಿವರಣೆ ನೀಡುವುದಕ್ಕೆ, ಅವುಗಳ ಗುಣಮಟ್ಟದ ಕುರಿತು ಚರ್ಚೆ ನಡೆಸುವುದಕ್ಕೆ ಪರಸ್ಪರ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ. ಆದುದರಿಂದ ಅತ್ಯಂತ ಜನಪ್ರಿಯ ಸಂಪರ್ಕಜಾಲವಾಗಿದೆ. ಇದೇ ರೀತಿಯ ಕಾರ್ಯನಿರ್ವಹಣೆಯಲ್ಲಿ ತೊಡಗಿರುವ ಕೆಲವು ಅಂತರಜಾಲತಾಣಗಳಿವೆ. ಮೈಸ್ಪೇಸ್ ಎಂಬುದು ಅವುಗಳಲ್ಲಿ ಮುಖ್ಯವಾದುದು. ಈ ತಾಣವೂ ಜನಪ್ರಿಯವಾಗಿದೆ. ಇದೀಗ ಕನ್ನಡಿಗರು ಇಂತಹ ಸಂಪರ್ಕ ಜಾಲಗಳಲ್ಲಿ ವಿಪುಲ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದು ಕೇವಲ ಸ್ನೇಹವಲಯವನ್ನು ಕಟ್ಟಿಕೊಳ್ಳಲು ಮಾತ್ರವಲ್ಲದೆ ಈಗ ಹಲವಾರು

ವಿಷಯಗಳಲ್ಲಿ ಜನಾಭಿಪ್ರಾಯವನ್ನು ರೂಪಿಸಲು ಬಳಕೆಯಾಗುತ್ತಿದೆ. ಸಮುದಾಯಗಳನ್ನೂ ಬೆಳೆಸಿಕೊಳ್ಳಬಲ್ಲ ಈ ವ್ಯವಸ್ಥೆಯಲ್ಲಿ ಜನರು ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳು: ಕನ್ನಡ ಜೋಕ್ಸ್ (27 ಸಾವಿರ ಸದಸ್ಯರು), ಕರ್ನಾಟಕ ರಕ್ಷಣಾ ವೇದಿಕೆ (14 ಸಾವಿರ ಸದಸ್ಯರು), ಕುಂದಾಪುರ ಕನ್ನಡ (11 ಸಾವಿರ ಸದಸ್ಯರು), ಕನ್ನಡ ಸೌರಭ (10 ಸಾವಿರ ಸದಸ್ಯರು), ಕನ್ನಡ ಕಾಮಧೇನು ಕರ್ನಾಟಕ ಕಲ್ಪವೃಕ್ಷ (ಆರುವರೆ ಸಾವಿರ ಸದಸ್ಯರು), ಕರ್ನಾಟಕ (6 ಸಾವಿರ ಸದಸ್ಯರು), ಮುಖಪುಸ್ತಕ ಕನ್ನಡ ಗೆಳೆಯರ ಬಳಗ (ಸುಮಾರು 5 ಸಾವಿರ ಸದಸ್ಯರು), ಉತ್ತರ ಕನ್ನಡ (5 ಸಾವಿರ ಸದಸ್ಯರು), ಕರಾವಳಿ ಕನ್ನಡ (ನಾಲ್ಕುವರೆ ಸಾವಿರ ಸದಸ್ಯರು), ನಮ್ಮ ಕನ್ನಡ ನಾಡು (4 ಸಾವಿರ ಸದಸ್ಯರು), ಕನ್ನಡ ಜಾಬ್ಸ್ (3 ಸಾವಿರ ಸದಸ್ಯರು), ಭ್ರಷ್ಟಾಚಾರದ ವಿರುದ್ಧ ಕರ್ನಾಟಕ (4 ಸಾವಿರಕ್ಕೂ ಹೆಚ್ಚು ಸದಸ್ಯರು). ಕೆಲವರು ಇದನ್ನು ಪ್ರಚಾರದ ಕಟ್ಟೆಯಾಗಿಯೂ ಬಳಸಿಕೊಳ್ಳುತ್ತಿದ್ದಾರೆ. ಯುವಜನರಲ್ಲಿ ಇದರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಒಂದು ಗೀಳಾಗುವಷ್ಟು ಹೆಚ್ಚಿದೆ. ಕೆಲವು ಬಗೆಯ ಸಾಮಾಜಿಕ ಸಮಸ್ಯೆಗಳಿಗೂ ಕಾರಣವಾಗಿದೆ. ಆದರೆ ವಿವೇಚನೆಯಿಂದ ಬಳಸಿಕೊಂಡರೆ ಇಂತಹ ವ್ಯವಸ್ಥೆ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿಹಿಡಿಯಲು ನೆರವಾಗಬಲ್ಲದು.

ನಮ್ಮ ಕರ್ನಾಟಕ ಸರ್ಕಾರದ ಆಡಳಿತದಲ್ಲಿಯೂ ಕನ್ನಡ ತಂತ್ರಾಂಶದ ಬಳಕೆ ಹೆಚ್ಚಿದ್ದು ಆಡಳಿತವನ್ನು ಸುಗಮಗೊಳಿಸಿದೆ. ಕನ್ನಡ ಸಂಸ್ಕೃತಿ ನಿರ್ದೇಶನಾಲಯದಂತಹ ಕಚೇರಿಗಳು ಕಾಗದರಹಿತ ವಾತಾವರಣಕ್ಕೆ ಕಾಲಿರಿಸಿವೆ. ಕರ್ನಾಟಕ ಸರ್ಕಾರ ಕನ್ನಡದ ಅನ್ವಯ ತಂತ್ರಾಂಶ ಮಾರುಕಟ್ಟೆಗೆ ದೊಡ್ಡ ಬಳಕೆದಾರ. ಇದರಿಂದಾಗಿ ಕನ್ನಡ ತಂತ್ರಾಂಶ ಉದ್ಯಮವಾಗಿ ಬೆಳೆಯುವ ಸೂಚನೆಗಳು ಕಾಣುತ್ತಿವೆ. ಹೆ.ಪಿ., ಹೆಚ್.ಸಿ.ಎಲ್. ವಿಪ್ರೊ ಮುಂತಾದ ದೊಡ್ಡ ದೊಡ್ಡ ಕಂಪನಿಗಳು ಈಗ ಸರ್ಕಾರದ ಪರಿಯೋಜನೆಗಳಲ್ಲಿ ಪಾಲ್ಗೊಳ್ಳುತ್ತಿವೆ. ಪ್ರತಿವರ್ಷ ಹಲವಾರು ಕೋಟಿಗಳ ವಹಿವಾಟು ಈ ವಲಯದಲ್ಲಿ ನಡೆಯತೊಡಗಿದೆ.

ಬೆಂಗಳೂರಿನಲ್ಲಿಯೇ ಈಗ ನಾಲ್ಕು ಸಾವಿರದ ಇನ್ನೂರಕ್ಕೂ ಹೆಚ್ಚು ತಂತ್ರಾಂಶ ಕಂಪನಿಗಳಿವೆ. ನೂರರ ಆಸುಪಾಸಿನ ಯಂತ್ರಾಂಶ ಕಂಪನಿಗಳಿವೆ. ಇವುಗಳ ವಹಿವಾಟು ಸಹಸ್ರಕೋಟಿ ರೂ.ಗಳನ್ನು ದಾಟಿದೆ. ಈಗ ವಿಶೇಷ ತಂತ್ರಾಂಶಗಳನ್ನು ರೂಪಿಸುವ ಹಲವಾರು ಕಂಪನಿಗಳು ಬೆಂಗಳೂರಿನಲ್ಲಿವೆ. ಉದಾಹರಣೆಗೆ ದೊಡ್ಡ ದೊಡ್ಡ ಕಟ್ಟಡ, ಕಾರ್ಖಾನೆ, ಯಂತ್ರಸ್ಥಾವರಗಳ ನಿರ್ಮಾಣ ಮುಂತಾದುವುಗಳಿಗೆ ಅಗತ್ಯವಾದ ಸಂರಚನೆಗಳ ವಿನ್ಯಾಸ ರೂಪಿಸಿವ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವ ಕಂಪನಿಗಳಿವೆ. ಕಳೆದ ದಶಕದ ಮಹತ್ವದ ಬೆಳವಣಿಗೆಗಳಲ್ಲಿ ಚರದೂರವಾಣಿ ಸಾಧನಗಳ ಉತ್ಪಾದನೆ ಮತ್ತು ಮಾರಾಟವೂ ಪ್ರಮುಖವಾದುದು.

ಚರದೂರವಾಣಿಗಳ ಇನ್ನೊಂದು ಮುಖವೆಂದರೆ ಅವುಗಳಲ್ಲಿ ಬಳಸಬಹುದಾದ ಅನ್ವಯ ತಂತ್ರಾಂಶಗಳು. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 2,50,000 ಜನ ಇಂತಹ ಅನ್ವಯಗಳನ್ನು ರೂಪಿಸುದರಲ್ಲಿ ತೊಡಗಿದ್ದಾರೆ. ಇ–ಅಭಿವೃದ್ಧಿಯಲ್ಲಿಯೂ ಬೆಂಗಳೂರಿನ ಯುವಜನತೆ ಸುಮಾರು ಐವತ್ತು ಸಾವಿರ ಜನ ಇದ್ದಾರೆ. ಎಲ್ಲ ಖ್ಯಾತ ತಂತ್ರಾಂಶ ಕಂಪನಿಗಳೂ ವಿಶೇಷವಾಗಿ ಚರದೂರವಾಣಿ ಕ್ಷೇತ್ರದಲ್ಲಿರುವಂತಹ ಕಂಪನಿಗಳು ಇಂತಹ ಅಭಿವೃದ್ಧಿಯನ್ನು ಇನ್ನಿಲ್ಲದಂತೆ ಉತ್ತೇಜಿಸುತ್ತಿವೆ. ಈಗ ತಾನೇ ಪ್ರಾರಂಭಿಸಿರುವ ಇಂತಹ ಉದ್ಯಮಗಳಿಗೂ ಹಣಕಾಸು ಸಂಸ್ಥೆಗಳು ಕೊಡುಗೈಯಿಂದ ಹಣಕಾಸು ನೆರವನ್ನು ಒದಗಿಸುತ್ತಿವೆ. ಪತ್ರಿಕೆಗಳನ್ನು ಸುಲಭವಾಗಿ ದೂರವಾಣಿ ಸಾಧನಗಳಲ್ಲಿ ಇಳಿಸಿಕೊಂಡು ಓದಲು, ಟ್ಯಾಕ್ಸಿಗಳನ್ನು ಕರೆಯಲು, ಪುಸ್ತಕಗಳನ್ನು ಓದಲು, ನಕ್ಷತ್ರಗಳನ್ನು ಗುರುತಿಸಲು, ಸ್ಥಳದ ನಕ್ಷೆ ಪಡೆದುಕೊಳ್ಳಲು ಅನ್ವಯಗಳು ಲಭ್ಯವಿವೆ. ಇವುಗಳನ್ನು ಇಷ್ಟೇ ಎಂದು ಪಟ್ಟಿ ಮಾಡಲು ಸಾಧ್ಯವಿಲ್ಲ. ಭವಿಷ್ಯದಲ್ಲಿ ಈ ಉದ್ಯಮ ತಂತ್ರಾಂಶ ಉದ್ಯಮದಂತೆಯೇ ಬೆಳೆಯಬಹುದು ಎನ್ನುವ ಭಾವನೆಯನ್ನು ಮೂಡಿಸಿದೆ. ಬೆಂಗಳೂರಿನಲ್ಲಿ ಮುಂದೊಂದು ದಿನ ನಾವು ಕೇವಲ ದೂರವಾಣಿ ಸಾಧನಗಳ ಮೂಲಕವೇ ನಮ್ಮೆಲ್ಲ ಕೆಲಸಗಳನ್ನೂ ನಿರ್ವಹಿಸುವಂತಾದರೆ ಆಶ್ಚರ್ಯವೇನಿಲ್ಲ.

ಮುಂಚೆ ಚರದೂರವಾಣಿಯಲ್ಲಿ ಹೆಚ್ಚಿನ ಮಟ್ಟಿಗೆ ಕನ್ನಡ ಲಭ್ಯವಿರಲಿಲ್ಲ. ಆಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆ ಬಂದ ಮೇಲೆ ಅವು ಕ್ಷಿಪ್ರವಾಗಿ ಹೆಚ್ಚಿ, ಈಗ ಎಲ್ಲಾ ಜಾಣ (ಸ್ಮಾರ್ಟ್) ದೂರವಾಣಿ ಘಟಕಗಳಲ್ಲಿಯೂ ಲಭ್ಯವಿದೆ. ಇದರಿಂದಾಗಿ ಕನ್ನಡದ ಬಳಕೆ ಹೆಚ್ಚಾಗಿದೆ. ಇವುಗಳಲ್ಲಿ ಕನ್ನಡದ ಬಳಕೆಗೆ ಅನುವಾಗುವಂತೆ ಬಹುಸಂಖ್ಯೆಯ ಅನ್ವಯಗಳನ್ನು ಬೆಂಗಳೂರಿನ ಕನ್ನಡಿಗರೇ ಅಭಿವೃದ್ಧಿಗೊಳಿಸಿದ್ದಾರೆ.

ಆಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯಲ್ಲಂತೂ ಜಸ್ಟ್ ಕನ್ನಡ, ಪಾಣಿನಿ ಕೀಪ್ಯಾಡ್, ಕನ್ನಡ ಫಾರ್ ಎನಿಸಾಫ್ಟ್, ಕನ್ನಡ ಕೀಬೋರ್ಡ್, ಲಿಪಿಕಾರ್, ಮಲ್ಟಿಲಿಂಗ್ ಕೀಬೋರ್ಡ್ ಮುಂತಾದ ತಂತ್ರಾಂಶಗಳು ಲಭ್ಯವಿವೆ. ವಿಂಡೋಸ್, ಸಿಂಬಿಯಾನ್, ಬ್ಲ್ಯಾಕ್‌ಬೆರಿ ಮುಂತಾದವುಗಳಲ್ಲಿ ಕನ್ನಡ ಲಭ್ಯವಿದ್ದರೂ ಅವುಗಳನ್ನು ಬಳಸುವುದು ಸ್ವಲ್ಪ ಕಷ್ಟ.ಚರದೂರವಾಣಿಗಳು ಈಗ ಎಲ್ಲರಬಳಿಯೂ ಇದೆ. ಎಲ್ಲರ ನಡುವಣ ಸಂಪರ್ಕ ಸೇತುವೆಯಾಗಿ ಅವು ಪರಿಣಮಿಸಿವೆ. ಇದರಿಂದ ಪ್ರೇರಿತವಾಗಿ "ವಾಟ್ಸ್ ಅಪ್" ಎನ್ನುವ ಒಂದು ಹೊಸ ಸಂದೇಶವಾಹಕ ಸೇವೆ ಪ್ರಾರಂಭವಾಗಿದೆ. ಸದ್ಯ ಇದು ಅಂತರಜಾಲದಲ್ಲಿ ಇರುವ ಫೇಸ್ ಬುಕ್‌ನ ಜನಪ್ರಿಯತೆಯನ್ನು ಮೀರಿ ಬೆಳೆಯುತ್ತಿದೆ. ಇದರಲ್ಲಿ ಪಠ್ಯ, ಚಿತ್ರ, ಧ್ವನಿ, ವಿಡಿಯೊ ತುಣುಕು – ಎಲ್ಲವನ್ನೂ ಇತರರಿಗೆ ಕಳಿಸುವ ಅವಕಾಶವಿದೆಯಾದ್ದರಿಂದ ನೇರವಾಗಿ ಉಚಿತ ಕರೆಗಳನ್ನೂ ಮಾಡಬಹುದಾಗಿದೆ.

ಹೀಗೆ ಮಾಹಿತಿ ತಂತ್ರಜ್ಞಾನ ಜಗತ್ತಿನ ಎಲ್ಲೆಡೆಯಂತೆ ಕರ್ನಾಟಕದಲ್ಲಿಯೂ ವ್ಯಾಪಿಸಿ ನಮ್ಮ ಜೀವನಕ್ರಮವನ್ನು ಪ್ರಭಾವಿಸಿದೆ. ಇಲ್ಲೆಲ್ಲ ಕನ್ನಡವನ್ನು ಬಳಸಬಹುದು ಎಂಬುದು ಸಂತೋಷದ ಸಂಗತಿಯಾಗಿದೆ. ❑

# ಬಯಲು ಬಹಿರ್ದೆಸೆಮುಕ್ತದತ್ತ ದೃಢ ಹೆಜ್ಜೆ



ಅಕ್ಟೋಬರ್ 2, 2016ರಂದು 1000 ಗ್ರಾಮ ಪಂಚಾಯತ್‌ಗಳನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಿದ ಸಂದರ್ಭ. ಚಿತ್ರದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಖಾತೆ ರಾಜ್ಯ ಸಚಿವ ಶ್ರೀ ರಮೇಶ್ ಜಿಗಜಿಣಗಿ, ರಾಜ್ಯ ಪಂಚಾಯತ್ ರಾಜ್ ಖಾತೆ ಸಚಿವ ಶ್ರೀ ಹೆಚ್. ಕೆ ಪಾಟೀಲ್ ಹಾಗೂ ಇತರ ಗಣ್ಯರು ಇದ್ದಾರೆ.

**ಕೇಂದ್ರ ಸರ್ಕಾರವು ಮಹಾತ್ಮಗಾಂಧೀಜಿಯವರ ಅಕ್ಟೋಬರ್ 2, 2019ರ 150ನೇ ಜನ್ಮ ದಿನದಂದು ಇಡೀ ರಾಷ್ಟ್ರವನ್ನು ಬಯಲು ಬಹಿರ್ದೆಸೆ ಮುಕ್ತವಾಗಿಸುವ ಉದ್ದೇಶ ಹೊಂದಿರುತ್ತದೆ. ಆದರೆ ಕರ್ನಾಟಕ ಸರ್ಕಾರವು ಅದಕ್ಕಿಂತಲೂ ಒಂದು ವರ್ಷ ಮುಂಚಿತವಾಗಿ ಅಂದರೆ 02.10.2018ರೊಳಗೆ ಕರ್ನಾಟಕ ಗ್ರಾಮೀಣ ಪ್ರದೇಶವನ್ನು "ಬಯಲು ಬಹಿರ್ದೆಸೆ ಮುಕ್ತ"ವಾಗಿಸಲು ಪಣತೊಟ್ಟಿರುತ್ತದೆ.**

ಕರ್ನಾಟಕ ರಾಜ್ಯವು ಗ್ರಾಮೀಣ ಸ್ವಚ್ಛತಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದರಲ್ಲಿ ಮುಂಚೂಣಿಯಲ್ಲಿದೆ. ಅದರಂತೆ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಸ್ವಚ್ಛತೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. ಇದರಲ್ಲಿ ಸಮುದಾಯ ಸ್ವಚ್ಛತಾ ಕಾರ್ಯಕ್ರಮಗಳು 1985ರಿಂದಲೂ ಗ್ರಾಮೀಣ ಪ್ರದೇಶದಲ್ಲಿ ಜಾರಿಯಲ್ಲಿದ್ದು, ಇವುಗಳಲ್ಲಿ ಬಹುಮುಖ್ಯವಾಗಿ ಬಯಲು ಬಹಿರ್ದೆಸೆ ಮುಕ್ತಗೊಳಿಸಲು ಪ್ರತಿಯೊಂದು ಕುಟುಂಬವೂ ಶೌಚಾಲಯ ನಿರ್ಮಿಸಿ ಬಳಸುವಂತೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಸಮುದಾಯ ಕೇಂದ್ರಿತ, ಬೇಡಿಕೆ ಆಧರಿತ, ಸಮುದಾಯ ಸಹಭಾಗಿತ್ವದಿಂದ ಬಯಲು ಬಹಿರ್ದೆಸೆ ಪದ್ಧತಿಯನ್ನು ನಿರ್ಮೂಲನೆ ಮಾಡಬಹುದಾಗಿರುತ್ತದೆ. ಶಾಲಾ ಶೌಚಾಲಯ, ಅಂಗನವಾಡಿಗಳಲ್ಲಿ ಶೌಚಾಲಯ ನಿರ್ಮಾಣ, ಸಮುದಾಯ ಶೌಚಾಲಯಗಳ ನಿರ್ಮಾಣಗಳನ್ನು ಈ ಆಂದೋಲನದಲ್ಲಿ

| ಸಂ | ಯೋಜನೆಗಳು | ಕಾಲಾವಧಿ |
|---|---|---|
| 1 | ಕೇಂದ್ರ ಗ್ರಾಮೀಣ ನೈರ್ಮಲ್ಯ ಯೋಜನೆ, | 1985–1995 |
| 2 | ನಿರ್ಮಲ ಕರ್ನಾಟಕ ಯೋಜನೆ, | 1995–2004 |
| 3 | ಕೇಂದ್ರದ ವಲಯ ಸುಧಾರಣೆ ಯೋಜನೆ, | 1999–2004 |
| 4 | ಮಕ್ಕಳ ಪರಿಸರ ಅಭಿವೃದ್ಧಿ ಯೋಜನೆ–ಯುನಿಸೆಫ್ | 1999–2002 |
| 5 | ಸ್ವಚ್ಛ ಗ್ರಾಮ ಯೋಜನೆ | ಮುಗಿದಿದೆ |
| 6 | ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ–ಡ್ಯಾನಿಡಾ ನೆರವು | ಮುಗಿದಿದೆ |
| 7 | ಜಲ ನಿರ್ಮಲ ಯೋಜನೆ–ವಿಶ್ವಬ್ಯಾಂಕ್ ನೆರವು 1993 ಯಿಂದ ನಡೆದಿದೆ | 1993 ರಿಂದ 2014 |
| 8 | ಸಂಪೂರ್ಣ ಸ್ವಚ್ಛತಾ ಆಂದೋಲನ | 2005 ರಿಂದ 2012 ರವರೆಗೆ |
| 9 | ನಿರ್ಮಲ ಭಾರತ್ ಅಭಿಯಾನ | ಏಪ್ರಿಲ್ 2012 ರಿಂದ ಅಕ್ಟೋಬರ್ 1 2014 ರವರೆಗೆ |
| 10 | ಸ್ವಚ್ಛ ಭಾರತ್ ಮಿಷನ್ (ಗ್ರಾ) | ಅಕ್ಟೋಬರ್–2 2014 ರಿಂದ ಮುಂದುವರೆದಿದೆ |

* ಸ್ವಚ್ಛ ಭಾರತ್ ಮಿಷನ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕರ್ನಾಟಕ ಸರ್ಕಾರ.

ಸೇರಿಸಿಕೊಂಡಿದ್ದು, ಮಕ್ಕಳಲ್ಲಿ ಒಳ್ಳೆಯ ಅಭ್ಯಾಸಗಳನ್ನು ರೂಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸುವರ್ಣ ಗ್ರಾಮ ಯೋಜನೆಯೊಂದಿಗೆ ಪ್ರಾರಂಭವಾಗಿ ಈ ಸಾಲಿನಿಂದ ಅನುಷ್ಠಾನಗೊಳ್ಳುತ್ತಿರುವ ಗ್ರಾಮ ವಿಕಾಸ ಯೋಜನೆಯು ಸೇರಿದಂತೆ ವೈಯಕ್ತಿಕ ಸ್ವಚ್ಛತೆಗೆ ವೈಯಕ್ತಿಕ ಕುಟುಂಬಗಳಿಗೆ ಅನುಕೂಲವಾಗುವಂತೆ ರಾಜ್ಯದಲ್ಲಿ ನಿರ್ಮಲ ಕರ್ನಾಟಕ ಯೋಜನೆಯನ್ನು 1995–2004 ರಂದು ಪ್ರಾರಂಭಿಸಿ ಗೃಹ ಶೌಚಾಲಯಗಳನ್ನು ಬಡತನ ರೇಖೆಗಿಂತ ಕಡಿಮೆಯಿರುವ ಕುಟುಂಬಗಳು ಹೊಂದಲು ಕ್ರಮಕೈಗೊಂಡಿರುತ್ತದೆ. 2005ರಲ್ಲಿ ರಾಷ್ಟ್ರದಾದ್ಯಂತ ಸಂಪೂರ್ಣ ಸ್ವಚ್ಛತಾ ಅಂದೋಲನವನ್ನು ಅನುಷ್ಠಾನ ಮಾಡುವ ಯೋಜನೆಯನ್ನು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಜಾರಿಗೊಳಿಸಿರುತ್ತದೆ. ಈ ಯೋಜನೆಯನ್ನು ದಿನಾಂಕ ಏಪ್ರಿಲ್ 2012 ರಂದು "ನಿರ್ಮಲ ಭಾರತ ಅಭಿಯಾನ" ಎಂದು ಕೇಂದ್ರ ಸರ್ಕಾರವು ಮರು ನಾಮಕರಣಗೊಳಿಸಿರುತ್ತದೆ. ಈ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಕುಟುಂಬಗಳು ಶೌಚಾಲಯಗಳನ್ನು


**ಅಕ್ಟೋಬರ್ 2, 2018ರ ವೇಳೆಗೆ ರಾಜ್ಯದ ಗ್ರಾಮೀಣ ಪ್ರದೇಶವನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸಲು ರೂಪಿಸಿರುವ ಜಿಲ್ಲಾವಾರು ವಿವರ.**

| ಹಂತ | ವರ್ಷ | ಬಯಲು ಬಹಿರ್ದೆಸೆ ಮುಕ್ತವನ್ನಾಗಿಸುವ ಜಿಲ್ಲೆಗಳ ವಿವರ |
|---|---|---|
| I | 2015–16 ಅಕ್ಟೋಬರ್ 2, 2016ರ ಅಂತ್ಯಕ್ಕೆ | ಉಡುಪಿ ಮತ್ತು ದಕ್ಷಿಣ ಕನ್ನಡ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೊಡಗು. (ಬಯಲು ಬಹಿರ್ದೆಸೆ ಮುಕ್ತಗೊಂಡಿರುತ್ತವೆ). |
| II | 2016–17 | ಶಿವಮೊಗ್ಗ, ಚಿಕ್ಕಮಗಳೂರು, ಕೊಪ್ಪಳ ಹಾಗೂ ಮಂಡ್ಯ. |
| III | 2017–18 | ಧಾರವಾಡ, ಗದಗ, ರಾಮನಗರ, ಕಾರವಾರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಹಾವೇರಿ, ಕೋಲಾರ, ಮೈಸೂರು ಹಾಗೂ ಯಾದಗಿರಿ. |
| IV | 2018–19 | ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ, ವಿಜಯಪುರ, ಕಲಬುರಗಿ, ರಾಯಚೂರು ಹಾಗೂ ತುಮಕೂರು. |

ಹೊಂದಿರುವ ಬಗ್ಗೆ ಹಾಗೂ ಹೊಂದಿಲ್ಲದ ಬಗ್ಗೆ ಸರ್ವ ಕುಟುಂಬ ಸಮೀಕ್ಷೆಯನ್ನು 2012–13ನೇ ಸಾಲಿನಲ್ಲಿ ಮಾಡಲಾಗಿರುತ್ತದೆ. ಅದರಂತೆ ರಾಜ್ಯದ ಗ್ರಾಮೀಣ ಭಾಗದಲ್ಲಿ 85.14ಲಕ್ಷ ಕುಟುಂಬಗಳಿದ್ದು, 30.15ಲಕ್ಷ ಕುಟುಂಬಗಳು ಶೌಚಾಲಯ ಹೊಂದಿದ್ದು, 54.99ಲಕ್ಷ ಕುಟುಂಬಗಳು ಶೌಚಾಲಯ ರಹಿತವಾಗಿರುತ್ತವೆ. ಇದನ್ನು ಪರಿಶೀಲಿಸಿದಾಗ ಕೇವಲ ಶೇ.35ರಷ್ಟು ಕುಟುಂಬಗಳು ಮಾತ್ರ ಶೌಚಾಲಯಗಳನ್ನು ಹೊಂದಿದ್ದು, ಉಳಿದ ಶೇ.65ರಷ್ಟು ಕುಟುಂಬಗಳು ಶೌಚಾಲಯ ಹೊಂದಿರುವುದಿಲ್ಲ. ಆ ಕಾರಣಕ್ಕಾಗಿ ಕರ್ನಾಟಕ ಸರ್ಕಾರವು ದೃಢ ತೀರ್ಮಾನವನ್ನು ತೆಗೆದುಕೊಂಡಿರುತ್ತದೆ. ಕರ್ನಾಟಕ ಸರ್ಕಾರವು 2013–14ನೇ ಸಾಲಿನಿಂದ ಸಮರೋಪಾದಿಯಲ್ಲಿ ಗ್ರಾಮೀಣ ಶೌಚಾಲಯಗಳನ್ನು ನಿರ್ಮಿಸಿ ಬಯಲು ಬಹಿರ್ದೆಸೆಯನ್ನು ಮುಕ್ತಾಯಗೊಳಿಸಲು ಪಣತೊಟ್ಟಿರುತ್ತದೆ. ಇದರಡಿಯಲ್ಲಿ "ಶೌಚಾಲಯಕ್ಕಾಗಿ ಸಮರ" ಎಂಬ ವೀರ ಘೋಷಣೆಯೊಂದಿಗೆ ಜನಾಂದೋಲನವನ್ನು ರೂಪಿಸಿ ಶೌಚಾಲಯಗಳನ್ನು ನಿರ್ಮಿಸಿ ಬಳಸುವ ಬಗ್ಗೆ ಗ್ರಾಮೀಣ ಜನರಲ್ಲಿ ಅರಿವು ಮೂಡಿಸಿ ಯೋಜನೆಯ ಅನುಷ್ಠಾನವನ್ನು ತೀವ್ರಗೊಳಿಸಿ ಸಂಚಲನವನ್ನುಂಟು ಮಾಡಿರುತ್ತದೆ. ಇಡೀ ದೇಶದಲ್ಲೇ ಅತೀ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಿ, ರಾಷ್ಟ್ರದಲ್ಲಿ ಪ್ರಪ್ರಥಮ ಸ್ಥಾನವನ್ನು ಪಡೆದುಕೊಂಡ ಅಗ್ಗಳಿಕೆಯನ್ನು ಸಾಧಿಸಿರುತ್ತದೆ. ಜಿಲ್ಲಾವಾರು ಪ್ರಗತಿಯ ವಿವರವನ್ನು ನಕ್ಷೆಯಲ್ಲಿ ತೋರಿಸಲಾಗಿದೆ.

* 2013–14ರಲ್ಲಿ 5.05ಲಕ್ಷ ಶೌಚಾಲಯಗಳ ನಿರ್ಮಾಣ. * 2014–15ರಲ್ಲಿ 8.76ಲಕ್ಷ ಶೌಚಾಲಯಗಳ ನಿರ್ಮಾಣ. * 2015–16ರಲ್ಲಿ 7.08ಲಕ್ಷ ಶೌಚಾಲಯಗಳ ನಿರ್ಮಾಣ.

**ಜಿಲ್ಲಾವಾರು ವೈಯಕ್ತಿಕ ಗೃಹ ಶೌಚಾಲಯಗಳ ಶೇಕಡವಾರು ಪ್ರಗತಿ**




| | | |
|---|---|---|
| 1 | ಬೆಂಗಳೂರು (ಗ್ರಾ) | 106% |
| 2 | ಮಂಗಳೂರು (ದಕ್ಷಿಣ ಕನ್ನಡ) | 102% |
| 3 | ಉಡುಪಿ | 101% |
| 4 | ಕೊಡಗು | 100% |
| 5 | ಬೆಂಗಳೂರು (ನ) | 100% |
| 6 | ಶಿವಮೊಗ್ಗ | 98% |
| 7 | ಚಿಕ್ಕಮಗಳೂರು | 87% |
| 8 | ರಾಮನಗರ | 85% |
| 9 | ಉತ್ತರ ಕನ್ನಡ | 83% |
| 10 | ಧಾರವಾಡ | 75% |
| 11 | ಮಂಡ್ಯ | 72% |
| 12 | ಕೊಪ್ಪಳ | 71% |
| 13 | ಚಿಕ್ಕಬಳ್ಳಾಪುರ | 70% |
| 14 | ಮೈಸೂರು | 68% |
| 15 | ದಾವಣಗೆರೆ | 66% |
| 16 | ಕೋಲಾರ | 65% |
| 17 | ಕರ್ನಾಟಕ | 64% |
| 18 | ಹಾಸನ | 61% |
| 19 | ಗದಗ | 61% |
| 20 | ಹಾವೇರಿ | 60% |
| 21 | ಬೆಳಗಾವಿ | 55% |
| 22 | ಚಿತ್ರದುರ್ಗ | 53% |
| 23 | ಬಳ್ಳಾರಿ | 53% |
| 24 | ಬಾಗಲಕೋಟೆ | 47% |
| 25 | ಚಾಮರಾಜನಗರ | 46% |
| 26 | ತುಮಕೂರು | 45% |
| 27 | ಕಲಬುರಗಿ | 32% |
| 28 | ರಾಯಚೂರು | 32% |
| 29 | ಯಾದಗಿರಿ | 32% |
| 30 | ವಿಜಯಪುರ | 31% |
| 31 | ಬೀದರ್ | 30% |

**(51ನೇ ಪುಟಕ್ಕೆ)**

# ತೆರಿಗೆ : ಭೂತ, ವರ್ತಮಾನ ಮತ್ತು ಭವಿಷ್ಯ

* ಟಿ. ಎನ್ . ಅಶೋಕ್




> ಸರ್ಕಾರ ಹೆಚ್ಚು ಹೆಚ್ಚು ತೆರಿಗೆ ಸುಧಾರಣೆ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಿದಷ್ಟೂ ಅಧಿಕ ಸಂಖ್ಯೆಯ ಜನ ತೆರಿಗೆ ವ್ಯಾಪ್ತಿಯೊಳಗೆ ಸೇರಿಕೊಳ್ಳುತ್ತಾರೆ. ತೆರಿಗೆ ಸಂಗ್ರಹ ವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣವಾದ ಒಂದೇ ಒಂದು ತೆರಿಗೆ ಸುಧಾರಣೆಯೆಂದರೆ ಅದು ಸರಕು ಮತ್ತು ಸೇವಾ ತೆರಿಗೆ.

ಯಾವುದೇ ದೇಶವಿರಲಿ, ತೆರಿಗೆ ಸುಧಾರಣೆ – ಆ ದೇಶದ ಅಭಿವೃದ್ಧಿ ಪ್ರಕ್ರಿಯೆಯ ಅವಿಭಾಜ್ಯ ಅಂಗವಾಗಿರುತ್ತದೆ. ಕಳೆದ ಕೆಲವು ವರ್ಷಗಳಲ್ಲಿ ಸುಧಾರಣಾ ನೀತಿ ಅಳವಡಿಸಿಕೊಂಡ ಅಭಿವೃದ್ಧಿ ಹೊಂದಿರುವ ದೇಶಗಳು, ಉದಾಹರಣೆಗೆ ಬ್ರಿಟನ್ ಹಾಗೂ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಭಾರತದಂತಹ ಉಳಿದ ಅಭಿವೃದ್ಧಿಶೀಲ ದೇಶಗಳ ಪಾಲಿಗೆ ಒಂದು ನಿಟ್ಟಿನಲ್ಲಿ ಅನುಕರಣೀಯ ಮಾದರಿಗಳಾಗಿವೆ.

ಬ್ರಿಟನ್ ತೆಗೆದುಕೊಳ್ಳೋಣ : ಆಡಳಿತ ಕನ್ಸರ್ವೇಟಿವ್ ಲಿಬರಲ್ ಡೆಮೊಕ್ರಟಿಕ್ ಸಮ್ಮಿಶ್ರ ಸರ್ಕಾರ 2010 – 2015ರಲ್ಲಿ ತೆರಿಗೆ ಸುಧಾರಣೆಯನ್ನು ಅಳವಡಿಸಿದೆ. 2013ರಲ್ಲಿ ತೆರಿಗೆ ಸುಧಾರಣೆ ಪ್ರಕ್ರಿಯೆ ಪ್ರಾರಂಭವಾಯಿತು.

ರಾಜ್ಯ ಖಜಾನೆಯ ಛಾನ್ಸಲರ್ ಪ್ರಕಟಿಸಿದ ಬಜೆಟ್‌ನಲ್ಲಿ ತೆರಿಗೆ ನೀಡುತ್ತಿದ್ದ 20 ಲಕ್ಷ ಮಂದಿ ತೆರಿಗೆ ಮುಕ್ತರಾದರು. ಸುಧಾರಣೆಯಿಂದಾಗಿ ವ್ಯಕ್ತಿಯ ಖಾಸಗಿ ಭತ್ಯೆ ಹೆಚ್ಚಾಯಿತು. ಹೊಸ ನಿಯಮದಂತೆ 9,440 ಪೌಂಡ್ ಗಿಂತ ಅಧಿಕ ಆದಾಯಹೊಂದುವ ತನಕ ಯಾರೊಬ್ಬರೂ ತೆರಿಗೆ ಕಟ್ಟಬೇಕಾಗಿಲ್ಲ. ಮೇಲಿನ ಹಂತದ ಗರಿಷ್ಠ ತೆರಿಗೆಯಾದ 40%ಕ್ಕಿಂತ ಅಧಿಕ ಪಾವತಿಸುವವರಲ್ಲಿ, ಖಾಸಗಿ ಭತ್ಯೆಯನ್ನು ಬಿಟ್ಟು, ತೆರಿಗೆ ಹಣ 34,370 ಪೌಂಡ್ ನಿಂದ 32,010 ಪೌಂಡ್ ಗೆ ಇಳಿದಿದೆ. ಇದೇ ಸಮಯದಲ್ಲಿ 2013–14ರಲ್ಲಿ ತೆರಿಗೆಗೆ ಅರ್ಹರಾದ 150000 ಪೌಂಡ್ ಗಿಂತ ಅಧಿಕ ಆದಾಯ ಹೊಂದಿರುವವರಲ್ಲಿ ಗರಿಷ್ಠ ತೆರಿಗೆ ನೀಡುವವರ ಸಂಖ್ಯೆ 50% ರಿಂದ 45% ಇಳಿಯಿತು.

ಅಮೆರಿಕ ಸಂಯುಕ್ತ ಸಂಸ್ಥಾನಗಳಂತಹ ದೇಶಗಳನ್ನು ತೆಗೆದುಕೊಳ್ಳೋಣ: ಮುಕ್ತ ವ್ಯಾಪಾರ ಹಾಗೂ ಅಭಿವೃದ್ಧಿ ಹೊಂದಿದ ಆರ್ಥಿಕತೆ ಇರುವ ಈ ದೇಶಕ್ಕೂ ತೆರಿಗೆ ಸುಧಾರಣೆ ಅತ್ಯಗತ್ಯವಾಗಿದೆ. ಇದನ್ನು ಅರ್ಥಮಾಡಿಕೊಂಡ ಇಬ್ಬರು ಶಾಸಕರು ವಿಸ್ತೃತ ತೆರಿಗೆ ಸುಧಾರಣೆಗೆ ಪ್ರಯತ್ನಿಸುತ್ತಿದ್ದಾರೆ. ಸೆನೆಟ್‌ನ ತೆರಿಗೆ ನಿರೂಪಣಾ ಸಮಿತಿ ಮುಖ್ಯಸ್ಥ ಡೆಮೊಕ್ರಾಟ್‌ನ ಚೌಕಸ್ ಮತ್ತು ಹೌಸ್ ಆಫ್ ರೆಪ್ರಸೆಂಟೇಟಿವ್ಸ್‌ನ ತೆರಿಗೆ ನಿರೂಪಣಾ ಸಮಿತಿ ಮುಖ್ಯಸ್ಥ ರಿಪಬ್ಲಿಕನ್‌ದ ಡೇವ್ ಕ್ಯಾಂಪ್ ಇಬ್ಬರೂ ಕಳೆದ 3 ವರ್ಷಗಳಿಂದ ತೆರಿಗೆ ಸುಧಾರಣೆಯ ಪ್ರಕ್ರಿಯಲ್ಲಿ ತೊಡಗಿದ್ದಾರೆ. ಸಾರ್ವಜನಿಕರೊಂದಿಗೆ ಚರ್ಚಿಸಿ ಹೊಸ ಚಿಂತನೆಗಳನ್ನು, ಆಲೋಚನೆಗಳನ್ನು ಸಂಗ್ರಹಿಸುತ್ತಿದ್ದಾರೆ. ಅವರ ಗುರಿ ಉದ್ದೇಶಗಳು ಸ್ಪಷ್ಟವಾಗಿವೆ. ಆದರೆ ಅವುಗಳು ರೂಪಪಡೆಯಬೇಕಷ್ಟೆ. ತೆರಿಗೆ ರಿಯಾಯ್ತಿ ವಿನಾಯಿತಿ ತೆಗೆದುಹಾಕಿ ಸಾರ್ವಜನಿಕರ ವೈಯಕ್ತಿಕ ಹಾಗೂ ಕಾರ್ಪೊರೆಟ್ ತೆರಿಗೆಯನ್ನು ಕಡಿಮೆಗೊಳಿಸುವುದು ಅವರ ಉದ್ದೇಶ.

ಕ್ಯಾಂಪ್ ಮತ್ತು ಚೌಕುಸ್ ಬೇರೆ ಬೇರೆ ಪಕ್ಷ, ಸಿದ್ಧಾಂತಗಳಿಗೆ ಸೇರಿದವರಾದರೂ, ಇಬ್ಬರೂ ದತ್ತಿ, ವಸತಿ, ಆರೋಗ್ಯ, ವಿಮೆ ಹಾಗೂ ಸಂಶೋಧನೆ ಮತ್ತು ಆಭಿವೃದ್ಧಿ ಹೀಗೆ ಯಾವುದೇ ಜನಪ್ರಿಯ ಕ್ಷೇತ್ರಕ್ಕೆ ವಿನಾಯ್ತಿ, ರಿಯಾಯ್ತಿಗಳನ್ನು ಕೊಡಬಾರದೆಂಬ ಆಭಿಪ್ರಾಯ ಹೊಂದಿದ್ದಾರೆ. ವಿನಾಯಿತಿ ರಿಯಾಯಿತಿ ಬೇರೆ ಕ್ಷೇತ್ರದ ಮೇಲೆ ತೆರಿಗೆ ಭಾರ ಹೆಚ್ಚಿಸುತ್ತವೆ. ಆದರೆ, ರಾಜಕೀಯ ವಾಸ್ತವಿಕತೆಯಲ್ಲಿ ಕೆಲ ರಿಯಾಯಿತಿ

* ಆರ್ಥಿಕ ಕಾರ್ಯತಂತ್ರ ಸಲಹಾಗಾರರು, ಮಾಜಿ ಆರ್ಥಿಕ ಸಂಪಾದಕರು, ಪಿ.ಟಿ.ಐ. E-mail : ashoktnex@gmail.com

ವಿನಾಯಿತಿಗಳೂ ಉಳಿಯುತ್ತವೆ ಹಾಗೂ ಸಂಪನ್ಮೂಲ ಕ್ರೋಢೀಕರಣಕ್ಕೆ ಸೂಕ್ತ ನ್ಯಾಯ ಸಮ್ಮತ ಮಾರ್ಗವಾದ ಕಾರ್ಬನ್ ತೆರಿಗೆಯನ್ನೂ ನಿರೀಕ್ಷಿಸುವಂತಿಲ್ಲ ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಆದರೂ, ಕ್ಯಾಂಪ್ ಮತ್ತು ಬೌಕುಸ್ ಇಬ್ಬರಿಗೂ, ದಕ್ಷ ತೆರಿಗೆ ವ್ಯವಸ್ಥೆ ರೂಪಿಸಲು ಸಾಕಷ್ಟು ಸಾಮಾನ್ಯ ಹಿತಾಸಕ್ತಿಗಳಿವೆ. ತೆರಿಗೆ ಸುಧಾರಣೆಯಲ್ಲಿ ಹೆಚ್ಚು ಹಣ ಸಂಗ್ರಹಿಸುವುದು ಮುಖ್ಯ ಗುರಿಯಾಗಬೇಕೋ ಬೇಡವೋ ಅನ್ನುವ ನಿಟ್ಟಿನಲ್ಲಿ ಕ್ಯಾಂಪ್ ಮತ್ತು ಬೌಕುಸ್ ಹಾಗೂ ಇವರುಗಳು ಪ್ರತಿನಿಧಿಸುವ ಪಕ್ಷಗಳಲ್ಲಿ ಒಮ್ಮತವಿಲ್ಲ. ಕೆಲವೊಂದು ವಿಷಯಗಳನ್ನು ರಿಪಬ್ಲಿಕನ್ ಆಗಿರುವ ಕ್ಯಾಂಪ್ ಬೇಡವೆಂದರೆ, ಅದನ್ನೇ ಅಧ್ಯಕ್ಷ ಒಬಾಮ ನೇತೃತ್ವದ ಡೆಮಾಕ್ರಾಟ್ಸ್ ಪಕ್ಷದವರಾದ ಬೌಕುಸ್ ಬೇಕು ಅನ್ನುತ್ತಾರೆ.

ಭಾರತದಲ್ಲಿ ಕೂಡಾ ತೆರಿಗೆ ಸುಧಾರಣೆ ನಡೆಯುತ್ತಲೇ ಬಂದಿದೆ. 90ರ ದಶಕದ ಆರಂಭದಲ್ಲಿ ಆರ್ಥಿಕ ಸುಧಾರಣೆ ಹಾದಿಯಲ್ಲಿ ದೇಶಕಂಡ ಮುಕ್ತ ನೀತಿ ಸಮಯದ ಜೊತೆ ಜೊತೆಯಲ್ಲೇ ತೆರಿಗೆ ಸುಧಾರಣೆ ಕೂಗು ಕೂಡಾ ಕೇಳಿ ಬಂದವು. ಸಾಮಾಜಿಕ ಹಾಗೂ ಪೌರ ಸೇವೆಯ ನಿಟ್ಟಿನಲ್ಲಿ ಅಭಿವೃದ್ಧಿಗಾಗಿ ಹಣಕಾಸಿನ ಅಗತ್ಯ ಇರುವ ಸರ್ಕಾರ ಅಧಿಕ ತೆರಿಗೆ ಆದಾಯದ ಮೂಲ ಹುಡುಕಿತು. ನೇರ ತೆರಿಗೆಯ ಖಾಸಗಿ, ಕಾರ್ಪೊರೇಟ್ ಶ್ರೇಣಿಯಲ್ಲಿ ತೆರಿಗೆ ನೀತಿ ಬದಲಾವಣೆಗಾಗಿ ಸುಧಾರಣೆ ಧ್ವನಿಯತ್ತ ಸರ್ಕಾರ ಚಿತ್ತ ಹರಿಸಿತು.

ಹೀಗೆ 2016ರ ತನಕದ ಎಲ್ಲಾ ಸರ್ಕಾರಗಳಿಗೂ ತೆರಿಗೆ ಸುಧಾರಣೆ ಎಂಬುದು ಸದಾ ಚಟುವಟಿಕೆಪೂರ್ಣ ಪ್ರಕ್ರಿಯೆಯಾಗಿತ್ತು. ಸರಿಯಾದ ಅಲ್ಲದೆ ಪಾರದರ್ಶಕ ಹಾಗೂ ಸುಲಭ ಆಡಳಿತ ವ್ಯವಸ್ಥೆ ಮೂಲಕ ತೆರಿಗೆ ವ್ಯವಸ್ಥೆ ನಿರ್ವಹಿಸುವುದು ಸರ್ಕಾರದ ಸಾರ್ವತ್ರಿಕ ಮೂಲ ಉದ್ದೇಶವಾಗಿತ್ತು. ಸರ್ಕಾರ ಆಯಾಯ ಕಾಲಕ್ಕೆ ವೈಯಕ್ತಿಕ ತೆರಿಗೆದಾರರಿಗೆ ಗರಿಷ್ಠ ಪ್ರಯೋಜನ ದೊರಕುವಂತೆ ನೇರ ತೆರಿಗೆಯನ್ನು ವಿನ್ಯಾಸಗೊಳಿಸುತ್ತಲೇ ಬಂದಿದೆ.

ವರ್ಷದಿಂದ ವರ್ಷಕ್ಕೆ ತೆರಿಗೆ ಪಾವತಿಸಬೇಕಾದ ಕನಿಷ್ಠ ಆದಾಯ ಮಿತಿಕೂಡಾ ಏರಿಸಲಾಯಿತು. 10%, 20% ಹಾಗೂ 30% – ಹೀಗೆ ಮೂರು ಹಂತಗಳನ್ನು ಮಾಡಲಾಗಿದೆ. ಅಂದರೆ, ರೂ 2.5 ಲಕ್ಷಕ್ಕಿಂತ ಕಡಿಮೆ ಆದಾಯದವರು ತೆರಿಗೆ ವ್ಯಾಪ್ತಿಯಲ್ಲಿ ಬರುವುದಿಲ್ಲ. ವಾರ್ಷಿಕ ರೂ 2.5 ಲಕ್ಷದಿಂದ ರೂ 5ಲಕ್ಷ ತನಕದ ಆದಾಯದವರಿಗೆ 10% ತೆರಿಗೆ ಹಾಗೂ ರೂ 5 ಲಕ್ಷದಿಂದ ರೂ 10 ಲಕ್ಷ ತನಕದ ಆದಾಯದವರಿಗೆ 20% ತೆರಿಗೆ ಮತ್ತು ರೂ 10 ಲಕ್ಷಕ್ಕಿಂತ ಅಧಿಕ ವಾರ್ಷಿಕ ಆದಾಯ ಹೊಂದಿದವರಿಗೆ 30% ಆದಾಯ ತೆರಿಗೆ ಮಿತಿಯ ಚೌಕಟ್ಟು ಇಂದು ನಮ್ಮಲ್ಲಿದೆ.

ಹೆಚ್ಚು ವಿಸ್ತಾರದ ಅಬ್ಕಾರಿ ಮತ್ತು ಸೀಮಾ ಶುಲ್ಕ ಸರಳಗೊಳಿಸಲಾಗಿದೆ, ವ್ಯವಹಾರಿಕ ಸಂಸ್ಥೆಗಳ ಕಾರ್ಪೊರೇಟ್ ತೆರಿಗೆ ನ್ಯಾಯಬದ್ಧವಾಗಿ ಸಮರ್ಪಕಗೊಳಿಸಲಾಗಿದೆ. ಇದರ ಮುಖ್ಯ ಉದ್ದೇಶ ಜನರನ್ನು ತೆರಿಗೆ ಕಟ್ಟಲು ಪ್ರೇರೇಪಿಸುವುದು ಹಾಗೂ ಅತಿ ಹೆಚ್ಚು ಜನರನ್ನು ತೆರಿಗೆ ವ್ಯಾಪ್ತಿಗೆ ತರುವುದಾಗಿದೆ.

ಜಿಡಿಪಿ ಹಾಗೂ ತೆರಿಗೆ ಅನುಪಾತ ಪ್ರಗತಿಪರವಾಗಿದೆ, ಆದರೆ ಜನಸಂಖ್ಯಾ ವಿಸ್ತಾರದ ಆಧಾರದಲ್ಲಿ ತೆರಿಗೆದಾರರ ಸಂಖ್ಯೆ ನಗಣ್ಯವಾಗಿದೆ. ದೇಶದ ಜನಸಂಖ್ಯೆಯ ಕೇವಲ 2%ರಷ್ಟೇ ಜನರು ತೆರಿಗೆ ನೀಡುತ್ತಿದ್ದಾರೆ. ಅದೂ ಅಲ್ಲದೆ, ಈ ತೆರಿಗೆದಾರ ಜನ ಸಮೂಹ ನಗರ ಪ್ರದೇಶಕ್ಕಷ್ಟೇ ಸೀಮಿತವಾಗಿದೆ.

ಸರ್ಕಾರ ಅಧಿಕ ಸಂಖ್ಯೆಯ ಜನ ಸಮೂಹವನ್ನು ತೆರಿಗೆ ವ್ಯಾಪ್ತಿಯೊಳಗೆ ಸೇರಿಸಲು ಹೆಚ್ಚು ಹೆಚ್ಚು ತೆರಿಗೆ ಸುಧಾರಣೆ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಿದರೂ ಸರಕು ಮತ್ತು ಸೇವಾ ತೆರಿಗೆ ಅತಿ ಮಹತ್ವದ್ದೆನಿಸಲಿದೆ. ಇಂದಿನ ಎಲ್ಲಾ ತೆರಿಗೆಗಳನ್ನೂ ಒಂದೇ ಚೌಕಟ್ಟಿನಲ್ಲಿ ಸೇರಿಸಿ ರೂಪಿಸಿದ ಏಕರೂಪ ತೆರಿಗೆ ವಿಧಾನ ಇದಾಗಿದೆ. ಉತ್ಪಾದಕರಿಗೆ ಇದೊಂದು ವರದಾನವೇ ಸರಿ.

ದೇಶದ ಯಾವುದೇ ಮೂಲೆಗೆ ವಿತರಿಸಲ್ಪಟ್ಟರೂ ಅದು ಯಾವುದೇ ಭಾಗದಲ್ಲಿ ತಯಾರಾದರೂ ಕೂಡಾ ಆ ಉತ್ಪನ್ನಕ್ಕೆ ಜಿ.ಎಸ್.ಟಿ ಎಂಬ ತೆರಿಗೆ ವಿನಃ ಇನ್ನಿತರ ಯಾವುದೇ ಬಹುವಿಧದ ತೆರಿಗೆಗಳನ್ನು ಮುಂದೆ ವಿಧಿಸಲಾಗುವುದಿಲ್ಲ. ಇದರಿಂದ ಸ್ಥಳೀಯ ತೆರಿಗೆ ನಿಯಮಗಳ ಅಡೆತಡೆಗಳಿಲ್ಲದೆ ದೇಶದಾದ್ಯಂತ ಸಾಗಾಟ ಸರಾಗ ಮತ್ತು ಮಾರಾಟ ಸುಲಭ ಸಾಧ್ಯವಾಗಲಿದೆ.




ಕಾನೂನು ಆಗುವ ಮುನ್ನ ಅಡತಡೆಗಳನ್ನು ಕಂಡು ನಂತರ ಲೋಕಸಭೆ ಹಾಗೂ ರಾಜ್ಯ ಸಭೆಗಳೆರಡರಲ್ಲೂ ಅನುಮೋದನೆಗೊಂಡ ಜಿಎಸ್‌ಟಿ ಒಂದು ಐತಿಹಾಸಿಕ ಶಾಸನವಾಗಿದೆ. ಏಕೆಂದರೆ ಜಿ.ಎಸ್.ಟಿ ಗ್ರಾಹಕರನ್ನು ರಾಜನನ್ನಾಗಿಸಲಿದೆ. ಸಂವಿಧಾನ (122 ತಿದ್ದುಪಡಿ) ವಿಧೇಯಕ ಮೇ 2015ರಲ್ಲಿ ಪ್ರಥಮಬಾರಿಗೆ ಲೋಕಸಭೆಯಲ್ಲಿ ಅನುಮೋದನೆ ಪಡೆಯಿತು. ರಾಜ್ಯಸಭೆ ಸೂಚಿಸಿದ ಬದಲಾವಣೆ ಸಮ್ಮತಿಯೊಂದಿಗೆ ಪುನಃ ಮತ್ತೊಮ್ಮೆ ಲೋಕಸಭೆಯಲ್ಲಿ ಅನುಮೋದನೆ ಪಡೆಯಿತು. ಅಂತಿಮವಾಗಿ ಎರಡೂ ಸದನಗಳ ಸದಸ್ಯರ ಅನುಮೋದನೆಯ ನಂತರ ರಾಷ್ಟ್ರಪತಿಯವರ ಸಮ್ಮತಿಯ ಕೊನೆಯ ಅಂಕಿತ ಮುದ್ರೆ ಪಡೆಯಿತು. 1% ಹೆಚ್ಚುವರಿ ತೆರಿಗೆಯನ್ನು ತೆಗೆದುಹಾಕುವುದನ್ನೂ ಸೇರಿಸಿ 6 ಅಧಿಕೃತ ತಿದ್ದುಪಡಿಯನ್ನು ಸರ್ಕಾರ ಮುಂದಿಟ್ಟಿತ್ತು.

ಜಿಎಸ್‌ಟಿ ಒಂದು ದೇಶ ಒಂದು ತೆರಿಗೆ ಪರಿಕಲ್ಪನೆಯನ್ನು ಬಹುತೇಕವಾಗಿ ಸಾಕಾರಗೊಳಿಸುವ ಮತ್ತು ಆರ್ಥಿಕತೆಯನ್ನು ಪರಿವರ್ತಿಸಲು ನೆರವಾಗುವ ಪಾರದರ್ಶಕ ಕಾನೂನು ಕ್ರಮವೆಂದು ಪರಿಗ್ರಹಿಸಲಾಗಿದೆ.

ಜಿ.ಎಸ್.ಟಿ ಚೌಕಟ್ಟಲ್ಲಿ ಅತ್ಯಂತ ಕನಿಷ್ಠ ಸಾಧ್ಯ ತೆರಿಗೆ ರೂಪಿಸುವ ಮೂಲಕ, ಯಾವುದೇ ರಾಜ್ಯ ತನ್ನ ನಾಗರಿಕರಿಗೆ ಯಾವುದೇ ಹೆಚ್ಚುವರಿ ತೆರಿಗೆ ವಿಧಿಸುವಂತಿಲ್ಲ. ಇದರಿಂದಾಗಿ ಅಧಿಕ ತೆರಿಗೆ ಕಷ್ಟನಷ್ಟಗಳು, ವಿವಿಧ ಕಾನೂನುಕಟ್ಟಳೆಗಳ ಬಾಧ್ಯತೆಯಿಂದ ನಾಗರಿಕರು ಸುರಕ್ಷಿತರಾಗಲಿದ್ದಾರೆ. ದೇಶದಾದ್ಯಂತ ಅನುಷ್ಠಾನವಾಗುವ ಅಂತಿಮ

ಗರಿಷ್ಠ ತೆರಿಗೆ ಮಿತಿಯನ್ನು ಜಿ.ಎಸ್.ಟಿ. ಮಂಡಳಿ ನಿರ್ಧರಿಸಲಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಈ ಸಂಪೂರ್ಣ ಪ್ರಕ್ರಿಯೆ ಅತಿಬೇಗ ಕಾರ್ಯರೂಪಕ್ಕೆ ಬರುವ ಆಶಯ ಪಡಿಸಿದ್ದಾರೆ.

ರಾಜ್ಯಗಳ ಹಾಗೂ ದೇಶದ ವಿವಿಧ ತೆರಿಗೆಗಳು ಸಮ್ಮಿಳಿತವಾಗಿ, ಜಿ.ಎಸ್.ಟಿ. ತೆರಿಗೆ ಚೌಕಟ್ಟಿಲ್ಲಿ ಸಂಪೂರ್ಣ ಭಾರತ ಒಂದು ಸಮಗ್ರ ವಿಶೇಷ ಆರ್ಥಿಕ ವಲಯವಾಗಿ ಹೊರಹೊಮ್ಮಲಿದೆ.

ದೇಶದ ಮಾರುಕಟ್ಟೆ ಬಾಗಿಲನ್ನು ಮೊಟ್ಟಮೊದಲ ಬಾರಿ 1991ರಲ್ಲಿ ಮುಕ್ತ ಆರ್ಥಿಕ ನೀತಿಗೆ ತೆರೆದಿಟ್ಟ ನಂತರ ದೇಶಕಂಡ ಅತ್ಯಂತ ಮಹತ್ತರ ಮತ್ತು ಅತಿದೊಡ್ಡ ಕಾನೂನಾತ್ಮಕ ತೆರಿಗೆ ಸುಧಾರಣೆ ಇದು ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಬಣ್ಣಿಸಿದೆ. ಅಭಿವೃದ್ಧಿಶೀಲ ಜಗತ್ತಿನಲ್ಲಿ ಅತ್ಯಂತ ಬಲಿಷ್ಠ ಆರ್ಥಿಕತೆ ಎಂಬ ಹೆಗ್ಗಳಿಕೆಯೊಂದಿಗೆ ಮುನ್ನುಗ್ಗುತ್ತಿರುವ ವಿಶಾಲ ಭಾರತ, ರಾಜ್ಯ–ರಾಜ್ಯಗಳ ಗಡಿ–ತೆರಿಗೆ ಅಡಚಣೆಗಳ ವ್ಯವಹಾರಿಕ ಹಿನ್ನಡೆಯಿಂದ ಸಂಪೂರ್ಣವಾಗಿ ಮುಕ್ತವಾಗಲಿದೆ.

ಈಗಿರುವ ಅನೇಕ ಸಮಸ್ಯೆಗಳಿಗೆ ಜಿಎಸ್‌ಟಿಯಿಂದ ಪರಿಹಾರ ಸಾಧ್ಯವಿದ್ದು, ದೇಶಾದ್ಯಂತ ವ್ಯಾಪಾರ ವಾಣಿಜ್ಯ ಸರಾಗವಾಗಿ ವಿಸ್ತೃತಗೊಳ್ಳಲು ಅವಕಾಶವಾಗಿ ಏಕೀಕೃತ ಆರ್ಥಿಕತೆ ರೂಪುಗೊಳ್ಳುತ್ತದೆ ಎಂದು ಪತ್ರಿಕೆ ಅಭಿಪ್ರಾಯ ಪಟ್ಟಿದೆ. ಅಂತಾರಾಷ್ಟ್ರೀಯ ಶಾಂತಿ ಕುರಿತಾದ ಕಾರ್ನೇಜ್ ದತ್ತಿಯ ದಕ್ಷಿಣ ಏಶಿಯಾ ಕಾರ್ಯಕ್ರಮದ ಹಿರಿಯ ಸಹಾಯಾಧಿಕಾರಿ ಮಿಲನ್ ವೈಷ್ಣವ್ ಅವರ ಪ್ರಕಾರ ಸುಲಭ ಹಾಗೂ ಸರಳವಾಗಿ ವ್ಯವಹಾರ ಉದ್ಯಮ ನಡೆಸಲು ಅಳವಡಿಕೆಯಾಗಲೇ ಬೇಕಾಗಿದ್ದ ಬಹಳದಿನಗಳ ಅಗತ್ಯ ಇದಾಗಿತ್ತು. ಅಲ್ಲದೆ 21ನೇ ಶತಮಾನಕ್ಕೆ ಭಾರತ ಮುನ್ನುಗ್ಗುತ್ತಿದೆ ಎಂಬುದನ್ನು ಜಗತ್ತಿಗೆ ತೋರಿಸಲು ಇದು ಅಗತ್ಯವಾಗಿತ್ತು.

ಇಂದು ಚಾಲ್ತಿಯಲ್ಲಿರುವ ರಾಜ್ಯ ಮತ್ತು ಒಕ್ಕೂಟದ ಒಟ್ಟಾರೆ ಎಲ್ಲಾ 15 ತೆರಿಗೆಗಳನ್ನು ಜಿ.ಎಸ್.ಟಿ ಬದಲಿಸಲಿದೆ ಮತ್ತು ಭಾರತದ ಆರ್ಥಿಕ ಬೆಳವಣಿಗೆಯನ್ನು 0.5ರಷ್ಟು ಮತ್ತು ಎರಡು ಸರಾಸರಿ ಅಂಕಗಳಷ್ಟು ಹೆಚ್ಚಿಸಲು ಸಹಾಯಕವಾಗಲಿದೆ.




ದೇಶದ ಪ್ರಗತಿಯಲ್ಲಿ ರಾಜ್ಯಗಳ ಸಹಕಾರ ಹಾಗೂ ರಾಜ್ಯಗಳ ಸಮಪಾಲು ಜೊತೆಜೊತೆಯಾಗಿ ಸಕಾರಾತ್ಮಕ ರೀತಿಯಲ್ಲಿ ಸಾಗಿ ಮುಂದುವರಿಯಲು ಜಿ.ಎಸ್.ಟಿ ಸಹಾಯಮಾಡಲಿದೆ. ಕೇಂದ್ರ ಹಾಗೂ ರಾಜ್ಯಗಳು ಜೊತೆ ಜೊತೆಯಾಗಿ ಕೈ–ಕೈ ಹಿಡಿದು ಸಾಗಲು ಅವಕಾಶನೀಡುವ ಆದಾಯಮೂಲದ ತೆರಿಗೆ ಅಂಶವನ್ನು ಸಮರೀತಿಯಲ್ಲಿ ಹಂಚಿಕೊಳ್ಳುವ ಸುಧಾರಣಾ ವ್ಯವಸ್ಥೆಯನ್ನು ಜಿ.ಎಸ್.ಟಿ ರೂಪಿಸಲಿದೆ.

ರಾಜ್ಯಗಳಿಗೆ ಅಧಿಕ ಅಧಿಕಾರ ನೀಡಿ ಮಾರುಕಟ್ಟೆ ಸುಧಾರಣೆಯನ್ನು ಜೊತೆಯಲ್ಲಿ ಅಧಿಕ ತೆರಿಗೆ ಅವಕಾಶವನ್ನು 1991ರಲ್ಲಿ ಕೇಂದ್ರ ಸರ್ಕಾರ ಉದಾರೀಕರಣದಡಿ ನೀಡಿತ್ತು. ರೂಢಿಯಲ್ಲಿದ್ದ ವಿವಿಧ ತೆರಿಗೆಗಳು ದೇಶದ ಅಭಿವೃದ್ಧಿಗೆ ಅಡಚಣೆಗಳಾಗುತ್ತಿವೆ ಎಂದು ಆ ನಂತರದ ವಿವಿಧ ಸರ್ಕಾರಗಳು ಮನವರಿಕೆ ಮಾಡಿಕೊಂಡವು.

ಕೇಂದ್ರ ಸರ್ಕಾರದ ಪ್ರಧಾನ ಆರ್ಥಿಕ ಸಲಹೆಗಾರ ಶ್ರೀ ಅರವಿಂದ್ ಸುಬ್ರಮಣಿಯನ್ ವಿವರಿಸುವಂತೆ, ಜಿ.ಎಸ್.ಟಿಯ ಸದುಪಯೋಗ ಪೂರ್ಣರೂಪ ಪಡೆಯಲು ಸಾಕಷ್ಟು ಸಮಯ ಬೇಕಾದೀತು. ಜಿ.ಎಸ್.ಟಿಯ ಉತ್ತುಂಗ ಕಾಣಲು 2019ರ ತನಕ ಕಾಯಬೇಕಾದೀತು. ಜಿ.ಎಸ್.ಟಿ. ಅಖಿಲ ಭಾರತ ಮಟ್ಟದಲ್ಲಿ ಏಕರೂಪ ತೆರಿಗೆ ಚೌಕಟ್ಟು ಮೈತ್ರಿಯುತ ಹಾಗೂ ಆಶಾಪೂರ್ಣ ಆಡಳಿತ ಸಂಕಲ್ಪವಾಗಿದೆ.

ದೀರ್ಘಕಾಲೀನ ದೃಷ್ಟಿಕೋನದಲ್ಲಿ ಜಿ.ಎಸ್.ಟಿಯಿಂದಾಗಿ ಬಂಡವಾಳ ಸರಕು ಕಡಿತ, ಉತ್ಪಾದನೆ ಮತ್ತು ರಫ್ತು ಗಳಲ್ಲಿ ಹೆಚ್ಚಳ, ಅಧಿಕವಾಗಲಿರುವ ತೆರಿಗೆ ಸಂಗ್ರಹ, ಅಲ್ಲದೆ ಅತಿ ಮುಖ್ಯವಾಗಿ ಹೆಚ್ಚಳಿರುವ ಉದ್ಯೋಗ ಸೃಷ್ಟಿ ಅವಕಾಶಗಳು, ಕಾಣುವ ಹಿನ್ನಲೆಯಲ್ಲಿ ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಅಪಾರ ವರ್ಧನೆಯಾಗಲಿದೆ.

ಜಿ.ಎಸ್.ಟಿಯನ್ನು ಭಾರತದ ಈ ತನಕದ ಎಲ್ಲಾ ಆರ್ಥಿಕ ಸುಧಾರಣೆಗಳ ಮಾತೃರೂಪ ಎಂದು ಬಣ್ಣಿಸಲಾಗುತ್ತಿದೆ. ಭಾರತದ ವ್ಯಾಪಾರಸ್ಥರು, ಉದ್ದಿಮೆದಾರರು ಮತ್ತು ಕಾರ್ಪೊರೆಟ್ ಜಗತ್ತು, ತಮ್ಮ ದೈನಂದಿನ ಜೀವನದಲ್ಲಿ ಜಿ.ಎಸ್.ಟಿ. ಗಮನಾರ್ಹ ಪರಿಣಾಮಗಳನ್ನು ತರುವುದೆಂದು ನಿರೀಕ್ಷಿಸಿದ್ದಾರೆ. ವಿವಿಧ ತೆರಿಗೆ ಮತ್ತು ಪ್ರಾಧಿಕಾರಗಳ ಒತ್ತಡದಿಂದಾಗುವ ತೆರಿಗೆ ಭಯೋತ್ಪಾದನೆ ಕೊನೆಗೊಳ್ಳಲಿದೆ. ತೆರಿಗೆ ಸಲ್ಲಿಕೆ ಪ್ರಕ್ರಿಯೆ, ತೆರಿಗೆ ಸಂಗ್ರಹ ಸಂದಾಯ, ಅರ್ಜಿ ಸಲ್ಲಿಕೆ, ವ್ಯವಸ್ಥೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಹಣ ಹಿಂಪಡೆಯುವ ವಿಧಾನ ಮೊದಲಾದ ಪ್ರಕ್ರಿಯೆಯಲ್ಲೇ ತಮ್ಮ ವೇಳೆ ವ್ಯಯವಾಗುತ್ತಿದೆ ಎಂದು ಉದ್ಯಮರಂಗದ ಅನೇಕರು ಅಳಲು ವ್ಯಕ್ತ ಪಡಿಸುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯಗಳ ನಡುವಿನ ಜಿ.ಎಸ್.ಟಿಯ ವಿರೋಧಾಭಾಸದ ವಿಷಯವೆಂದರೆ ಅದು ತೆರಿಗೆ ದರಗಳು. ರಾಜ್ಯಗಳು ಅಧಿಕ ದರದ ಮೂಲಕ ಹೆಚ್ಚು ಆದಾಯ ಬಯಸಿದರೆ, ಹಣದುಬ್ಬರದ ಏರುಪೇರುತಡೆಯಲು ಕೇಂದ್ರ ಕನಿಷ್ಠ ತೆರಿಗೆ ದರ ನಿರ್ಧರಿಸ ಬಯಸಿದೆ. ಈಗ ಕಳೆದ ದಶಕ ಕಂಡ ಕನಿಷ್ಠ ಹಣದುಬ್ಬರ ಜೊತೆ ಉತ್ತಮ 7.6% ರಷ್ಟು ವರ್ಧನೆಯಲ್ಲಿ ಭಾರತದ ಆರ್ಥಿಕತೆ ಇಂದು ಬೆಳೆಯುತ್ತಿದೆ.

ಉದ್ಯೋಗ ಸೃಷ್ಟಿಯಲ್ಲಿ ವರ್ಧನೆ ಇನ್ನೂ ಕಾಣುತ್ತಿಲ್ಲ, ಕಾರ್ಪೊರೆಟ್ ಕ್ಷೇತ್ರದಲ್ಲಿನ ಹಣದ ಕೊರತೆ ಉತ್ಪಾದನೆ ಕ್ಷೇತ್ರದ ನಿಸ್ತೇಜಕ್ಕೆ ಕಾರಣವಾಗಿದೆ. ಬಹುತೇಕ ಪ್ರಗತಿ ಐಟಿ ಮತ್ತು ಐಟಿ ಪೂರಕ ಸೇವಾ ಕ್ಷೇತ್ರಗಳಲ್ಲಿದ್ದು, 3700 ಕೋಟಿ ಅಮೆರಿಕನ್ ಡಾಲರ್ ವಿದೇಶಿ ವಿನಿಮಯ ಗಳಿಸಿದೆ. ತೆರಿಗೆ ಸುಧಾರಣೆ ಜಿ.ಎಸ್.ಟಿ ಯೊಂದಿಗೆ ಕೊನೆಗೊಳ್ಳುವುದಿಲ್ಲ.

ನೇರ ತೆರಿಗೆ ವಿನ್ಯಾಸ ಸರಳಗೊಳಿಸುವಂತೆ ನೇರ ತೆರಿಗೆ ಸಂಹಿತೆ ಸುಧಾರಣೆ ತಂದು ಬೃಹತ್ ಜನಸಮೂಹದ ವ್ಯಾಪ್ತಿಗೆ ತೆರಿಗೆ ವ್ಯವಸ್ಥೆ ತಲಪುವಂತೆ ಮಾಡಲು ಇನ್ನೊಂದು ಮಹತ್ತರ ಕಾನೂನಾತ್ಮಕ ಹೆಜ್ಜೆ ಇಡಬೇಕಾಗಿದೆ. 2016–17 ಆಯವ್ಯಯದಲ್ಲಿ ನೇರ ತೆರಿಗೆ ಸಂಹಿತೆ

ತೆಗೆದು ಹಾಕುವ ಬಗ್ಗೆ ಕೇಂದ್ರ ಹಣಕಾಸು ಸಚಿವರು ಸೂಚನೆ ನೀಡಿದ್ದರು. ಆದರೆ, ಸಂಸತ್ತಿನ ಹಣಕಾಸು ಸ್ಥಾಯಿ ಸಮಿತಿ ಮುಂದಿನ ಅತಿ ಮಹತ್ತರ ಸುಧಾರಣೆಯಾಗಿ ನೇರ ತೆರಿಗೆ ಸಂಹಿತೆಯನ್ನು ಮಾರ್ಪಾಡು ಮಾಡುವಂತೆ ಕೇಂದ್ರ ಹಣಕಾಸು ಸಚಿವಾಲಯಕ್ಕೆ ತಿಳಿಸಿದೆ.

ಭಾರತೀಯ ಆದಾಯ ತೆರಿಗೆ ಅಧಿನಿಯಮ 1961 ವನ್ನು ಬದಲಾಯಿಸಿ, ವಿವಿಧ ವರ್ಗದ ತೆರಿಗೆಗಳಾದ ಆದಾಯ ತೆರಿಗೆ, ಲಾಭಾಂಶ ವಿತರಣಾ ತೆರಿಗೆ, ಹೆಚ್ಚುವರಿ ಲಾಭ ತೆರಿಗೆ ಮತ್ತು ಸಂಪತ್ತು ತೆರಿಗೆ ಮುಂತಾದವುಗಳಿಗೆ ಇರುವ ಕಾನೂನುಗಳನ್ನೂ ಪರಿಷ್ಕರಿಸಿ ಏಕರೂಪಗೊಳಿಸಿ ಸಮರ್ಥ, ಪರಿಣಾಮಕಾರಿ ಮತ್ತು ಸಮರ್ಪಕ ಆರ್ಥಿಕ ವ್ಯವಸ್ಥೆಗೆ ಪೂರಕ ತೆರಿಗೆ–ಜಿಡಿಪಿ ಅನುಪಾತ ಸರಿದೂಗಿಸುವ ನೇರ ತೆರಿಗೆ ಸಂಹಿತೆ ವ್ಯವಸ್ಥೆ ಮುಂದಿನ ಹಂತದಲ್ಲಿದೆ. ಇನ್ನೊಂದು ಗುರಿ ಎಂದರೆ, ತೆರಿಗೆ ಸಂಬಂಧಿಸಿದ ಸಮಸ್ಯೆಗಳ, ವ್ಯಾಜ್ಯಗಳ ಅವಕಾಶ ಕಡಿಮೆಗೊಳಿಸುವುದು. ತೆರಿಗೆ ನಿಯಮ ಹಾಗೂ ಅಂತಾರಾಷ್ಟ್ರಮಟ್ಟದ ಅತ್ಯುತ್ತಮ ವ್ಯವಸ್ಥೆ ಅನುಷ್ಠಾನಗೊಳಿಸುವುದು. ಆ ಮೂಲಕ ಸಂಯುಕ್ತ ಏಕ ತೆರಿಗೆ ಪಾವತಿ ವ್ಯವಸ್ಥೆ ರೂಪಿಸುವುದಾಗಿದೆ. ನೇರ ತೆರಿಗೆಗಳ ಸಂಹಿತೆ – ಇದರ ಗುಣಲಕ್ಷಣಗಳು : ಈಗಿರುವ ಆದಾಯ ತೆರಿಗೆ ಕಾಯ್ದೆಯಲ್ಲಿ ಇರುವ ಒಟ್ಟು 298 ವಿಭಾಗ ಹಾಗೂ 14 ಅನುಬಂಧಗಳ ಬದಲಾಗಿ 319 ವಿಭಾಗಗಳು ಮತ್ತು 22 ಅನುಬಂಧಗಳನ್ನು ತರಲು ಉದ್ದೇಶಿಸಲಾಗಿದೆ. ಅನುಮೋದನೆ ಪಡೆದ ಮೇಲೆ ಹಳೆಯ ಹಾಗೂ ಅನುಪಯುಕ್ತ ಎಲ್ಲಾ ಆದಾಯ ತೆರಿಗೆ ಅಧಿನಿಯಮಗಳೂ ನೇರ ತೆರಿಗೆಗಳ ಸಂಹಿತೆ ಇದಕ್ಕೊಳಪಟ್ಟು ಸಂಯುಕ್ತ ನಿಯಮ ಅನುಷ್ಠಾನಗೊಳ್ಳಲಿದೆ.




ಆದರೂ, ಆದಾಯ ತೆರಿಗೆಯ ಹಲವಾರೂ ವಿಷಯಗಳು ನೇರತೆರಿಗೆ ಸಂಹಿತೆಯಲ್ಲಿರುತ್ತವೆ. ಮ್ಯೂಚುವಲ್ ಫಂಡ್ / ಯುಲಿಪ್‌ಗಳನ್ನು 80ಸಿ ಕಡಿತದಿಂದ ಬಿಟ್ಟುಬಿಡಲಾಗುವುದು: ಇಕ್ವಿಟಿ ಆಧರಿತ ಮ್ಯೂಚುವಲ್ ಫಂಡ್ ಅಥವಾ ಯೂಲಿಪ್ ಗಳಿಂದ ಬರುವ ಆದಾಯಕ್ಕೆ 5% ತೆರಿಗೆ, ಫ್ರಿಂಜ್ ಲಾಭ ತೆರಿಗೆ ಮಾಲಿಕರ ಬದಲಾಗಿ ಉದ್ಯೋಗಿಗಳ ತೆಕ್ಕೆ ಸೇರಲಿದೆ. ಒಟ್ಟು ಸಮಗ್ರ ಆದಾಯದ 5% ನಷ್ಟು ರಾಜಕೀಯ ಕೊಡುಗೆಗಳಿಗೆ ಆದಾಯ ಕಡಿತ ಅವಕಾಶ ಸಿಗಲಿದೆ. ನೇರ ತೆರಿಗೆಗಳ ಸಂಹಿತೆಯಲ್ಲಿ ಎಲ್ಲಾ ನೇರ ತೆರಿಗೆಗಳಿಗೂ ಏಕ ಸಂಹಿತೆ ಸಾಕು. ಕೇವಲ ಒಂದು ಸಂಹಿತೆಯಲ್ಲೇ ಪ್ರತಿಯೊಂದೂ ನೇರತೆರಿಗೆಯ ವಿವರಗಳೂ ಒಳಗೊಳ್ಳುವ ಕಾನೂನಾತ್ಮಕ ವ್ಯವಸ್ಥೆಯ ಅಗತ್ಯವಿದೆ. ತೆರಿಗೆ ನಿಯಮದಲ್ಲಿ ಸುಧಾರಣೆಯಾಗಿ, ಸ್ವಘೋಷಣಾ ವ್ಯವಸ್ಥೆಯಲ್ಲಿ ತೆರಿಗೆ ಪಾವತಿಯ ಸ್ಪಷ್ಟತೆ ಅನುಷ್ಠಾನವಾಗಬೇಕು. ಬೆಳೆಯುತ್ತಿರುವ ನಮ್ಮ ಆರ್ಥಿಕತೆಯ ಮುನ್ನೋಟ ಗಮನವಿರಿಸಿ, ಪದೇ ಪದೇ ತಿದ್ದುಪಡಿಗೆ ಅವಕಾಶವಾಗದಂತೆ ಸಮಗ್ರ ವಿನ್ಯಾಸದ ಚೌಕಟ್ಟು ರೂಪಿಸಲಾಗಿದೆ. ಅಧಿಕ ತೆರಿಗೆದಾರರು ಸಣ್ಣ ಅಥವ ಸಾಮಾನ್ಯ ವರ್ಗದಲ್ಲಿ ಇರುವುದರಿಂದಾಗಿ, ತೆರಿಗೆ ನಿಯಮಾವಳಿಗಳನ್ನು ಅರ್ಜಿ ಪತ್ರದಲ್ಲಿ ನಮೂದಿಸಿರಬೇಕು. ಕಾನೂನು ಪರಿಷ್ಕರಣೆಗಳೆಲ್ಲಾ ತೆರಿಗೆದಾರರಿಗೆ ಅನುಕೂಲವಾಗುವಂತಿರಬೇಕು.

ಕಾರ್ಪೊರೆಟ್ ವಿಭಾಗದಲ್ಲಿ ತೆರಿಗೆ ಸುಧಾರಣೆ ಅವಕಾಶಗಳ ಬೇಡಿಕೆ ಪಟ್ಟಿ ಬಹಳ ದೊಡ್ಡದಿದೆ. ಕನಿಷ್ಠ ಪರ್ಯಾಯ ತೆರಿಗೆ ತೆಗೆದು ಹಾಕಬೇಕಾಗಿದೆ. (ವೋಡಫೋನ್ ತೆರಿಗೆ ಇಲಾಖೆಯ ತೆರಿಗೆಗಳ ವ್ಯಾಜ್ಯ–ವಿವಾದ ಭೂತವಾಗಿ ಕಾಡಿದ ಹಿನ್ನೆಲೆಯಲ್ಲಿ ಕಂಡುಬರುವ ಬಾಕಿ ತೆರಿಗೆ), ಅಲ್ಲದೆ ತೆರಿಗೆ ರಜೆ, ಕ್ಯಾಪಿಟಲ್ ಗೈನ್ ತೆರಿಗೆ, ಷೇರು ಬೈ ಬ್ಯಾಕ್ ಮುಂತಾದ ಹಲವು ತೆರಿಗೆ ನಿಯಮಗಳು ಪರಿಷ್ಕರಣೆ ಆಗಬೇಕು.

ಜಿ.ಎಸ್.ಟಿ. ತೆರಿಗೆ ಸುಧಾರಣಾ ನಿಟ್ಟಿನಲ್ಲಿ ಬಹುದೊಡ್ಡ ಹೆಜ್ಜೆಯಾಗಿದೆ. ಉತ್ಪಾದಕರಿಗೆ ಹೂಡಿಕೆದಾರರಿಗೆ ಧೈರ್ಯತುಂಬುವ ಕಾರ್ಯವಿದು. ಆರ್ಥಿಕತೆಯನ್ನು ಪ್ರಗತಿಯತ್ತ ಸಾಗಿಸಲು ಸಹಾಯ ಮಾಡುವುದು. ಇದು ದೇಶದ ಪ್ರಗತಿಗೆ ಅಗತ್ಯ ಇತರ ಸುಧಾರಣಾ ಪ್ರಕ್ರಿಯೆಗಳಿಗೆ ಸಕಾರಾತ್ಮಕ ಹಾಗೂ ಪ್ರೇರಣಾತ್ಮಕ ವಾತಾವರಣ ಕಲ್ಪಿಸಲಿದೆ. ಆಯವ್ಯಯದಲ್ಲಿ ಇನ್ನೂ ಹಲವಾರು ಸುಧಾರಣೆ ಸಾಧ್ಯವಿದ್ದು, ದೇಶದ ಜಿಡಿಪಿ ಇನ್ನಷ್ಟೂ ವೃದ್ಧಿ ಕಾಣಲಿದೆ. ಸರ್ಕಾರ ನೇರ ತೆರಿಗೆ ಅಥವಾ ಕಾರ್ಪೊರೆಟ್ ತೆರಿಗೆಗಳ ಸುಧಾರಣಾ ನೀತಿಯನ್ನು ಉತ್ತಮಗೊಳಿಸಿ, ಇತರ ಖಾಸಗಿ ವೈಯಕ್ತಿಕ ತೆರಿಗೆಗಳ ನಿಯಮಗಳನ್ನು ಇನ್ನೂ ಸರಳಗೊಳಿಸಿ ಜನಸಾಮಾನ್ಯನಿಗೆ ಸುಲಭ ಹಾಗೂ ವ್ಯಾಪಾರ ವ್ಯವಹಾರಗಳಿಗೆ ಅನುಕೂಲಕರಗೊಳಿಸಿದಲ್ಲಿ, ದೇಶದ ಅಭಿವೃದ್ಧಿ ಹಾಗೂ ಪ್ರಗತಿಗಾಗಿ ವಿಶಾಲ ಜನಸಮೂಹ ತೆರಿಗೆ ವ್ಯಾಪ್ತಿಗೆ ಒಳಪಟ್ಟು, ಪ್ರತಿಯೊಬ್ಬ ಪ್ರಜೆಯೂ ತೆರಿಗೆ ಪಾವತಿ ನಮ್ಮ ಸಾಮಾಜಿಕ ಕರ್ತವ್ಯ ಹಾಗೂ ಜವಾಬ್ದಾರಿಯಾಗಿ ಸ್ವೀಕರಿಸುವ ದಿನ ಬರಲಿದೆ. ❑


# ಯೋಜನಾ

## ಡಿಸೆಂಬರ್ 2016 ಸಂಚಿಕೆಯ ವಿಷಯ

## ಅಭಿವೃದ್ಧಿಗಾಗಿ ವಿಜ್ಞಾನ

# ಜಿಎಸ್‌ಟಿ; ಭಾರತೀಯ ಆರ್ಥಿಕತೆಯ ಮನ್ವಂತರ

* ಡಾ. ರಂಜಿತ್ ಮೆಹತ




**ಜಿಎಸ್‌ಟಿ ಅಳವಡಿಕೆಯಿಂದ ತೆರಿಗೆ ಜಾಲವು ಸಮಗ್ರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದ್ದು, ಎಲ್ಲ ಸರಕುಗಳು ಮತ್ತು ಸೇವೆಗಳು ಅತ್ಯಂತ ಕಡಿಮೆ ರಿಯಾಯಿತಿಯೊಂದಿಗೆ ತೆರಿಗೆಯ ವ್ಯಾಪ್ತಿಗೊಳಪಡುತ್ತವೆ. ಜಿಎಸ್‌ಟಿಯು ಭಾರತದ ಆರ್ಥಿಕ ವ್ಯವಸ್ಥೆಯ ದಿಕ್ಕನ್ನು ಬದಲಿಸುವ ತೆರಿಗೆ ಸುಧಾರಣೆಯಾಗಿದ್ದು, ಸರಕು ಮತ್ತು ಸೇವೆಗಳ ಬೆಲೆಗಳ ಮೇಲೆ ಆಗುತ್ತಿದ್ದ ವ್ಯತಿರಿಕ್ತವಾದ ಸರಣಿ ಪರಿಣಾಮವನ್ನು ಕಡಿಮೆ ಮಾಡುತ್ತದೆ.**

ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್‌ಟಿ)ಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ದೊಡ್ಡ ಪ್ರಮಾಣದ ಪ್ರಯತ್ನವನ್ನು ಪ್ರಶಂಸಿಸಲೇಬೇಕು. ಸಂವಿಧಾನಕ್ಕೆ ತಂದ ತಿದ್ದುಪಡಿ ವಿಧೇಯಕವನ್ನು ಪಾಸುಮಾಡಿರುವುದು ಮತ್ತು ಮಾದರಿ ಜಿಎಸ್‌ಟಿ ಕಾನೂನುಗಳನ್ನು ಬಿಡುಗಡೆ ಮಾಡಿರುವುದು, ಜಿಎಸ್‌ಟಿಯನ್ನು ಆದಷ್ಟು ಶೀಘ್ರವಾಗಿ ಜಾರಿಗೆ ತರುವ ಕೇಂದ್ರದ ಬದ್ಧತೆಯನ್ನು ತೋರಿಸುತ್ತದೆ. ಭಾರತ ಉತ್ಪಾದನಾ ಕ್ಷೇತ್ರದಲ್ಲಿ ವಿಶ್ವಕ್ಕೆ ಕೇಂದ್ರ ಸ್ಥಾನದಲ್ಲಿರಬೇಕೆಂಬ ಮಹತ್ವಾಕಾಂಕ್ಷೆಯನ್ನು ಸಾಕಾರಗೊಳಿಸಲು ಸರ್ಕಾರ ತನ್ನ 'ಮೇಕ್ ಇನ್ ಇಂಡಿಯಾ' ನೀತಿಯನ್ನು ಜಾರಿಗೊಳಿಸಲು ಜಿಎಸ್‌ಟಿ ಅನುಕೂಲ ಮಾಡಿಕೊಡುತ್ತದೆ. ಇದು ದೇಶದಲ್ಲಿ ಬೃಹದಾಕಾರವಾಗಿ ಬೆಳೆಯುತ್ತಿರುವ ಯುವ ಜನತೆಗೆ ಉದ್ಯೋಗ ಮತ್ತು ಕೆಲಸಗಳ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಭಾರತವು ವಿಶ್ವದ ಉತ್ಪಾದನೆಯ ಕೇಂದ್ರವಾಗಬೇಕಾದರೆ, ವಿದೇಶಿ ಬಂಡವಾಳಗಳು/ ಕಂಪನಿಗಳಿಗೆ ನಮ್ಮ ದೇಶದಲ್ಲಿ ವ್ಯವಹಾರ ನಡೆಸಲು ಉತ್ತಮ ವಾತಾವರಣವಿರಬೇಕಾಗಿದೆ. ಯಾವುದೇ ಸಮಸ್ಯೆ ಇಲ್ಲದೆ ಸುಲಲಿತವಾಗಿ ವ್ಯವಹಾರ ನಡೆಸಲು ಮುಕ್ತ ವಾತಾವರಣವಿರಬೇಕಾಗುತ್ತದೆ. ಇದಕ್ಕೆ ಬಹು ದೊಡ್ಡ ಅಡ್ಡಿಯಾಗಿರುವುದು ಊಹೆಗೂ ನಿಲುಕದ ಪರೋಕ್ಷ ತೆರಿಗೆಯ ಹಾವಳಿ.

ಪ್ರಸಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕವಾಗಿ ಹಲವು ಹಂತಗಳ ತೆರಿಗೆಗಳನ್ನು ವಿಧಿಸುವ ವ್ಯವಸ್ಥೆ ಜಾರಿಯಲ್ಲಿದೆ. ಈ ತೆರಿಗೆಗಳು ವಿವಿಧ ದರಗಳಲ್ಲಿ ಹಲವು ಹಂತಗಳಲ್ಲಿವೆ. ಕೇಂದ್ರ ಸರ್ಕಾರದ ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರದ ಮಾರಾಟ ತೆರಿಗೆ, ಅಬ್ಕಾರಿ ಸುಂಕ ಮತ್ತು ಷೇರು ಮಾರಾಟದ ಮೇಲೆ ವಿಧಿಸುವ ಸೆಕ್ಯುರಿಟಿ ವಹಿವಾಟು ತೆರಿಗೆಗಳನ್ನು ವಿಧಿಸಲಾಗುತ್ತಿದ್ದರೆ, ರಾಜ್ಯ ಸರ್ಕಾರಗಳ ಹಂತದಲ್ಲಿ ವ್ಯಾಟ್ ಅಥವಾ ಮಾರಾಟ ತೆರಿಗೆ, ರಾಜ್ಯ ಅಬ್ಕಾರಿ ತೆರಿಗೆ, ಆಸ್ತಿ ತೆರಿಗೆ, ಪ್ರವೇಶ ತೆರಿಗೆ ಮತ್ತು ಕೃಷಿ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಈ ತೆರಿಗೆಗಳು ದೇಶದ ವಸ್ತುಗಳ ಮೇಲೆ ಹೊರೆಯಾಗುತ್ತಿದ್ದು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವುಗಳ ಮಾರಾಟದ ಮೇಲೆ ಪರಿಣಾಮ ಬೀರುತ್ತಿವೆ.

ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಜಿಎಸ್‌ಟಿಯ ಸಂವಿಧಾನ ಕಾಯಿದೆಯನ್ನು ಲೋಕಸಭೆ ಮತ್ತು ರಾಜ್ಯ ಸಭೆಗಳು ಅಂಗೀಕರಿಸಿದ ಮೇಲೆ ಶೇಕಡಾ 50 ಕ್ಕಿಂತ ಹೆಚ್ಚು ರಾಜ್ಯಗಳು ಸರ್ವಾನುಮತದಿಂದ ಇದಕ್ಕೆ ಒಪ್ಪಿಗೆ ಕೊಟ್ಟಿವೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಎಲ್ಲ ರೀತಿಯ ಪರೋಕ್ಷ ತರಿಗೆಗಳ ಬದಲಿಗೆ ಸರಕು ಮತ್ತು ಸೇವೆಗಳಿಗಾಗಿ ಪ್ರತ್ಯೇಕವಾಗಿ ತೆರಿಗೆಗಳನ್ನು 2017 ರ ಏಪ್ರಿಲ್ 1 ರಿಂದ ವಿಧಿಸಿ ಜಾರಿಗೆ ತರಲು ಕೇಂದ್ರ ಸರ್ಕಾರ ಕಟಿ ಬದ್ಧವಾಗಿದೆ.

ಬಹು ಪಕ್ಷೀಯ ಒಕ್ಕೂಟ ವ್ಯವಸ್ಥೆ ಇರುವ ಒಂದು ಕೇಂದ್ರ – 29 ರಾಜ್ಯ ಎರಡು ಕೇಂದ್ರಾಡಳಿತ ಪ್ರದೇಶಗಳ ಅಧಿಕಾರದ ವಿಭಿನ್ನ ಹಿತಾಸಕ್ತಿಯ ನಡುವೆ ವ್ಯಾಪಕ ರಾಜಕೀಯ ಸಹಮತದೊಂದಿಗೆ ಸಾಂವಿಧಾನಿಕ ತಿದ್ದುಪಡಿ ತಂದಿರುವುದು ಜಾಗತಿಕ ತೆರಿಗೆ ಇತಿಹಾಸದಲ್ಲೇ ಅನೂಹ್ಯ.

* ನಿರ್ದೇಶಕರು, ಪಿಹೆಚ್‌ಡಿ ವಾಣಿಜ್ಯೋದ್ಯಮ ಸಂಘ, ನವದೆಹಲಿ. E-mail : ranjeetmehta@gmail.com

ತೆರಿಗೆಗಳನ್ನು ಸಂಗ್ರಹಿಸಿ ಸರ್ಕಾರಗಳಿಗೆ ಪಾವತಿಸುವ 75 ಲಕ್ಷ ತೆರಿಗೆ ಘಟಕಗಳಿಗೆ ಅತ್ಯಾಧುನಿಕವಾದ ತಂತ್ರಜ್ಞಾನವನ್ನು ಅಳವಡಿಸಿ ತೆರಿಗೆ ಸಂಗ್ರಹಿಸಲು ಸಂವಿಧಾನಕ್ಕೆ ತಿದ್ದುಪಡಿ ತರಲು ನಡೆಸಿದ ಪ್ರಯತ್ನ ವಿಶ್ವದ ಇತಿಹಾಸದಲ್ಲೇ ಸರಿಸಾಟಿ ಇಲ್ಲ ಎಂದು ಹೇಳಬಹುದು.

ಈ ಸಾಧನೆ ಮಾಡಿದುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕೀರ್ತಿ ಸಲ್ಲಬೇಕು. ಈಗ ದೊರೆತಿರುವ ಚಾರಿತ್ರಿಕವಾದ ಈ ಅವಕಾಶವನ್ನು ಎಲ್ಲರೂ ಸಾಮೂಹಿಕವಾಗಿ ಬಳಸಿಕೊಂಡು ದೇಶದ ಆರ್ಥ ವ್ಯವಸ್ಥೆಯನ್ನು ಬದಲಾಯಿಸುವಂತೆ ಮಾಡಬೇಕಾಗಿದೆ.

ಏಶಿಯಾದ ಮೂರನೇ ಅತಿ ದೊಡ್ಡ ಆರ್ಥಿಕತೆ ದೇಶವಾಗಿರುವ ಭಾರತದಲ್ಲಿ ಸ್ವಾತಂತ್ರ್ಯದ ನಂತರ ಆಗುತ್ತಿರುವ ತೆರಿಗೆ ಸುಧಾರಣೆಯಲ್ಲಿ ಜಿಎಸ್‌ಟಿ ಮಹತ್ವಪೂರ್ಣವಾಗಿದೆ. ಪರೋಕ್ಷ ತೆರಿಗೆ, ಸುಂಕಗಳು, ಸರ್ಚಾರ್ಜುಗಳು ಮತ್ತು ಸೆಸ್‌ಗಳಿಂದ ಗೊಂದಲಮಯವಾಗಿರುವ ತೆರಿಗೆಗಳನ್ನು ಒಟ್ಟುಗೂಡಿಸಿ ಒಂದೇ ಒಂದು ತೆರಿಗೆಯನ್ನು ಜಿಎಸ್‌ಟಿ ಒಳಗೊಂಡಿರುತ್ತದೆ. ಇದರಿಂದ ಗೊಂದಲಮಯವಾಗಿರುವ ತೆರಿಗೆ ವ್ಯವಸ್ಥೆಯಿಂದ ಬಿಡುಗಡೆ ಹೊಂದಿ ಸುಲಲಿತವಾಗಿ ಯಾವುದೇ ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸರಕು ಸಾಗಾಣೆ ಸುಲಭವಾಗುತ್ತದೆ, ತೆರಿಗೆ ವಂಚನೆಯನ್ನು ತಪ್ಪಿಸುತ್ತದೆ, ನಿಯಮಗಳನ್ನು ಪಾಲಿಸುವುದು ಸುಲಭವಾಗುತ್ತದೆ, ಆದಾಯ ಹೆಚ್ಚುತ್ತದೆ, ಬೆಳವಣಿಗೆಯನ್ನು ಹೆಚ್ಚಿಸುತ್ತದೆ, ಬಂಡವಾಳ ಹೂಡುವಿಕೆಗೆ ಪ್ರೋತ್ಸಾಹ ದೊರೆಯುತ್ತದೆ, ಭಾರತದಲ್ಲಿ ಬಂಡವಾಳ ಹೂಡುವುದನ್ನು ಮತ್ತು ವ್ಯವಹಾರ ನಡೆಸುವುದನ್ನು ಸುಲಭವಾಗಿಸುತ್ತದೆ.

ಜಿಎಸ್‌ಟಿ ಅಳವಡಿಕೆಯಿಂದ ತೆರಿಗೆ ಜಾಲವು ಸಮಗ್ರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದ್ದು, ಎಲ್ಲ ಸರಕುಗಳು ಮತ್ತು ಸೇವೆಗಳು ಅತ್ಯಂತ ಕಡಿಮೆ ರಿಯಾಯಿತಿಯೊಂದಿಗೆ ತೆರಿಗೆಯ ವ್ಯಾಪ್ತಿಗೊಳಪಡುತ್ತವೆ. ಜಿಎಸ್‌ಟಿಯು ಭಾರತದ ಆರ್ಥಿಕ ವ್ಯವಸ್ಥೆಯ ದಿಕ್ಕನ್ನು ಬದಲಿಸುವ ತೆರಿಗೆ ಸುಧಾರಣೆಯಾಗಿದ್ದು, ಇಡೀ ದೇಶವನ್ನು ಒಂದೇ ಮಾರುಕಟ್ಟೆಯಡಿಯಲ್ಲಿ ತರುತ್ತದೆ ಮತ್ತು




ತೆರಿಗೆಯಿಂದ ಸರಕು ಮತ್ತು ಸೇವೆಗಳ ಬೆಲೆಗಳ ಮೇಲೆ ಆಗುತ್ತಿದ್ದ ವ್ಯತಿರಿಕ್ತವಾದ ಸರಣಿ ಪರಿಣಾಮವನ್ನು ಕಡಿಮೆ ಮಾಡುತ್ತದೆ. ಜಿಎಸ್‌ಟಿಯು ತೆರಿಗೆಯ ಸ್ವರೂಪ, ತೆರಿಗೆ ಲೆಕ್ಕಹಾಕುವುದು, ತೆರಿಗೆ ಪಾವತಿ, ತೆರಿಗೆ ಅನುಕರಣೆ, ಸಾಲ ಬಳಕೆ ಮತ್ತು ಅದರ ವರದಿ ಮೇಲೆ ಪರಿಣಾಮ ಬೀರುವುದರ ಜೊತೆಗೆ ಪ್ರಸಕ್ತ ಜಾರಿಯಲ್ಲಿರುವ ಪರೋಕ್ಷ ತೆರಿಗೆಯ ವ್ಯವಸ್ಥೆಯನ್ನು ಪುನರ್‌ರೂಪಿಸುತ್ತದೆ. ದೇಶದ ಎಲ್ಲ ರೀತಿಯ ವ್ಯವಹಾರಗಳ ಮೇಲೆ ಜಿಎಸ್‌ಟಿ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ, ಉದಾಹರಣೆಗೆ ಸರಕು ಮತ್ತು ಸೇವೆಗಳ ಬೆಲೆಗಳು, ವಿತರಣೆ ಜಾಲದ ಗರಿಷ್ಠ ಬಳಕೆ, ಆದಾಯ ತೆರಿಗೆ, ಲೆಕ್ಕಪತ್ರ ಮತ್ತು ತೆರಿಗೆ ಪಾವತಿಸುವ ವ್ಯವಸ್ಥೆಗಳು. ಆದ್ದರಿಂದ ಜಿಎಸ್‌ಟಿ ಮಸೂದೆಯನ್ನು ಸ್ವತಂತ್ರ ಭಾರತದ ಯಾವುದೇ ಸುಧಾರಣೆಗೆ ಹೋಲಿಸಲಾಗದ ಕ್ರಮ ಎಂದೇ ಬಣ್ಣಿಸಲಾಗಿದೆ.

ಪ್ರಸಕ್ತ, ವಿವಿಧ ತೆರಿಗೆಗಳು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ. ಜಿಎಸ್‌ಟಿ ಇವುಗಳಲ್ಲಿ ಏಕರೂಪತೆಯನ್ನು ತರುತ್ತದೆ, ಈ ತೆರಿಗೆಗಳಿಂದ ಆಗುತ್ತಿದ್ದ ಸರಣಿ ಪರಿಣಾಮಗಳನ್ನು ಕಡಿಮೆಮಾಡುತ್ತದೆ. ಇದರಿಂದ ಕನಿಷ್ಠ ರಿಯಾಯಿತಿಗಳಿಂದ ಸಮಗ್ರವಾದ ತೆರಿಗೆ ಜಾಲ ಸೃಷ್ಟಿಯಾಗುತ್ತದೆ. ಇದರಿಂದ ಕೈಗಾರಿಕೆಗೆ ಅನುಕೂಲವಾಗುತ್ತಿದ್ದು, ಒಂದೇ ರೀತಿಯ ನಿಯಮಗಳಿಂದ ತೆರಿಗೆ ಪಾವತಿಸಿದುದಕ್ಕೆ ಕ್ರೆಡಿಟ್ ಪಡೆಯಬಹುದಾಗಿದೆ. ಇದರಿಂದ ಬಳಕೆದಾರರಿಗೆ ವಸ್ತುಗಳು ಕಡಿಮೆ ಬೆಲೆಗೆ ದೊರೆಯುವಂತಾಗುತ್ತದೆ. ಜಿಎಸ್‌ಟಿ ಯಿಂದ ದೇಶದ ಆರ್ಥಿಕಾಭಿವೃದ್ಧಿಯ ವೇಗ ಶೇಕಡಾ 2 ರಷ್ಟು ಹೆಚ್ಚಾಗಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳುತ್ತಿದೆ.

**ಜಿಎಸ್‌ಟಿಯಿಂದ ದೊರೆಯುವ ಪ್ರಮುಖ ಅನುಕೂಲಗಳು**

* ಜಿಎಸ್‌ಟಿಯು ಭಾರತದ ಆರ್ಥಿಕತೆಯನ್ನು ಉತ್ತಮಗೊಳಿಸಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುತ್ತದೆ. ಪ್ರಧಾನ ಮಂತ್ರಿಗಳು ಸಂದರ್ಶನವೊಂದರಲ್ಲಿ ತಿಳಿಸಿರುವಂತೆ ಜಿಎಸ್‌ಟಿಯು ಬಡತನವನ್ನು ಕಡಿಮೆ ಮಾಡಲು ಬೇಕಾದ ಸಂಪನ್ಮೂಲಗಳನ್ನು ಹೆಚ್ಚು ಮಾಡಿ ದೇಶದ ಅಭಿವೃದ್ಧಿಯನ್ನು ಸಾಧಿಸುತ್ತದೆ. ಇದರಿಂದ ತೆರಿಗೆಯ ವ್ಯಾಪ್ತಿ ಹೆಚ್ಚಾಗಿ ಪರೋಕ್ಷವಾಗಿ ತೆರಿಗೆ ಸಂಗ್ರಹ ಅಧಿಕವಾಗುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಟ್ಟಾರೆ ಸಂಪನ್ಮೂಲ ಹೆಚ್ಚಾಗುತ್ತದೆ. ಆರ್ಥಿಕವಾಗಿ ಬಡ ರಾಜ್ಯಗಳು ಎಂದು ಹೇಳುವ ಉತ್ತರ ಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶಗಳಲ್ಲಿ ಹೆಚ್ಚಾಗಿರುವ ಬಳಕೆದಾರರಿಗೆ ನೇರವಾಗಿ ಅನುಕೂಲವಾಗುತ್ತದೆ.

* ಭಾರತದ ಜಿಎಸ್‌ಟಿಯಿಂದ ಸ್ಪಷ್ಟವಾದ ಲೋಪದೋಷಗಳಿಲ್ಲದ ಎರಡು ಬಗೆಯ ವ್ಯಾಟ್ ಜಾರಿಗೆ ಬರುವುದರಿಂದ ಅನಾನುಕೂಲತೆಗಳು ಕಡಿಮೆಯಾಗಿ ಪೂರ್ಣ ಪ್ರಮಾಣದ ಹಾಗೂ ಸ್ವತಂತ್ರವಾದ ಮತ್ತು ಕೇಂದ್ರೀಕೃತ ವ್ಯವಸ್ಥೆ ಜಾರಿಗೆ ಬರಲು ಸಹಾಯವಾಗುತ್ತದೆ. ಸರಕುಗಳು ಮತ್ತು ಸೇವೆಗಳಿಗೆ ಏಕರೀತಿಯ ಹಂತ ಮತ್ತು ತೆರಿಗೆಗಳನ್ನು ಎಲ್ಲ ರಾಜ್ಯಗಳಲ್ಲಿ, ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಧಿಸುವುದರಿಂದ ತೆರಿಗೆ ಆಡಳಿತ ಸುಧಾರಿಸಿ ತೆರಿಗೆ ಪಾವತಿಸುವುದು ಹೆಚ್ಚಾಗಿ ಎಲ್ಲ ರಾಜ್ಯಗಳಲ್ಲಿ ತೆರಿಗೆ ಸಂಗ್ರಹ ಸುಲಭವಾಗುತ್ತದೆ. ಇದರ ಜೊತೆಗೆ ವಿನಾಯಿತಿ ಪಟ್ಟಿಯಲ್ಲಿರುವ ವಿಶೇಷ ಸರಕುಗಳ ಮೇಲೆ (ಪೆಟ್ರೋಲಿಯಂ ಮತ್ತು ತಂಬಾಕು ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರ, ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಮದ್ಯಗಳ ಮೇಲೆ ರಾಜ್ಯ ಸರ್ಕಾರಗಳು) ವಿಧಿಸಬಹುದಾದ ಹೆಚ್ಚುವರಿ ಅಬ್ಕಾರಿ ತೆರಿಗೆ ವಿಷಯದಲ್ಲಿ ರಾಜ್ಯ ಸರ್ಕಾರಗಳಿಗೆ ಅಗತ್ಯವಾದ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸಲಾಗುತ್ತದೆ. ಈ ವಸ್ತುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ಒಳಪಡಿಸಿದ್ದರೂ ಇವುಗಳ ಮೇಲೆ ಹೆಚ್ಚುವರಿಯಾಗಿ ತೆರಿಗೆ ವಿಧಿಸುವ ಸ್ವಾತಂತ್ರ್ಯವನ್ನು ಮೊದಲಿನಂತೆಯೇ ಇಟ್ಟುಕೊಳ್ಳುತ್ತವೆ.

* ಜಿಎಸ್‌ಟಿಯು "ಮೇಕ್ ಇನ್ ಇಂಡಿಯಾ"ಕ್ಕೆ ಹೆಚ್ಚು ಇಂಬು ಕೊಟ್ಟು ಇಡೀ ಭಾರತವನ್ನು ಒಂದೇ ವೇದಿಕೆಯಾಗಿ ಪರಿವರ್ತಿಸುತ್ತದೆ. ಈಗಿನ ತೆರಿಗೆ ವ್ಯವಸ್ಥೆಯು ರಾಜ್ಯಗಳ ಆಧಾರದಲ್ಲಿ ಮಾರುಕಟ್ಟೆಯನ್ನು ತುಂಡು ತುಂಡು ಮಾಡಿದೆ. ಈ ವಿಕೃತಿಗಳು ಈ ವ್ಯವಸ್ಥೆಯಲ್ಲಿರುವ ಈ

ಮೂರು ಅಂಶಗಳಿಂದ ರೂಪುಗೊಂಡಿವೆ: ಒಂದು ರಾಜ್ಯದಿಂದ ಮತ್ತೊಂದು ರಾಜ್ಯದ ನಡುವೆ ಮಾರಾಟವಾಗುವ ಸರಕುಗಳಿಗೆ ಕೇಂದ್ರ ಮಾರಾಟ ತೆರಿಗೆ (ಸಿಎಸ್‌ಟಿ); ಹಲವಾರು ರಾಜ್ಯದೊಳಗಿನ ಮಾರಾಟಕ್ಕೆ ತೆರಿಗೆ; ಮತ್ತು ವ್ಯಾಪಕವಾಗಿ ಕೌಂಟರ್‌ವೇಲಿಂಗ್ ತೆರಿಗೆ. ಈ ಮೂರು ವಿಕೃತಿಗಳನ್ನು ಜಿಎಸ್‌ಟಿ ಸರಿಪಡಿಸುತ್ತದೆ. ಅಂದರೆ ಸಿಎಸ್‌ಟಿ ಹೋಗುತ್ತದೆ, ಇತರೆ ಬಹುತೇಕ ಎಲ್ಲ ತೆರಿಗೆಗಳು ಜಿಎಸ್‌ಟಿಯಲ್ಲಿ ವಿಲೀನಗೊಳ್ಳುತ್ತವೆ; ಜಿಎಸ್‌ಟಿಯು ಆಮದಿಗೂ ಅನ್ವಯಿಸುವುದರಿಂದ, ಆಮದಿಗೆ ನಕಾರಾತ್ಮಕವಾದ ರಕ್ಷಣೆ ಒದಗಿಸಿ ದೇಶೀಯ ಉತ್ಪಾದನೆಗೆ ಉತ್ತೇಜನ ಕೊಡದೆ ಇರುವ ಸನ್ನಿವೇಶವನ್ನು ಜಿಎಸ್‌ಟಿ ತೊಡೆದು ಹಾಕುತ್ತದೆ.

* ಜಿಎಸ್‌ಟಿ ಯಿಂದ ಇನ್ನೊಂದು ಪ್ರಮುಖವಾದ ಅನುಕೂಲವೆಂದರೆ, ಇದು ತೆರಿಗೆಯ ಆಡಳಿತವನ್ನು ಎರಡು ವಿಧದಲ್ಲಿ ಸುಧಾರಿಸುತ್ತದೆ. ಮೊದಲನೆಯದು, ಮೌಲ್ಯಾಧಾರಿತ ತೆರಿಗೆಯಲ್ಲಿ ಅಂತರ್ಗತವಾಗಿರುವ ಸ್ವ–(ಪೊಲೀಸಿಂಗ್) ಸ್ವಶಿಸ್ತಿಗೆ ಪ್ರೋತ್ಸಾಹ ನೀಡುವುದು. ಇನ್‌ಪುಟ್ ತೆರಿಗೆ ಕ್ರೆಡಿಟ್ ಸೌಲಭ್ಯ ಪಡೆಯಲು ಪ್ರತಿಯೊಬ್ಬ ಡೀಲರ್ ತನ್ನ ಹಿಂದೆ ಇರುವ ಮೌಲ್ಯ ವರ್ಧಿತ ತೆರಿಗೆ/ತೆರಿಗೆ ಕ್ಲೈಮ್ ಸರಣಿಯಲ್ಲಿರುವ ಡೀಲರ್‌ಗಳಿಂದ ವಿನಂತಿ ದಾಖಲೆಗಳನ್ನು ಪಡೆಯಲು ಪ್ರೋತ್ಸಾಹ ದೊರೆಯುತ್ತದೆ. ಈ ಪ್ರೋತ್ಸಾಹ ಪಡೆಯಲು ಸರಣಿಯು ವಿಶಾಲವಾದ ರಿಯಾಯಿತಿಗಳ ಮುಖಾಂತರ ಎಲ್ಲಿಯೂ ತುಂಡಾಗದಿದ್ದರೆ ಸ್ವ–ಶಿಸ್ತು ವ್ಯವಸ್ಥೆ ಜಿಎಸ್‌ಟಿಯಲ್ಲಿ ಉತ್ತಮವಾಗಿ ಕೆಲಸ ಮಾಡುತ್ತದೆ. ಎರಡನೆಯದು, ಜಿಎಸ್‌ಟಿಯ ವ್ಯವಸ್ಥೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಾಂಬರಿಸುವುದಕ್ಕೆ ಸಂಬಂಧಿಸಿದ್ದು. ಟೀಕಾಕಾರರು ಮತ್ತು ತೆರಿಗೆ ಪಾವತಿಸುವವರು ಕೇಂದ್ರ ಮತ್ತು ರಾಜ್ಯಗಳ ಪರಾಮರ್ಶೆಯಿಂದ ಎರಡು ವಿಧದಲ್ಲಿ ನಮಗೆ ಕಿರುಕುಳ ಉಟಾಗುತ್ತದೆ ಎಂಬ ಆತಂಕದಿಂದ ನೋಡುತ್ತಿದ್ದಾರೆ. ಎರಡು ಪರಾಮರ್ಶೆಗಳಿಂದ ತೆರಿಗೆ ಪಾವತಿಸುವುದು ಹೆಚ್ಚುತ್ತದೆ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಉತ್ತಮವಾದ ಸಹಕಾರಕ್ಕೆ ಅವಕಾಶ ಮಾಡಿಕೊಡುತ್ತದೆ ಎಂದು ಇದರ ಪರವಾಗಿರುವವರು ವಾದಿಸುತ್ತಾರೆ. ಒಂದು




ವ್ಯವಸ್ಥೆಯ ತೆರಿಗೆ ಆಧಿಕಾರಿಗಳು ತೆರಿಗೆ ವಂಚನೆಯನ್ನು ಗಮನಿಸದೆ ಮತ್ತು / ಅಥವಾ ಪತ್ತೆ ಹಚ್ಚಲಾಗದಿದ್ದರೆ ಇನ್ನೊಂದು ಅಧಿಕಾರಿಗಳ ವ್ಯವಸ್ಥೆ ಈ ಲೋಪವನ್ನು ಪತ್ತೆಹಚ್ಚಲು ಸಹಾಯವಾಗುತ್ತದೆ ಎಂದು ಹೇಳಲಾಗುತ್ತದೆ.

* ಹಲವು ವಿಧದ ತೆರಿಗೆಗಳು ಮತ್ತು ಅವುಗಳ ಸರಣೀಕೃತ ಪರಿಣಾಮಗಳಿಂದ ಜನಸಾಮಾನ್ಯರ ಮೇಲೆ ಆಗುತ್ತಿದ್ದ ಹೊರೆಯನ್ನು ಇಳಿಸುವ ನಿಟ್ಟಿನಲ್ಲಿ ಜಿಎಸ್‌ಟಿ ಕೆಲಸ ಮಾಡುತ್ತದೆ. ಜಿಎಸ್‌ಟಿಯು ಕೇಂದ್ರ ಮತ್ತು ರಾಜ್ಯಗಳ ವ್ಯಾಪ್ತಿಗೆ ಬರಬೇಕೆಂಬ ಪ್ರಸ್ತಾವನೆಯು ನಮ್ಮ ಸಂವಿಧಾನದಲ್ಲಿ ನಮೂದಿಸಿರುವ ಫೆಡರಲ್ ಮಾದರಿಗೆ ಸರಿಯಾಗಿಯೇ ಇದೆ. ಜಿಎಸ್‌ಟಿಯು ತನ್ನ ಒಡಲಲ್ಲಿ ಮೂರು ವಿಧದ ತೆರಿಗೆಗಳು ಅಂದರೆ– ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸಮಗ್ರವಾದ ಜಿಎಸ್‌ಟಿ ಎಂದಿದೆ. ಮೂರನೆಯದು ರಾಜ್ಯಗಳ ನಡುವೆ ನಡೆಯುವ ವ್ಯವಹಾರಗಳಿಗೆ ಸಂಬಂಧಿಸಿದೆ. ಪ್ರಸ್ತಾಪಿಸಿರುವ ಜಿಎಸ್‌ಟಿ ತೆರಿಗೆ ಸುಧಾರಣೆಯಲ್ಲಿ ಎಲ್ಲ ರೀತಿಯ ಸರಕು ಮತ್ತು ಸೇವೆಗಳ ಸರಬರಾಜು ಅಂದರೆ ವರ್ಗಾವಣೆ, ಮಾರಾಟ, ಅದಲು ಬದಲು ಬದಲಾವಣೆ ಮತ್ತು ಬಾಡಿಗೆಗಳು ಕೇಂದ್ರ ಜಿಎಸ್‌ಟಿ ಮತ್ತು ರಾಜ್ಯ ಜಿಎಸ್‌ಟಿಯ ವ್ಯಾಪಿಯಲ್ಲಿ ಬರುತ್ತದೆ.

* ಅನೇಕ ಕೇಂದ್ರ ಮತ್ತು ರಾಜ್ಯಗಳ ತೆರಿಗೆಗಳನ್ನು ಒಟ್ಟುಗೂಡಿಸಿ ಒಂದು ತೆರಿಗೆಯ ವ್ಯಾಪ್ತಿಗೆ ಒಳಪಡಿಸಿರುವುದು, ಎರಡೆರಡು ತೆರಿಗೆಗಳನ್ನು ಹೋಗಲಾಡಿಸಿ ಇಡೀ ದೇಶದಲ್ಲಿ ಒಂದೇ ಮಾರುಕಟ್ಟೆ ಜಾರಿಗೆ ಬರುತ್ತದೆ. ಬಳಕೆದಾರರ ದೃಷ್ಟಿಯಿಂದ ನೋಡುವುದಾದರೆ, ಸರಕುಗಳ ಮೇಲೆ ಕೊಡುತ್ತಿದ್ದ ತೆರಿಗೆಯ ಪ್ರಮಾಣ ಕಡಿಮೆಯಾಗುತ್ತದೆ. ಈ ಹೊರೆ ಶೇಕಡಾ 25 ರಿಂದ 30 ರಷ್ಟು ಕಡಿಮೆಯಾಗಲಿದೆ.

ಬೆಲೆಯಲ್ಲಿ ಕಡಿತ: ಉತ್ಪಾದಕರು ಅಥವಾ ವ್ಯಾಪಾರಸ್ಥರು ತಮ್ಮ ಉತ್ಪಾದನಾ ವೆಚ್ಚದಲ್ಲಿ ತೆರಿಗೆಯನ್ನು ಇನ್ನು ಮುಂದೆ ಸೇರಿಸಲು ಅವಕಾಶವಿಲ್ಲ. ಇದರಿಂದ ಸರಕುಗಳ ಮಾರಾಟದ ದರ ಗಣನೀಯವಾಗಿ ಕಡಿಮೆಯಾಗುತ್ತದೆ.

ತೆರಿಗೆ ಕಾನೂನು ಮತ್ತು ನಿಯಮಗಳ ದರ: ಕಾನೂನು ಮತ್ತು ನಿಯಮಗಳನ್ನು ಪಾಲಿಸುವುದು ಸುಲಭವಾಗುವುದರಿಂದ ಅಷ್ಟರ ಮಟ್ಟಿಗೆ ವೆಚ್ಚ ಕಡಿಮೆಯಾಗುತ್ತದೆ ಜೊತೆಗೆ ಕೇಂದ್ರ ಜಿಎಸ್‌ಟಿ, ರಾಜ್ಯ ಜಿಎಸ್‌ಟಿ ಮತ್ತು ಸಮಗ್ರ ಜಿಎಸ್‌ಟಿ ಗಳಿಗೆ ಪ್ರತ್ಯೇಕವಾದ ದಾಖಲೆಗಳನ್ನು ಇಡುವುದು ಬೇಕಾಗಿಲ್ಲ.

ಜಿಎಸ್‌ಟಿಯನ್ನು ಜಾರಿಗೆ ತರುವುದರಿಂದ ಭಾರತದಲ್ಲಿ ವ್ಯವಹಾರ ಮಾಡುವುದು ಸುಲಭ ಎಂಬ ಸಂದೇಶ ವಿದೇಶಿ ಬಂಡವಾಳಗಾರರಿಗೆ ಹೋಗುತ್ತದೆ.

ಜಿಎಸ್‌ಟಿಯು ಉತ್ಪಾದಕರಿಗೆ ತೆರಿಗೆ ಹೊರೆಯನ್ನು ಕಡಿಮೆ ಮಾಡಿ ಹೆಚ್ಚು ಉತ್ಪಾದನೆ ಮಾಡುವುದರಿಂದ ಬೆಳವಣಿಗೆಯ ದರ ಹೆಚ್ಚಾಗುತ್ತದೆ. ಎರಡೆರಡು ತೆರಿಗೆಯು ಉತ್ಪಾದಕರು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಅಡ್ಡಿಯಾಗಿ ಬೆಳವಣಿಗೆ ಕುಂಠಿತವಾಗುತ್ತಿತ್ತು. ಜಿಎಸ್‌ಟಿಯ ಈ ಸಮಸ್ಯೆಯನ್ನು ಬಗೆಹರಿಸುತ್ತದೆ.

ಹಲವಾರು ವಿಧದ ತೆರಿಗೆ ಅಡಚಣೆಗಳಾದ ಚೆಕ್‌ಪೋಸ್ಟ್‌ಗಳು ಮತ್ತು ಟೋಲ್ ಪ್ಲಾಜಾಗಳಿಂದ ಬಹು ಬೇಗ ಹಾಳಾಗುವ ಸರಕುಗಳನ್ನು ಸಾಗಾಣೆ ಮಾಡುವಾಗ ಭಾರಿ ಪ್ರಮಾಣದಲ್ಲಿ ನಷ್ಟವಾಗುತ್ತಿದೆ. ಈ ನಷ್ಟ ಹೆಚ್ಚುವರಿಯಾಗಿ ಸಂಗ್ರಹಣೆ ಮತ್ತು ಹೆಚ್ಚು ವಸ್ತುಗಳ ಸಾಗಾಣೆಗಳ ಮುಖಾಂತರ ದರದಲ್ಲಿ ಹೆಚ್ಚಳವಾಗುತ್ತಿದೆ. ಒಂದೇ ತೆರಿಗೆ ವ್ಯವಸ್ಥೆ ಜಾರಿಗೆ ಬಂದರೆ ಈ ನಷ್ಟವನ್ನು ತಪ್ಪಿಸಬಹುದು.

ಉತ್ಪಾದಕರ ಮೇಲೆ ಒಂದೇ ಒಂದು ತೆರಿಗೆಯನ್ನು ವಿಧಿಸುವುದರಿಂದ ಅಂತಿಮವಾಗಿ ಗ್ರಾಹಕನಿಗೆ ಮಾರಾಟವಾಗುವ ಬೆಲೆಯಲ್ಲಿ ಗಣನೀಯವಾಗಿ ಕಡೆಮೆಯಾಗುವುದರಿಂದ ಅಂತಿಮವಾಗಿ ಸಾಮಾನ್ಯ ನಾಗರಿಕನ ಮೇಲೆ ಹೊರೆ ಕಡಿಮೆಯಾಗುತ್ತದೆ. ಇದರಿಂದ ವ್ಯವಸ್ಥೆಯಲ್ಲಿ ಪಾರದರ್ಶಕತೆ ಬಂದು ಬಳಕೆದಾರನಿಗೆ ಯಾವ ವಸ್ತುವಿಗೆ ಎಷ್ಟು



ಪ್ರಮಾಣದಲ್ಲಿ ತೆರಿಗೆ ಬೀಳುತ್ತದೆ ಎಂಬುದು ಗೊತ್ತಾಗುತ್ತದೆ.

ಪ್ರಾರಂಭಿಕ ಹಂತದಲ್ಲಿ ಸರಕುಗಳು/ಸೇವೆಗಳಿಗೆ ಉತ್ಪಾದಕರಿಗೆ ಅವರು ಪಾವತಿಸಿದ ತೆರಿಗೆಗೆ ಕ್ರೆಡಿಟ್ ಅನುಕೂಲ ಜಿಎಸ್‌ಟಿಯಲ್ಲಿ ದೊರೆಯಲಿದೆ. ಈ ಅನುಕೂಲ ಉತ್ಪಾದಕರನ್ನು ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವ ನೋಂದಾಯಿತ ವಿವಿಧ ಡೀಲರ್‌ಗಳಿಂದ ಖರೀದಿಸಲು ಉತ್ತೇಜನ ನೀಡುತ್ತದೆ, ಇದರಿಂದ ಕಚ್ಚಾ ವಸ್ತು ಸರಬರಾಜು ಮಾಡುವ ಹೆಚ್ಚು ಹೆಚ್ಚು ಡೀಲರ್‌ಗಳನ್ನು ತೆರಿಗೆಯ ವ್ಯಾಪ್ತಿಗೆ ತರಲು ಸಹಾಯವಾಗುತ್ತದೆ. ಜಿಎಸ್‌ಟಿಯು ರಫ್ತುದಾರರಿಗೆ ಅನ್ವಯವಾಗುವ ಕಸ್ಟಮ್ ತೆರಿಗೆಯ ಹೊರೆಯಿಂದ ಬಿಡುಗಡೆ ಮಾಡುತ್ತದೆ. ಇದರಿಂದ ನಮ್ಮ ಸರಕು ಮತ್ತು ಸೇವೆಯನ್ನು ವಿದೇಶಗಳಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಲು ಅನುಕೂಲವಾಗುತ್ತದೆ.

## ಆರ್ಥಿಕ ಕ್ಷೇತ್ರದ ಕೆಲವು ಪ್ರಮುಖ ವಲಯಗಳ ಮೇಲೆ ಜಿಎಸ್‌ಟಿಯ ಪ್ರಭಾವ

### ಕಟ್ಟಡ ನಿರ್ಮಾಣ ವಲಯ

ಕಟ್ಟಡ ನಿರ್ಮಾಣ ವಲಯವು ಆರ್ಥಿಕ ಕ್ಷೇತ್ರದಲ್ಲಿ ಬಹುವಿಧದಲ್ಲಿ ಪರಿಣಾಮವನ್ನು ಬೀರುತ್ತದೆ. ಕೃಷಿ ಕ್ಷೇತ್ರವನ್ನು ಬಿಟ್ಟರೆ ಅತ್ಯಂತ ಹೆಚ್ಚು ಉದ್ಯೋಗ ಸೃಷ್ಟಿಸುವ ಕ್ಷೇತ್ರ ಕಟ್ಟಡ ನಿರ್ಮಾಣ ಕ್ಷೇತ್ರವಾಗಿದ್ದು, ದೇಶದ ಜಿಡಿಪಿಗೆ ಸಾಕಷ್ಟು ಪ್ರಮಾಣದಲ್ಲಿ ತನ್ನ ಕಾಣಿಕೆ ನೀಡುತ್ತಿದೆ. 2015-16 ರ ಆರ್ಥಿಕ ಸಮೀಕ್ಷೆ ಪ್ರಕಾರ ಕಟ್ಟಡ ನಿರ್ಮಾಣ ವಲಯ ದೇಶದ 2013-14 ನೇ ಸಾಲಿನ ಜಿಡಿಪಿಯಲ್ಲಿ ಶೇಕಡಾ 7.4 ರಷ್ಟು ಕೊಡಿಗೆ ನೀಡಿದೆ. ಈ ವಲಯ ಪರೋಕ್ಷ ತೆರಿಗೆಯಲ್ಲಿರುವ ವಿವಿಧ ಹಂತಗಳು ಮತ್ತು ಗೊಂದಲಗಳಿಂದ ಅನೇಕ ತಕರಾರುಗಳಲ್ಲಿ ಮುಳುಗಿದೆ.

ಪ್ರಸಕ್ತ ಜಾರಿಯಲ್ಲಿರುವ ಕಾನೂನುಗಳಂತೆ ಅನೇಕ ವಿಧದ ತೆರಿಗೆಗಳು ಈ ವಲಯದಲ್ಲಿ ಸೇರಿಕೊಂಡಿದ್ದು, ಬಳಕೆದಾರರಿಗೆ ಆಸ್ತಿಗಳ ನಿರ್ಮಾಣ ಮತ್ತು ಮಾರಾಟದಲ್ಲಿ ಅನೇಕ ತೊಂದರೆಗಳು ಎದುರಾಗುತ್ತಿವೆ. ಈ ವಲಯ ಸೇವಾ ತೆರಿಗೆ, ಮೌಲ್ಯ ವರ್ಧಿತ ತೆರಿಗೆ (ವಾಟ್), ಸ್ಟ್ಯಾಂಪ್ ಡ್ಯೂಟಿ, ನಿರ್ಮಾಣದ ಮೇಲೆ ಕಟ್ಟಡ ಸೆಸ್‌ಗಳನ್ನು ಕೊಡಬೇಕಾಗಿದೆ. ಇವುಗಳ ಜೊತೆಗೆ ಅಬ್ಕಾರಿ ತೆರಿಗೆ ಮತ್ತು ಕೇಂದ್ರ ಸೇವಾ ತೆರಿಗೆಯೂ ಸೇರಿದಂತೆ ವಿವಿಧ ತೆರಿಗೆಗಳ ಹೊರೆಯನ್ನು ಹೊತ್ತಿದೆ.

ಆದ್ದರಿಂದ ನಿರ್ಮಾಣ ಹಂತದಲ್ಲಿರುವ ಆಸ್ತಿಯ ಮಾರಾಟವು ವಿವಿಧ ರೀತಿಯ ತೆರಿಗೆಗಳು/ಸುಂಕಗಳ ಹೊರೆಯಿಂದ ಹಲವು ಹಂತಗಳಲ್ಲಿ ಆಸ್ತಿ ಖರೀದಿದಾರರು ಹೊರೆ ಹೊರುವಂತಾಗಿದೆ.

ಜಿಎಸ್‌ಟಿ ವ್ಯವಸ್ಥೆಯು ಪರೋಕ್ಷ ತೆರಿಗೆಯ ವ್ಯವಸ್ಥೆಯನ್ನು ಸರಳೀಕರಿಸಿ ಹೊಂದಾಣಿಕೆ ಮಾಡುತ್ತದೆ. ಜಿಎಸ್‌ಟಿಯನ್ನು ಸರಕುಗಳು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತಿದ್ದು ಬಹುತೇಕ ಪರೋಕ್ಷ ತೆರಿಗೆಯ ಕಾನೂನುಗಳು ಇದರಲ್ಲಿ ಅಂತರ್ಗತವಾಗುವುದರಿಂದ (ಸ್ಟ್ಯಾಂಪ್ ಡ್ಯೂಟಿ ಕಾಯಿದೆ ಹೊರತು ಪಡಿಸಿ) ಇದೊಂದು ಪ್ರಮುಖ ತೆರಿಗೆ ಸುಧಾರಣೆ ಕ್ರಮ ಎನ್ನಬಹುದು. ಪೂರ್ಣಗೊಂಡ ಆಸ್ತಿಯ ವರ್ಗಾವಣೆಯು ಸಂಪೂರ್ಣವಾಗಿ ಜಿಎಸ್‌ಟಿಯ ವ್ಯಾಪ್ತಿಯಿಂದ (ಸ್ಟ್ಯಾಂಪ್ ಡ್ಯೂಟಿ ಕೊಡಬೇಕಾದಾಗ) ಹೊರಗುಳಿಯುತ್ತದೆ.

ಜಿಎಸ್‌ಟಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಪಾರದರ್ಶಕತೆಯನ್ನು ತರುವ ಸಾಧ್ಯತೆ ಇದ್ದು, ತೆರಿಗೆ ವಂಚನೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಮಾಡುವ ಸಾಧ್ಯತೆಯಿದ್ದು, ಕಾನೂನು ಪಾಲಿಸುವುದು ಕಡ್ಡಾಯವಾಗಲಿದೆ. ಜಿಎಸ್‌ಟಿಯನ್ನು ಒಂದೇ ಮೌಲ್ಯಕ್ಕೆ ವಿಧಿಸುವುದರಿಂದ, ಈಗಿರುವ ತೆರಿಗೆಯ ಮೇಲೆ ತೆರಿಗೆ ವಿಧಿಸುವ ಕ್ರಮ ಹೋಗುತ್ತದೆ.

ಪ್ರಸಕ್ತ, ಡೆವೆಲಪ್‌ರ್‌ಗಳು ಸರಬರಾಜುಗಳಿಗೆ ಅನೇಕ ವಿಧದ ಜಮಾ ಆಗದ ತೆರಿಗೆಗಳನ್ನು ಪಾವತಿಸುತ್ತಾರೆ. ಜಿಎಸ್‌ಟಿಯು ಹಲವು ವಿಧದ ಹಲವು ಹಂತಗಳ ತೆರಿಗೆಗಳ ಬದಲಿಗೆ ಒಂದು ಹಂತದ ಒಂದೇ ತೆರಿಗೆಯನ್ನು ಜಾರಿಗೆ ತರುತ್ತದೆ. ಇದರಿಂದ ಸರಬರಾಜುಗಳಿಗೆ ಕ್ರೆಡಿಟ್ ಅನುಕೂಲ ದೊರೆಯಲಿದ್ದು, ಕಟ್ಟಡ ನಿರ್ಮಾಣದಲ್ಲಿ ತೊಡಗಿಕೊಂಡಿರುವ ಎಲ್ಲ ಭಾಗಿದಾರರಿಗೆ ತೆರಿಗೆಯ ಹೊರೆ ಕಡಿಮೆಯಾಗಲಿದೆ. ಆದರೂ ಕಟ್ಟಡ ನಿರ್ಮಾಣದ ಔಟ್‌ಪುಟ್‌ಗಳಿಗೆ ರಿಯಾಯಿತಿ ನೀಡಿದರೆ, ಇನ್‌ಪುಟ್ ಜಿಎಸ್‌ಟಿ ಕ್ರೆಡಿಟ್ ಗಣನೀಯವಾಗಿ ಹೆಚ್ಚಾಗಿ ಕೊನೆಗೆ ಬಳಕೆದಾರರಿಗೆ ಅಂತಿಮ ದರದಲ್ಲಿ ಹೊರೆಯಾಗುತ್ತದೆ.

### ಆರೋಗ್ಯ ವಲಯ

ಆರೋಗ್ಯ ವಲಯದ ಪ್ರಮುಖವಾದ ಸಮಸ್ಯೆ ಏನೆಂದರೆ ಇದು ತಿರುವು ಮುರುವು ತೆರಿಗೆ ಪದ್ಧತಿಗೆ ಒಳಪಟ್ಟಿರುವುದರಿಂದ ದೇಶೀಯ ಉತ್ಪಾದಕರಿಗೆ ಔಟ್‌ಪುಟ್ ಬೆಲೆಗಿಂತ ಇನ್‌ಪುಟ್ ಬೆಲೆ ಹೆಚ್ಚಳದಿಂದ ಪ್ರತಿಕೂಲ ಪರಿಣಾಮಗಳನ್ನು ಎದುರಿಸುತ್ತದೆ. ಇದು ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಅಡ್ಡಿಯಾಗಿದೆ. ಜಿಎಸ್‌ಟಿ ತಿರುವುಮುರುವು ತೆರಿಗೆಯನ್ನು ತೆಗೆದುಹಾಕಬೇಕು ಅಥವಾ ಸಂಗ್ರಹಗೊಂಡಿರುವ ಕ್ರೆಡಿಟ್‌ನ್ನು ವಾಪಾಸು ಮಾಡಲು ಅವಕಾಶ ಮಾಡಿಕೊಡಬೇಕಿದೆ. ಈ ರೀತಿಯೇನಾದರೂ ಆದರೆ ಈ ಕ್ಷೇತ್ರಕ್ಕೆ ಒಳ್ಳೆಯ ಬೆಂಬಲ ದೊರೆತು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬೆಳವಣಿಗೆಗೆ ಸಹಾಯವಾಗುತ್ತದೆ.

ಈ ಕ್ಷೇತ್ರದಲ್ಲಿ ಬಳಸುವ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳುವಾಗ ಅನ್ವಯಿಸುವ ತೆರಿಗೆ ಪದ್ಧತಿಯಿಂದ ಉಂಟಾಗುವ ಸರಣಿ ಪರಿಣಾಮದಿಂದ ಯಂತ್ರೋಪಕರಣಗಳು ತುಂಬಾ ದುಬಾರಿಯಾಗುತ್ತಿವೆ. ಜಿಎಸ್‌ಟಿ ಅಳವಡಿಕೆಯಿಂದ ತೆರಿಗೆಯ ಹೊರೆ ಕಡಿಮೆಯಾಗಲಿದೆ. ಇನ್ನೂ ಮುಂದೆ ಹೋಗಿ ಜಿಎಸ್‌ಟಿಯು ಫಾರ್ಮಸೂಟಿಕಲ್ ಕೈಗಾರಿಕೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ. ಪ್ರಸಕ್ತ ಎಂಟು ರೀತಿಯ ವಿವಿಧ ತೆರಿಗೆಯ ವ್ಯಾಪ್ತಿಗೆ ಒಳಪಟ್ಟಿರುವ ಈ ಕ್ಷೇತ್ರ ಒಂದೇ ರೀತಿಯ ತೆರಿಗೆ ವ್ಯಾಪ್ತಿಗೆ ಒಳಪಡುವುದರಿಂದ ಅನುಕೂಲವಾಗುತ್ತದೆ. ಇದರಿಂದ ವ್ಯವಹಾರ ನಡೆಸಲು ಸುಲಭವಾಗುತ್ತದೆ ಜೊತೆಗೆ ಒಂದೇ ವಸ್ತುವು ಅನೇಕ ತೆರಿಗೆಗಳ ಭಾರದಿಂದ ಕುಸಿಯುವುದು ತಪ್ಪುತ್ತದೆ.

ಇದರ ಜೊತೆಗೆ ಜಿಎಸ್‌ಟಿ ಅಳವಡಿಕೆಯಿಂದ ಸರಬರಾಜು ಸರಣಿಯಲ್ಲಿ ಕಾರ್ಯಕ್ಷಮತೆ ಹೆಚ್ಚಾಗಿ ಫಾರ್ಮಸೂಟಿಕಲ್ ಕ್ಷೇತ್ರ ಮಾರುಕಟ್ಟೆಯನ್ನು ವೃದ್ಧಿಸಿಕೊಂಡು

ದೇಶದ ಆರ್ಥಿಕಾಭಿವೃದ್ಧಿಗೆ ಶೇಕಡಾ 2 ರಷ್ಟು ಕೊಡುಗೆ ನೀಡಲು ಸಹಾಯವಾಗುತ್ತದೆ.

ಇದರ ಜೊತೆಗೆ ಜಿಎಸ್‌ಟಿಯ ಜಾರಿಯಿಂದ ಯಾವುದೇ ಅಡತಡೆಗಳಿಲ್ಲದೆ ತೆರಿಗೆ ಕ್ರೆಡಿಟ್ ದೊರೆಯಲು ಸಹಾಯವಾಗುತ್ತದೆ ಹಾಗೂ ತೆರಿಗೆ ಪಾವತಿಸುವ ಜಾಲ ವ್ಯಾಪಕವಾಗಿ ಹೆಚ್ಚಾಗಿ ಎಲ್ಲರಿಗೂ ಸಮನಾದ ಅವಕಾಶ ದೊರೆಯುತ್ತದೆ.

ಕೇಂದ್ರದ ಮಾರಾಟ ತೆರಿಗೆ ತಪ್ಪುವುದರಿಂದ ಕಂಪನಿಗಳಿಗೆ ವಿಲೇವಾರಿ ದರ ಗಣನೀಯವಾಗಿ ಕಡಿಮೆಯಾಗುವುದು ಒಂದು ಸಕಾರಾತ್ಮಕ ಬೆಳವಣಿಗೆ ಎಂದು ಹೇಳಬಹುದು. ಜಿಎಸ್‌ಟಿಯಿಂದ ಉತ್ಪಾದನಾ ವೆಚ್ಚ ಗಣನೀಯವಾಗಿ ಕಡಿಮೆಯಾಗಿ ಲಾಭದ ಪ್ರಮಾಣ ಶೇಕಡಾ 20 ರಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಜಿಎಸ್‌ಟಿ ಅಳವಡಿಸಿದ ಮೇಲೆ ತೆರಿಗೆಯ ಪ್ರಮಾಣ ಈಗಿರುವ ತೆರಿಗೆಯ ಪ್ರಮಾಣಕ್ಕಿಂತ ಕಡಿಮೆಯಾದರೆ ಬಳಕೆದಾರರ ಕೈಗೆಟಕುವ ದರದಲ್ಲಿ ಔಷಧಿಗಳು ಮತ್ತು ಆರೋಗ್ಯ ಸಂಬಂಧಿ ಸರಕುಗಳು ದೊರೆಯಲು ಸಹಾಯವಾಗುತ್ತದೆ.

ಈ ಕ್ಷೇತ್ರ ಪ್ರಸಕ್ತ ಅನೇಕ ತೆರಿಗೆ ರಿಯಾಯಿತಿಗಳನ್ನು ಅನುಭವಿಸುತ್ತಿದೆ. ಜಿಎಸ್‌ಟಿ ಜಾರಿಯಾದ ಮೇಲೆ ಈ ತೆರಿಗೆ ರಿಯಾಯಿತಿಗಳು ಮುಂದುವರೆಯುತ್ತವೆಯೇ ಎಂಬುದು ಇನ್ನೂ ಖಚಿತವಾಗಿಲ್ಲ. ಈ ಕ್ಷೇತ್ರ ಸೇವಾ ವಲಯದ ವ್ಯಾಪ್ತಿಗೊಳಪಡುವುದರಿಂದ ಆ ವಲಯಕ್ಕೆ ಹೆಚ್ಚಿನ ತೆರಿಗೆ ವಿಧಿಸುವುದರಿಂದ ಈ ಸೇವೆ ಇನ್ನಷ್ಟು ದುಬಾರಿಯಾಗುವ ಸಂಭವವೂ ಇದೆ.

### ಬ್ಯಾಂಕ್ ಮತ್ತು ಹಣಕಾಸು ವಲಯಗಳು

ಭಾರತದಲ್ಲಿ ಬಹುತೇಕ ಬ್ಯಾಂಕ್‌ಗಳು ಮತ್ತು ಹಣಕಾಸು ಸೇವೆಗಳು ಪ್ರಸಕ್ತ ಶೇಕಡಾ 14.5ರ ಸೇವಾ ತೆರಿಗೆಗೆ ಒಳಪಟ್ಟಿದ್ದು ಜಿಎಸ್‌ಟಿ ಜಾರಿಯಾದ ಮೇಲೆ ಶೇಕಡಾ 18 ರಿಂದ 20 ರ ವರೆಗೆ ಹೆಚ್ಚುವ ಸಾಧ್ಯತೆ ಇದೆ. ಆದ್ದರಿಂದ ಬ್ಯಾಂಕಿಂಗ್ ಸೇವೆ ಇನ್ನೂ ತುಟ್ಟಿಯಾಗುವ ಸಂಭವವಿದೆ. ಜಿಎಸ್‌ಟಿ ಜಾರಿಯಾದ ಮೇಲೆ ಹಣಕಾಸು ಸೇವೆಗಳು ಕ್ಲಿಷ್ಟಕರವಾಗಿ ಈಗಿರುವ ಕೇಂದ್ರೀಕೃತ ನೊಂದಣಿ ಬದಲಿಗೆ ಹಲವಾರು ರಾಜ್ಯಗಳ ಕಾನೂನುಗಳನ್ನು ಪಾಲಿಸಬೇಕಾಗುತ್ತದೆ.



ಜಿಎಸ್‌ಟಿಯು ತಲುಪಬೇಕಾದ ಸ್ಥಳದ ಆಧಾರದ ಮೇಲೆ ವಿಧಿಸುವ ತೆರಿಗೆಯಾಗಿದ್ದು, ಕೆಲವು ಸೇವೆಗಳ ತಲುಪಬೇಕಾದ ಸ್ಥಳವನ್ನು ಗೊತ್ತು ಮಾಡಿಕೊಳ್ಳುವುದೇ ಒಂದು ಸವಾಲಿನ ಕೆಲಸವಾಗುತ್ತದೆ (ಪ್ರಸಕ್ತ ಸೇವಾ ತೆರಿಗೆಯನ್ನು ಯಾವ ಸ್ಥಳದಲ್ಲಿ ಒದಗಿಸಲಾಗುತ್ತದೋ ಅಲ್ಲಿ ವಿಧಿಸಲಾಗುತ್ತದೆ). ಇದು ಬಿ2ಬಿ ಮತ್ತು ಬಿ2ಸಿ ವಹಿವಾಟಾಗಿದ್ದು ರಾಜ್ಯ ಜಿಎಸ್‌ಟಿ, ಕೇಂದ್ರ ಜಿಎಸ್‌ಟಿ ಅಥವಾ ಅಂತಾರಾಜ್ಯ ಜಿಎಸ್‌ಟಿ ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ. ಸಾಲದ ಮೇಲಿನ ಬಡ್ಡಿ, ಸೆಕ್ಯುರಿಟಿಗಳ ವ್ಯವಹಾರಗಳು, ವಿದೇಶಿ ಕರೆನ್ಸಿ ಮತ್ತು ಚಿಲ್ಲರೆ ಸೇವೆಗಳು ಜಿಎಸ್‌ಟಿ ವ್ಯಾಪ್ತಿಯೊಳಗೆ ಸೇರುವ ಸಾಧ್ಯತೆಗಳಿವೆ. ಬ್ಯಾಂಕಿಂಗ್ ವಲಯದ ಸಲಹೆಗಳ ಪ್ರಕಾರ ಈ ರೀತಿಯ ಸೇವೆಗಳು ಮತ್ತು ಆದಾಯ ಜಿಎಸ್‌ಟಿ ವ್ಯಾಪ್ತಿಗೆ ಬರಬಾರದು. ಈ ಸಲಹೆಗಳನ್ನು ಒಪ್ಪಿಕೊಳ್ಳಲಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಒಟ್ಟಾರೆ ಭಾರತದಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳ ಮೇಲೆ ಜಿಎಸ್‌ಟಿಯನ್ನು ಹೇರುವುದು ಒಂದು ಸವಾಲಾಗಿದ್ದು, ಅದು ಯಶಸ್ವಿಯಾದರೆ, ಅದು ಹೊಸ ಶಕೆಯನ್ನು ಪ್ರಾರಂಭಿಸಿದಂತಾಗಿ ಅದು ಇಡೀ ಪ್ರಪಂಚಕ್ಕೆ ಮಾದರಿಯಾಗುತ್ತದೆ.

### ಪ್ರವಾಸ, ಪ್ರವಾಸೋದ್ಯಮ ಮತ್ತು ಅತಿಥಿಸತ್ಕಾರ :

ಭಾರತದಲ್ಲಿ ಪ್ರವಾಸ, ಪ್ರವಾಸೋದ್ಯಮ ಮತ್ತು ಅತಿಥಿಸತ್ಕಾರ ವಲಯಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ವಿಧದ ತೆರಿಗೆಗಳಿಗೆ ಒಳಪಟ್ಟಿದ್ದು ಜಿಎಸ್‌ಟಿ ಜಾರಿಗೆ ಬಂದ ಮೇಲೆ ಹೋಟೆಲ್‌ಗಳು ಮತ್ತು ರೆಸ್ಟೋರೆಂಟ್‌ಗಳಲ್ಲಿ ಸರಬರಾಜು ಮಾಡುವ ಖಾದ್ಯಗಳು ಮತ್ತು ಸೇವೆಗಳಿಗೆ ಒಂದೇ ಒಂದು ತೆರಿಗೆ ವಿಧಿಸಲಾಗುತ್ತದೆ.

ಪ್ರಸಕ್ತ, ಇನ್‌ಪುಟ್ ಸೇವೆಗಳಿಗೆ ಸಂಬಂಧಿಸಿದಂತೆ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳ ನವೀಕರಣಕ್ಕೆ ಮತ್ತು ನಿರ್ಮಾಣಕ್ಕೆ ಕ್ರೆಡಿಟ್ ದೊರೆಯುತ್ತಿಲ್ಲ. ಜಿಎಸ್‌ಟಿ ಜಾರಿಗೆ ಬಂದ ಮೇಲೆ ಇದು ಬದಲಾಗುವ ಸಾಧ್ಯತೆಗಳಿವೆ. ಸಂಶೋಧನೆ ಮತ್ತು ಅಭಿವೃದ್ಧಿ ಸೆಸ್, ಫ್ರಾಂಚೈಸ್ ಫೀ ಮತ್ತು ತಾಂತ್ರಿಕ ತಿಳಿವಳಿಕೆಗಳು ಜಿಎಸ್‌ಟಿಯೊಳಗೆ ಸೇರಿಕೊಂಡು ಹಲವು ಹಂತಗಳ ಮತ್ತು ಹಲವು ತೆರಿಗೆಗಳ ಭಾರ ಕಡಿಮೆಯಾಗುತ್ತವೆ. ಇದರಿಂದ ಎಲ್ಲ ವ್ಯವಹಾರ ಬಹಳ ಸರಳೀಕರಣಗೊಳ್ಳುತ್ತವೆ. ಪ್ರಸಕ್ತ ವಿದೇಶಿ ವಾಣಿಜ್ಯ ನೀತಿಯನ್ವಯ ದೊರೆಯುತ್ತಿರುವ ಹಲವಾರು ಅನುಕೂಲಗಳು ಜಿಎಸ್‌ಟಿ ಜಾರಿಗೆ ಬಂದ ನಂತರ ಮುಂದುವರೆಯುತ್ತವೆಯೋ ಹೇಗೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆ ಲಾಭಗಳನ್ನು ಮುಂದುವರೆಸಿದರೆ, ಇನ್‌ಪುಟ್ ಕ್ರೆಡಿಟ್ ದೊರೆಯುವುದಿಲ್ಲ, ಇದರಿಂದ ಬೆಲೆ ಹೆಚ್ಚಾಗುತ್ತದೆ. ಜಿಎಸ್‌ಟಿಯ ಜಾರಿಯಿಂದ ಈ ಕ್ಷೇತ್ರದಲ್ಲಿರುವ ಹಲವಾರು ತೆರಿಗೆಗಳು ಮಾಯವಾಗುತ್ತವೆ ಮತ್ತು ಕ್ರೆಡಿಟ್ ಸೌಲಭ್ಯ ದೊರೆಯುತ್ತದೆ. ಆದರೂ ಈ ಎಲ್ಲ ಬೆಳವಣಿಗೆಗಳಲ್ಲೂ ತೆರಿಗೆ ದರ ಹೆಚ್ಚುವ ಸಾಧ್ಯತೆಗಳಿವೆ.

### ಶಿಕ್ಷಣ ಕ್ಷೇತ್ರ

ಪ್ರಸಕ್ತ ಶೈಕ್ಷಣಿಕ ಕ್ಷೇತ್ರ ಹಲವಾರು ತೆರಿಗೆ ರಿಯಾಯಿತಿಗಳು ಮತ್ತು ಅನುಕೂಲಗಳನ್ನು ಅನುಭವಿಸುತ್ತದೆ. ಶಾಲಾ ಕಾಲೇಜುಗಳಲ್ಲಿ ಕೊಡುವ ಸೇವೆಗಳು ತೆರಿಗೆಯ ವ್ಯಾಪ್ತಿಗೆ ಬರುವುದಿಲ್ಲ ಅಥವಾ ತೆರಿಗೆ ವಿಧಿಸದಿರುವ ಪಟ್ಟಿಯಲ್ಲಿ ಸೇರಿವೆ. ಈ ಪರಿಸ್ಥಿತಿ ಜಿಎಸ್‌ಟಿ ಜಾರಿಗೆ ಬಂದ ಮೇಲೆ ಮುಂದುವರೆಯುವ ಸಾಧ್ಯತೆಗಳಿವೆ. ಒಂದು ಪಕ್ಷ ಮುಂದುವರೆಯದಿದ್ದರೆ ಒಳಹರಿವು ಖರೀದಿ ತೆರಿಗೆ ಮತ್ತು ಸೇವಾ ತೆರಿಗೆ ಪಾವತಿ ಮೇಲೆ ಇನ್‌ಪುಟ್ ಕ್ರೆಡಿಟ್ ಅಥವಾ ಸೆನ್‌ವ್ಯಾಟ್ ಕ್ರೆಡಿಟ್ ದೊರೆಯುತ್ತದೆ.

### ಜನಸಾಮಾನ್ಯರ ಮೇಲೆ ಜಿಎಸ್‌ಟಿ ಯಾವ ರೀತಿ ಪ್ರಭಾವ ಬೀರುತ್ತದೆ

ಜಿಎಸ್‌ಟಿ ಕೊನೆ ಹಂತವನ್ನು ತಲುಪಿದ ಮೇಲೆ, ಚರಿತ್ರಾರ್ಹವಾದ ಕಾಯಿದೆಯಾಗಿ ದೇಶದಲ್ಲಿ ತೆರಿಗೆ ವ್ಯವಸ್ಥೆಯನ್ನು ಒಂದುಗೂಡಿಸಿ ಜಿಡಿಪಿ ಯನ್ನು ಶೇಕಡಾ 2 ರಷ್ಟು ಹೆಚ್ಚಿಸುತ್ತದೆ ಎಂದು ಭರವಸೆ ನೀಡಿದೆ. ಆದ್ದರಿಂದ ಸೇವೆಗಳು ಇನ್ನೂ ತುಟ್ಟಿಯಾಗುತ್ತವೆ ಮತ್ತು ಸರಕುಗಳನ್ನು ಕೊಳ್ಳುವವರಿಗೆ ಮಿಶ್ರ ಅನುಕೂಲ ದೊರೆಯುತ್ತದೆ.

ಪ್ರಸಕ್ತ ಸರಕುಗಳ ಮೇಲೆ ಶೇಕಡಾ 12.5 ರಷ್ಟು ತೆರಿಗೆ(ಅಬ್ಕಾರಿ ತೆರಿಗೆ) ಜೊತೆಗೆ ಶೇಕಡಾ 5 ರಿಂದ 15 ವರೆಗೆ ವ್ಯಾಟ್ ವಿಧಿಸಲಾಗುತ್ತಿದ್ದು, ಇದನ್ನು ಸಾಮಾನ್ಯವಾಗಿ ಬಳಕೆದಾರರ ಮೇಲೆ ವರ್ಗಾಯಿಸಲಾಗುತ್ತದೆ. ಒಂದು ಪಕ್ಷ ನಿಗದಿತ ಶೇಕಡಾ 18 ರಷ್ಟು ಜಿಎಸ್‌ಟಿಯನ್ನು ವಿಧಿಸಿದರೆ ಸರಕುಗಳ ಬೆಲೆ ಗಣನೀಯವಾಗಿ ಕಡಿಮೆಯಾಗುತ್ತದೆ. ಇದರಿಂದ ಬಳಕೆದಾರನಿಗೆ ಲಾಭವಾಗುತ್ತದೆ. ಶೇಕಡಾ 18 ರಷ್ಟು ಮಾತ್ರ ತೆರಿಗೆ ವಿಧಿಸಿದರೆ, ಸಂಗ್ರಹಣಾ ವೆಚ್ಚ ಕಡಿಮೆಯಾಗಿ ಬಳಕೆದಾರರಿಗೆ ಕಡಿಮೆ ಬೆಲೆಯಲ್ಲಿ ಸರಕುಗಳು ದೊರೆಯುತ್ತವೆ. ಸಾಮಾನ್ಯ ಜನ ಬಳಸುವ ಶೇಕಡಾ 55 ರಷ್ಟು ಸರಕುಗಳು ತೆರಿಗೆಯ ವ್ಯಾಪ್ತಿಯಿಂದ ಹೊರಗಿವೆ ಶೇಕಡಾ 32 ರಷ್ಟು ಸರಕುಗಳಿಗೆ ಅತ್ಯಂತ ಕಡಿಮೆ ದರದಲ್ಲಿ ತೆರಿಗೆ ವಿಧಿಸಲಾಗುತ್ತದೆ. ಉಳಿದ ಶೇಕಡಾ 12 ರಷ್ಟು ಸರಕುಗಳಿಗೆ ಮಾತ್ರ ಶೇಕಡಾ 18 ರಷ್ಟು ತೆರಿಗೆ ಬೀಳುತ್ತದೆ.

ಇದರ ಅರ್ಥ ಏನೆಂದರೆ ಗೃಹ ಬಳಕೆಯ ವಸ್ತುಗಳಿಗೆ (ಬಟ್ಟೆಗಳು, ಪುಸ್ತಕಗಳು, ಖಾದ್ಯತೈಲಗಳು ಮತ್ತಿತರೆ ವಸ್ತುಗಳು) ತೆರಿಗೆ ವಿನಾಯಿತಿ ಇರುವುದರಿಂದ ಇವುಗಳಿಗೆ ಶೇಕಡಾ 5 ರಿಂದ 8 ರ ವರೆಗೆ ತೆರಿಗೆ ಬೀಳಬಹುದು. ಒಂದು ಪಕ್ಷ ಈ ತೆರಿಗೆಗಳು ಶೇಕಡಾ 18 ರಷ್ಟಾದರೆ ಈ ವಸ್ತುಗಳ ಬೆಲೆ ತೀರಾ ಹೆಚ್ಚಾಗಬಹುದು. ಸೇವಾ ಕ್ಷೇತ್ರದಲ್ಲಿ ತೆರಿಗೆ ಪ್ರಮಾಣ ಶೇಕಡಾ 15 ರಿಂದ 18 ರ ವರೆಗೆ ಹೆಚ್ಚಾಗುವ ಸಾಧ್ಯತೆ ಇದೆ.

ಹೊರಗಡೆ ತಿನ್ನುವುದು ಜಿಎಸ್‌ಟಿ ಜಾರಿಗೆ ಬಂದ ಮೇಲೆ ಸೋವಿಯಾಗಬಹುದು. ಪ್ರಸಕ್ತ ಸೇವಾ



ತೆರಿಗೆ ಮತ್ತು ವ್ಯಾಟ್ ವಿಧಿಸಲಾಗುತ್ತಿದೆ. ಜಿಎಸ್‌ಟಿಯಲ್ಲಿ ಒಂದೇ ತೆರಿಗೆಯಾಗುತ್ತದೆ. ಒಂದು ಪಕ್ಷ ರಾಜ್ಯ ಸರ್ಕಾರಗಳು ಸೇವಾ ತೆರಿಗೆಯನ್ನು ವಿಧಿಸುವ ನಿರ್ಧಾರಕ್ಕೆ ಬಂದರೆ, ಫೋನ್ ಬಿಲ್‌ಗಳಲ್ಲಿ ಇನ್ನು ಹೆಚ್ಚಳವಾಗುತ್ತವೆ. ಇದೇ ರೀತಿ ಸಾಮಾನ್ಯ ನಾಗರಿಕರ ಟೆಲಿಕಾಂ ಬಿಲ್ಲುಗಳು, ರೈಲು ಪ್ರಯಾಣ ಮತ್ತಿತರ ಸೇವೆಗಳು ದುಬಾರಿಯಾಗಲಿವೆ. ಆದರೆ ಸಣ್ಣ ಕಾರುಗಳು, ಭಾರಿ ಪ್ರಮಾಣದಲ್ಲಿ ಖರ್ಚಾಗುವ ಬಳಕೆದಾರರ ವಸ್ತುಗಳ ಬೆಲೆಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗುವ ಸಾಧ್ಯತೆಗಳಿವೆ.

"ಮೇಕ್ ಇನ್ ಇಂಡಿಯಾ "ಘೋಷಣೆಯಲ್ಲಿ ಜಿಎಸ್‌ಟಿ ದರ ಕಡಿಮೆಯಾಗುವುದರಿಂದ ಟೆಲಿವಿಷನ್ ಸೆಟ್‌ಗಳ ದರ ಕಡಿಮೆಯಾಗಲಿದೆ. ಉದಾಹರಣೆಗೆ ಬಳಕೆದಾರ 20,000 ರೂಪಾಯಿ ಬೆಲೆಯ ಟಿವಿ ಮೇಲೆ ಪ್ರಸಕ್ತ ಶೇಕಡಾ 24.5 ತೆರಿಗೆ ಕಟ್ಟುತ್ತಿದ್ದು ಟಿವಿಯ ಬೆಲೆ 24,900 ಆಗುತ್ತದೆ. ಜಿಎಸ್‌ಟಿ ಜಾರಿಯಾದ ಮೇಲೆ ತೆರಿಗೆ ದರ ಶೇಕಡಾ 18 ಕ್ಕೆ ಇಳಿದರೆ ತೆರಿಗೆ 23,600 ಆಗುತ್ತದೆ.

ಬ್ಯಾಗ್‌ಗಳು, ಶೂಗಳು, ಎಲೆಕ್ಟ್ರಾನಿಕ್ಸ್ ವಸುಗಳನ್ನು ಆನ್‌ಲೈನ್‌ನಲ್ಲಿ ಕೊಂಡು ಕೊಂಡರೆ ದುಬಾರಿಯಾಗುತ್ತವೆ. ಕಾರಣ ಇ-ಕಾಮರ್ಸ್ ಕೈಗಾರಿಕೆ ತೆರಿಗೆ ವ್ಯಾಪ್ತಿಗೆ ಬರುವುದರಿಂದ ಬಳಕೆದಾರರು ತೆರಿಗೆ ಪಾವತಿಸಬೇಕಾಗುತ್ತದೆ. ಹಾಗಾಗಿ ಆನ್‌ಲೈನ್‌ನಲ್ಲಿ ಈಗ ಕೊಡುತ್ತಿರುವ ರಿಯಾಯಿತಿ ಮತ್ತು ಉಡುಗೊರೆಗಳ ಹಾವಳಿ ಕಡಿಮೆಯಾಗಿ ಹೆಚ್ಚು ಬೆಲೆ ತೆರಬೇಕಾಗುತ್ತದೆ.

ಜಿಎಸ್‌ಟಿಯ ಯಶಸ್ಸು ಸಾಮಾನ್ಯ ಭಾರತೀಯ ಬಳಕೆದಾರನ ಜೀವನದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದರ ಮೇಲೆ ಅವಲಂಬಿಸಿದೆ ಎಂದು ಹೇಳಬಹುದು. ಜಿಎಸ್‌ಟಿಯ "ಒಂದು ದೇಶ ಒಂದು ತೆರಿಗೆ" ಧ್ಯೇಯದೊಂದಿಗೆ ಪ್ರತಿಯೊಂದು ವಸ್ತು ಮತ್ತು ಸೇವೆಯ ಮೇಲೆ ಸಹನೀಯವಾದ ತೆರಿಗೆ ವಿಧಿಸಿ ದೇಶದ ಸಾಮಾನ್ಯ ನಾಗರಿಕನಿಗೆ ಒಳಿತು ಮಾಡುವುದು ಒಂದೇ ಗುರಿಯಲ್ಲ, ಅದರೊಂದಿಗೆ ಇಡೀ ದೇಶಕ್ಕೇ ಒಳಿತಾಗಬೇಕೆಂಬುದು. ಯಾವುದೇ ಒಂದು ಹೊಸ ಕಾನೂನು ಬಂದರೂ ಅದು ಸಾಮಾನ್ಯ ಜನರ ಮೇಲೆ ಪ್ರಭಾವ ಬೀರುತ್ತದೆ. ಇದು ಜಿಎಸ್‌ಟಿಗೂ ಅನ್ವಯವಾಗುತ್ತಿದ್ದು ಸಾಮಾನ್ಯ ನಾಗರಿಕನೇ ಕೊನೆಯ ಹಂತದ ಬಳಕೆದಾರನಾಗಿರುವುದರಿಂದಲೂ ಅವನ ಜೀವನದ ಮೇಲೆ ಜಿಎಸ್‌ಟಿ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಜಿಎಸ್‌ಟಿಯು ಸಕಾರಾತ್ಮಕ ಪ್ರಭಾವ ಬೀರಿ ಭಾರತದ ಆರ್ಥಿಕತೆಗೆ ಉತ್ತೇಜನ ನೀಡಿ ದೇಶ ಸಮಗ್ರವಾದ ಒಂದೇ ಮಾರುಕಟ್ಟೆಯಾಗಲಿ ಎಂದು ಆಶಿಸೋಣ. ಉದಯಿಸುತ್ತಿರುವ ಭಾರತದ ಆರ್ಥಿಕತೆ ಸದಾ ಸಾಮಾನ್ಯ ನಾಗರಿಕನ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡಲಿ ಎಂದು ಹಾರೈಸೋಣ. ❑

## ಯೋಜನಾ ಚಂದಾದಾರರಲ್ಲಿ ಕೋರಿಕೆ

ಯೋಜನಾ ಪತ್ರಿಕೆಗೆ ಚಂದಾ ಬಯಸುವವರು ಮನಿಆರ್ಡರ್ ಕಳಿಸುವಾಗ ಜಿಲ್ಲೆ ಹಾಗೂ ಅಂಚೆ ಪಿನ್‌ಕೋಡ್ ಸಂಖ್ಯೆ ಸೇರಿದಂತೆ ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಒದಗಿಸಬೇಕು. ಮನಿಆರ್ಡರ್ ಕಳಿಸಿದ ಎಂಟು ದಿನಗಳಲ್ಲಿ ನಮ್ಮ ಕಚೇರಿಯನ್ನು ಸಂಪರ್ಕಿಸಿ ತಮ್ಮ ವಿಳಾಸವನ್ನು ಚಂದಾದಾರರು, ಸರಿ ಇದೆಯೇ ಎಂದು ದೃಢಪಡಿಸಿಕೊಳ್ಳಬೇಕು ಹಾಗೂ ಚಂದಾ ಸಂಖ್ಯೆಯನ್ನು ಪಡೆದುಕೊಳ್ಳಬೇಕು. **ಚಂದಾದಾರರು ತಮ್ಮ ಯಾವುದೇ ಅಗತ್ಯಗಳಿಗೆ ಕಚೇರಿ ಸಂಪರ್ಕಿಸಿದಾಗ ತಮ್ಮ ಚಂದಾ ಸಂಖ್ಯೆಯನ್ನು ತಿಳಿಸುವುದು ಅತ್ಯವಶ್ಯಕ.** ಯೋಜನಾ ರವಾನೆ ಬಗ್ಗೆ ಯಾವುದೇ ದೂರು ದುಮ್ಮಾನಗಳನ್ನು ಆಯಾ ತಿಂಗಳೇ ಪರಿಹರಿಸಿಕೊಳ್ಳಬೇಕು. ಸಂಪರ್ಕಿಸಬೇಕಾದ ಇ-ಅಂಚೆ : yojanakannada@yahoo.com ದೂರವಾಣಿ ಸಂಖ್ಯೆ : 080 25537244 (ಸೋಮವಾರದಿಂದ - ಶುಕ್ರವಾರ. ವೇಳೆ 2.00 ರಿಂದ 4.00)

# ಸರಕು, ಸೇವಾ ತೆರಿಗೆ; ಸಾಂವಿಧಾನಿಕ ಸವಾಲು

* ಜಯಂತ್ ರಾಯ್ ಚೌಧುರಿ




ಭಾರತದ ತೆರಿಗೆ ಕಾಯಿದೆಯ ಭವಿಷ್ಯವು ಇಲ್ಲಿನ ರಾಜಕೀಯ ವ್ಯವಸ್ಥೆ ಕಂಡುಕೊಳ್ಳುವ ವಿಶಿಷ್ಟವಾದ ತೆರಿಗೆ ವ್ಯವಸ್ಥೆಯ ಮಾರ್ಗೋಪಾಯಗಳನ್ನು ಅವಲಂಬಿಸಿದೆ. ಆದರೆ, ಪ್ರಸ್ತುತ ಜಿಎಸ್‌ಟಿ ಸೃಷ್ಟಿಸಿರುವ ಮಂಥನಕ್ಕೆ ಭಾರತದ ಒಕ್ಕೂಟ ವ್ಯವಸ್ಥೆಯ ಸಂಬಂಧವನ್ನು ವ್ಯಾಖ್ಯಾನಿಸಲು ಹಲವು ವರ್ಷಗಳೇ ಹಿಡಿಯಲಿದೆ.

ಭಾರತವನ್ನು ಏಕರೂಪದ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ಮಹೋನ್ನತ ಉದ್ದೇಶ ಹೊಂದಿರುವ ಬಹುನಿರೀಕ್ಷಿತ ಸರಕು ಮತ್ತು ಸೇವಾ ತೆರಿಗೆ 'ಜಿಎಸ್‌ಟಿ' ಪದ್ಧತಿಯು ಭಾರತದ ಸಂವಿಧಾನ ಹೊಂದಿರುವ 'ಏಕೀಕೃತ ಒಕ್ಕೂಟ ವ್ಯವಸ್ಥೆ'ಯ ಪೂರ್ವಗ್ರಹಿಕೆಯನ್ನು 'ದೇಶದ ಸಂವಿಧಾನಕ್ಕೆ ಒಕ್ಕೂಟ ವ್ಯವಸ್ಥೆ'ಯ ಪೂರ್ವಗ್ರಹಿಕೆಗೆ ಪರಿವರ್ತಿಸಲಿದೆ. ಜಿಎಸ್‌ಟಿ ಸ್ವರೂಪದ ತೆರಿಗೆ ಪದ್ಧತಿಯು ಈಗಾಗಲೇ ಕೆನಡಾ ಮತ್ತು ಐರೋಪ್ಯ ಒಕ್ಕೂಟವನ್ನು ಏಕೀಕೃತ ಮಾರುಕಟ್ಟೆಯನ್ನಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ. ಈ ತೆರಿಗೆ ಪದ್ಧತಿಯು ಯಾವುದೇ ಅಸಂಕಲ್ಪಿತ ಪರಿಣಾಮಗಳನ್ನು ಉಂಟು ಮಾಡದು.

ಜಿಎಸ್‌ಟಿ ಅಂಗೀಕಾರಕ್ಕೆ ಮೊದಲು ವಿವಿಧ ರಾಜ್ಯಗಳಲ್ಲಿನ ಬಹುವಿಧದ ಸಂಕೀರ್ಣ ತೆರಿಗೆ ವ್ಯವಸ್ಥೆಗೆ ಭಾರಿ ವಿರೋಧ ಮತ್ತು ಪ್ರತಿಭಟನೆ ವ್ಯಕ್ತ ಪಡಿಸಿದ ಬುದ್ಧಿವಂತ ಉದ್ಯಮಿಗಳು, ವ್ಯಾಪಾರಸ್ಥರು ನಂತರ 'ಒಂದು ರಾಷ್ಟ್ರ, ಒಂದು ತೆರಿಗೆ' ಘೋಷವಾಕ್ಯಕ್ಕೆ ಮುಂದಾದರು. ಈ ಶತಮಾನದ ಆರಂಭದಲ್ಲಿ ಶುರುವಾದ ವ್ಯಾಟ್ ತೆರಿಗೆ ಪದ್ಧತಿಯೊಂದಿಗೆ ದೇಶದ ಮಾರುಕಟ್ಟೆಯನ್ನು ಏಕೀಕೃತಗೊಳಿಸುವ ಪ್ರಕ್ರಿಯೆಯೂ ಆರಂಭವಾಯಿತು. ಆದರೆ, ರಾಜ್ಯಗಳು ಮಾತ್ರ ತಮ್ಮದೇ ಆದ ತೆರಿಗೆ ವ್ಯವಸ್ಥೆ ಮತ್ತು ನೀತಿಯನ್ನು ಅಳವಡಿಸಿಕೊಂಡು ಸ್ವತಂತ್ರವಾಗಿದ್ದವು. ಇದಕ್ಕೆ ಅವುಗಳ ಸ್ವಂತ ಆರ್ಥಿಕ ನೀತಿಯೇ ಕಾರಣ. ವ್ಯಾಟ್ ತೆರಿಗೆ ಪದ್ಧತಿಯು ವಿವಿಧ ತೆರಿಗೆಗಳಿಗೆ ಅನ್ವಯವಾಗುತ್ತಿತ್ತು. ಇದರ ಪರಿಣಾಮ ಎಂಬಂತೆ, ಒಟ್ಟಾರೆ ಭಾರತದ ತೆರಿಗೆ ವ್ಯವಸ್ಥೆಯು ಅತ್ಯಧಿಕ ತೆರಿಗೆ ವ್ಯವಸ್ಥೆ ಹೊಂದಿರುವ ರಾಷ್ಟ್ರಗಳ ಸಾಲಿಗೆ ಸೇರ್ಪಡೆಯಾಗಿದೆ. 'ಒಂದು ರಾಷ್ಟ್ರ, ಒಂದು ತೆರಿಗೆ' ಘೋಷವಾಕ್ಯವು ಹಲವು ತೆರಿಗೆ ರೂಪಗಳನ್ನು ತೊಡೆದುಹಾಕಿ, ದೇಶದ ವಾಣಿಜ್ಯ ವಹಿವಾಟನ್ನು ಸುಗಮವಾಗಿಸಲಿದೆ. ಸ್ವಾತಂತ್ರ್ಯ ಸಂದರ್ಭದಿಂದಲೂ ಏಕೀಕೃತ ಒಕ್ಕೂಟ ವ್ಯವಸ್ಥೆಗೆ ಒಲವು ವ್ಯಕ್ತವಾಗಿದೆ. ರಾಜ್ಯಗಳು ಪ್ರಸ್ತುತ ನಾನಾ ವಿಧದ ಸರಕು ಮತ್ತು ವೃತ್ತಿಗಳಿಗೆ ವಿವಿಧ ಹಂತಗಳಲ್ಲಿ ತೆರಿಗೆ, ಸುಂಕ ಮತ್ತು ಶುಲ್ಕ ವಿಧಿಸುವ ಹಕ್ಕು ಹೊಂದಿವೆ. ಕಾಲಾನುಕಾಲಕ್ಕೆ ಅವು ಶಾಸನಗಳಿಗೆ ತಿದ್ದುಪಡಿ ತರುವ ಮೂಲಕ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ಉದಾಹರಣೆಗೆ, ಪಶ್ಚಿಮ ಬಂಗಾಳ ಸರ್ಕಾರ, ತನ್ನ ಗಡಿಯ ಹೊರಗೆ ಮಾರಾಟವಾಗುವ ಕಲ್ಲಿದ್ದಲಿಗೆ ಶುಲ್ಕ ವಿಧಿಸುತ್ತಿದೆ. ಇತರೆ ರಾಜ್ಯಗಳು ಸಹ ಹೊರರಾಜ್ಯಗಳ ಸರಕಿಗೆ ಪ್ರವೇಶ ತೆರಿಗೆ ವಿಧಿಸುತ್ತಿವೆ. ಆದರೆ, ಈ ತೆರಿಗೆ ವ್ಯವಸ್ಥೆ ಯಾವುದೇ ಗ್ರಾಹಕ ಮತ್ತು ವ್ಯವಹಾರದ ದೃಷ್ಟಿಯಿಂದಲೂ ಹೊರೆ ಮತ್ತು ದುಬಾರಿ ಎನಿಸಿದೆ.

ಆದಾಗ್ಯೂ, ರಾಜ್ಯಗಳು ಅಧಿಕ ಪ್ರಮಾಣದ ತೆರಿಗೆ ಕ್ರೋಢೀಕರಣದ ಮೂಲಕ ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಿಕೊಳ್ಳುವ ಸಾಮರ್ಥ್ಯ ಹೊಂದಿವೆ. ಜಿಎಸ್‌ಟಿಯ ನಾನಾ ಅಧಿನಿಯಮಗಳನ್ನು ವಿರೋಧಿಸುತ್ತಿರುವ ತಮಿಳುನಾಡು ರಾಜ್ಯ, ಸಾಮಾಜಿಕ ವಲಯದಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದಿದೆ. ಈ ವಲಯದ ತೆರಿಗೆ ಕಾರ್ಯಕ್ರಮಗಳ ಮೂಲಕ ಅದು ಆರ್ಥಿಕ ಸಂಪನ್ಮೂಲ ಸೃಷ್ಟಿಸಿಕೊಂಡಿದೆ. ಸಾಮಾಜಿಕ

* ಹಿರಿಯ ಸಂಪಾದಕರು – ವಾಣಿಜ್ಯ ಟೆಲಿಗ್ರಾಫ್ ಪತ್ರಿಕೆ. E-mail : jrchowdhury@yahoo.com

ವಲಯದಲ್ಲಿ ತಮಿಳುನಾಡು ರಾಜ್ಯ ಉತ್ತಮ ಕೆಲಸ ಮಾಡಿದೆ ಎಂಬುದು ಸತ್ಯ. ಅದು ಆರೋಗ್ಯ ಮತ್ತು ಶೈಕ್ಷಣಿಕ ರಂಗದಲ್ಲಿ ತನ್ನ ಎದುರಾಳಿಗಳಿಗಿಂತ ಉತ್ತಮ ಕಾರ್ಯಕ್ರಮಗಳನ್ನು ರೂಪಿಸಿದೆ. ಇವುಗಳನ್ನು ಒಇಸಿಡಿ ರಾಷ್ಟ್ರಗಳಿಗೆ ಹೋಲಿಕೆ ಮಾಡಬಹುದು. ಅರ್ಥಶಾಸ್ತ್ರಜ್ಞ ಜೀನ್ ಡ್ರೇಜ್ ಅವರ ಪ್ರಕಾರ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ಅಭಿವೃದ್ಧಿ ಸೂಚ್ಯಂಕ ರ್‍ಯಾಂಕಿಂಗ್‌ನಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಳ್ಳುತ್ತಾ ಬಂದಿವೆ. ಸುಧಾರಣೆಯ ವೇಗದಲ್ಲಿ ಇವೆರಡು ರಾಜ್ಯಗಳು ಇತರೆ ರಾಜ್ಯಗಳನ್ನು ಹಿಂದಿಕ್ಕಿವೆ.

ರಾಜ್ಯಗಳ ವಿಷಯವಿರಲಿ, ಸ್ಥಳೀಯ ಮುನಿಸಿಪಾಲಿಟಿ ಸಂಸ್ಥೆಗಳು ಸಹ ಸ್ವತಂತ್ರವಾಗಿ ನಾನಾ ತೆರಿಗೆ ವಿಧಿಸುವ ಅಧಿಕಾರ ಹೊಂದಿವೆ. ಸ್ವಂತ ತೆರಿಗೆ ಮೂಲಕ ಅವು ಆರ್ಥಿಕ ಸಂಪನ್ಮೂಲ ಹೆಚ್ಚಿಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಂಡಿವೆ. ಉದಾಹರಣೆಗೆ, ಮುಂಬಯಿ ಕಾರ್ಪೋರೇಷನ್ ಆಕ್ಟ್ರಾಯ್ ಸುಂಕದ ಮೂಲಕ ಬೃಹತ್ ಆದಾಯ ಗಳಿಸುತ್ತಿದೆ. ಜಿಎಸ್‌ಟಿ ಜಾರಿಯ ನಂತರ ಸರಕಾರಕ್ಕೆ ಇದು ಸವಾಲಾಗಿ ಪರಿಣಮಿಸಲಿದೆ. ಏಕೆಂದರೆ, ಮುಂಬಯಿ ಮಹಾನಗರಪಾಲಿಕೆಯ ತೆರಿಗೆ ಅಧಿಕಾರ ವಿಮುಖಗೊಂಡಂತಾಗಲಿದೆ. ಈ ವಾಸ್ತವವನ್ನು ಗುರುತಿಸಿರುವ ಕೇಂದ್ರ ನಗರಾಭಿವೃದ್ಧಿ ಸಚಿವಾಲಯ, ದೇಶಾದ್ಯಂತ ಜಿಎಸ್‌ಟಿ ಜಾರಿ ನಂತರ ರಾಜ್ಯಗಳಿಗೆ ನೀಡುವ ಪರಿಹಾರದ ಪಾಲಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ 25ರಿಂದ 30% ಪಾಲು ಒದಗಿಸಲು ತೀರ್ಮಾನಿಸಿದೆ. ಕೇಂದ್ರ ಮತ್ತು ರಾಜ್ಯಗಳ ಪರಸ್ಪರ ಒಪ್ಪಿಗೆ ಸೂತ್ರದ ಆಧಾರದಲ್ಲಿ ಜಿಎಸ್‌ಟಿಯನ್ನು ವಿಭಜಿಸುವ ನಿರೀಕ್ಷೆ ಇದೆ. ಎಲ್ಲಕ್ಕಿಂತ ಮುಖ್ಯವಾಗಿ, ಜಿಎಸ್‌ಟಿ ಜಾರಿಯಿಂದ ನಗರ ಸ್ಥಳೀಯ ಸಂಸ್ಥೆಗಳ ತೆರಿಗೆ ಆದಾಯದ ಮೇಲೆ ಭಾರಿ ಹೊಡೆತ ಬೀಳಲಿದೆ. ಜಿಎಸ್‌ಟಿ ಜಾರಿಯಾದರೆ, ಸ್ಥಳೀಯ ತೆರಿಗೆ, ಆಕ್ಟ್ರಾಯ್, ಪ್ರವೇಶ ತೆರಿಗೆ ಇತ್ಯಾದಿಗಳು ರದ್ದಾಗಲಿವೆ. ಜಿಎಸ್‌ಟಿ ತಿದ್ದುಪಡಿ ಕಾಯಿದೆಯನ್ನು ಕಾನೂನಾತ್ಮಕವಾಗಿ ವಿಶ್ಲೇಷಿಸುವುದಾದರೆ, ಜಿಎಸ್‌ಟಿ ಕಾಯಿದೆಯು ತೆರಿಗೆ ಅಧಿಕಾರವನ್ನು ಪರಿಣಾಮಕಾರಿಯಾಗಿ ಚುನಾಯಿತವಲ್ಲದ ಸಂಸ್ಥೆ ಜಿಎಸ್‌ಟಿ ಮಂಡಳಿಗೆ ವರ್ಗಾಯಿಸಿದೆ. ಕಾಯಿದೆಯ ಅನ್ವಯ ಸ್ಥಾಪನೆಯಾಗಿರುವ ಜಿಎಸ್‌ಟಿ ಮಂಡಳಿಯು ಜಿಎಸ್‌ಟಿ ತೆರಿಗೆ ದರ ನಿಗದಿಪಡಿಸುವ ಗುರುತರ ಜವಾಬ್ದಾರಿ ಹೊಂದಿದೆ. ಸಂಸತ್ತು ಮತ್ತು ರಾಜ್ಯ



ವಿಧಾನಸಭೆಗಳ ತೆರಿಗೆ ಅಧಿಕಾರವನ್ನು ಪಡೆದಿರುವ ಈ ಮಂಡಳಿಯು ಇದೀಗ ತೆರಿಗೆ ದರ ನಿಗದಿಯಲ್ಲಿ ಕಾರ್ಯೋನ್ಮುಖವಾಗಿದೆ. ಜಿಎಸ್‌ಟಿ ಮಂಡಳಿಯು ಸರ್ವೋಚ್ಚ ಶಾಸನಾತ್ಮಕ ಸಂಸ್ಥೆಯಾಗಿದೆ. ಜಿಎಸ್‌ಟಿ ವ್ಯವಸ್ಥೆಗೆ ತೆರಿಗೆ ದರ ನಿಗದಿ ಪಡಿಸುವ ಪರಮಾಧಿಕಾರ ಈ ಮಂಡಳಿಗೆ ಇದೆ. ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಆಯ್ಕೆಯಾದ ಸದಸ್ಯರಿಗೆ ಈ ಮಂಡಳಿಯಲ್ಲಿ ಸ್ಥಾನವಿಲ್ಲ. ಆದರೆ, ನೀತಿ ನಿರೂಪಕರಿಂದ ಆಯ್ಕೆಯಾದ ವಿಷಯ ತಜ್ಞರು ಮತ್ತು ಅಧಿಕಾರಶಾಹಿ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ರಾಜ್ಯಗಳ ವಿವಿಧ ತೆರಿಗೆಗಳು ಜಿಎಸ್‌ಟಿಯಲ್ಲಿ ವಿಲೀನವಾಗುವುದರಿಂದ, ರಾಜ್ಯಗಳಿಗೆ ಯಾವುದೇ ರೀತಿಯಲ್ಲೂ ನಷ್ಟ ಉಂಟಾಗದಂತೆ ಅವುಗಳಿಗೆ ತೆರಿಗೆ ದರ ನಿಗದಿಪಡಿಸಬೇಕಾಗುತ್ತದೆ. ಈ ವಿಷಯದಲ್ಲಿ ರಾಜ್ಯಗಳ ಕಾರ್ಯಾಂಗ ಮತ್ತು ಶಾಸಕಾಂಗ ಜಿಎಸ್‌ಟಿ ತೆರಿಗೆ ದರಗಳ ನಿಗದಿಯಲ್ಲಿ ಸಲಹೆ, ಸೂಚನೆ ನೀಡುವ ಅಧಿಕಾರ ಹೊಂದಿರುತ್ತವೆ.

ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಕಾಯಿದೆ (ಎಫ್‌ಆರ್‌ಬಿಎಂ) ಯು ರಾಜ್ಯಗಳ ಹಣಕಾಸು ಕ್ರೋಢೀಕರಣಕ್ಕೆ ಕೆಲವೊಂದು ಮಿತಿಗಳನ್ನು ಹೇರಿದೆ. ಬಾಂಡ್ ಮತ್ತು ಮಾರುಕಟ್ಟೆಗಳಿಂದ ಸಂಗ್ರಹಿಸುವ ಸಾಲಗಳಿಗೆ ಕಾಯಿದೆಯಲ್ಲಿ ಮಿತಿ ಹಾಕಲಾಗಿದೆ. ರಾಜ್ಯಗಳು ಸಾಲದ ಸುಳಿಗೆ ಸಿಲುಕಬಾರದು ಎಂಬುದು ಈ ಕಾಯಿದೆಯ ಉದ್ದೇಶ. ಡಾ. ಬಿ.ಸಿ. ರಾಯ್, ಸರ್ ಎಂ. ವಿಶ್ವೇಶ್ವರಯ್ಯ ಹಾಗೂ ಪ್ರತಾಪ್ ಸಿಂಘ್ ಕೈರಾನ್ ಅವರ ಆಶಯವೂ ಇದೇ ಆಗಿತ್ತು. ರಾಜ್ಯಗಳು ಅಭಿವೃದ್ಧಿ ನಿಧಿಗಾಗಿ ಸಾಲ ಮೂಲವನ್ನು ಸಾಧನವಾಗಿ ಅವಲಂಬಿಸುವಂತಾಗಬಾರದು ಎಂಬುದು ಅವರ ಕಾಳಜಿಯಾಗಿತ್ತು. ಜಿಎಸ್‌ಟಿ ಮತ್ತು ಎಫ್‌ಆರ್‌ಬಿಎಂ ಕಾಯಿದೆಗಳು ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಸಂಪುಟ ಸಹೋದ್ಯೋಗಿಗಳನ್ನು ರಾಜಕೀಯ ಪ್ರತಿನಿಧಿಗಳನ್ನಾಗಿ ಪರಿವರ್ತಿಸಿದ್ದು, ಜಿಎಸ್‌ಟಿ ಮತ್ತು ಹಣಕಾಸು ಕಾರ್ಯಕ್ರಮಗಳ ಜಾರಿಗೆ ಅಧಿಕಾರ ನೀಡಿದೆ. ಆದರೆ, ಕಾರ್ಯಕ್ರಮಗಳ ಹೆಚ್ಚಳಕ್ಕೆ ನಿಧಿ ಸಂಗ್ರಹಿಸುವ ಮೂಲಗಳ ಪರಿಗಣನೆ ಅಥವಾ ಕೇಂದ್ರ ಸರ್ಕಾರದ ನೆರವಿನ ಹಕ್ಕುಗಳು ಇಲ್ಲ. ಜಿಎಸ್‌ಟಿಯಿಂದ ರಾಜ್ಯಗಳ ತೆರಿಗೆ ಅಧಿಕಾರದ ಸಾರ್ವಭೌಮತೆ ಕೈತಪ್ಪುತ್ತದೆ ಎಂಬ ವಾದಗಳು ಕೇಳಿಬಂದವು. ಇದಕ್ಕೆ ಹಣಕಾಸು ಶ್ರೀ ಸಚಿವ ಅರುಣ್ ಜೇಟ್ಲಿ ಅವರು ಸಮರ್ಥನೆ ನೀಡಿದ್ದು, ರಾಜ್ಯಗಳ ತೆರಿಗೆ ಅಧಿಕಾರದ ಸಾರ್ವಭೌಮತೆ ಕೇಂದ್ರದಲ್ಲಿ ಸೇರ್ಪಡೆಯಾಗಿದೆ ಅಷ್ಟೆ ಎಂದಿದ್ದಾರೆ.

ವಿತ್ತೀಯ ಅನಾರೋಗ್ಯಕ್ಕೆ ಜಿಎಸ್‌ಟಿ ಸರ್ವರೋಗ ನಿರೋಧಕ ಎಂದು ವಿಶ್ವ ಸಮುದಾಯ ಇನ್ನೂ ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ. ಇದಕ್ಕೆ ಅಮೆರಿಕ ಹೊರತಾಗಿಲ್ಲ. ಅಲ್ಲಿರುವ ಒಕ್ಕೂಟ ಸ್ವರೂಪದ ಸಂವಿಧಾನವೇ ಕಾರಣವಿರಬಹುದು. ಅಲ್ಲಿ ನೇರ ತೆರಿಗೆಗಳು ರಾಜ್ಯಗಳ ವ್ಯಾಪ್ತಿಯಲ್ಲಿವೆ. ಆದರೆ, ಭಾರತದಲ್ಲಿ ನೇರ ತೆರಿಗೆಗಳ ಹಿಡಿತವನ್ನು ಕೇಂದ್ರ ಸರ್ಕಾರ ಹೊಂದಿದ್ದು, ನಿಗದಿತ ನಿಯಮಗಳಂತೆ ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ. ಕೆನಡಾದಲ್ಲಿ ಕಳೆದ ಶತಮಾನದಲ್ಲೇ ಜಿಎಸ್‌ಟಿ ಜಾರಿಯಾಗಿದೆ. ಅಲ್ಲಿನ ಪ್ರಾಂತೀಯ ಸರ್ಕಾರಗಳು ನೇರ ತೆರಿಗೆಯ ಅಧಿಕಾರ ವ್ಯಾಪ್ತಿ ಹೊಂದಿದ್ದರೆ, ಫೆಡರಲ್ ಸರ್ಕಾರ ಪರೋಕ್ಷ ತೆರಿಗೆಯ ಅಧಿಕಾರ ಹೊಂದಿದೆ. ಹಾಗಾಗಿ, ಅಲ್ಲಿ ಜಿಎಸ್‌ಟಿ ಜಾರಿ ನಂತರ ಹೇಳಿಕೊಳ್ಳುವಂತಹ ಪರಿಣಾಮಗಳು ಆಗಿಲ್ಲ. ಒಂದು ವೇಳೆ ರಾಜ್ಯಗಳು ಕೇಂದ್ರದಿಂದ ವಿತ್ತೀಯ ವ್ಯವಸ್ಥೆಯನ್ನು ನಿರೀಕ್ಷಿಸಿದರೆ, ಅವು ಆಸ್ಟ್ರೇಲಿಯಾ ಜಿಎಸ್‌ಟಿ ಮಾದರಿಯನ್ನು ಆಯ್ಕೆ ಮಾಡಿಕೊಳ್ಳಬಹುದು. 75% ಎಲ್ಲಾ ತೆರಿಗೆಗಳನ್ನು ಅಲ್ಲಿ ಫೆಡರಲ್ ಅಥವಾ ಕಾಮನ್‌ವೆಲ್ತ್ ಸರ್ಕಾರವೇ ಸಂಗ್ರಹಿಸುತ್ತದೆ. ಅಲ್ಲದೆ, ಆ ತೆರಿಗೆಯನ್ನು ವ್ಯವಸ್ಥಿತ ಕಾರ್ಯವಿಧಾನದಲ್ಲಿ ಎಲ್ಲಾ ರಾಜ್ಯಗಳಿಗೆ ಹಂಚಿಕೆ ಮಾಡುತ್ತದೆ, ಅಥವಾ ಕೆನಡಾದ ಜಿಎಸ್‌ಟಿ ಮಾದರಿಯನ್ನು ಆಯ್ಕೆ ಮಾಡಿಕೊಳ್ಳಲೂಬಹುದು. ಒಟ್ಟಾರೆ, ಭಾರತದ ತೆರಿಗೆ ಕಾಯಿದೆಯ ಭವಿಷ್ಯವು ಇಲ್ಲಿನ ರಾಜಕೀಯ ವ್ಯವಸ್ಥೆ ಕಂಡುಕೊಳ್ಳುವ ವಿಶಿಷ್ಟವಾದ ತೆರಿಗೆ ವ್ಯವಸ್ಥೆಯ ಮಾರ್ಗೋಪಾಯಗಳನ್ನು ಅವಲಂಬಿಸಿದೆ. ಪ್ರಸ್ತುತ ಜಿಎಸ್‌ಟಿಗೆ ಭಾರತದ ಒಕ್ಕೂಟ ವ್ಯವಸ್ಥೆಯ ಸಂಬಂಧವನ್ನು ವ್ಯಾಖ್ಯಾನಿಸಲು ಹಲವು ವರ್ಷಗಳೇ ಹಿಡಿಯಲಿದೆ. ❑

# ಭಾರತದಲ್ಲಿ ತೆರಿಗೆ; ಪ್ರಗತಿಪರ ದಾಪುಗಾಲು

* ಮಾಲಿನಿ ಚಕ್ರವರ್ತಿ



**ಇನ್ನು ಮುಂದೆ ತೆರಿಗೆಯು ನಾಗರಿಕರಿಗೆ ಪ್ರಯಾಸದ ಹೊರೆಯಾಗದು ಮತ್ತು ಅನುಸರಣೆ ಯೋಗ್ಯವಾಗುವುದು. ನೇರ ತೆರಿಗೆ ವ್ಯಾಪ್ತಿ ವಿಸ್ತಾರಗೊಂಡು, ತೆರಿಗೆ ಸಂಕೀರ್ಣತೆ ಸರಳವಾಗಿ ದೇಶದ ಅಭಿವೃದ್ಧಿಗೆ ಪೂರಕ ಉತ್ತಮ ವ್ಯವಹಾರಿಕ ಅವಕಾಶ ಸಾಧ್ಯವಾಗಲಿದೆ.**

ನಮ್ಮ ದೈನಂದಿನ ಜೀವನದಲ್ಲಿ ಗೊತ್ತಿದ್ದೋ ಅಥವಾ ಗೊತ್ತಿಲ್ಲದೆಯೋ ಒಂದಲ್ಲ ಒಂದು ವಿಧದಲ್ಲಿ ನಾವು ಸರ್ಕಾರಕ್ಕೆ ತೆರಿಗೆಗಳನ್ನು ನೀಡುತ್ತಲೇ ಇರುತ್ತೇವೆ. ಸರ್ಕಾರದ ವಿವಿಧ ಕಾರ್ಯಯೋಜನೆಗಳ ನಿರ್ವಹಣೆಗಾಗಿ ಬಳಸುವ ಹಣಕಾಸಿನಲ್ಲಿ ನಾವು ನೀಡುವ ತೆರಿಗೆಗಳು ಅತ್ಯಂತ ಪ್ರಮುಖವಾಗಿರುತ್ತದೆ. ದೇಶದ ಅಭಿವೃದ್ಧಿ ಮತ್ತು ಪ್ರಗತಿಗಾಗಿ ಪೂರ್ತಿಗೊಳಿಸಲೇಬೇಕಾದ ಹಲವಾರು ಜವಾಬ್ದಾರಿಗಳನ್ನು ಸರ್ಕಾರ ಹೊಂದಿದೆ. ಇದರಲ್ಲಿ ಹೇಳಬೇಕಾದ ಕೆಲವು ಸರ್ಕಾರಿ ಕಾರ್ಯಪ್ರಕ್ರಿಯೆಗಳು ಹೀಗಿದೆ, ಸುವ್ಯವಸ್ಥೆಗಾಗಿ ಕಾನೂನು ನಿಯಮ ಪರಿಪಾಲನೆ, ಸಾರ್ವಜನಿಕ ವಸ್ತು ಮತ್ತು ಸೇವೆಗಳ ಪೂರೈಕೆ, ಭೌತಿಕ ಹಾಗೂ ಸಾಮಾಜಿಕ ಮೂಲಸೌಕರ್ಯಗಳ ನಿರ್ಮಾಣ, ಜನಸಾಮಾನ್ಯರ ಶಿಕ್ಷಣಕ್ಕಾಗಿ ಬಂಡವಾಳ ಹೂಡಿಕೆ, ಬಡತನ ನಿರ್ಮೂಲನೆ ಇತ್ಯಾದಿ. ತನ್ನ ಬಾಧ್ಯತೆಗಳಿಗೆ ಬದ್ಧವಾಗಿ ಕಾರ್ಯಚಟುವಟಿಕೆಗಳನ್ನು ಸಕಾಲಿಕವಾಗಿ ಸರಿಯಾಗಿ ಪೂರೈಸಲು, ಸರ್ಕಾರ ಸಾಕಷ್ಟು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕಾಗುತ್ತದೆ. ವಿವಿಧ ಕಾರ್ಯಚಟುವಟಿಕೆಗಳಿಗೆ ಅಗತ್ಯವಾದ ಆರ್ಥಿಕ ಆದಾಯವನ್ನು ಸರ್ಕಾರ ತೆರಿಗೆ, ಬಳಕೆದಾರರ ಶುಲ್ಕ, ಸೇವಾ ಶುಲ್ಕ, ಮತ್ತು ಎರವಲು ಸಾಲ ಮೂಲಕ ಹೊಂದಿಸಿಕೊಳ್ಳುತ್ತದೆ. ಯಾವುದೇ ಬಾಧ್ಯತೆಗಳ ಸೃಷ್ಟಿ ಅಥವಾ ಸಂಪತ್ತಿನ ನಷ್ಟ ಉಂಟಾಗದಂತೆ ಆರ್ಥಿಕ ಸಂಪನ್ಮೂಲ ಸಂಗ್ರಹ ವ್ಯವಸ್ಥೆಯನ್ನು ಆದಾಯ ಸ್ವೀಕೃತಿ ಅನ್ನುತ್ತಾರೆ. ಬಾಧ್ಯತೆಗಳ ಸೃಷ್ಟಿಸುವ ಅಥವಾ ಸಂಪತ್ತಿನ ಕಡಿತವಾಗುವ (ಹೂಡಿಕೆ ಹಿಂತೆಗೆಯುವ/ಸಂಪತ್ತನ್ನು ಮಾರುವ) ಮೂಲಕ ನಡೆಯುವ ಆರ್ಥಿಕ ಸಂಪನ್ಮೂಲ ಸಂಗ್ರಹ ವ್ಯವಸ್ಥೆಯನ್ನು ಬಂಡವಾಳ ಸ್ವೀಕೃತಿ ಅನ್ನುತ್ತಾರೆ. ಇಲ್ಲಿ ನಾವು ತಿಳಿಸಿದ ಉದಾಹರಣೆಗಳಾದ ತೆರಿಗೆ, ಬಳಕೆದಾರರ ಶುಲ್ಕ, ಮತ್ತು ಸೇವಾ ಶುಲ್ಕಗಳು ಆದಾಯ ಸ್ವೀಕೃತಿಗಳಾಗಿವೆ. ಅಲ್ಲದೆ, ಎರವಲು ಸಾಲ ಸರ್ಕಾರದ ಬಂಡವಾಳ ಸ್ವೀಕೃತಿ ರಶೀದಿಯಾಗಿದೆ.

**ತೆರಿಗೆ ಆದಾಯ ಮತ್ತು ತೆರಿಗೇತರ ಆದಾಯ**

ಸರ್ಕಾರದ ಆದಾಯ ಸ್ವೀಕೃತಿಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಅದುವೇ ತೆರಿಗೆ ಆದಾಯ ಮತ್ತು ತೆರಿಗೇತರ ಆದಾಯಗಳು. ತೆರಿಗೆ ಆದಾಯ, ಪಾವತಿಸಲೇ ಬೇಕಾದ ಕಾನೂನಾತ್ಮಕ ನಿಯಮ ಅನುಸಾರವಾಗಿ ಸಂಗ್ರಹಿಸಲಾದ ತೆರಿಗೆ ಹಣ. ತೆರಿಗೆಯೇತರ ಆದಾಯ, ಶುಲ್ಕ, ದಂಡ, ಬಳಕೆದಾರರ ಶುಲ್ಕ, ಬಡ್ಡಿ, ಸಾರ್ವಜನಿಕ ವಲಯದ ಸಂಸ್ಥೆಗಳ ಲಾಭಾಂಶಗಳ ಮೂಲಕ ಸಂಗ್ರಹಿಸಲಾದ ಹಣ. ಜಾಗತಿಕವಾಗಿ ಬಹುತೇಕ ಎಲ್ಲಾ ದೇಶಗಳಲ್ಲೂ ತೆರಿಗೆಗಳೇ ಸರ್ಕಾರದ ಆದಾಯದಲ್ಲಿ ಅತಿ ಪ್ರಮುಖ ಸ್ಥಾನ ಪಡೆದಿವೆ.

**ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ**

ತೆರಿಗೆಗಳನ್ನು ನೇರ ಅಥವಾ ಪ್ರತ್ಯಕ್ಷ ತೆರಿಗೆ ಹಾಗೂ ಪರೋಕ್ಷ ತೆರಿಗೆ ಎಂದು ಎರಡು ವಿಭಾಗದಲ್ಲಿ ಸಾಮಾನ್ಯವಾಗಿ ಗುರುತಿಸುತ್ತಾರೆ.

**ನೇರ ತೆರಿಗೆ:** ಇದು ನಾವು ಸರ್ಕಾರಕ್ಕೆ ನೇರವಾಗಿ ಸಲ್ಲಿಸುವ ತೆರಿಗೆಗಳಾಗಿದ್ದು, ಆದಾಯ, ಆಸ್ತಿ ಮತ್ತು ಸಂಪತ್ತುಗಳ ಮೇಲೆ

* ನವದೆಹಲಿ ಮೂಲದ ಯೋಜನಾ ಸಂಶೋಧನಾ ಸಂಸ್ಥೆಗೆ ಸೇರಿದವರು. E-mail : malini@cbgaindia.org

| ಪಟ್ಟಿ – 1 | |
|---|---|
| ನೇರ ತೆರಿಗೆಗಳು | ಪರೋಕ್ಷ ತೆರಿಗೆಗಳು |
| * **ಕಾರ್ಪೊರೇಟ್ ತೆರಿಗೆ:** ನೋಂದಾಯಿತ ಸಂಸ್ಥೆಗಳ (ರಾಷ್ಟ್ರೀಯ / ಬಹುರಾಷ್ಟ್ರೀಯ / ವಿದೇಶಿ ಸಂಸ್ಥೆಗಳು) ಆದಾಯದ ಮೇಲೆ ಹೇರಲಾಗುವ ತೆರಿಗೆಗಳು. ಭಾರತೀಯ ಸಂಸ್ಥೆಗಳ ಒಟ್ಟು ಆದಾಯದ ಮೇಲೆ ವಿಧಿಸಲಾಗುವ ತೆರಿಗೆ. ಇಲ್ಲಿ ಆದಾಯ ಮೂಲ ಮತ್ತು ರೀತಿ ಗಣನೆಗೆ ಬರುವುದಿಲ್ಲ. ವಿದೇಶಿ ಸಂಸ್ಥೆಗಳಿಗಾದರೆ, ಕೇವಲ ಭಾರತದೊಳಗೆ ನಡೆಸಲಾದ ವ್ಯವಹಾರಗಳಲ್ಲಿ ಸೃಷ್ಟಿಯಾದ ಆದಾಯಕ್ಕೆ ತೆರಿಗೆ ವಿಧಿಸಲಾಗುತ್ತದೆ.<br>**ವೈಯಕ್ತಿಕ ಆದಾಯ ತೆರಿಗೆ:** ಇದು ಆದಾಯ ತೆರಿಗೆ ಅಧಿನಿಯಮ 1961ರ ನಿಯಮದಂತೆ, ವ್ಯಕ್ತಿ, ಸಂಸ್ಥೆ ಇತ್ಯಾದಿಗಳ ವೈಯಕ್ತಿಕ ಆದಾಯಕ್ಕೆ ವಿಧಿಸುವ ತೆರಿಗೆ.<br>* ಷೇರುಗಳಲ್ಲಿ ನಿಯೋಜಿಸಿದ ಹಣ ಹೂಡಿಕೆಯಿಂದ ಬರುವ ಲಾಭಾಂಶದ ಆದಾಯವೂ ನೇರ ತೆರಿಗೆಯಲ್ಲಿ ಸೇರಿರುತ್ತದೆ. ಷೇರುಗಳ ಖರೀದಿ ಮತ್ತು ಮಾರಾಟ ವ್ಯವಹಾರದಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ. ಇದನ್ನು **ಸೆಕ್ಯೂರಿಟೀಸ್ ವಹಿವಾಟು ತೆರಿಗೆ** ಅನ್ನುತ್ತಾರೆ.<br>* **ಸಂಪತ್ತು ವೃದ್ಧಿ ತೆರಿಗೆ:** ಇದು ಸಂಪತ್ತು (ಭೌತಿಕ ಅಥವಾ ಆರ್ಥಿಕ) ಗಳ ಮೂಲದಿಂದ ಉಂಟಾಗುವ ಲಾಭಾಂಶದ / ಆದಾಯದ ಮೇಲೆ ಹೇರಲಾಗುವ ತೆರಿಗೆ. ಉದಾಹರಣೆಗಾಗಿ, ವ್ಯಕ್ತಿ ಹೊಂದಿರುವ ಸಂಪತ್ತುಗಳಾದ.. ಕಲಾಕೃತಿ, ಚಿನ್ನ, ಆಭರಣ, ವ್ಯಾಪಾರದ ಪಾಲುಗಾರಿಕೆ, ಮ್ಯೂಚುವಲ್ ಫಂಡ್, ಇತ್ಯಾದಿ ಗಳನ್ನು ಕನಿಷ್ಠಾವಧಿ ಅಥವಾ ದೀರ್ಘಾವಧಿಯ ಸಂಪತ್ತು ವೃದ್ಧಿ ತೆರಿಗೆ ಎಂದು ಸಂಪತ್ತು / ಆದಾಯ ವೃದ್ಧಿ ನಿಟ್ಟಿನಲ್ಲಿ ಲೆಕ್ಕಹಾಕಲಾಗುತ್ತದೆ. ಈ ವಸ್ತುಗಳ ಖರೀದಿ / ಮಾರಾಟ ಅವಧಿಯಲ್ಲಿ ಮೂಲ ಮೌಲ್ಯ ಮತ್ತು ಆನಂತರದ ದಿನಗಳಲ್ಲಾದ ಮೌಲ್ಯ ವರ್ಧನೆಯ ಅಂತರವನ್ನು ಸಂಪತ್ತಿನ ಲಾಭ/ನಷ್ಟ ಲೆಕ್ಕಾಚಾರದಲ್ಲಿ ಪ್ರತಿ ವರ್ಷವೂ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. * **ಸಂಪತ್ತು ತೆರಿಗೆ:** ಸಂಪತ್ತು ತೆರಿಗೆ ಅಧಿನಿಯಮ 1957ರ ಪ್ರಕಾರ ವೈಯಕ್ತಿಕವಾಗಿ ವ್ಯಕ್ತಿ ಅಥವಾ ಸಂಸ್ಥೆ ಹೊಂದಿರುವ ಸಂಪತ್ತು (ಆಸ್ತಿ / ವಸ್ತುಗಳ) ಮೇಲೆ ವಿಧಿಸಲಾಗುವ ತೆರಿಗೆ. ಹೂಡಿಕೆಗಳಾದ ಷೇರುಗಳು, ಡಿಬೆಂಚರುಗಳು, ಮ್ಯೂಚುವಲ್ ಫಂಡ್‌ಗಳೇ ಮುಂತಾದವುಗಳಿಗೆ ಸಂಪತ್ತು ತೆರಿಗೆ ಅನ್ವಯವಾಗುವುದಿಲ್ಲ. 2015-16ರಲ್ಲಿ ಸಂಪತ್ತು ತೆರಿಗೆ ಯನ್ನು ನಿಷೇಧಿಸಲಾಗಿದ್ದರೂ, ಅತ್ಯಂತ ಶ್ರೀಮಂತರ ಪಾಲಿಗೆ ಹೆಚ್ಚುವರಿ ಅಧಿಕರ (ಮೇಲ್ತೆರಿಗೆ) ರೀತಿಯಲ್ಲಿ ವಿಧಿಸಲಾಗುತ್ತಿದೆ. ಉತ್ಪಾದನಾ ಸಂಪತ್ತು (ಆಸ್ತಿ / ವಸ್ತುಗಳ) ಗಳ ಮೇಲೆ ಸಂಪತ್ತು ತೆರಿಗೆ ವಿಧಿಸಲಾಗುವುದಿಲ್ಲ.<br>* **ಆಸ್ತಿ ತೆರಿಗೆ:** ಭಾರತೀಯ ಆದಾಯ ತೆರಿಗೆ ಅನುಸಾರವಾಗಿ, ಆಸ್ತಿಯಿಂದ ಬರುವ ಆದಾಯವನ್ನು ಮುಖ್ಯ ಆದಾಯ ರೀತಿಯಲ್ಲಿ ಪರಿಗಣಿಸಲಾಗುತ್ತದೆ. ಆದುದರಿಂದ ಆಸ್ತಿಯಿಂದ ಬರುವ ಆದಾಯಕ್ಕೆ ತೆರಿಗೆ ಅನ್ವಯವಾಗುತ್ತದೆ. ಉದಾಹರಣೆಗೆ, ಕಟ್ಟಡಗಳು, ಫ್ಲಾಟ್, ಅಂಗಡಿ ಮತ್ತು ಭೂಮಿ ಇತ್ಯಾದಿ. | * **ಅಬಕಾರಿ ಶುಲ್ಕ :** ಇವುಗಳನ್ನು ಕೆಲವು ಪ್ರಕಾರದ ವಸ್ತುಗಳಿಗೆ ವಿಧಿಸಲಾಗುತ್ತದೆ, ಆವುಗಳು ನಮ್ಮ ದೇಶದಲ್ಲೇ ಉತ್ಪಾದನೆಯಾಗಿ, ನಮ್ಮ ದೇಶದೊಳಗಡೆ ಮಾರಾಟ ಹಾಗೂ ಬಳಕೆಗಾಗಿ ಇರುತ್ತವೆ.<br>* **ಮಾರಾಟ ತೆರಿಗೆ :** ಇದು ಕೆಲವೊಂದು ತೆರಿಗೆಗೆ ಅರ್ಹವಾದ ವಸ್ತುಗಳ ವಿನಿಮಯ/ಮಾರಾಟ/ಖರೀದಿ ವೇಳೆ ವಸ್ತುವಿನ ಒಟ್ಟು ಮೌಲ್ಯದ ಆಧಾರದಲ್ಲಿ ಪ್ರತಿಶತ ರೀತಿಯಲ್ಲಿ ವಿಧಿಸಲಾಗುವ ತೆರಿಗೆ.<br>* **ಮೌಲ್ಯ ವರ್ಧಿತ ತೆರಿಗೆ :** ವಸ್ತುವಿನ ಉತ್ಪಾದನೆಯಿಂದ ಹಿಡಿದು ಮಾರಾಟ ತನಕದ, ಗ್ರಾಹಕರ ತನಕದ ಸಂಪೂರ್ಣ ಹಾದಿಯಲ್ಲಿ ವಿವಿಧ ಹಂತಗಳ ಮೌಲ್ಯ ಹೆಚ್ಚಳದ ಆಧಾರದಲ್ಲಿ ವಿಧಿಸಲಾಗುವ ತೆರಿಗೆ. ಮೌಲ್ಯ ವರ್ಧಿತ ತೆರಿಗೆಯನ್ನು ಉತ್ಪಾದನೆಯ ಮೂಲ ಹಂತದಲ್ಲೇ ಪಾವತಿಸಲಾಗುತ್ತದೆ.<br>* **ಸೇವಾ ತೆರಿಗೆ :** ವಿವಿಧ ಸೇವಾ ಕಾರ್ಯಗಳಿಗಾಗಿ ವಿಧಿಸಲಾಗುವ ತೆರಿಗೆ. ಇದು ಸೇವೆ ಸಲ್ಲಿಸುವವರು ಪಾವತಿಸಬೇಕಾದ ತೆರಿಗೆ ಜವಾಬ್ದಾರಿಯಾಗಿರುತ್ತದೆ.<br>* **ಸೀಮಾ ಶುಲ್ಕ :** ಇದು ವಿದೇಶಿ ವಸ್ತುಗಳನ್ನು ನಮ್ಮ ದೇಶದೊಳಗೆ ತರುವಾಗ / ಆಮದು ಮಾಡುವಾಗ, ಹಾಗೂ ನಮ್ಮ ಉತ್ಪನ್ನಗಳನ್ನು ವಿದೇಶಗಳಿಗೆ ಮಾರಾಟ / ರಫ್ತು ಮಾಡುವಾಗ ಪಾವತಿಸಬೇಕಾದ ಶುಲ್ಕ. |

ಹೇರಲಾಗುವ ವಿವಿಧ ತೆರಿಗೆಗಳನ್ನು ನೇರ ತೆರಿಗೆ ಅನ್ನುತ್ತಾರೆ.

**ಪರೋಕ್ಷ ತೆರಿಗೆ:** ಇದು ನಾವು ಖರೀದಿಸುವ ವಿವಿಧ ದಿನಬಳಕೆ ವಸ್ತುಗಳ, ನಾವು ಮಾಡುವ ದೈನಂದಿನ ವ್ಯವಹಾರಿಕ ವಹಿವಾಟು ನಡವಳಿಗಳಿಗಾಗಿ ಪಾವತಿಸುವ ವಸ್ತು / ಸೇವಾ ಶುಲ್ಕ, ಅಬಕಾರಿ ಶುಲ್ಕ, ಸೀಮಾ ಶುಲ್ಕ, ಸೇವಾ ಶುಲ್ಕ, ಮಾರಾಟ ತೆರಿಗೆ, ಮೌಲ್ಯವರ್ಧಿತ ತೆರಿಗೆ ಇತ್ಯಾದಿಗಳಾಗಿದ್ದು, ಇವುಗಳನ್ನು ಪರೋಕ್ಷ ತೆರಿಗೆ ಅನ್ನುತ್ತಾರೆ.

## ವಿವಿಧ ನೇರ ಹಾಗೂ ಪರೋಕ್ಷ ತೆರಿಗೆಗಳು

ವಿವಿಧ ಪರೋಕ್ಷ ಆದಾಯ ಮೂಲಗಳು, ಉತ್ಪಾದನೆಯಿಂದ ಬರುವ ಆದಾಯ, ವಸ್ತುಗಳ ಉತ್ಪಾದನೆ ಮತ್ತು ಮಾರಾಟದ ಆದಾಯ, ಹೀಗೆ ಆರ್ಥಿಕಲೋಕದ ವಿನಿಮಯಗಳ ಮೂಲಕ ಸಂದಾಯವಾಗುವ ಸರ್ಕಾರದ ಹಣಗಳನ್ನು, ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಾಗಿ ವಿಂಗಡಿಸಲಾಗುತ್ತದೆ. ವಿವರ ಪಟ್ಟಿ-1ರಲ್ಲಿದೆ.

## ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ತೆರಿಗೆ ವಿಧಿಸುವ ಹಕ್ಕುಗಳು

ಭಾರತದ ಸಂವಿಧಾನ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ತೆರಿಗೆ ವಿಧಿಸುವ ಹಕ್ಕುಗಳನ್ನು ಸಮರ್ಪಕವಾಗಿ ವಿಂಗಡಿಸಿದೆ. ಆದ್ದರಿಂದ ತೆರಿಗೆ ಮತ್ತು ಶುಲ್ಕಗಳನ್ನು ಸರ್ಕಾರಗಳ ನಡುವೆ ಮೂರು ಹಂತಗಳ ಶ್ರೇಣಿಯಲ್ಲಿ ಉದಾ. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಎಂಬ ರೀತಿಯಲ್ಲಿ ವಿಭಾಗಿಸಲಾಗಿದೆ. * ಖಾಸಗಿ ಮತ್ತು ಸಂಸ್ಥೆಗಳ ಆದಾಯಕ್ಕೆ (ಕೃಷಿ ಆದಾಯ ತೆರಿಗೆ ಮಾತ್ರ ರಾಜ್ಯ ಸರಕಾರ ಪಾಲಿಗೆ) ವಿಧಿಸಲಾಗುವ ತೆರಿಗೆಗಳೆಲ್ಲಾ ಕೇಂದ್ರ ಸರ್ಕಾರದ ಪಾಲಿಗೆ ಇರುತ್ತದೆ. * ಪರೋಕ್ಷ ತೆರಿಗೆಯನ್ನು ಉತ್ಪಾದನೆ, ತಯಾರಿ ಮತ್ತು ಸೇವೆಗಳ ಮೇಲೆ ತೆರಿಗೆ ಹೇರುವ ಹಕ್ಕು ಕೇಂದ್ರ ಸರ್ಕಾರದ ಪಾಲಿಗೆ ಇರುತ್ತದೆ. ಇವುಗಳಲ್ಲಿ ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ, ಮಾರಾಟ ತೆರಿಗೆ, ಸೀಮಾ ಶುಲ್ಕಗಳೆಲ್ಲಾ ಕೇಂದ್ರ ಸರ್ಕಾರದ ಪಾಲಾಗಿರುತ್ತವೆ. * ರಾಜ್ಯ ಸರ್ಕಾರಗಳು ಕರ/ಶುಲ್ಕ ವಿಧಿಸುವ ಹಕ್ಕು ಹೊಂದಿವೆ: ಮಾರಾಟ ತೆರಿಗೆ, ಸ್ಟಾಂಪ್ ಡ್ಯೂಟಿ, (ಭೂಮಿ ವಿನಿಮಯ / ಮಾರಾಟ ಅವಧಿಯ ಶುಲ್ಕ), ರಾಜ್ಯ ಅಬಕಾರಿ (ಮಧ್ಯ ಉತ್ಪಾದನಾ ತೆರಿಗೆ), ಭೂಮಿ ತೆರಿಗೆ (ಕೃಷಿ ಭೂಮಿ / ಕೃಷಿಯೇತರ ಭೂಮಿಗಳ ಬಳಕೆಗಾಗಿ ತೆರಿಗೆ), ಮನೋರಂಜನಾ ತೆರಿಗೆ, ವೃತ್ತಿ ತೆರಿಗೆ. ಮಾರಾಟ ತೆರಿಗೆಯನ್ನು ಮೌಲ್ಯ ವರ್ಧಿತ ತೆರಿಗೆಯಾಗಿ 2005ರಿಂದ ಪರಿವರ್ತಿತಗೊಂಡಿದ್ದು, ಎಲ್ಲಾ ರಾಜ್ಯಗಳೂ ಮೌಲ್ಯ ವರ್ಧಿತ ತೆರಿಗೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿವೆ. * ಸ್ಥಳೀಯ ಆಡಳಿತ ಸಂಸ್ಥೆಗಳು ವಿಧಿಸುವ ತೆರಿಗೆಗಳು : ಸಂಪತ್ತಿನ (ಕಟ್ಟಡ ಇತ್ಯಾದಿ) ತೆರಿಗೆ, ಮಾರುಕಟ್ಟೆ ತೆರಿಗೆ, ನೀರು ಪೂರೈಕೆ, ಕೊಳಚೆ ನಿರ್ವಹಣೆ ಮುಂತಾದ ಸೇವಾ ಕಾರ್ಯಗಳಲ್ಲಿ ವಿಧಿಸಲಾಗುವ ತೆರಿಗೆಗಳು, ಆಕ್ಟ್ರಾಯ್ (ಸ್ಥಳೀಯವಾಗಿ ವಸ್ತುಗಳ ಬಳಕೆಗೆ ಆ ಪ್ರದೇಶದೊಳಗೆ ತರುವ ವೇಳೆಯಲ್ಲಿ ವಿಧಿಸುವ ತೆರಿಗೆ). ಆದರೆ, ಸ್ಥಳೀಯ ಆಡಳಿತ ಸಂಸ್ಥೆಗಳು ಬಹಳ ವರ್ಷಗಳ ಹಿಂದೆಯೇ ಆಕ್ಟ್ರಾಯ್‌ಯನ್ನು ನಿಲುಗಡೆಗೊಳಿಸಿವೆ.

### ಕೇಂದ್ರ ತೆರಿಗೆ ವ್ಯವಸ್ಥೆಯಲ್ಲಿ ಸಂಗ್ರಹಿಸುವ ಆದಾಯಗಳ ವಿತರಣೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆದಾಯ ಮತ್ತು ವೆಚ್ಚಗಳ ಜವಾಬ್ದಾರಿಗಳಲ್ಲಿ ಹಲವಾರು ಕಾರಣಗಳಿಗಾಗಿ ಅಸಮತೋಲನಗಳನ್ನು ಕಾಣಬಹುದು. ಈ ಅಸಮತೋಲನ ಸರಿದೂಗಿಸಲು, ಕೇಂದ್ರ ಹಣಕಾಸು ಆಯೋಗ ಆರ್ಥಿಕ ಸಂಪನ್ಮೂಲಗಳನ್ನು ಪ್ರತಿ ಐದು ವರ್ಷಗಳಿಗೊಮ್ಮೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೊಳ್ಳುವ ವ್ಯವಸ್ಥೆಯನ್ನು ಏರ್ಪಡಿಸುವ ಸಲಹೆ ನೀಡಿತು. ಇದರಲ್ಲಿ ಪ್ರಮುಖ ಅಂಶವೆಂದರೆ ಕೇಂದ್ರ ತೆರಿಗೆ ವ್ಯವಸ್ಥೆಯಲ್ಲಿ ಸಂಗ್ರಹಿಸುವ ಆದಾಯಗಳ ಅಂಶ ಹಂಚಿಕೊಳ್ಳುವ ಪ್ರಕ್ರಿಯೆ. ಕೇಂದ್ರಾಡಳಿತ ಪ್ರದೇಶಗಳ ಸೆಸ್, ಸರ್ಚಾರ್ಜ್, ಮತ್ತು ತೆರಿಗೆಗಳು ಮತ್ತು ಕೇಂದ್ರ ತೆರಿಗೆ ಸಂಗ್ರಹ ವ್ಯವಸ್ಥೆಗಾಗುವ ಒಟ್ಟು ಖರ್ಚುಗೆ ಸಮನಾದ ಅಂಶಗಳನ್ನು ಹೊರತಾಗಿ ಕೇಂದ್ರ ತೆರಿಗೆಯನ್ನು ಹಂಚಿಕೊಳ್ಳಬಹುದಾದ / ವಿಭಾಗಿಸಬಹುದಾದ ಸಂಗ್ರಹವಾಗಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. 14ನೇ ಹಣಕಾಸು ಆಯೋಗ (ಏಪ್ರಿಲ್ 1, 2015 ರಿಂದ ಆರಂಭ) ಆಧಾರದಲ್ಲಿ ಕೇಂದ್ರ ತೆರಿಗೆ ಸಂಗ್ರಹದಲ್ಲಿ 42 ಪ್ರತಿಶತ ಹಂಚಿಕೊಳ್ಳಬಹುದಾದ / ವಿಭಾಗಿಸಬಹುದಾದ ಸಂಗ್ರಹವಾಗಿ ಕೇಂದ್ರ ತೆರಿಗೆಯನ್ನು ರಾಜ್ಯಗಳಿಗೆ ಪ್ರತಿವರ್ಷವೂ ಹಂಚ್ಚಿಕೊಳ್ಳವ ಹಾಗೂ ಉಳಿದ 58% ಆದಾಯವನ್ನು ಕೇಂದ್ರ ಸರ್ಕಾರ ತನ್ನ ವಾರ್ಷಿಕ ಆಯವ್ಯಯಕ್ಕೆ ಬಳಸಬಹುದಾಗಿದೆ.

### ತೆರಿಗೆಯ ಸುಧಾರಣೆಗಳು

ಭಾರತವನ್ನು ಅತ್ಯುತ್ತಮ ತೆರಿಗೆ–ಸ್ನೇಹಿ ದೇಶವಾಗಿ ಮಾಡುವ ನಿಟ್ಟಿನಲ್ಲಿ, ತೆರಿಗೆಯ ವ್ಯವಸ್ಥೆ ಪ್ರಯಾಸ ಹಾಗೂ ಕ್ಲಿಷ್ಟತೆ ರಹಿತವಾಗಲು, ಈತನಕ ಹಲವಾರು ವರ್ಷಗಳಿಂದ ಹಲವು ಬಾರಿ ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆ ಪ್ರಕ್ರಿಯೆ ನೆಡೆದಿವೆ. ಅದರಲ್ಲೂ ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿ. ಇವುಗಳಲ್ಲ ಅತ್ಯಂತ ಪ್ರಮುಖವಾದುದು ಇನ್ನೇನು ಅನುಷ್ಠಾನಗೊಳ್ಳಲಿರುವ ನೂತನ ಸರಕು ಮತ್ತು ಸೇವಾ ತೆರಿಗೆ. 2005 ರಲ್ಲಿ ಮಾರಾಟ ತೆರಿಗೆ ಬದಲಾಗಿ ಮೌಲ್ಯ ವರ್ಧಿತ ತೆರಿಗೆ ಜಾರಿಗೆ ಬಂದಾಗ ಇದರ ಹೊರತಾಗಿಯೂ ವಿಧಿಸುತ್ತಿದ್ದ ಇನ್ನೂ ಹಲವಾರು ಪರೋಕ್ಷ ತೆರಿಗೆಗಳು ಅನುಷ್ಠಾನದಲ್ಲಿದ್ದವು. ಉತ್ಪಾದನೆಯ ಹಂತದಿಂದ ಗ್ರಾಹಕನ ತನಕ ಬಹುವಿಧದ

| ಭಾರತದ ತೆರಿಗೆ–ಜಿಡಿಪಿ ಅನುಪಾತ (ಕೇಂದ್ರ ಮತ್ತು ರಾಜ್ಯ ಜೊತೆಯಾಗಿ) (% ರಲ್ಲಿ) | | | |
|---|---|---|---|
| ವರ್ಷಗಳು | ಒಟ್ಟು ತೆರಿಗೆ–ಜಿಡಿಪಿ ಅನುಪಾತ | ನೇರ ತೆರಿಗೆ–ಜಿಡಿಪಿ ಅನುಪಾತ | ಪರೋಕ್ಷ ತೆರಿಗೆ–ಜಿಡಿಪಿ ಅನುಪಾತ |
| 2001–02 | 13.39 | 3.11 | 10.28 |
| 2002–03 | 14.08 | 3.45 | 10.63 |
| 2003–04 | 14.59 | 3.86 | 10.73 |
| 2004–05 | 15.25 | 4.23 | 11.02 |
| 2005–06 | 15.91 | 4.54 | 11.37 |
| 2006–07 | 17.15 | 5.39 | 11.77 |
| 2007–08 | 17.45 | 6.39 | 11.06 |
| 2008–09 | 16.26 | 5.83 | 10.43 |
| 2009–10 | 15.5 | 5.8 | 9.6 |
| 2010–11 | 16.3 | 5.8 | 10.50 |
| 2011–12 | 16.3 | 5.6 | 10.7 |
| 2012–13 | 16.9 | 5.6 | 11.3 |
| 2013–14(ಪ.ಅ) | 17.1 | 5.7 | 11.4 |
| 2014–15 (ಆ.ಅ) | 17.4 | 5.8 | 11.6 |

* ಸೂಚನೆ:– (ಪ.ಅ) – ಪರಿಷ್ಕೃತ ಅಂದಾಜು / (ಆ.ಅ) – ಆಯವ್ಯಯ ಅಂದಾಜು

* ಕೋಷ್ಟಕ ಆಕರ ಮೂಲ:– ಭಾರತೀಯ ಸಾರ್ವಜನಿಕ ಹಣಕಾಸು ಅಂಕಿಸಂಖ್ಯೆ 2014–15, ಹಣಕಾಸು ಸಚಿವಾಲಯ, ಭಾರತ ಸರ್ಕಾರ.



ಹಲವು ತೆರಿಗೆಗಳಿಗೆ ಒಳಪಟ್ಟು ವಸ್ತು ಸಾಗುತ್ತದೆ. ಈಗ ಅಖಿಲ ಭಾರತ ಮಟ್ಟದಲ್ಲಿ ಏಕರೂಪದ ಕೇವಲ ಒಂದು ತೆರಿಗೆಯನ್ನು ಉತ್ಪಾದನಾ ಹಂತದ ಮೂಲದಲ್ಲಿ ಮಾತ್ರ ಪಾವತಿಸುವ ಅಧುನಿಕ ಸುಧಾರಿತ ತೆರಿಗೆ ವ್ಯವಸ್ಥೆ ಸದ್ಯದಲ್ಲೇ ದೇಶದಾದ್ಯಂತ ಜಾರಿಗೊಳ್ಳಲಿದೆ. ಇನ್ನು ಮುಂದೆ ಪೆಟ್ರೋಲಿಯಮ್, ತಂಬಾಕು, ಮದ್ಯ ಇತ್ಯಾದಿ ಕೆಲವು ವಸ್ತುಗಳನ್ನು ಹೊರತುಪಡಿಸಿ ಸರ್ವ ಉತ್ಪನ್ನಗಳಿಗೂ ಒಂದೇ ಜಿ.ಎಸ್.ಟಿ ತೆರಿಗೆ ಕಾನೂನು ಅನ್ವಯವಾಗುತ್ತದೆ. ಆದರೂ ಜಿ.ಎಸ್.ಟಿ ತೆರಿಗೆಯಲ್ಲಿ ಎರಡು ಭಾಗಗಳಿರುತ್ತವೆ. 1) ಕೇಂದ್ರ ಜಿ.ಎಸ್.ಟಿ 2) ರಾಜ್ಯ ಜಿ.ಎಸ್ ಟಿ. ಅಲ್ಲದೆ, ಎ. ಸುಬ್ರಮಣಿಯನ್ ನೇತೃತ್ವದ ಸಮಿತಿಯ ಶಿಫಾರಸಿನಂತೆ ತೆರಿಗೆ ದರಗಳ ಸಂಖ್ಯೆ ಕನಿಷ್ಟವಾಗಲಿದೆ.

1) ಬಹುತೇಕ ವಸ್ತು ಮತ್ತು ಸೇವೆಗಳಿಗೆ ಸಾಧಾರಣ ಮಾನದಂಡದ ನಿಶ್ಚಿತ ತೆರಿಗೆ ದರ. 2) ಆವಶ್ಯಕ ವಸ್ತುಗಳಿಗೆ ಕನಿಷ್ಠ ತೆರಿಗೆ ದರ 3) ವಿಲಾಸ ಜೀವನ ವಸ್ತುಗಳಿಗೆ ಹೆಚ್ಚಿನ ತೆರಿಗೆ ದರ. ಈ ಮೂಲಕ ದೇಶದಾದ್ಯಂತ ಉತ್ಪಾದನೆ ಮತ್ತು ಮಾರಾಟ ಹಾಗೂ ಸೇವೆಗಳಿಗೆ ಕೇಂದ್ರ ಮತ್ತು ರಾಜ್ಯಗಳು ಒಂದು ಕನಿಷ್ಠ ತೆರಿಗೆದರ ವಿಧಿಸುವ ವ್ಯವಸ್ಥೆ ಸೃಷ್ಟಿಯಾಗಲಿದೆ. ದೇಶದಲ್ಲಿ ತೆರಿಗೆ ವ್ಯವಸ್ಥೆ ಸರಳಗೊಳ್ಳಲಿದೆ, ನ್ಯಾಯಯುತವಾಗಲಿದೆ ಮತ್ತು ಸಂಕ್ಲಿಷ್ಟತೆಯಿಂದ ತೆರಿಗೆ ವ್ಯವಸ್ಥೆ ಹೊರ ಬರಲಿದೆ. ಇನ್ನು ಮುಂದೆ ತೆರಿಗೆಯು ನಾಗರಿಕರಿಗೆ ಪ್ರಯಾಸದ ಹೊರೆಯಾಗದು ಮತ್ತು ಅನುಸರಣೆಯೋಗ್ಯವಾಗುವುದು. ದೇಶದ ತೆರಿಗೆ–ಜಿಡಿಪಿ ಅನುಪಾತ ಹೆಚ್ಚಲಿದೆ ಮತ್ತು ಪ್ರಗತಿಯ ಹೆಜ್ಜೆಗಳು ಸುಗಮವಾಗಲಿವೆ. ನೇರ ತೆರಿಗೆ ವ್ಯಾಪ್ತಿ ವಿಸ್ತಾರಗೊಂಡು, ತೆರಿಗೆ ಸಂಕೀರ್ಣತೆ ಸರಳವಾಗಿ ದೇಶದ ಅಭಿವೃದ್ಧಿಗೆ ಪೂರಕ ಉತ್ತಮ ವ್ಯವಹಾರಿಕ ಅವಕಾಶ ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಸುಧಾರಣೆಯ ನವಪರ್ವ ಸೃಷ್ಟಿಸುವ ಕಾರ್ಯಯೋಜನೆಗೆ ಭಾರತ ಸರ್ಕಾರ ಮುಂದಾಗಿದೆ. ❑

# ಜಿಎಸ್‌ಟಿ; ಅಂತಾರಾಷ್ಟ್ರೀಯ ಅನುಭವ

* ಪ್ರವಾಕರ್ ಸಾಹೂ
** ಅಶ್ವನಿ ಬಿಷ್ಣೋಯಿ




ಇಡೀ ರಾಷ್ಟ್ರಕ್ಕೆ ಅನ್ವಯವಾಗುವ, ಏಕರೂಪದ ಜಿಎಸ್‌ಟಿ ಜಾರಿಗೆ ಬರುವುದರಿಂದ ಅಪಾರ ಪ್ರಮಾಣದ ತೆರಿಗೆ ಸಂಗ್ರಹವಾಗುವ ಜೊತೆಗೆ, ತೆರಿಗೆ ಭಾರ ಕಡಿಮೆಯಾಗುವುದು, ಎಲ್ಲ ರಾಜ್ಯಗಳ ನಡುವೆ ಸರಕುಗಳ ಸರಳ ಸಾಗಣೆ ಹಾಗೂ ತ್ವರಿತ ಸೇವೆ ಸಾಧ್ಯವಾಗಲಿದೆ. ಉತ್ಪಾದನಾ ನಿರತ ಸಂಸ್ಥೆಗಳಿಗೆ ಹೆಚ್ಚು ಸರಕು ಸಾಗಿಸಲು ಸಾಧ್ಯವಾಗಲಿದೆ.

ಭಾರತದ ಆರ್ಥಿಕ ಸುಧಾರಣೆಗೆ ಸಂಬಂಧಿಸಿದ ಬಹು ನಿರೀಕ್ಷಿತ, ಸರಳೀಕೃತ ಹಾಗೂ ಸುಧಾರಿತ ತೆರಿಗೆ ದರ ಪದ್ಧತಿಗೆ 2016ರ ಆಗಸ್ಟ್ 3ರಂದು ಸಂಸತ್ತಿನಲ್ಲಿ ಅಂಗೀಕಾರ ದೊರೆಯಿತು. ಇದು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಅತಿದೊಡ್ಡ ತೆರಿಗೆ ಸುಧಾರಣೆ ಹಾಗೂ 1991ರಲ್ಲಿ ಜಾರಿಗೊಂಡ ರಚನಾತ್ಮಕ ಸುಧಾರಣೆ ನಂತರದ ಬೃಹತ್ ಆರ್ಥಿಕ ಸುಧಾರಣೆಯೂ ಆಗಿದೆ. ಈ ಮಸೂದೆಗೆ ಸಂಬಂಧಿಸಿದಂತೆ ಕಳೆದ 11 ವರ್ಷಗಳಿಂದ ಉಂಟಾಗಿದ್ದ ರಾಜಕೀಯ ಬಿಕ್ಕಟ್ಟು, ಚರ್ಚೆ ಹಾಗೂ ಸಂವಾದದ ಹಂತಗಳನ್ನು ದಾಟಿ ಕೊನೆಗೂ ಸಂಸತ್ತಿನ ಅಂಗೀಕಾರ ನೀಡಲಾಯಿತು.

ಹೆಸರೇ ಹೇಳುವಂತೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪದ್ಧತಿಯು ಈಗಾಗಲೇ ಅಸ್ತಿತ್ವದಲ್ಲಿ ಇರುವ ಕೇಂದ್ರ ಹಾಗೂ ರಾಜ್ಯಗಳು ವಿಧಿಸುವ 15 ತೆರಿಗೆಗಳನ್ನು ಒಂದುಗೂಡಿಸಿ ಒಂದೇ ತೆರಿಗೆಯನ್ನು ರೂಪಿಸುತ್ತದೆ. ಇದರಿಂದ ಎಲ್ಲಾ ರಾಜ್ಯಗಳಲ್ಲಿ ಒಂದೇ ಪರೋಕ್ಷ ತೆರಿಗೆ ಇರಲಿದ್ದು, ದೇಶವನ್ನು ಏಕೀಕೃತ ಮಾರುಕಟ್ಟೆಯನ್ನಾಗಿ ಮಾಡುವುದು. ತೆರಿಗೆ ಆಕರಣೆಗೆ ಸಂಬಂಧಿಸಿದಂತೆ 2017ರ ಏಪ್ರಿಲ್‌ನಿಂದ ರಾಜ್ಯ ರಾಜ್ಯಗಳ ನಡುವೆ ಯಾವುದೇ ಭಿನ್ನತೆ ಇರದು. ಬರುವ ದಿನಗಳಲ್ಲಿ ಭಾರಿ ಬದಲಾವಣೆಗೆ ಕಾರಣವಾಗುವ ಈ ಐತಿಹಾಸಿಕ ನಿರ್ಣಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮಹತ್ತರ ಮೈಲಿಗಲ್ಲು ಎಂದೇ ಹೇಳಬಹುದು. ಆದರೆ, ಜಿಎಸ್‌ಟಿ ದರ ಎಷ್ಟಿರಬೇಕು ಎಂಬುದನ್ನು ನಿರ್ಧರಿಸುವ ಜೊತೆಗೆ ಈ ತೆರಿಗೆ ಪದ್ಧತಿಯನ್ನು ಜಾರಿಗೆ ತರುವಲ್ಲಿ ಎದುರಾಗಬಹುದಾದ ಅನೇಕ ವಿಷಯಗಳನ್ನು ಬಗೆಹರಿಸಬೇಕಾಗಿದೆ. ಸದ್ಯ ಜಾರಿಯಲ್ಲಿರುವ ಕೇಂದ್ರದ ಮೌಲ್ಯವರ್ಧಿತ ತೆರಿಗೆ (ಸಿಇಎನ್‌ವಿಎಟಿ) ಮತ್ತು ರಾಜ್ಯದ ವ್ಯಾಟ್ ಪದ್ಧತಿ ವಿವಿಧ ಆಯಾಮದ ಪರಿಣಾಮ ಹೊಂದಿವೆ. ಈ ಎರಡು ತೆರಿಗೆ ಪದ್ಧತಿಗಳ ನಡುವೆ ಸಂಬಂಧ ಇಲ್ಲದ ಕಾರಣ ಅಂತಿಮವಾಗಿ ಗ್ರಾಹಕನ ಮೇಲೆ ಹೆಚ್ಚಿನ ತೆರಿಗೆ ಹೊರೆ ಬೀಳುತ್ತದೆ. ಕೇಂದ್ರ ಹಾಗೂ ರಾಜ್ಯಗಳಿಂದ ಬೇರೆ ಬೇರೆ ತೆರಿಗೆ ಆಕರಣೆ ಹಾಗೂ ರಾಜ್ಯಗಳ ವ್ಯಾಟ್‌ನಲ್ಲಿನ ವ್ಯತ್ಯಾಸದ ಹೊರೆಯೂ ಗ್ರಾಹಕನ ತಲೆ ಮೇಲೆ ಬೀಳುತ್ತದೆ.

ಸಂಕೀರ್ಣವಾಗಿರುವ ತೆರಿಗೆ ಪದ್ಧತಿ ಹಾಗೂ ಕೇಂದ್ರ–ರಾಜ್ಯಗಳು ವಿಧಿಸುವ ಬಹು ಹಂತದ ತೆರಿಗೆ ದರ ದೇಶದಲ್ಲಿ ಬಂಡವಾಳ ಹೂಡುವವರಿಗೆ ಹಾಗೂ ಕೈಗಾರಿಕೆಗಳ ಮುಂದಿರುವ ದೊಡ್ಡ ಸವಾಲು. ಇಂತಹ ತೆರಿಗೆ ಪದ್ಧತಿಗೆ ಹೊಂದಿಕೊಂಡು ನಡೆಯಲು ಬಹಳಷ್ಟು ಸಮಯ ಹಾಗೂ ಹಣ ವ್ಯಯಿಸಬೇಕಾಗುತ್ತದೆ. ಇತರ ಜೊತೆಗೆ, ಈ ತೆರಿಗೆ ಪದ್ಧತಿಯಲ್ಲಿ ಸರಳೀಕೃತ ವ್ಯವಸ್ಥೆ ಜಾರಿಯಾಗಬೇಕು ಎನ್ನುವುದು ಉದ್ದಿಮೆ ಹಾಗೂ ಹೂಡಿಕೆದಾರರ ಕಳೆದ ಹಲವು ದಶಕಗಳ ಬೇಡಿಕೆಯಾಗಿತ್ತು. ಹೀಗಾಗಿ ಸರಕು ಮತ್ತು ಸೇವೆಗಳ ಮೇಲಿನ ತೆರಿಗೆಗಳನ್ನು ಒಟ್ಟುಗೂಡಿಸಿ ಸದರಿ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳಲು ಭರಿಸಬೇಕಾದ ವೆಚ್ಚ ತಗ್ಗಲಿದೆ. ಅಲ್ಲದೇ ತೆರಿಗೆಯ ಲಾಭವೂ ಒಂದೇ ಹಂತದಲ್ಲಿ ಸಿಗಲಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಸದ್ಯ

* ಸಹ ಪ್ರಾಧ್ಯಾಪಕರು, ಆರ್ಥಿಕ ಅಭಿವೃದ್ಧಿ ಸಂಸ್ಥೆ, ನವದೆಹಲಿ. E-mail : pravakarfirst@gmail.com
* ಸಹಾಯಕ ಪ್ರಾಧ್ಯಾಪಕರು, ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ, ಕುರುಕ್ಷೇತ್ರ. E-mail : ashwani.mbe@gmail.com

ಜಾರಿಯಲ್ಲಿರುವ ವ್ಯಾಟ್ ಪದ್ಧತಿಯಲ್ಲಿ ಹಲವಾರು ಲೋಪದೋಷಗಳಿವೆ. ಕೇಂದ್ರ ವಿಧಿಸುವ ತೆರಿಗೆ ಕಚ್ಚಾ ವಸ್ತುಗಳ ಮೇಲಿರಲಿದ್ದು ಉತ್ಪಾದನೆ ನಂತರ ವೆಚ್ಚಗಳಿಗೆ ಅನ್ವಯವಾಗುವುದು. ಸೇವಾ ತೆರಿಗೆಯನ್ನು ಸಹ ಕೆಲವೇ ಉತ್ಪನ್ನಗಳಿಗೆ ವಿಧಿಸಲಾಗುತ್ತದೆ. ಇದರಿಂದಾಗಿ, ಉತ್ಪಾದನಾ ಹಂತದಲ್ಲಿನ ತೆರಿಗೆಯನ್ನು ಜಮೆ ಮಾಡುವಲ್ಲಿ ಸಾಕಷ್ಟು ತೊಂದರೆ ಎದುರಿಸಬೇಕಾಗುತ್ತದೆ. ಆದರೆ, ಸಮಗ್ರವಾಗಿರುವ ಜಿಎಸ್‌ಟಿ ಪದ್ಧತಿ ಜಾರಿಯಾಗುವುದರಿಂದ ಸರಕು ಮತ್ತು ಸೇವೆಗಳ ಮೇಲೆ ತೆರಿಗೆ ವಿಧಿಸಲಾಗುವುದರಿಂದ, ಈ ಹಿಂದಿನ ಪದ್ಧತಿಯಲ್ಲಿದ್ದ ಅಡೆತಡೆಗಳನ್ನು ನಿವಾರಿಸಲು ಸಾಧ್ಯ.

ಸಿಎಸ್‌ಟಿಯನ್ನು ಸಮಗ್ರ ಸರಕು ಮತ್ತು ಸೇವೆಗಳ ತೆರಿಗೆ (ಐಜಿಎಸ್‌ಟಿ) ಪದ್ಧತಿಯ ಸಿಎಸ್‌ಟಿ ಬದಲಾಗಿ ಜಾರಿಗೆ ಬರಲಿದೆ. ಇದು ರಾಜ್ಯಗಳ ನಡುವಿನ ಸರಕುಗಳ ಪೂರೈಕೆ ಅಥವಾ ಸೇವೆಗಳ ಮೇಲೆ ವಿಧಿಸಬಹುದಾದ ತೆರಿಗೆಯಾಗಿದ್ದು, ಇದನ್ನು ಕೇಂದ್ರ ಸರ್ಕಾರ ಸಂಗ್ರಹಿಸುವುದು. ಅಲ್ಲದೇ ನೂತನ ತೆರಿಗೆ ಪದ್ಧತಿಯು ಸರಕು ಮತ್ತು ಸೇವೆಗಳ ಆಮದಿಗೂ ಅನ್ವಯವಾಗುವುದು.

ಈ ನೂತನ ಜಿಎಸ್‌ಟಿ ಸರಕು ತಲುಪುವ/ಸೇವೆ ಪಡೆಯುವ ಸ್ಥಳಕ್ಕೆ ಸಂಬಂಧಿಸಿದ್ದು ಆಗಿರುವುದರಿಂದ, ಒಂದು ಉತ್ಪನ್ನದ ಉತ್ಪಾದನೆ ಮಾಡುವ ರಾಜ್ಯದ ಬದಲಾಗಿ ಉತ್ಪನ್ನ ತಲುಪುವ / ಸ್ವೀಕರಿಸುವ ರಾಜ್ಯಕ್ಕೆ ತೆರಿಗೆಯ ಭಾರ ಬೀಳುವುದು. ಹೀಗಾಗಿ ಉತ್ಪಾದನಾ ನಿರತ ಹಾಗೂ ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಕಡಿಮೆ ಆದಾಯ ಸಿಗಲಿದೆ. ರಾಜಸ್ವ ಸಂಗ್ರಹ ಕಡಿಮೆಯಾಗುವ ರಾಜ್ಯಗಳಿಗೆ ಮೊದಲ 5 ವರ್ಷಗಳ ಅವಧಿ ವರೆಗೆ ನಷ್ಟವನ್ನಭರಿಸಲಾಗುತ್ತದೆ. ಆದರೆ, ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ಸಲುವಾಗಿ ಸಾಕಷ್ಟು ವೆಚ್ಚ ಮಾಡಿರುವ, ಅಭಿವೃದ್ಧಿಗಾಗಿ ಕೈಗಾರಿಕೆಗಳನ್ನು ಆರಂಭಿಸಿರುವ ರಾಜ್ಯಗಳಿಗೆ ಇದು ಒಳ್ಳೆಯ ಸುದ್ದಿಯಲ್ಲ. ಹೀಗಾಗಿ ಗ್ರಾಹಕ ಅಥವಾ ಸರಕು/ಸೇವೆ ಪಡೆಯು ರಾಜ್ಯಗಳೆನಿಸಿರುವ ಒಡಿಶಾ, ಉತ್ತರ ಪ್ರದೇಶ, ಬಿಹಾರ, ಕೇರಳ ಲಾಭ ಪಡೆಯಲಿದ್ದರೆ, ಉತ್ಪಾದನಾ ಚಟುವಟಿಕೆ ಉತ್ತಮವಾಗಿರುವ ತಮಿಳುನಾಡು, ಗುಜರಾತ್ ಮತ್ತು ಮಹಾರಾಷ್ಟ್ರ ನಷ್ಟ ಅನುಭವಿಸಲಿವೆ.

ಆದರೆ, ಒಂದಂತೂ ಸತ್ಯ, ಒಂದು ಪರೋಕ್ಷ ತೆರಿಗೆ ಪದ್ಧತಿಯು ದೇಶಾದ್ಯಂತ ಜಾರಿಗೆ ಬರಲಿದ್ದರೆ ಒಂದೇ ಸಾಮಾನ್ಯ ಮಾರುಕಟ್ಟೆ ಸೃಷ್ಟಿಯಾಗಿ ಗ್ರಾಹಕರಿಗೆ ತೆರಿಗೆ ಭಾರ ಕಡಿಮೆಯಾಗಲಿದೆ. ಲಾಭದ ದೃಷ್ಟಿಯಿಂದ ಆಕರ್ಷಕ ಕ್ಷೇತ್ರಗಳೆನಿಸಿರುವ ಅಲ್ಕೋಹಾಲ್ ಉತ್ಪನ್ನಗಳು, ವಿದ್ಯುತ್, ರಿಯಲ್ ಎಸ್ಟೇಟ್, ಹಾಗೂ ಪೆಟ್ರೋಲಿಯಂ ಉತ್ಪನ್ನ ಒಳಗೊಂಡಿರುವ ಉದ್ಯಮಗಳಿಗೆ ಜಿಎಸ್‌ಟಿ ಅನ್ವಯವಾಗದು. ಈ ಉದ್ಯಮ ಕ್ಷೇತ್ರಗಳಿಗೆ ರಾಜ್ಯಗಳು ತಮ್ಮದೇ ಆದ ತೆರಿಗೆಯನ್ನು ವಿಧಿಸಲಿವೆ.

ಆದರೆ, ಸಾಮಾನ್ಯ ಬಳಕೆಯ ವಸ್ತುಗಳ ದರ ನಿಗದಿ ಮಾಡುವುದರ ಮೇಲೆ ಭಾರಿ ಪ್ರಭಾವವನ್ನು ಹೊಂದಿರುವ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಲಾಗುತ್ತದೆ. ಆದರೆ, ಈ ಪ್ರಕ್ರಿಯೆಯು ಜಿಎಸ್‌ಟಿ ಜಾರಿ ಬಗ್ಗೆ ಜಿಎಸ್‌ಟಿ ಪರಿಷತ್ ದಿನಾಂಕ ನಿಗದಿ ಮಾಡಿ ಅಧಿಸೂಚನೆ ಹೊರಡಿಸಿದ ನಂತರ ನಡೆಯಲಿದೆ.

ಇಡೀ ರಾಷ್ಟ್ರಕ್ಕೆ ಅನ್ವಯವಾಗುವ, ಏಕರೂಪದ ಜಿಎಸ್‌ಟಿ ಜಾರಿಗೆ ಬರುವುದರಿಂದ ಅಪಾರ ಪ್ರಮಾಣದ ತೆರಿಗೆ ಸಂಗ್ರಹವಾಗುವ ಜೊತೆಗೆ, ತೆರಿಗೆ ಭಾರ ಕಡಿಮೆಯಾಗುವುದು, ಎಲ್ಲ ರಾಜ್ಯಗಳ ನಡುವೆ ಸರಕುಗಳ ಸರಳ ಸಾಗಣೆ ಹಾಗೂ ತ್ವರಿತ ಸೇವೆ ಸಾಧ್ಯವಾಗಲಿದೆ. ಉತ್ಪಾದನಾ ನಿರತ ಸಂಸ್ಥೆಗಳಿಗೆ ಹೆಚ್ಚು ಸರಕು ಸಾಗಿಸಲು ಸಾಧ್ಯವಾಗಲಿದೆ. ಕಚ್ಚಾವಸ್ತು ಪಡೆಯಲು, ಉತ್ಪನ್ನಗಳ ಸಾಗಾಟ, ಮಾರಾಟಕ್ಕೆ ಸಾರಿಗೆ ವ್ಯವಸ್ಥೆಯ ಬೆಂಬಲ ಸಿಗಲಿದೆ. ಇದು ಹೆಚ್ಚುವರಿ ತೆರಿಗೆ ಭಾರ ಇಲ್ಲದೆಯೇ ಸಾಧ್ಯವಾಗುವುದು, ಅಂತಿಮವಾಗಿ ಇದು ಉತ್ಪಾದನಾ ರಂಗಕ್ಕೆ ಉತ್ತೇಜನ ನೀಡುವುದು, ವಹಿವಾಟಿನ ವೆಚ್ಚವೂ ಕಡಿಮೆಯಾಗಿ ಗ್ರಾಹಕರಿಗೆ ಲಾಭವಾಗುವುದು.

ಪ್ರಸ್ತುತ ಜಾರಿಯಲ್ಲಿರುವ ತೆರಿಗೆ ಪದ್ಧತಿ ದುರುಪಯೋಗಕ್ಕೆ ಸುಲಭವಾಗಿ ತುತ್ತಾಗುತ್ತದೆ. ಉತ್ಪಾದನೆ ಮತ್ತು ಸಾರಿಗೆಗಾಗಿ ಉದ್ಯಮಿಗಳು ಕಡಿಮೆ ಕರ ವಿಧಿಸಲಾಗುವ ಸ್ಥಳ ಹಾಗೂ ಆಡಳಿತ ವ್ಯವಸ್ಥೆಯನ್ನು ಹುಡುಕಿಕೊಂಡು ಹೋಗುತ್ತಾರೆ. ಜಿಎಸ್‌ಟಿ ಜಾರಿಗೆ ಬಂದರೆ, ಕರ ಆಕರಣೆ ಆಧರಿತ ಉತ್ಪಾದನೆ ಮಾಡುವ ವ್ಯವಸ್ಥೆ ಹೋಗಲಿದೆ. ಇದು ಮೇಕ್ ಇನ್ ಇಂಡಿಯಾಗೆ ಪೂರಕವಾಗಲಿದೆ. ಜಿಎಸ್‌ಟಿ




ಪದ್ಧತಿ ಮೂಲಕ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವುದು. ಭಾರಿ ಬದಲಾವಣೆಗೆ ನಾಂದಿ ಹಾಡಲಿದೆ. ಈ ಪದ್ಧತಿ ಜೊತೆ ಜೊತೆಗೆ ಭೂಸ್ವಾಧೀನ ಕಾಯ್ದೆ, ಕಾರ್ಮಿಕ ಕಾನೂನುಗಳನ್ನು ಸಹ ಬದಲಾಯಿಸುವುದು ಅಗತ್ಯವಿದೆ.

**ಅಂತಾರಾಷ್ಟ್ರೀಯ ಅನುಭವ**

ಜಿಎಸ್‌ಟಿಯ ಸ್ವರೂಪ ಹಾಗೂ ಅದರ ಪರಿಣಾಮಕಾರಿ ಅನುಷ್ಠಾನದ ಮೇಲೆ ಈ ತೆರಿಗೆ ಪದ್ಧತಿಯ ಯಶಸ್ಸು ಅಳೆಯಬಹುದು ಎಂಬ ಅಂಶ ಅಂತಾರಾಷ್ಟ್ರೀಯ ಮಟ್ಟದ ವಿದ್ಯಮಾನಗಳನ್ನು ನೋಡಿದಾಗ ತಿಳಿದು ಬರುತ್ತದೆ.

ಅಭಿವೃದ್ಧಿ, ರಾಜಸ್ವ ಸಂಗ್ರಹ ಹಾಗೂ ದರದಲ್ಲಿ ಸ್ಥಿರತೆಯಂತಹ ಲಾಭಗಳನ್ನು ಪಡೆಯುವ ಸಲುವಾಗಿ ಹಲವಾರು ದೇಶಗಳು ಜಿಎಸ್‌ಟಿ ಪದ್ಧತಿಯನ್ನು ಕಾಲಕಾಲಕ್ಕೆ ರೂಪಾಂತರಿಸಿದೆ. ಇಂತಹ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಂಡಿರುವ ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಜಿಲೆಂಡ್‌ಗಳಲ್ಲಿ ವಿತ್ತೀಯ ಶಿಸ್ತು, ದರದಲ್ಲಿ ಸ್ಥಿರತೆ ಸಾಧಿಸಲಾಗಿದೆ. ಇನ್ನು, ಜಿಎಸ್‌ಟಿ ದರ ಹೆಚ್ಚು ಇರುವುದರಿಂದ ಈ ತೆರಿಗೆ ಪದ್ಧತಿ ಜಾರಿಯಾಗುವುದರಿಂದ ತಕ್ಷಣ ಬೆಲೆ ಏರಿಕೆಯ ಆತಂಕ ಇದ್ದೇ ಇದೆ.

ಶಿಕ್ಷಣ, ಆರೋಗ್ಯ, ವಾಣಿಜ್ಯ ಮತ್ತು ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದ ಸೇವೆ ಸೇರಿದಂತೆ ಇತರ ಸೇವೆಗಳ ಮೇಲೆ ಸದ್ಯ ತೆರಿಗೆ ವಿಧಿಸುವುದಿಲ್ಲ ಇಲ್ಲವೇ ಕಡಿಮೆ ದರದ ತೆರಿಗೆ ಆಕರಣೆ ಮಾಡಲಾಗುತ್ತದೆ. ಉದ್ದೇಶಿತ ಜಿಎಸ್‌ಟಿ ದರ ಶೇ. 18–22 ರಷ್ಟು ಇರುವುದರಿಂದ, ಜಿಎಸ್‌ಟಿ ಅನುಷ್ಠಾನವು ಕಡಿಮೆ ಅವಧಿಗಾಗಿ ಹಣದುಬ್ಬರಕ್ಕೆ ಕಾರಣವಾಗಲಿದೆ. ಅಂತಾರಾಷ್ಟ್ರೀಯ ಅನುಭವದಲ್ಲಿ ಹೇಳಬಹುದಾದರೆ, ಹೊಸ ಸೇವೆಗಳಿಗೆ ಹಾಗೂ ಸರಕುಗಳಿಗೆ ಜಿಎಸ್‌ಟಿ ಅಡಿ ತೆರಿಗೆ ವಿಧಿಸಿದ ಕಾರಣ, ಅಲ್ಪಾವಧಿಗಾಗಿ ಹಣದುಬ್ಬರದಲ್ಲಿ ಹೆಚ್ಚಳ ಕಂಡು ಬಂದಿತ್ತು.

ಗಮನಿಸಬೇಕಾದ ಅಂಶವೆಂದರೆ, ಈ ಮೇಲೆ ಉಲ್ಲೇಖಿಸಿದ ಸರಕು ಹಾಗೂ ಸೇವೆಗಳಿಗೆ ಜಿಎಸ್‌ಟಿ ಗಿಂತ ಮೊದಲು ತೆರಿಗೆ ಇರಲಿಲ್ಲ. ಇನ್ನು, ಜಿಎಸ್‌ಟಿ ವ್ಯಾಪ್ತಿಗೆ ಒಳಪಡದ ವ್ಯವಹಾರಗಳಿಗೆ ಯಾವ ರೀತಿಯ ತೆರಿಗೆ ಆಕರಣೆ ಮಾಡಬೇಕು ಎಂಬ ವಿಷಯದಲ್ಲಿ ಜಿಎಸ್‌ಟಿ ನಿರ್ದಿಷ್ಟ ಚೌಕಟ್ಟು ಹೊಂದಿಲ್ಲ. ಇಂತಹ ವ್ಯವಹಾರಗಳಲ್ಲಿ ಉತ್ಪಾದನೆಯಿಂದ ಹಿಡಿದು ಚಿಲ್ಲರೆ ಮಾರುಕಟ್ಟೆವರೆಗಿನ ಹಂತದಲ್ಲಿ ವಿಧಿಸುವ ತೆರಿಗೆ, ಸಂಗ್ರಹದಂತಹ ವಿದ್ಯಮಾನಗಳು ಪಾರದರ್ಶಕವಾಗಿರುವ ಆದಾಯ ತೆರಿಗೆ ಮೂಲಸೌಕರ್ಯ ನಿರ್ವಹಿಸಲ್ಪಟ್ಟಿದೆ. ಆದ್ದರಿಂದ ಜಿಎಸ್‌ಟಿ ಜಾರಿಗೆ ಬಂದರೆ, ಒಂದೆಡೆ ವಿವಿಧ ಹಂತದ ತೆರಿಗೆಗಳಿಂದ ಮುಕ್ತಿ ಸಿಗಲಿದ್ದರೆ, ಇನ್ನೊಂದೆಡೆ ಉತ್ಪನ್ನಗಳ ಬೆಲೆ ಹೆಚ್ಚುವ ಸಾಧ್ಯತೆಗಳಿವೆ. ಸದ್ಯ, ವಿಶ್ವದ 160 ದೇಶಗಳು ವ್ಯಾಟ್/ ಜಿಎಸ್‌ಟಿ ಪದ್ಧತಿಯನ್ನು ಅನುಷ್ಠಾನಗೊಳಿಸಿವೆ. ಈ ಪೈಕಿ ಆಸಿಯಾನ್‌ನಲ್ಲಿ 3 ದೇಶಗಳಿದ್ದರೆ, ಏಷ್ಯಾ–19, ಯುರೋಪ್–53, ಓಶಿಯಾನಿಯಾ–7, ಆಫ್ರಿಕಾ–44, ದಕ್ಷಿಣ ಅಮೆರಿಕಾ–11, ಕ್ಯಾರಿಬಿಯನ್ ಮಧ್ಯ ಹಾಗೂ ಉತ್ತರ ಅಮೆರಿಕದ 19 ದೇಶಗಳು ಈ ತೆರಿಗೆ ಪದ್ಧತಿಯನ್ನು ಜಾರಿಗೆ ತಂದಿವೆ.

**ಕೋಷ್ಟಕ – 1 ಜಿಎಸ್‌ಟಿ ಜಾರಿ – ಆರ್ಥಿಕ ಸಾಧನೆ**

| ದೇಶ | | ಜಿಡಿಪಿ ಬೆಳವಣಿಗೆ (%) | | | | | | ಆರ್ಥಿಕ ಬಾಕಿ (% ಜಿಡಿಪಿ) | | | | | |
|---|---|---|---|---|---|---|---|---|---|---|---|---|---|
| | ಜಾರಿ ವರ್ಷ | 1961 –70 | 1971–80 | 1981–1990 | 1991–2000 | 2001–10 | 2011–15 | 1961–70 | 1971–80 | 1981–1990 | 1991–2000 | 2001–10 | 2011–14 |
| ಆಸ್ಟ್ರೇಲಿಯಾ | 2000 | 5.09 | 3.02 | 3.42 | 3.32 | 3.05 | 2.64 | – | 0.11 | 0.04 | –1.36 | –0.14 | –2.50 |
| ಬ್ರೆಜಿಲ್ | 1964 | 6.19 | 8.51 | 1.77 | 2.60 | 3.73 | 1.02 | – | – | –3.39 | –2.26 | –2.37 | –2.13 |
| ಕೆನಡಾ | 1991 | 5.21 | 4.06 | 2.67 | 2.87 | 1.87 | 2.13 | – | – | – | –2.17 | 0.77 | –0.16 |
| ಫ್ರಾನ್ಸ್ | 1954 | 5.57 | 3.64 | 2.49 | 2.10 | 1.22 | 0.85 | – | 1.16 | –1.05 | –4.50 | –4.94 | –4.21 |
| ಜಪಾನ್ | 1989 | 9.30 | 4.50 | 4.64 | 1.14 | 0.80 | 0.62 | – | –3.32 | –3.31 | – | –4.01 | –7.72 |
| ಕೊರಿಯಾ | 1977 | 8.71 | 9.05 | 9.74 | 6.63 | 4.44 | 2.96 | – | – | 1.53 | 1.90 | 1.49 | 1.69 |
| ಮೆಕ್ಸಿಕೊ | 1980 | 6.81 | 6.71 | 1.88 | 3.64 | 1.82 | 2.84 | – | – | –2.55 | –0.45 | – | – |
| ನ್ಯೂಜಿಲೆಂಡ್ | 1986 | – | 1.26 | 1.91 | 3.06 | 2.55 | 2.71 | – | 0.49 | –2.47 | – | 1.41 | –2.16 |
| ಸಿಂಗಾಪುರ್ | 1994 | 9.35 | 9.09 | 7.79 | 7.19 | 5.91 | 3.96 | – | – | 10.51 | 14.95 | 5.75 | 8.92 |
| ಯುಕೆ | 1973 | 3.06 | 2.14 | 2.95 | 2.44 | 1.62 | 2.10 | – | –1.24 | –0.70 | –3.62 | –4.90 | –6.44 |
| | | ಚಾಲ್ತಿ ಖಾತೆ ಬಾಕಿ (% ಜಿಡಿಪಿ) | | | | | | ಜಿಡಿಪಿಯ ತೆರಿಗೆ (%) | | | | | |
| | ಜಾರಿ ವರ್ಷ | 1961 –70 | 1971–80 | 1981–1990 | 1991–2000 | 2001–10 | 2011–15 | 1961–70 | 1971–80 | 1981–1990 | 1991–2000 | 2001–10 | 2011–14 |
| ಆಸ್ಟ್ರೇಲಿಯಾ | 2000 | – | – | –5.56 | –3.95 | –5.32 | –3.64 | – | 19.40 | 22.27 | 21.43 | 23.75 | 21.53 |
| ಬ್ರೆಜಿಲ್ | 1964 | – | –4.40 | –1.55 | –1.93 | –0.68 | –3.32 | – | – | 12.01 | 11.31 | 15.39 | 14.50 |
| ಕೆನಡಾ | 1991 | –1.91 | –2.87 | –2.28 | –1.43 | 0.49 | –3.00 | – | – | – | 14.16 | 13.07 | 11.75 |
| ಫ್ರಾನ್ಸ್ | 1954 | – | 0.23 | –0.58 | 1.26 | 0.11 | –0.84 | – | 18.45 | 19.32 | 20.45 | 22.12 | 22.74 |
| ಜಪಾನ್ | 1989 | – | – | – | 2.39 | 3.44 | 1.64 | – | 10.27 | 11.84 | 12.27 | 9.84 | 10.24 |
| ಕೊರಿಯಾ | 1977 | – | –3.80 | –0.74 | 0.60 | 1.64 | 5.12 | – | – | 13.35 | 13.08 | 14.23 | 14.44 |
| ಮೆಕ್ಸಿಕೊ | 1980 | – | –4.69 | –0.79 | –3.28 | –1.30 | –1.93 | – | – | 11.78 | 9.53 | – | – |
| ನ್ಯೂಜಿಲೆಂಡ್ | 1986 | – | – | – | –3.30 | –4.32 | –3.17 | – | 27.86 | 30.42 | – | 29.74 | 27.34 |
| ಸಿಂಗಾಪುರ್ | 1994 | – | –11.41 | 0.34 | 13.99 | 19.71 | 19.21 | – | – | 14.54 | 15.45 | 12.80 | 13.58 |
| ಯುಕೆ | 1973 | 1.51 | –0.30 | –0.77 | –1.33 | –2.32 | –3.99 | – | 23.02 | 24.26 | 25.33 | 26.33 | 25.52 |
| | | ಸರಕು ಸೇವೆ ಮೇಲೆ ತೆರಿಗೆ (ಶೇ. ಆದಾಯ) | | | | | | ಹಣದುಬ್ಬರ (ಸಿಪಿಐನ ಬೆಳವಣಿಗೆ) | | | | | |
| | ಜಾರಿ ವರ್ಷ | 1961 –70 | 1971–80 | 1981–1990 | 1991–2000 | 2001–10 | 2011–15 | 1961–70 | 1971–80 | 1981–1990 | 1991–2000 | 2001–10 | 2011–14 |
| ಆಸ್ಟ್ರೇಲಿಯಾ | 2000 | – | 21.10 | 23.12 | 20.04 | 24.03 | 23.37 | 2.47 | 10.45 | 8.13 | 2.22 | 3.01 | 2.30 |
| ಬ್ರೆಜಿಲ್ | 1964 | – | – | 24.17 | 25.09 | 31.02 | 25.99 | – | – | – | – | 6.69 | 6.72 |
| ಕೆನಡಾ | 1991 | – | – | – | 17.38 | 15.97 | 14.21 | 2.94 | 8.06 | 5.97 | 2.00 | 2.02 | 1.68 |
| ಫ್ರಾನ್ಸ್ | 1954 | – | 34.47 | 29.67 | 26.37 | 23.59 | 21.57 | 4.22 | 9.67 | 6.37 | 1.72 | 1.71 | 1.10 |
| ಜಪಾನ್ | 1989 | – | 22.22 | 19.38 | 13.87 | 31.78 | 37.04 | 5.80 | 9.10 | 2.06 | 0.84 | –0.26 | 0.72 |
| ಕೊರಿಯಾ | 1977 | – | – | 34.72 | 32.33 | 28.01 | 24.88 | – | 16.48 | 6.39 | 5.10 | 3.19 | 1.90 |
| ಮೆಕ್ಸಿಕೊ | 1980 | – | – | 56.05 | 55.03 | – | – | 2.87 | 16.80 | 69.08 | 18.69 | 4.68 | 3.61 |
| ನ್ಯೂಜಿಲೆಂಡ್ | 1986 | – | 18.94 | 21.06 | – | 26.27 | 26.29 | 4.02 | 12.52 | 10.76 | 1.83 | 2.57 | 1.57 |
| ಸಿಂಗಾಪುರ್ | 1994 | – | – | 16.00 | 17.07 | 22.83 | 24.49 | 1.19 | 6.72 | 2.28 | 1.73 | 1.62 | 2.53 |
| ಯುಕೆ | 1973 | – | 26.23 | 29.99 | 32.80 | 31.32 | 32.98 | – | – | – | 2.69 | 2.10 | 2.27 |

ಮೂಲ : ವಿಶ್ವಬ್ಯಾಂಕ್.


ಇನ್ನು, ಯುರೋಪ್ ಖಂಡದಲ್ಲಿ ಅತಿ ಹೆಚ್ಚು ಸಂಖ್ಯೆಯ ದೇಶಗಳು ಈ ತೆರಿಗೆ ಪದ್ಧತಿಯನ್ನು ಜಾರಿಗೆ ತಂದಿರುವುದು ಸ್ಪಷ್ಟ. ಮೊಟ್ಟ ಮೊದಲ ಬಾರಿಗೆ ಅಂದರೆ 1954 ರಲ್ಲಿಯೇ ಜಿಎಸ್‌ಟಿ ಅನುಷ್ಠಾನಗೊಳಿಸಿದ ಹೆಗ್ಗಳಿಕೆ ಫ್ರಾನ್ಸ್ ದೇಶದ್ದು. ನಂತರದ ಸ್ಥಾನ ಜರ್ಮನಿ (1968), ಬ್ರಿಟನ್ (1973) ಈ ಪದ್ಧತಿಯನ್ನು ಜಾರಿಗೆ ತಂದಿರುವ ದೇಶಗಳಲ್ಲಿ ಏಕೀಕೃತ ಜಿಎಸ್‌ಟಿ ಚಾಲ್ತಿಯಲ್ಲಿರುವುದು ಗಮನಾರ್ಹ. ಆದರೆ, ಭಾರತದಲ್ಲಿನ ಉದ್ದೇಶಿತ ಜಿಎಸ್‌ಟಿ ರೀತಿಯಲ್ಲಿಯೇ ಕೆನಡಾ ಮತ್ತು ಬ್ರೆಜಿಲ್‌ಗಳಲ್ಲಿ ದ್ವಿ ತೆರಿಗೆ (ಜಿಎಸ್‌ಟಿ)ಪದ್ಧತಿ ಜಾರಿಯಲ್ಲಿದೆ. ಬಹುತೇಕ ರಾಷ್ಟ್ರಗಳಲ್ಲಿ ವ್ಯಾಟ್/ ಜಿಎಸ್‌ಟಿ ದರ ಶೇ 16–20 ರ ಪ್ರಮಾಣದಲ್ಲಿದೆ. ಭಾರತದಲ್ಲಿ ಸಹ ಉದ್ದೇಶಿತ ಜಿಎಸ್‌ಟಿಯಡಿ ಶೇ 18–22ರಷ್ಟು ತೆರಿಗೆ ದರ ನಿರ್ಧರಿಸುವ ಪ್ರಸ್ತಾವ ಇದೆ. ಸೂಕ್ಷ್ಮವಲ್ಲದ ಆರ್ಥಿಕ ಸೂಚ್ಯಂಕಗಳ ಆಧಾರದಲ್ಲಿ ಹೇಳುವುದಾದರೆ, ಆಸ್ಟ್ರೇಲಿಯಾ, ಕೆನಡಾ, ನ್ಯೂಜಿಲೆಂಡ್, ಸಿಂಗಾಪೂರ್, ಜಪಾನ್, ಕೊರಿಯಾ, ಬ್ರಿಟನ್‌ನಂತಹ ಪ್ರಮುಖ ದೇಶಗಳು ಉತ್ತಮ ಕಾರ್ಯವನ್ನೇ ಮಾಡಿವೆ. ಅಲ್ಲದೇ, ದೇಶದಿಂದ ದೇಶಕ್ಕೆ ಜಿಎಸ್‌ಟಿ ಚೌಕಟ್ಟು ಸಹ ಬದಲಾಗುತ್ತದೆ. ಆಸ್ಟ್ರೇಲಿಯಾದಲ್ಲಿ ಅತಿ ಕಡಿಮೆ ತಟಸ್ಥ ಧೋರಣೆಯ ತೆರಿಗೆ ವ್ಯವಸ್ಥೆ ಇದ್ದರೆ, ನ್ಯೂಜಿಲ್ಯಾಂಡ್ ಹೆಚ್ಚು ತಟಸ್ಥ, ಕೆನಡಾದಲ್ಲಿ ಮಧ್ಯಮ ಪ್ರಮಾಣ ತಟಸ್ಥ ನೀತಿಯೊಂದಿಗೆ ಜಿಎಸ್‌ಟಿ (ಕೋಷ್ಟಕ–1 ನೋಡಿ) ಜಾರಿಗೊಳಿಸಲಾಗಿದೆ.

ಜಿಎಸ್‌ಟಿ ಜಾರಿಗೆ ತಂದ ನಂತರ ಈ ಮೇಲಿನ ದೇಶಗಳಲ್ಲಿ ಉತ್ಪನ್ನಗಳ ಬೆಲೆಯಲ್ಲಿ ತಾತ್ಕಾಲಿಕ ಹೆಚ್ಚಳ ಕಂಡು ಬಂದಿತ್ತು. ಅಲ್ಪಕಾಲದ ನಂತರ ಬೆಲೆಗಳಲ್ಲಿ ಇಳಿಕೆ, ಸ್ಥಿರತೆ ಕಂಡು ಬಂದಿತ್ತು. ಅಲ್ಲದೇ, ಜಿಎಸ್‌ಟಿ ಜಾರಿಗೆ ಬಂದ ನಂತರ ಬಹುತೇಕ ರಾಷ್ಟ್ರಗಳಲ್ಲಿ (ಕೋಷ್ಟಕ–1 ರಲ್ಲಿ ತೋರಿಸಿರುವ) ಹಣದುಬ್ಬರ ದರವೂ ಕಡಿಮೆ ದರದೊಂದಿಗೆ ಸ್ಥಿರತೆ ಕಂಡಿದ್ದನ್ನು ತಿಳಿಯಬಹುದು.

ಆರ್ಥಿಕತೆಯ ಇತರ ಸೂಚ್ಯಂಕಗಳಾದ ಜಿಡಿಪಿ ಪ್ರಗತಿದರ, ಆರ್ಥಿಕ ಸಮತೋಲನೆ, ಚಾಲ್ತಿ ಖಾತೆಯ ಬಾಕಿ, ತೆರಿಗೆ ಮತ್ತು ಜಿಡಿಪಿ ನಡುವಿನ ಅನುಪಾತದಲ್ಲಿ ಸಾಕಷ್ಟು ಸುಧಾರಣೆಯೂ ಕಂಡು ಬಂದಿತ್ತು. ಅದರಲ್ಲೂ ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಕೊರಿಯಾ, ಸಿಂಗಾಪೂರ್ ಮತ್ತು ಬ್ರಿಟನ್‌ನಲ್ಲಿ ಈ ಸೂಚ್ಯಂಕಗಳು ಸಾಕಷ್ಟು ಸುಧಾರಣೆ ಕಂಡವು. ಆದ್ದರಿಂದಲೇ ಏಕೀಕೃತ ಮತ್ತು ಸರಳ ತೆರಿಗೆ ಪದ್ಧತಿಯಾಗಿರುವ ಜಿಎಸ್‌ಟಿ ಅನುಷ್ಠಾನದಿಂದಾಗಿಯೇ ಈ ದೇಶಗಳು ಹೆಚ್ಚು ಸದೃಢ ಆರ್ಥಿಕತೆ ಹೊಂದುವಂತಾಗಿದೆ ಎಂದು ಹೇಳಬಹುದು. ಇಲ್ಲಿಯೂ ಒಂದು ಸೂಕ್ಷ್ಮ ಅಂಶವಿದೆ. ಜಿಎಸ್‌ಟಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನ–ಗೊಳಿಸಿರುವ ಆಧಾರದಲ್ಲಿ ಈ ದೇಶಗಳ ಅಭಿವೃದ್ಧಿ ಹಾಗೂ ಆರ್ಥಿಕ ಸೂಚ್ಯಂಕಗಳಲ್ಲಿ ಉತ್ತಮ ಸಾಧನೆ ದಾಖಲಾಗಿದೆ. ಆರ್ಥಿಕ ಪ್ರಗತಿದರ, ಚಾಲ್ತಿ ಖಾತೆ ಉಳಿಕೆಯಂತಹ ಸೂಚ್ಯಂಕಗಳ ಸಾಧನೆ ಕೇವಲ ತೆರಿಗೆ ಪದ್ಧತಿ/ ವ್ಯವಸ್ಥೆ ಮೇಲೆ ಅವಲಂಬಿತವಾಗಿಲ್ಲ. ಈ ಸಾಧನೆಗೆ ಹಲವಾರು ರಾಜಕೀಯ, ನೀತಿ–ನಿರೂಪಣೆ ಮತ್ತು ಇಂತಹ ಆಡಳಿತಾತ್ಮಕ ನಿರ್ಧಾರಗಳ ಮೇಲೆಯೂ ಆಯಾ ದೇಶಗಳ ಅಭಿವೃದ್ಧಿ ಅವಲಂಬಿತವಾಗಿದೆ ಎಂದು ಹೇಳಬಹುದು.


ಅನೇಕ ದೇಶಗಳಲ್ಲಿ ಜಿಎಸ್‌ಟಿ ಅನುಷ್ಠಾನ ಹಾಗೂ ಅದರ ಪರಿಣಾಮದಿಂದಾದ ಅಭಿವೃದ್ಧಿ ಅನುಕೂಲತೆ ನೋಡಿ ಇತ್ತೀಚಿನ ದಿನಗಳಲ್ಲಿ ಮಲೇಷ್ಯಾ ಸಹ ಜಿಎಸ್‌ಟಿಯನ್ನು ಜಾರಿಗಳಿಸಿದೆ. ಚೀನಾ ಸಹ ಏಕೀಕೃತ ತೆರಿಗೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ. ಮಲೇಷ್ಯಾ ಶೇ 6ರಷ್ಟು ಜಿಎಸ್‌ಟಿಯನ್ನು 2015ರ ಏಪ್ರಿಲ್ 1ರಿಂದ ಜಾರಿಗೊಳಿಸಿದೆ. ದಕ್ಷಿಣ ಏಷ್ಯಾದ ಬಾಂಗ್ಲಾದೇಶ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಸೇರಿದಂತೆ ಅನೇಕ ರಾಷ್ಟ್ರಗಳು ವ್ಯಾಟ್ ವ್ಯವಸ್ಥೆಯನ್ನು ಹೊಂದಿವೆ. ಬುರುಂಡಿ, ಕಾಂಗೊ, ಗಾಂಬಿಯಾ, ಮೊಜಾಂಬಿಕ್, ಸಿಸಿಲಿಸ್ ದೇಶಗಳನ್ನು ಹೊರತುಪಡಿಸಿದರೆ ಉಳಿದ ಬಹುತೇಕ ಆಫ್ರಿಕನ್ ರಾಷ್ಟ್ರಗಳು ಸಹ ವ್ಯಾಟ್ ಪದ್ಧತಿಯನ್ನೇ ಅಳವಡಿಸಿಕೊಂಡಿವೆ.

ಭಾರತದಂತೆಯೇ ಕೆನಡಾ ಸಹ ದ್ವಿತೆರಿಗೆ ಪದ್ಧತಿಯನ್ನೇ ಅಳವಡಿಸಿಕೊಂಡಿದೆ. ಕೆನಡಾದಲ್ಲಿಯೂ ವಿವಿಧ ರಾಜಕೀಯ ಪಕ್ಷಗಳಿಂದ ಈ ಪದ್ಧತಿ ಅಂದರೆ ಜಿಎಸ್‌ಟಿ ಜಾರಿಗೆ ಭಾರಿ ವಿರೋಧ ವ್ಯಕ್ತವಾಗಿತ್ತು. ಇಂತಹ ವಿರೋಧದ ನಡುವೆಯೂ ಕೆನಡಾ ಜಿಎಸ್‌ಟಿ ಅನುಷ್ಠಾನಗೊಳಿಸಿತು. ಜಿಎಸ್‌ಟಿಯನ್ನು ಜಾರಿಗೆ ತರುವ ವಿಷಯದಲ್ಲಿ ಕೆನಡಾ ಬಹಳ ವಾಸ್ತವಿಕವಾಗಿ ಹಾಗೂ ಖಚಿತತೆಯೊಂದಿಗೆ ಯೋಜನೆ ರೂಪಿಸಿತ್ತು. 1991ರಲ್ಲಿ ಕೆನಡಾ ಜಾರಿಗೊಳಿಸಿದ ಜಿಎಸ್‌ಟಿ ಅಲ್ಲಿಯವರೆಗೆ



ಮೂಲ : ವಿಶ್ವಬ್ಯಾಂಕ್.

ಜಾರಿಯಲ್ಲಿದ್ದ ಉತ್ಪಾದಕರ ಮಾರಾಟ ತೆರಿಗೆ ಪದ್ಧತಿಯನ್ನು ಬದಲಾಯಿಸಿತು. ದಿನಸಿ, ಮನೆ ಬಾಡಿಗೆ, ವೈದ್ಯಕೀಯ ಸೇವೆ, ಹಣಕಾಸು ಸೇವೆಗಳಿಗೆ ಈ ತೆರಿಗೆಯನ್ನು ಅನ್ವಯಿಸಲಿಲ್ಲ. ಹೀಗಾಗಿ ಜಿಎಸ್‌ಟಿ ಜಾರಿ ನಂತರ ಕೆನಡಾದ ಅಭಿವೃದ್ಧಿ, ಹಣಕಾಸು ಸ್ಥಿತಿ, ರಾಜಸ್ವ ಸಂಗ್ರಹ, ಬೆಲೆಗಳಲ್ಲಿ ಸ್ಥಿರತೆ ಮತ್ತಿತರ ಆರ್ಥಿಕ ಸಾಧನೆಯಲ್ಲಿ ಗಣನೀಯ ಸುಧಾರಣೆ ಕಂಡು ಬಂದಿತು (ಚಿತ್ರ–1 ನೋಡಿ). ಇನ್ನು, 2000ರಲ್ಲಿ ಜಿಎಸ್‌ಟಿಯನ್ನು ಜಾರಿಗೆ ತಂದ ಆಸ್ಟ್ರೇಲಿಯಾ (ಚಿತ್ರ–2)ದಲ್ಲಿ ಸಹ ರಾಜಸ್ವ



ಮೂಲ : ವಿಶ್ವಬ್ಯಾಂಕ್.

ಸಂಗ್ರಹ ಹಾಗೂ ಚಾಲ್ತಿ ಖಾತೆ ಉಳಿಕೆಯಲ್ಲಿ ಉತ್ತಮ ಪ್ರಗತಿ ಕಂಡು ಬಂದಿತು. ಜಿಎಸ್‌ಟಿ ಜಾರಿಯಿಂದ ಅಭಿವೃದ್ಧಿ ಪಥದಲ್ಲಿ ಸಾಗಿದ ಮತ್ತೊಂದು ದೇಶವೆಂದರೆ, ನ್ಯೂಜಿಲ್ಯಾಂಡ್.

ಈ ದೇಶದಲ್ಲಿ 1986ರಲ್ಲಿ ಜಿಎಸ್‌ಟಿ ಜಾರಿಗೆ ಬಂದಿತು. ಹಲವಾರು ದೇಶಗಳಲ್ಲಿ ಜಿಎಸ್‌ಟಿಯನ್ನು ಜಾರಿಗೊಳಿಸಿದ ನಂತರ ತೆರಿಗೆ ದರವನ್ನು ಹೆಚ್ಚಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಇದು ಭಾರತದ ಸಂದರ್ಭದಲ್ಲಿ ಹೆಚ್ಚು ಪ್ರಸ್ತುತ ಎನಿಸುತ್ತದೆ. ಯಾಕೆಂದರೆ, ತೆರಿಗೆ ದರವು ಶೇ 27ರಷ್ಟರಲಿ ಎಂಬುದಾಗಿ ಚರ್ಚೆ ನಡೆದಿದ್ದರೂ ಈಗ ಈ ದರ ಶೇ 16–18ರಷ್ಟಿರಲಿ ಎಂಬ ನಿರ್ಣಯಕ್ಕೆ ಬರಲಾಗುತ್ತಿದೆ. ಹೀಗಾಗಿ ಜಿಎಸ್‌ಟಿ ಪದ್ಧತಿಯ ಯಶಸ್ಸಿಗೆ ನ್ಯಾಯೋಚಿತ ದರ ಇರಬೇಕು ಎಂಬುದು ವಿದಿತವಾಗುತ್ತದೆ.

### ಗಮನ ಸೆಳೆಯುವ ಪಾಠ

ಜಿಎಸ್‌ಟಿ ಅನುಷ್ಠಾನದಿಂದ ದೇಶದ ವಿತ್ತೀಯ ಹಣದುಬ್ಬರದ ಆತಂಕಕಗಳು ಇದ್ದೇ ಇವೆ. ಇದು ಜಿಎಸ್‌ಟಿ ಮೇಲೆ ದುಷ್ಪರಿಣಾಮ ಬೀರಬಹುದು ಈ ಸವಾಲುಗಳನ್ನು ಎದುರಿಸಿ ಸಮರ್ಪಕವಾಗಿ ಜಿಎಸ್‌ಟಿ ಅನುಷ್ಠಾನಕ್ಕೆ ಗಮನ ನೀಡುವಾಗ ಈ ಆತಂಕ ಸಹಜ. ಸ್ವಲ್ಪ ಏರುಪೇರುಗಳು ಅನಿವಾರ್ಯ. ಆರಂಭದಲ್ಲಿ ವ್ಯತ್ಯಾಸ ಅನಿಸಿದರೂ ನಂತರ ಸರಿ ಹೋಗಲು ಸಾಧ್ಯ. ಉದಾಹರಣೆಗೆ ಸಿಂಗಾಪುರದಲ್ಲಿ 1994ರಲ್ಲಿ ಜಿಎಸ್‌ಟಿ ಪರಿಚಯಿಸಿದಾಗ ಹಣದುಬ್ಬರದ ಹೊಡೆತ ಬಿದ್ದಿತು. ತೆರಿಗೆ ವಿಧಿಸಿದ ನಂತರ ಪ್ರತಿಯೊಂದು ಅಂಶವನ್ನು ಪರಿಗಣಿಸಿ ಉತ್ತಮ ಆಡಳಿತ ವ್ಯವಸ್ಥೆ ಮೂಲಕ ಸರಿದೂಗಿಸಲಾಯಿತು. ಇದೇ ಕೆಲಸವನ್ನು ಮಲೇಶಿಯಾ ಸಹ ಮಾಡಿತು. ವ್ಯಾಪಾರ ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯದ ಮೂಲಕ ಜಿಎಸ್‌ಟಿ ಲೆಕ್ಕಾಚಾರವನ್ನು ನಿಯಂತ್ರಿಸಲಾಯಿತು.

ಮಲೇಶಿಯಾದಲ್ಲಿ ಜಿಎಸ್‌ಟಿ ಅನುಷ್ಠಾನಕ್ಕೆ ತಂದ ನಂತರ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಅಲ್ಲಿ ಎದುರಾದ ಹಲವು ಸಮಸ್ಯೆ ಮತ್ತು ಕೈಗೊಂಡ ಕ್ರಮಗಳ ಸೂಕ್ಷ್ಮ ವಿಚಾರದಿಂದಲೂ ನಾವೀಗ ಪಾಠ ಕಲಿಯಬೇಕಾಗಿದೆ. ಎಲ್ಲ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಅತ್ಯಂತ ಸರಳವಾದ ತೆರಿಗೆ ಪದ್ಧತಿಯನ್ನು ಅನುಸರಿಸಿದರೂ ಮಲೇಶಿಯಾದಲ್ಲಿ ಸುಮಾರು ಒಂದೂವರೆ ವರ್ಷ ಕಾಲ ತೀವ್ರ ಸಂಕಷ್ಟವನ್ನು ಎದುರಿಸಬೇಕಾಯಿತು. ಆದರೆ ಭಾರತ 2017ರ ಏಪ್ರಿಲ್ 1ರಿಂದ ಹೊಸ ತೆರಿಗೆ ಪದ್ಧತಿ ಜಾರಿಗೆ ತರಲು ಸಿದ್ಧತೆ ನಡೆಸಿದೆ. ಕೇವಲ 6 ತಿಂಗಳಲ್ಲಿ ಅತ್ಯಂತ ಕ್ಲಿಷ್ಟಕರವಾದ ಸಂಕೀರ್ಣ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಮುಂದಾಗಿದೆ. ಇದು ಭಾರತದ ಮಟ್ಟಿಗೆ ಇಷ್ಟು ಕಡಿಮೆ ಅವಧಿಯಲ್ಲಿ ವ್ಯವಹಾರಕ್ಕೆ ಅಣಿಗೊಳಿಸುವುದು ಒಂದು ಸವಾಲು ಎನಿಸಿದೆ.

ಇದಲ್ಲದೆ ಸುದೀರ್ಘವಾದ ಜಿಎಸ್‌ಟಿ ಅನುಷ್ಠಾನದಲ್ಲಿ ಎರಡು ಮುಖ್ಯವಾದ ವಿಚಾರಗಳನ್ನು ಗಂಭೀರವಾಗಿ ಪರಿಗಣಿಸುವುದು ಮುಖ್ಯ ಎಂಬುದನ್ನು ಅಂತಾರಾಷ್ಟ್ರೀಯ ಅನುಭವದಿಂದ ಹೇಳಬಹುದು. ಮೂಲವಾಗಿ ಕೇಂದ್ರದ ತೆರಿಗೆ ಮತ್ತು ಸರ್ಕಾರದ ಎರಡು ವಿಧದ ಮಟ್ಟದಿಂದ ಸಂಗ್ರಹಿಸುವ ಲೆವಿ ಸಂಗ್ರಹ ದರಗಳು, ಅನುಸರಣೆ ವೆಚ್ಚ ಮತ್ತು ತೆರಿಗೆ ಇಲ್ಲದಿರುವಿಕೆ ಹುಟ್ಟು ಹಾಕುವ ಸಮಸ್ಯೆಗಳನ್ನು ಮಿತಿಗೊಳಿಸದಿರುವುದು ಕೇಂದ್ರ ಸರ್ಕಾರದ ಅಧಿಕಾರವನ್ನು ಪರಿಣಾಮಕಾರಿ ಆರ್ಥಿಕ ಮತ್ತು ಪುನರ್ ವಿತರಣೆ ನೀತಿಯನ್ನು ಜಾರಿಗೆ ತರಲು ಸಾಧ್ಯವಾಗದು ಎಂಬುದನ್ನು (ಬರ್ಡ್ ಮತ್ತು ಜಿಂಡ್ರಾನಾ 2007) ಗಮನಿಸಬಹುದು. ಉಪರಾಷ್ಟ್ರೀಯ ಜಿಎಸ್‌ಟಿ ಲೆವಿಯೂ ಸಹ ಗಡಿಯಾಚೆನ ವ್ಯಾಪಾರ ಖಾತೆ, ವಹಿವಾಟಿನ ಮೇಲೆ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಹುಟ್ಟು ಹಾಕುವುದು. ಅದ್ದರಿಂದ ಬಹುತೇಕ ಒಕ್ಕೂಟ ದೇಶಗಳು ಫೆಡರಲ್ ಹಂತದಲ್ಲಿ ವ್ಯಾಟ್ (ವಿಎಟಿ) ಪದ್ಧತಿ ಅನುಸರಿಸುತ್ತಿದ್ದರೂ ಉಪರಾಷ್ಟ್ರೀಯ ಸರ್ಕಾರಗಳು ಕೆಲವು ಪಾಲನ್ನು ಹೊಂದಿವೆ. ಉಪರಾಷ್ಟ್ರೀಯ ವಾಟ್ ಪದ್ಧತಿಯನ್ನು ಬ್ರೆಜಿಲ್ ಮೊದಲು ಆರಂಭಿಸಿತು. ಯೂರೋಪಿಯನ್ ಒಕ್ಕೂಟ ಗಮ್ಯಸ್ಥಾನ ತತ್ವ ಆಧಾರದ ಮೇಲೆ ವ್ಯಾಟ್ ಪದ್ಧತಿಯನ್ನು ಜಾರಿಗೆ ತಂದಿತು. ಆದರೆ ಅದು ಗಡಿಯಾಚೆನ ವಹಿವಾಟಿನ ವಿಚಾರ ಇಂದಿಗೂ ಚರ್ಚೆಯಲ್ಲಿ ಮುಂದುವರಿದಿದೆ (ಕೀನ್ 2009; ನೂಸೆನ್ 2010). ತೆರಿಗೆ ಮೂಲ ಮತ್ತು ಕೆಲವಲಯ ಮಟ್ಟಿನ ದರಗಳ ವ್ಯಾಟ್ ವ್ಯವಸ್ಥೆಯು ಕೆನಡಾದ ಅನುಭವ ಅಸಾಮಾನ್ಯ ಕಾರ್ಯಾತ್ಮಕವಾದುದು ಎಂಬುದನ್ನು ತೋರಿಸಿದೆ.

ಅಂತಾರಾಷ್ಟ್ರೀಯ ಮಟ್ಟದ ಜಿಎಸ್‌ಟಿ ಅನುಭವದ ಸಲಹೆ ಪ್ರಕಾರ, ಕೆಲವು ಸಣ್ಣಪುಟ್ಟ ವಿನಾಯಿತಿಗಳನ್ನು ನೀಡಿ ರಾಜಕೀಯ ಪಕ್ಷಗಳ ಪ್ರಬಲ ವಿರೋಧವನ್ನು ಎದುರಿಸಿ ಒಂದಲ್ಲ ಒಂದು ರೀತಿಯ ವಿನಾಯಿತಿ ನೀಡಿ ಜಿಎಸ್‌ಟಿ ಜಾರಿಗೊಳಿಸುವುದು ಅಷ್ಟು ಸುಲಭದ ಮಾತಲ್ಲ. ಅದಾಗ್ಯೂ, ಎಲ್ಲ ರಾಜ್ಯಗಳ ಒಟ್ಟು ಅಭಿಪ್ರಾಯಗಳನ್ನು ಒಗ್ಗೂಡಿಸಿ ಸಮ್ಮಿಳಿತ, ಪೂರಕ ಸುಧಾರಣಾ ಕ್ರಮದ ಕಸರತ್ತು ನಡೆದರೆ ಅನುಷ್ಠಾನ ಸುಲಭ ಸಾಧ್ಯ. ಈ ರೀತಿ ಎಲ್ಲ ರಾಜ್ಯಗಳ ಹಿತಾಸಕ್ತಿಯ ರಿಯಾಯಿತಿಗಳನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಒಂದು ಕಸರತ್ತು ಮಾಡಬಹುದು. ಎಲ್ಲ ರಾಜ್ಯಗಳ ಬೇಡಿಕೆಗಳ ಪಟ್ಟಿ ಪೋಷಿಸಿಕೊಂಡು ದೀರ್ಘ ಕಾಲದ ರಿಯಾಯಿತಿ, ಆರ್ಥಿಕ ಸ್ವಾಯತ್ತತೆ ಹೆಚ್ಚಿಸಲು ಸಾಧ್ಯವಿಲ್ಲ. ಇದು ತೆರಿಗೆ ಆಧಾರತಿ ಸಂಕುಚಿತಗೊಳ್ಳುವುದು ಮತ್ತು ಯಾವುದೇ ಸಂದರ್ಭದಲ್ಲಿ ಸಮಗ್ರ ತೆರಿಗೆ ಪಾವತಿಯ ಭರವಸೆಯನ್ನೂ ನೀಡಲಾಗದು. ವಿವಿಧ ದೇಶಗಳ ಆರ್ಥಿಕ ವ್ಯವಸ್ಥೆ ಆಧರಿಸಿ ಜಿಎಸ್‌ಟಿ ಅನುಷ್ಠಾನ ವಿಭಿನ್ನವಾಗಿರುತ್ತದೆ. ನ್ಯೂಜಿಲೆಂಡ್‌ನಲ್ಲಿ ಅತ್ಯಂತ ಕಡಿಮೆ ಪ್ರಮಾಣದ ವಿನಾಯಿತಿ ಮತ್ತು ವ್ಯಾಪಕ ವ್ಯಾಪ್ತಿಯನ್ನು ಅಲ್ಲಿಯ ಜಿಎಸ್‌ಟಿ ಹೊಂದಿದೆ. ಆದರೆ ಇದೇ ನೀತಿ, ಕ್ರಮಗಳನ್ನು ಭಾರತದಂತಹ ದೇಶದಲ್ಲಿ ಅನುಸರಿಸಲು ಸಾಧ್ಯವಿಲ್ಲ. ಇದೇ ಸಂದರ್ಭದಲ್ಲಿ ಹೂಡಿಕೆಯ ಪೂರಕ ಉದ್ದೇಶಗಳು ಆಡಳಿತಾತ್ಮಕ ಸರಳತೆ, ಪ್ರಾದೇಶಿಕ ಅಭಿವೃದ್ಧಿ, ಸಣ್ಣ ಕೈಗಾರಿಕೆಗಳ ಮೂಲಕ ಉದ್ಯೋಗ ಸೃಷ್ಟಿ ಇನ್ನಿತರ ಅಗತ್ಯಗಳನ್ನು ಪೂರೈಸಲು ರಾಜಕೀಯ ಒತ್ತಡಗಳನ್ನು ಪ್ರತಿರೋಧಿಸುವುದು ಅತ್ಯಂತ ಮುಖ್ಯವಾಗಿದೆ.

ಇದುವರೆಗಿನ ಅನುಭವಗಳಿಂದ ಒಂದು ಪಾಠವನ್ನು ಕಲಿಯಬೇಕಾಗಿದೆ. ಜಿಎಸ್‌ಟಿ ಅನುಷ್ಠಾನದ ಸಾಧಕ ಬಾಧಕಗಳ ಚರ್ಚೆಯನ್ನು ಯಾವುದೇ ಕಾರಣಕ್ಕೂ ತಳ್ಳಿ ಹಾಕುವಂತಿಲ್ಲ. ಸಾಮಾನ್ಯ ಜನ, ವ್ಯಾಪಾರಸ್ಥರು, ಸಂಘ ಸಂಸ್ಥೆಗಳು ಮತ್ತಿತರ ವಿಭಾಗಗಳಿಂದ ಕೈಗಾರಿಕೆಗಳು ಮತ್ತು ಆಡಳಿತ ನಿರ್ವಾಹಕರ ನಡುವಿನ ಚರ್ಚೆಗೆ ಸಾಕಷ್ಟು ಮುಂಚಿತವಾಗಿ ಯೋಜನೆ ಮತ್ತು ಸಮಯಾವಕಾಶ ಒದಗಿಸಬೇಕು. ಯೋಜನೆ ಅನುಷ್ಠಾನದಲ್ಲಿ ತೊಡಗಿರುವ ಉದ್ಯಮಗಳು ಮತ್ತು ಸಮಂಜಸ ತೆರಿಗೆ ದರ, ಸಕಾಲಿಕ ಶಾಸನಾತ್ಮಕ ದಾಖಲೆಗಳ ಬಿಡುಗಡೆ, ಇವೆಲ್ಲವೂ ಜಿಎಸ್‌ಟಿ ಅನುಷ್ಠಾನವನ್ನು ಹಲವು ದೇಶಗಳಲ್ಲಿ ಸುಲಭಗೊಳಿಸಿದೆ. ಇವೆಲ್ಲದರ ನಡುವೆ ಆರಂಭಿಕ ಹಂತದ ಕೆಲವು ಸಣ್ಣಪುಟ್ಟ ಸಮಸ್ಯೆಗಳ ಹೊರತಾಗಿ ಜಿಎಸ್‌ಟಿ ಅನುಷ್ಠಾನವು ಅತ್ಯುತ್ತಮ ತೆರಿಗೆ ಸಂಗ್ರಹ ವಿಧಾನವಾಗಿದೆ.

### ಕಾರ್ಯಕಾರಿ ತೆರಿಗೆಗಳು


ದೇಶದಲ್ಲಿ ಜಿಎಸ್‌ಟಿಯನ್ನು 2017ರ ಏಪ್ರಿಲ್ 1ರಿಂದ ಜಾರಿಗೆ ತರಲಾಗುವುದು ಎಂದು ಹಣಕಾಸು ಸಚಿವರು ಈಗಾಗಲೇ ಭರವಸೆ ನೀಡಿದ್ದಾರೆ. ಇದಕ್ಕೆ ಪೂರಕವಾಗಿ ಈಗಾಗಲೇ ಸಾಂವಿಧಾನಿಕ ತಿದ್ದುಪಡಿಯ ಮುಖ್ಯ ಅಡಚಣೆಯನ್ನು ನಿವಾರಿಸಲಾಗಿದೆ. ಉಳಿದಿರುವುದು ಎಷ್ಟು ಬೇಗವೋ ಅಷ್ಟು ಬೇಗ ಕಾರ್ಯಾನುಷ್ಠಾನಕ್ಕೆ ತರಬೇಕಾಗಿದೆ. ಇದರಿಂದ ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಜಿಎಸ್‌ಟಿ ದೇಶದ ಆರ್ಥಿಕ ಸುಧಾರಣೆಯ ಹೆಗ್ಗುರುತು.

ಅದಾಗ್ಯೂ ಭಾರತದ ತೆರಿಗೆ ವ್ಯವಸ್ಥೆಯು ಸಂಕೀರ್ಣವಾಗಿದ್ದು, ಹಲವು ಅನುಷ್ಠಾನ ಹಂತದಲ್ಲಿ ಹಲವು ಸವಾಲುಗಳನ್ನು ಎದುರಿಸುವುದು ಅನಿವಾರ್ಯ. ಈ ಸಂದರ್ಭದಲ್ಲಿ ಎರಡು ಮುಖ್ಯವಾದ ಸವಾಲುಗಳನ್ನು ಸರ್ಕಾರ ಎದುರಿಸಿ ಪರಿಹಾರ ಕಂಡುಕೊಳ್ಳಬೇಕಾಗಿದೆ. ಮೊದಲನೆಯದು ಆದಾಯ ತಟಸ್ಥ ದರ (ಆರ್‌ಎನ್‌ಆರ್) ಮತ್ತು ಇನ್ನೊಂದು ಜಿಎಸ್‌ಟಿಯ ಮಿತಿಯ ಸಂಯೋಜನೆ ರೂಪಿಸುವುದು. ಆದಾಯ ತೆರಿಗೆ ವಿನಾಯಿತಿಯ ಹೊರತಾಗಿಯೂ ಆರ್‌ಎನ್‌ಆರ್ ಆದಾಯವು ಯಥಾಸ್ಥಿತಿಯಲ್ಲಿ ಕಾಪಾಡುವುದು ಕಡ್ಡಾಯ. ಸಣ್ಣ ಉದ್ಯಮ, ವ್ಯಾಪಾರದ ಮೇಲೆ ಯಾವುದೇ ರೀತಿಯ ಹೆಚ್ಚುವರಿ ಹೊರ ಬೀಳುವುದಿಲ್ಲ ಎಂಬ ಭರವಸೆಯ ಮತ್ತು ಸೂಕ್ತ ಮಿತಿಯನ್ನು ನಿಗದಿಪಡಿಸಿ ಜಿಎಸ್‌ಟಿ ಜಾರಿಗೆ ತರುವುದು ದೊಡ್ಡ ಸವಾಲಿನ ವಿಚಾರವಾಗಿದೆ.

ದೇಶದಲ್ಲಿ ಜಿಎಸ್‌ಟಿಯನ್ನು 2017ರ ಏಪ್ರಿಲ್ 1ರಿಂದ ಅನುಷ್ಠಾನಗೊಳಿಸಲು ಇನ್ನೂ ಹಲವು ಸವಾಲುಗಳಿವೆ. ವಿವಿಧ ರಾಜ್ಯಗಳ ನಡುವೆ ಸರಕು ಸಾಗಣೆ, ಸೇವೆಗಳು, ವ್ಯಾಪಾರ ವಹಿವಾಟುಗಳ ನಿರ್ವಹಣೆ ಹೀಗೆ ರಾಜ್ಯದ ಜಿಎಸ್‌ಟಿ, ಕೇಂದ್ರದ ಜಿಎಸ್‌ಟಿಯನ್ನು ಒಳಗೊಂಡ ಒಂದು ಸಂಯೋಜಿತ ತೆರಿಗೆ ಪದ್ಧತಿಯನ್ನು ಸಮರ್ಪಕವಾಗಿ ನಿಭಾಯಿಸಲು ಮಾಹಿತಿ ತಂತ್ರಜ್ಞಾನದ ಗಟ್ಟಿಯಾದ ವೇದಿಕೆಯ ಅಳವಡಿಕೆಯೂ ಅನಿವಾರ್ಯವಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಜಿಎಸ್‌ಟಿ ಅನುಷ್ಠಾನಕ್ಕೆ ಮುನ್ನ ತೆರಿಗೆ ದಾವೆಗಳ ನೀತಿ ಮತ್ತು ಕಾರ್ಯ ವಿಧಾನವನ್ನು ಏಕೀಕೃತಗೊಳಿಸುವುದು ಹಾಗೂ ಪರಿಣಾಮಕಾರಿ ಕಾನೂನು ಪದ್ಧತಿಯನ್ನು ಅಳವಡಿಸುವುದು ಅತ್ಯವಶ್ಯ. ಪ್ರಬಲವಾದ ಮಾಹಿತಿ ತಂತ್ರಜ್ಞಾನ ಸಂಪರ್ಕ ಜಾಲವನ್ನು ಹೊಂದಿರುವುದೂ ಸಹ ಜಿಎಸ್‌ಟಿ ಅನುಷ್ಠಾನದ ಮತ್ತೊಂದು ಪ್ರಮುಖ ಸವಾಲಾಗಿದೆ. ಕೇಂದ್ರ ಸರ್ಕಾರ ಈಗಾಗಲೇ ಸರಕು ಮತ್ತು ಸೇವಾ ತೆರಿಗೆಯ ಸಂಪರ್ಕ ಜಾಲವನ್ನು (ಜಿಎಸ್‌ಟಿಎನ್) ಅಭಿವೃದ್ಧಿಪಡಿಸಿದೆ. ಈ ಸಂಪರ್ಕ ಜಾಲವು ತೆರಿಗೆದಾರರ ನೊಂದಣಿ, ತೆರಿಗೆ ರಿಟರ್ನ್, ರಿಟರ್ನ್ ಫೈಲಿಂಗ್, ತೆರಿಗೆ ಪಾವತಿ, ಐಜಿಎಸ್‌ಟಿ ಪಾವತಿ ಮೊದಲಾದ ಜಿಎಸ್‌ಟಿ ಪೋರ್ಟಲ್‌ಗಳ ನಿರ್ವಹಣೆಗೆ ತಾಂತ್ರಿಕ ಸಹಕಾರ ನೀಡುತ್ತಿದೆ. ಮಾಹಿತಿ ತಂತ್ರಜ್ಞಾನವು ಹೊಸ ವ್ಯವಸ್ಥೆಯ ಜಾರಿಯ ಬೆನ್ನೆಲುಬಾಗಿದೆ. ಬ್ಯಾಂಕಿಂಗ್ ವ್ಯವಸ್ತೆಯಲ್ಲಿನ ಸುಧಾರಣೆ, ತೆರಿಗೆ ಇಲಾಖೆ ಆಡಳಿತ ಸಿಬ್ಬಂದಿಗೆ ತರಬೇತಿ, ಜಿಎಸ್‌ಟಿ ದರ ಅಂತಿಮಗೊಳಿಸುವುದು, ಕಡಿಮೆ ಆದಾಯ ಸಂಪನ್ಮೂಲ ಹೊಂದಿದ ಅಭಿವೃದ್ಧಿ ಹೊಂದದ ರಾಜ್ಯಗಳ ಹಿತಾಸಕ್ತಿ ಕಾಪಾಡುವುದು, ಭವಿಷ್ಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅದಾಯದ ಸಮತೋಲನ ಕಾಯ್ದುಕೊಳ್ಳುವುದೂ ಸೇರಿದಂತೆ ಕೆಲವು ಸವಾಲುಗಳನ್ನೂ ಹೊಸ ಜಿಎಸ್‌ಟಿ ಅನುಷ್ಠಾನ ಸಂದರ್ಭದಲ್ಲಿ ಎದುರಿಸುವುದು ಅತ್ಯಗತ್ಯವಾಗಿದೆ.

ಸಮರ್ಪಕವಾಗಿ ಜಿಎಸ್‌ಟಿ ದರ ನಿಗದಿ, ಸೂಕ್ತವಾದ ಆರ್‌ಎನ್‌ಆರ್, ಸಂಪೂರ್ಣ ತೆರಿಗೆ ಆಡಳಿತವನ್ನು ನಿರ್ವಹಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು ಮತ್ತು ಅದಕ್ಕೆ ಪೂರಕವಾದ ಮಾಹಿತಿ ತಂತ್ರಜ್ಞಾನದ ಮೂಲಸೌಲಭ್ಯಗಳನ್ನು ಒದಗಿಸುವುದು ಸಹ ಯಶಸ್ವಿ ಜಿಎಸ್‌ಟಿ ದರವನ್ನು ಶೇ 11ರಿಂದ ಶೇ 12ರವರೆಗೆ ನಿಗದಿ ಪಡಿಸುವಂತೆ ಹಲವು ಸಲಹೆಗಳಿವೆ. ಆದರೆ ಭಾರತ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಡಾ. ಅರವಿಂದ ಸುಬ್ರಮಣಿಯನ್ ನೇತೃತ್ವದ ಸಮಿತಿಯು ಆರ್‌ಎನ್‌ಆರ್ ಮತ್ತು ಸಾಮಾನ್ಯ ಮಾರಾಟ ತೆರಿಗೆಗಳ ದರವನ್ನು ಆರ್‌ಎನ್‌ಆರ್ ಶೇ 15ರಿಂದ ಶೇ 15.5ರ ವರೆಗೆ ಮತ್ತು ಪ್ರಮಾಣಿತ ಜಿಎಸ್‌ಟಿ ದರ ಶೇ 17ರಿಂದ 18ರಷ್ಟು ಇರಬೇಕೆಂದು ಸಲಹೆ ನೀಡಿದೆ. ಎರಡನೆಯದಾಗಿ ಅತ್ಯಂತ ಪರಿಣಾಮಕಾರಿಯಾಗಿ ಜಿಎಸ್‌ಟಿ ಅನುಷ್ಠಾನಗೊಳಿಸುವ ಮೂಲ ಉದ್ದೇಶಕ್ಕೆ ಪೂರಕವಾದ ತಂತ್ರಜ್ಞಾನವನ್ನು ಪೂರೈಸಲು ಮತ್ತು ದೇಶದ ಎಲ್ಲ ವರ್ಗದ ಜನರನ್ನೂ ತಲುಪುವ ದೃಷ್ಟಿಯಿಂದ 'ಡಿಜಿಟಲ್ ಇಂಡಿಯಾ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ. ಅತಿ ಕಡಿಮೆ ಅವಧಿಯಲ್ಲಿ ದೇಶದ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ಎಲ್ಲ ರಾಜ್ಯಗಳಲ್ಲಿ ಗರಿಷ್ಠ ವೇಗದ ಸಂಪರ್ಕ ಜಾಲವನ್ನು ಒಳಗೊಂಡ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಅಳವಡಿಸುವುದೂ ಸಹ ಮೂಲ ಸವಾಲಾಗಿದೆ. ಇದಲ್ಲದೆ ಇಡೀ ತೆರಿಗೆ ಆಡಳಿತವು ಜಿಎಸ್‌ಟಿ ನಿರ್ವಹಿಸಲು ಸಾಮರ್ಥ್ಯ ಒದಗಿಸುವುದೂ ಮುಖ್ಯವಾಗಿದೆ. ನಿಗದಿತ ಸೌಲಭ್ಯಗಳ ಪಟ್ಟಿಯೊಳಗೆ ರಾಜ್ಯ



ಜಿಎಸ್‌ಟಿ ಜಾರಿಗೊಳಿಸುವ ಸ್ವಾತಂತ್ರ್ಯದ ಪ್ರಸ್ತಾವವೂ ಏಕೀಕೃತ ಜಿಎಸ್‌ಟಿಯ ಮೂಲ ಉದ್ದೇಶವನ್ನು ದುರ್ಬಲಗೊಳಿಸುತ್ತದೆ. ಆದ್ದರಿಂದ ದೇಶದಾದ್ಯಂತ ಏಕರೂಪದ ಜಿಎಸ್‌ಟಿ ಜಾರಿಗೊಳಿಸಲು ತೆರಿಗೆ ವಿಚಾರದಲ್ಲಿ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯು ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರದ ಜನಪ್ರತಿನಿಧಿಗಳಿಂದ ಮತದಾನದ ಮೂಲಕ ಪಡೆದ ಒಪ್ಪಿಗೆ ಮತ್ತು ಸಲಹೆಗಳ ಸಂಗ್ರಹವನ್ನು ಒಗ್ಗೂಡಿಸಿ ಒಟ್ಟು ಅಭಿಪ್ರಾಯವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅತ್ಯಂತ ಶಕ್ತಿಯುತವಾದ ಜಿಎಸ್‌ಟಿ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಮೂರನೇ ಒಂದಕ್ಕಿಂತ ಹೆಚ್ಚು ಮತಗಳನ್ನು ಪಡೆದು ಬಹುದೊಡ್ಡ ಸಮಸ್ಯೆಯನ್ನು ನಿವಾರಿಸಿಕೊಂಡಿದೆ. ಇದೇ ಮೊದಲ ಬಾರಿಗೆ ಎಲ್ಲ ರಾಜಕೀಯ ಪಕ್ಷಗಳೂ ಒಂದಾಗಿ ಜಿಎಸ್‌ಟಿ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿವೆ. ಇದೊಂದು ಪ್ರಬುದ್ಧ ಮಸೂದೆ ಮಾತ್ರವಲ್ಲ; ಕೇಂದ್ರ ಸರ್ಕಾರದ ಸಾಧನೆಯನ್ನು ನಿಜವಾಗಿಯೂ ಮೆಚ್ಚಲೇಬೇಕು. ಜಿಎಸ್‌ಟಿ ಪೋರ್ಟಲ್‌ನಲ್ಲಿ ಒಟ್ಟು 7.5 ದಶಲಕ್ಷ ವ್ಯಾಪಾರಗಳ ನೊಂದಣಿ, ಪಾವತಿ ಮಾಡುವುದು ಮತ್ತು ಕಡತ ವಿಲೇವಾರಿ ಮಾಡಬಹುದಾಗಿದ್ದು, ಜಗತ್ತಿನ ಅತ್ಯಂತ ಸಂಕೀರ್ಣ ತೆರಿಗೆ ಸುಧಾರಣೆಯ ಜಿಎಸ್‌ಟಿ ಇದಾಗಿದೆ.

ಭಾರತದಲ್ಲಿ ಜಾರಿಯಲ್ಲಿರುವ ವಿವಿಧ ಹಂತದ ತೆರಿಗೆಗಳು, ವಿನಾಯಿತಿ, ತೆರಿಗೆ ಅನುಸರಣೆಯ ವೆಚ್ಚ ಎಲ್ಲವೂ ಹೆಚ್ಚಾಗಿದೆ. ವ್ಯಾಪಾರಸ್ಥರಿಗೆ ಈ ಮೂಲಕ ಬಹುದೊಡ್ಡ ಪರಿಹಾರ ಸಿಕ್ಕಂತಾಗಿದೆ. ಒಟ್ಟಾರೆ ಈ ಮೂಲಕ ಸುಧಾರಣೆಯ ಹೆಗ್ಗುರುತಾಗಿ ಉಳಿಯಬೇಕಾಗಿದೆ. ಆದರೆ, ಜಿಎಸ್‌ಟಿ ಸ್ಪಷ್ಟ ಮತ್ತು ನಿರ್ವಿವಾದದಿಂದ ಕೂಡಿದ್ದರೂ ಕೆಲವು ಶಕ್ತಿಗಳಿಗೆ ಅಡ್ಡದಾರಿಗಳು ಇದ್ದೇ ಇವೆ. ಇದೆಲ್ಲದರ ನಡುವೆ ಜಿಎಸ್‌ಟಿ ಅನುಷ್ಠಾನದ ಯಶಸ್ಸನ್ನು ಕಾಲವೇ ಹೇಳಲಿದೆ. ❑

# ಕಪ್ಪು ಹಣದ ನಿವಾರಣೆಗೆ ಸರ್ಕಾರದ ಕ್ರಮ

* ದಿಲಾಶಾ ಸೇಠ್



ಕಪ್ಪುಹಣ ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಬಹು ಹಂತದ ಕಾರ್ಯತಂತ್ರಗಳನ್ನು ಅನುಸರಿಸುತ್ತಿದೆ. ಐಡಿಎಸ್ ಪದ್ಧತಿಯಲ್ಲದೆ ವಿದೇಶಿ ಆಸ್ತಿ ಘೋಷಣೆ ಪದ್ಧತಿ ಕಪ್ಪುಹಣ ಪತ್ತೆಗೆ ವಿಶೇಷ ತನಿಖಾ ತಂಡ ರಚನೆ, ದ್ವಿಪಕ್ಷೀಯ ತೆರಿಗೆ ಒಪ್ಪಂದಗಳ ಮರುಕಾರ್ಯಸೂಚಿ, ಎರಡು ಲಕ್ಷಕ್ಕೂ ಅಧಿಕ ವಹಿವಾಟುಗಳಿಗೆ ಪ್ಯಾನ್ ಕಾರ್ಡ್ ಕಡ್ಡಾಯ, ಹಲವು ರಾಷ್ಟ್ರಗಳೊಂದಿಗೆ ಮಾಹಿತಿ ವಿನಿಮಯ ಒಪ್ಪಂದಗಳಿಗೆ ಸಹಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.

ಸೆಪ್ಟೆಂಬರ್ 30ರಂದು ಮಧ್ಯರಾತ್ರಿ ಕಳೆಯಲು ಎರಡು ಗಂಟೆ ಇದೆ ಎನ್ನಬೇಕಾದರೆ ದೇಶಾದ್ಯಂತ ಹಲವು ತೆರಿಗೆ ಕಚೇರಿಗಳಲ್ಲಿ ಜನರ ಭರಾಟೆ, ಗಲಾಟೆ ಇರುವುದು ಕಂಡುಬಂತು. ಹಲವರು ಕಂಪ್ಯೂಟರ್ ಮುಂದೆ ಕುಳಿತು ತಮ್ಮ ಒಡೆತನದಲ್ಲಿರುವ ಅಕ್ರಮ ಆಸ್ತಿ–ಪಾಸ್ತಿಯನ್ನು ಘೋಷಿಸಿ ಶುದ್ಧಹಸ್ತರಾಗಿ ಹೊರಬರಲು ಯತ್ನಿಸುತ್ತಿದ್ದರು. ಕೇಂದ್ರ ಸರ್ಕಾರ ಜೂನ್ 1 ರಿಂದ ಸೆಪ್ಟೆಂಬರ್ 30ರವರೆಗೆ ಕಪ್ಪು ಹಣ ಘೋಷಣೆಗೆ 4 ತಿಂಗಳ ಕಾಲಾವಕಾಶ ನೀಡಿತ್ತು. ಈ ಸಂದರ್ಭದಲ್ಲಿ 64,275 ಸಾರ್ವಜನಿಕರು ಈ ಅವಕಾಶವನ್ನು ಬಳಕೆ ಮಾಡಿಕೊಂಡರು. ಸರ್ಕಾರ ಕಪ್ಪುಹಣ ತಡೆಗೆ ಸಮರೋಪಾದಿ ಕ್ರಮಗಳನ್ನು ಕೈಗೊಂಡಿರುವ ಹಿನ್ನೆಲೆಯಲ್ಲಿ ಮಧ್ಯರಾತ್ರಿ ತಮ್ಮ ಆಸ್ತಿಗಳನ್ನು ಘೋಷಿಸಿಕೊಂಡ ಹಲವರು ಭವಿಷ್ಯದಲ್ಲಿ ನೆಮ್ಮದಿಯಿಂದ ನಿದ್ದೆ ಮಾಡಬಹುದಾಗಿದೆ. ಈಗ ಅಕ್ರಮ ಆಸ್ತಿ ಘೋಷಿಸಿಕೊಂಡಿರುವವರು ಆದಾಯ ತೆರಿಗೆ ಕಾಯ್ದೆ, ಸಂಪತ್ತು ಕಾಯ್ದೆ ಮತ್ತು ಬೇನಾಮಿ ಕಾಯ್ದೆಯಡಿ ವಿಚಾರಣೆ ಎದುರಿಸುವುದರಿಂದ ಪಾರಾಗಲಿದ್ದಾರೆ. ಸರ್ಕಾರ ಈ ಆದಾಯ ಘೋಷಣೆ ಪದ್ಧತಿ (ಐಡಿಎಸ್) ಯೋಜನೆಯಡಿ ಈವರೆಗೆ 65 ಸಾವಿರದ 250 ಕೋಟಿ ರೂಪಾಯಿ ಘೋಷಣೆಯಾಗಿದ್ದು, ಅದರಿಂದ ಕೇಂದ್ರ ಸರ್ಕಾರ ಮುಂದಿನ ಸೆಪ್ಟೆಂಬರ್ ವರೆಗೆ ಸುಮಾರು 30 ಸಾವಿರ ಕೋಟಿ ಆದಾಯ ನಿರೀಕ್ಷಿಸುತ್ತಿದೆ. ಅಕ್ರಮ ಆಸ್ತಿಗೆ ಹೋಲಿಸಿದರೆ ಈ ಪ್ರಮಾಣ ಕಡಿಮೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಈ ಕಪ್ಪುಹಣ ಪತ್ತೆಹಚ್ಚುವ ಕಾಯಕವನ್ನು ಯೋಜನಾ ಬದ್ಧವಾಗಿ ಕೈಗೊಂಡಿದ್ದಾರೆ. ಅವರು ಕಳೆದ ತಿಂಗಳು ಸೆಪ್ಟೆಂಬರ್ 30ರ ನಂತರ ತೆರಿಗೆ ವಂಚನೆದಾರರು ಕಠಿಣ ನಿರ್ಧಾರಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ದೇಶದಲ್ಲಿ ಸುಮಾರು 120 ಕೋಟಿ ಜನಸಂಖ್ಯೆ ಇದೆ. ಅವರಲ್ಲಿ ಶೇಕಡ 5ಕ್ಕೂ ಕಡಿಮೆ ಅಥವಾ 5.43ರಷ್ಟು ಜನರು ತೆರಿಗೆ ಪಾವತಿಸುತ್ತಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ವಂಚಿಸುವ ಜನರಿರುವ ಹಿನ್ನೆಲೆಯಲ್ಲಿ ಪ್ರಾಮಾಣಿಕ ತೆರಿಗೆ ಪಾವತಿದಾರರಿಗೆ ತೆರಿಗೆ ಹೊರೆ ಹೆಚ್ಚಾಗುತ್ತಿದೆ. ಆದರೂ ದೇಶದಲ್ಲಿ ಕಪ್ಪುಹಣದ ಹರಿವಿನ ಪ್ರಮಾಣ ಎಷ್ಟಿದೆ ಎಂದು ಅಂದಾಜಿಸುವುದು ಕಷ್ಟಕರ. ಹಲವು ಅಂದಾಜು ಮತ್ತು ವರದಿಗಳ ಪ್ರಕಾರ ಭಾರತದ ಈ ಎರಡು ಟ್ರಿಲಿಯನ್ ಡಾಲರ್ ಆರ್ಥಿಕ ವ್ಯವಸ್ಥೆಯಲ್ಲಿ ಶೇಕಡ 20 ರಿಂದ 70ರಷ್ಟು ಕಪ್ಪುಹಣ ಇದೆ ಎನ್ನಲಾಗಿದೆ. ಸ್ವಿಸ್ ಸರ್ಕಾರದ ಪ್ರಕಾರ 2010ರ ಅಂತ್ಯದ ವೇಳೆಗೆ ಭಾರತೀಯರು ಸ್ವಿಸ್ ಬ್ಯಾಂಕ್‌ಗಳಲ್ಲಿ 9 ಸಾವಿರದ 500 ಕೋಟಿಗೂ ಅಧಿಕ ಹಣವನ್ನು ಠೇವಣಿ ಹೂಡಿದ್ದರು. ಅದರಲ್ಲಿ 8 ಲಕ್ಷ ಕೋಟಿ ಮೌಲ್ಯದಿಂದ ನೇರ ತೆರಿಗೆ ಬರುತ್ತಿದೆ. ವೈಯಕ್ತಿಕ ಆದಾಯದಿಂದ ಶೇಕಡ 40ರಷ್ಟು ಮತ್ತು ಕಾರ್ಪೊರೇಟ್ ಆದಾಯದಿಂದ ಶೇಕಡ 60ರಷ್ಟು ಆದಾಯ ಬರುತ್ತಿದೆ. ತೆರಿಗೆ ವ್ಯಾಪ್ತಿಯನ್ನು ವಿಸ್ತಾರಗೊಳಿಸುವುದು ಅತ್ಯಗತ್ಯವಾಗಿದೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ 25 ಕೋಟಿ ಜನರು ಪ್ಯಾನ್ ಕಾರ್ಡ್ ಹೊಂದಿದ್ದರೂ ಕೇವಲ 5.43 ಕೋಟಿ ಜನ ತೆರಿಗೆ ಪಾವತಿಸುತ್ತಿದ್ದಾರೆ. ಸರ್ಕಾರ ಕಪ್ಪುಹಣದ

* ವಿಶೇಷ ಬಾತ್ಮೀದಾರರು, ಬಿಸಿನೆಸ್ ಸ್ಟ್ಯಾಂಡರ್ಡ್. E-mail : dilashaseth@gmail.com

ವಿರುದ್ಧ ಕಠಿಣ ನಿಲುವು ತಾಳುತ್ತಿರುವ ಹಿನ್ನೆಲೆಯಲ್ಲಿ ತೆರಿಗೆ ವಂಚನೆದಾರರಿಗೆ ಕಷ್ಟಕರ ದಿನಗಳು ಎದುರಾಗಿವೆ. ಅಲ್ಲದೆ ಸಾಗರೋತ್ತರ ರಾಷ್ಟ್ರಗಳಲ್ಲಿ ಅಕ್ರಮವಾಗಿ ಹೂಡಿರುವ ಅಘೋಷಿತ ಸಂಪತ್ತು ಹೊಂದಿರುವವರೂ ಸಹ ಕಠಿಣ ಕ್ರಮ ಎದುರಿಸುವಂತಾಗಿದೆ.

ಈ ಕಪ್ಪುಹಣ ದಂಧೆಯನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಬಹು ಹಂತದ ಕಾರ್ಯತಂತ್ರಗಳನ್ನು ಅನುಸರಿಸುತ್ತಿದೆ. ಐಡಿಎಸ್ ಪದ್ಧತಿಯಲ್ಲದೆ ವಿದೇಶಿ ಆಸ್ತಿ ಘೋಷಣೆ ಪದ್ಧತಿ ಕಪ್ಪುಹಣ ಪತ್ತೆಗೆ ವಿಶೇಷ ತನಿಖಾ ತಂಡ(ಎಸ್ಐಟಿ) ರಚನೆ, ದ್ವಿಪಕ್ಷೀಯ ತೆರಿಗೆ ಒಪ್ಪಂದಗಳ ಮರುಕಾರ್ಯಸೂಚಿ, ಎರಡು ಲಕ್ಷಕ್ಕೂ ಅಧಿಕ ವಹಿವಾಟುಗಳಿಗೆ ಪ್ಯಾನ್ ಕಾರ್ಡ್ ಕಡ್ಡಾಯ, ಹಲವು ರಾಷ್ಟ್ರಗಳೊಂದಿಗೆ ಮಾಹಿತಿ ವಿನಿಮಯ ಒಪ್ಪಂದಗಳಿಗೆ ಸಹಿ ಸೇರಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂದಿನ ಹಣಕಾಸು ವರ್ಷದಿಂದ ಅತಿದೊಡ್ಡ ತೆರಿಗೆ ಸುಧಾರಣಾ ವ್ಯವಸ್ಥೆ – ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಜಾರಿಗೊಳಿಸುವುದರಿಂದ ಪರೋಕ್ಷ ತೆರಿಗೆ ವಂಚನೆದಾರರಿಗೆ ಇನ್ನೂ ಕಠಿಣ ದಿನಗಳು ಎದುರಾಗಲಿವೆ. ಇದರಿಂದ ತೆರಿಗೆ ಸಂಗ್ರಹ ವ್ಯವಸ್ಥೆ ಸಾಕಷ್ಟು ಸುಧಾರಿಸಲಿದೆ. ಜಿಎಸ್‌ಟಿ ಪದ್ಧತಿ ಜಾರಿಯಿಂದ ಕೇಂದ್ರ ಮತ್ತು ರಾಜ್ಯಗಳು ಇದೀಗ ಅಪರೋಕ್ಷವಾಗಿ ವಿಧಿಸುತ್ತಿರುವ ಸೇವಾ ತೆರಿಗೆ, ಅಬಕಾರಿ ಸುಂಕ, ಆಕ್ಟ್ರಾಯ್, ಮೌಲ್ಯವರ್ಧಿತ ತೆರಿಗೆಗಳು, ಮತ್ತಿತರ ತೆರಿಗೆಗಳು ಇಲ್ಲವಾಗಲಿವೆ.

### ತೆರಿಗೆ ವಂಚನೆದಾರರ ವಿರುದ್ಧ ಕ್ರಮ

ವಿತ್ತ ಸಚಿವಾಲಯದ ಪ್ರಕಾರ ಮೇಲ್ದರ್ಜೆಗೇರಿಸಿದ ಪ್ಯಾನ್ ಅಂಕಿ–ಅಂಶ ಉಲ್ಲೇಖಿಸಿ ಮೂರನೇ ವ್ಯಕ್ತಿ ನೀಡಿದ ಮಾಹಿತಿಯನ್ನು ಅನುಸರಿಸಿ ಕೈಗೊಂಡ ಕಠಿಣ ಕ್ರಮಗಳ ಮೂಲಕ ಸುಮಾರು 16 ಸಾವಿರ ಕೋಟಿ ರೂಪಾಯಿ ತೆರಿಗೆ ಸಂಗ್ರಹ ಮಾಡಲಾಗಿದೆ.

ಪ್ರಸ್ತುತ ಶೇಕಡ 92ರಷ್ಟು ತೆರಿಗೆ ಆದಾಯವನ್ನು ಮೂಲದಲ್ಲಿಯೇ ತೆರಿಗೆ ಕಡಿತ (ಟಿಡಿಎಸ್), ಮುಂಗಡ ತೆರಿಗೆ ಪಾವತಿ ಮತ್ತು ಸ್ವಯಂ ಆಸ್ತಿ ಘೋಷಣೆ ಪದ್ಧತಿಯಿಂದಾಗಿ ಸಂಗ್ರಹಿಸಲಾಗುತ್ತದೆ. ಶೇಕಡ 8ರಷ್ಟು ಆದಾಯ ಪರಿಶೀಲನೆ ನಂತರ ಸಂಗ್ರಹವಾಗುತ್ತಿದೆ. ಇದು ಬದಲಾಗುವ ಕಾಲ ಸನ್ನಿಹಿತವಾಗಿದೆ. ತೆರಿಗೆ ವಂಚಕರನ್ನು ಹಿಡಿಯುವ ಸಲುವಾಗಿ ತಾಂತ್ರಿಕ ಬೆಂಬಲದ ಮೊರೆ ಹೋಗಿರುವ ಇಲಾಖೆ ಎಲ್ ಅಂಡ್ ಟಿ ಇನ್ಫೋಟೆಕ್ ಸಹಾಯದ ಮೂಲಕ 'ಪ್ರಾಜೆಕ್ಟ್ ಇನ್‌ಸೈಟ್'ನಿಂದ ಪ್ಯಾನ್ ಸಂಖ್ಯೆ ವಿವರದ ಮೂಲಕ ಎಲ್ಲ ವರ್ಗದ ಜನರ ಆದಾಯ ಮೂಲ ಹಾಗೂ ಅವರ ವಹಿವಾಟುಗಳ ಮೇಲೆ ಆದಾಯ ತೆರಿಗೆ ಇಲಾಖೆ ನಿಗಾವಹಿಸುತ್ತಿದೆ. ವ್ಯಕ್ತಿ ನಡೆಸುವ ಸ್ಥಿರಾಸ್ತಿ ಖರೀದಿ, ಆಭರಣ ಮತ್ತು ವಾಹನ ಖರೀದಿ ಮತ್ತಿತರ ವಹಿವಾಟುಗಳ ಮೇಲೆ ವ್ಯವಸ್ಥಿತ ರೀತಿಯಲ್ಲಿ ತೆರಿಗೆ ಇಲಾಖೆ ಮಾಹಿತಿ ಸಂಗ್ರಹಿಸುತ್ತಿದ್ದು, ಇದರಿಂದ ತೆರಿಗೆ ವಂಚನೆದಾರರನ್ನು ಪತ್ತೆ ಹಚ್ಚುವುದು ಸುಲಭ. ಈ ಪ್ರಾಜೆಕ್ಟ್ ಮೂಲಕ ತೆರಿಗೆ ವಂಚನೆದಾರರ ವಂಚನೆ ಹಣ ಆಧರಿಸಿ ಅವರಿಗೆ ಶ್ರೇಣಿ ನೀಡುವ ನಿರೀಕ್ಷೆ ಇದ್ದು, ಆ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ವಂಚನೆ ಮಾಡುವವರನ್ನು ಅಧಿಕಾರಿಗಳು ಬೆನ್ನುಹತ್ತುವುದು ಸಾಧ್ಯವಾಗುತ್ತದೆ. ಈ ಯೋಜನೆಯನ್ವಯ ನೇರ ತೆರಿಗೆಗಳ ಕೇಂದ್ರೀಯ ಮಂಡಳಿ, ವಿಚಕ್ಷಣಾ ದಳ ಮತ್ತು ಇತರ ಸಂಸ್ಥೆಗಳು ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ.

ಈ ಮಧ್ಯೆ, ಕೇಂದ್ರ ಸರ್ಕಾರ 2016ರ ಜನವರಿ 1 ರಿಂದ ಜಾರಿಗೆ ಬರುವಂತೆ 2 ಲಕ್ಷ ಮೇಲ್ಪಟ್ಟ ಎಲ್ಲಾ ವಹಿವಾಟುಗಳಿಗೆ ಪ್ಯಾನ್ ಸಂಖ್ಯೆ ನೀಡುವುದು ಕಡ್ಡಾಯಗೊಳಿಸಿದೆ. ಅಲ್ಲದೆ ಮೊದಲು 5 ಲಕ್ಷ ಮೇಲ್ಪಟ್ಟು ಚಿನ್ನದಾಭರಣ ಖರೀದಿಸಿದಾಗ ಮಾತ್ರ ಪ್ಯಾನ್‌ಕಾರ್ಡ್ ನೀಡಬೇಕೆಂಬ ಕಡ್ಡಾಯವಿತ್ತು. ಅದನ್ನು ಈಗ 2 ಲಕ್ಷ ರೂಪಾಯಿಗೆ ಸೀಮಿತಗೊಳಿಸಲಾಗಿದೆ. ಅಂಚೆ ಇಲಾಖೆ, ಸಹಕಾರ ಬ್ಯಾಂಕ್‌ಗಳು, ನಿಧಿಗಳು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳಲ್ಲಿ ಇಡುವ ಠೇವಣಿಗಳಿಗೂ ಪ್ಯಾನ್ ಕಡ್ಡಾಯ ಮಾಡಲಾಗಿದೆ. ಬ್ಯಾಂಕುಗಳು ಯಾವುದೇ ವ್ಯಕ್ತಿಯಿಂದ ಹತ್ತು ಲಕ್ಷ ಅಥವಾ ಅದಕ್ಕಿಂತಲೂ ಅಧಿಕ ನಗದು ಹಣ ಸ್ವೀಕರಿಸಿದರೆ, ಯಾವುದೇ ವ್ಯಕ್ತಿಗೆ ಒಂದು ವರ್ಷದಲ್ಲಿ ಕ್ರೆಡಿಟ್ ಕಾರ್ಡ್ ಮೂಲಕ ಎರಡು ಲಕ್ಷಕೂ ಅಧಿಕ ಬಿಲ್‌ಗಳನ್ನು ಬ್ಯಾಂಕ್ ಅಥವಾ ಕಂಪನಿ ಪಾವತಿಸಿದರೆ, 2 ಲಕ್ಷ ಅಥವಾ ಅದಕ್ಕೂ ಅಧಿಕ ಮೊತ್ತದ ಮ್ಯೂಚುಯಲ್ ಫಂಡ್‌ಗಳನ್ನು ಮಾರಾಟ



ಮಾಡಿದರೆ 5 ಲಕ್ಷಕ್ಕೂ ಅಧಿಕ ಷೇರುಗಳನ್ನು ಕಂಪನಿ ಸ್ವೀಕರಿಸಿದರೆ ಅಥವಾ ಬಾಂಡ್ ಮತ್ತು ಡಿಬೆಂಚರ್‌ಗಳನ್ನು ಖರೀದಿಸಿದರೆ, 30 ಲಕ್ಷಕ್ಕೂ ಅಧಿಕ ಮೊತ್ತದ ಸ್ಥಿರಾಸ್ತಿ ಖರೀದಿ ಅಥವಾ ಮಾರಾಟ ಮಾಡಿದರೆ ಆರ್‌ಬಿಐನಿಂದ ಐದು ಲಕ್ಷಕ್ಕೂ ಅಧಿಕ ಮೊತ್ತದ ಬಾಂಡ್ ಖರೀದಿಸಿದರೆ ಅವುಗಳನ್ನೆಲ್ಲ ಉಲ್ಲೇಖಿಸುವುದು ಕಡ್ಡಾಯವಾಗಿದೆ.

### ಐಟಿ ವ್ಯಾಪ್ತಿ ವಿಸ್ತರಣೆ

ಕಳೆದ ಎರಡೂವರೆ ವರ್ಷಗಳಲ್ಲಿ ಆದಾಯ ತೆರಿಗೆ ಇಲಾಖೆಯಿಂದ ಶೋಧ ಹಾಗೂ ಪತ್ತೆಕಾರ್ಯ ಗಣನೀಯವಾಗಿ ಹೆಚ್ಚಾಗಿದೆ. ಈ ಅವಧಿಯಲ್ಲಿ 1986 ಕೋಟಿ ಅಕ್ರಮ ಹಣ ಪತ್ತೆಮಾಡಿರುವುದಲ್ಲದೆ 56 ಸಾವಿರದ 378 ಕೋಟಿ ಅಘೋಷಿತ ಆದಾಯ ಇಲಾಖೆಗೆ ಬಂದಿದೆ. ಆದಾಯ ತೆರಿಗೆ ಇಲಾಖೆ ನಡೆಸಿರುವ ಬಹುತೇಕ ಶೋಧ ಹಾಗೂ ಪತ್ತೆಕಾರ್ಯ ವೈದ್ಯಕೀಯ ಮತ್ತು ಶಿಕ್ಷಣ ವಲಯಕ್ಕೆ ಸಂಬಂಧಿಸಿದ್ದಾಗಿದೆ.

ಐಡಿಎಸ್ ಯೋಜನೆಯಡಿ ನೇರ ತೆರಿಗೆಗಳ ಕೇಂದ್ರೀಯ ಮಂಡಳಿ ಮೂರನೇ ವ್ಯಕ್ತಿ ನೀಡಿದ ಮಾಹಿತಿ ಆಧರಿಸಿ ಸುಮಾರು 7 ಲಕ್ಷ ಮಂದಿಗೆ ವೈಯಕ್ತಿಕವಾಗಿ ಪತ್ರಗಳನ್ನು ಕಳುಹಿಸಿ ಶುದ್ಧಹಸ್ತರಾಗಿ ಹೊರಬರುವಂತೆ ಸೂಚಿಸುವ ಮೂಲಕ ಪರಿಣಾಮಕಾರಿ ಕೆಲಸ ಮಾಡಿದೆ. ಪ್ಯಾನ್ ಕಾರ್ಡ್ ಬಳಸದ ಸುಮಾರು 90 ಲಕ್ಷ ವಹಿವಾಟುಗಳ ಮಾಹಿತಿ ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ. ವಾರ್ಷಿಕ ಆದಾಯ ತೆರಿಗೆ ರಿಟರ್ನ್ಸ್ ಪರಿಶೀಲನೆಯಲ್ಲಿ ಉಳಿತಾಯ ಖಾತೆಯಲ್ಲಿ ಹತ್ತು ಲಕ್ಷಕ್ಕೂ ಅಧಿಕ ಹಣ ಠೇವಣಿ ಇಟ್ಟಿದ್ದ, 30 ಲಕ್ಷಕ್ಕೂ ಅಧಿಕ ಮೊತ್ತದ ಸ್ಥಿರಾಸ್ತಿ ಖರೀದಿ ಅಥವಾ ಮಾರಾಟ ಮಾಡಿದ ಪ್ರಕರಣಗಳೂ ಸೇರಿದಂತೆ ಪ್ಯಾನ್ ಬಳಸದ ಹಲವು ವಹಿವಾಟುಗಳನ್ನು ಪತ್ತೆಹಚ್ಚಲಾಗಿದೆ. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಕೆಲ ತಿಂಗಳುಗಳ ಹಿಂದೆ ತೆರಿಗೆ

ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತ, ನೇರ ತೆರಿಗೆಗಳ ಕೇಂದ್ರ ಮಂಡಳಿ(ಸಿಬಿಡಿಟಿ) ಅಡಿ ಸುಮಾರು 42 ಸಾವಿರ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು ನೇರ ತೆರಿಗೆಗಳ ಜಾಲ ಮತ್ತಷ್ಟು ಹೆಚ್ಚಾಗಬೇಕು ಎಂದು ಕರೆ ನೀಡಿದರು. ನೇರ ತೆರಿಗೆಗಳ ಕೇಂದ್ರೀಯ ಮಂಡಳಿ ಗಣಿ ಚಟುವಟಿಕೆಗಳಲ್ಲಿ ತೊಡಗಿರುವ ಎಲ್ಲ ಕಂಪನಿಗಳ ತೆರಿಗೆ ರಿಟರ್ನ್ಸ್ ಮತ್ತಿತರ ವಿವರಗಳನ್ನು ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದೆ.

ಪರೋಕ್ಷ ತೆರಿಗೆಗಳ ಪ್ರಕರಣಕ್ಕೆ ಬಂದರೆ ಪರಿಣಾಮಕಾರಿ ಜಾರಿ ಕ್ರಮಗಳಿಂದಾಗಿ ಸುಮಾರು 50 ಸಾವಿರ ಕೋಟಿ ಪರೋಕ್ಷ ತೆರಿಗೆ ವಂಚನೆಯನ್ನು ಪತ್ತೆಹಚ್ಚಲಾಗಿದೆ ಮತ್ತು 21 ಸಾವಿರ ಕೋಟಿ ಅಘೋಷಿತ ಆದಾಯವನ್ನು ಸಂಗ್ರಹಿಸಲಾಗಿದೆ.


### ನಗದು ವಹಿವಾಟು ತಡೆಗೆ ಎಸ್‌ಐಟಿ

ಕಪ್ಪು ಹಣ ಪತ್ತೆಗೆ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಬಿ. ಶಾ ನೇತೃತ್ವದಲ್ಲಿ 2014ರಲ್ಲಿ ವಿಶೇಷ ತನಿಖಾ ತಂಡ – ಎಸ್‌ಐಟಿ ರಚನೆ ಮಾಡಲಾಗಿದೆ. ಈ ತಂಡ 3 ಲಕ್ಷ ಮೀರಿದ ಎಲ್ಲಾ ವಹಿವಾಟುಗಳ ಮೇಲೆ ನಿಗಾ ಇರಿಸುತ್ತಿದೆ. ಅಲ್ಲದೆ 15 ಲಕ್ಷಕ್ಕೂ ಮೇಲ್ಪಟ್ಟ ಎಲ್ಲಾ ನಗದು ವರ್ಗಾವಣೆಗಳ ಮೇಲೂ ಕಣ್ಣಿಟ್ಟಿದೆ. ನಾನಾ ರಾಷ್ಟ್ರಗಳ ಕಾನೂನುಗಳ ಬಗ್ಗೆ ಪರಿಶೀಲನೆ ನಡೆಸಿರುವ ಎಸ್‌ಐಟಿ ನೀಡಿರುವ ಶಿಫಾರಸ್ಸಿನ್ನು ಅಂಗೀಕರಿಸಿದರೆ ಅಕ್ರಮ ಹಣದ ಮೇಲೆ ನಡೆಸುವ ವಹಿವಾಟುಗಳು ಅಕ್ರಮವಾಗಿದ್ದು, ಅದು ಕಾನೂನು ಪ್ರಕಾರ ಶಿಕ್ಷಾರ್ಹ. ಈ ಮಧ್ಯೆ ಎಸ್‌ಐಟಿ, ಕಂದಾಯ ಇಲಾಖೆ ಮತ್ತು ಇತರ ಇಲಾಖೆಗಳ ಜತೆ ಸಮಾಲೋಚನೆ ನಡೆಸಿ, ಆಮದು ರಫ್ತು ವಹಿವಾಟು ವಿದೇಶಿ ವಿನಿಮಯ (ಫರೆಕ್ಸ್) ವಹಿವಾಟುಗಳು ದೇಶದಿಂದ ಅಕ್ರಮ ಹಣ ಹರಿವು ತಡೆಯುವುದರ ಬಗ್ಗೆ ತನಿಖೆ ನಡೆಸಲು ಸಾಂಸ್ಥಿಕ ಕಾರ್ಯತಂತ್ರ ಅಭಿವೃದ್ಧಿಪಡಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ – ಆರ್‌ಬಿಐಗೆ ಸೂಚಿಸಿದೆ. ಅಕ್ರಮ ಹಣ ಪತ್ತೆಗೆ ಜಾರಿ ನಿರ್ದೇಶನಾಲಯ, ಕಂದಾಯ ವಿಚಕ್ಷಣಾ ಇಲಾಖೆ ಮತ್ತಿತರ ಸಂಸ್ಥೆಗಳ ಜೊತೆ ಆರ್‌ಬಿಐ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ಕಾರ್ಯತಂತ್ರ ಅನುಸರಿಸುತ್ತಿದೆ. ಭಾರತದಿಂದ ರಫ್ತು ಗಳಿಕೆ ತೋರಿಸದೆ ಸುಂಕ ವಾಪಸ್ ಪಡೆದಿರುವ ಕಂಪನಿಗಳ ವಿರುದ್ಧ ಕಂದಾಯ ಇಲಾಖೆಯ ವಿಚಕ್ಷಣಾ ನಿರ್ದೇಶನಾಲಯ ಕ್ರಮ ಕೈಗೊಂಡಿದೆ. ಇದರಡಿ ಎರಡು ವಿಭಾಗಗಳಲ್ಲಿ ದೇಶ ಹಣ ಕಳೆದುಕೊಳ್ಳುತ್ತಿದೆ. ಮೊದಲನೆಯದಾಗಿ ರಫ್ತು ವಹಿವಾಟುಗಳನ್ನು ನಡೆಸದಿರುವುದು ಮತ್ತು ಎರಡನೆಯದಾಗಿ ತಪ್ಪಾಗಿ ಸುಂಕ ವಾಪಸಾತಿ ಮಾಡಿಕೊಳ್ಳುತ್ತಿರುವುದು.

### ವಿದೇಶದಲ್ಲಿ ಹೂಡಿರುವ ಲೆಕ್ಕವಿಲ್ಲದ ಹಣ

ನಾನಾ ರಾಷ್ಟ್ರಗಳ ಜೊತೆ ಮಾಡಿಕೊಂಡಿರುವ ಮಾಹಿತಿ ವಿನಿಮಯ ಒಪ್ಪಂದಗಳಿಂದಾಗಿ ಸಾಗರೋತ್ತರ ರಾಷ್ಟ್ರಗಳಲ್ಲಿ ಅಕ್ರಮವಾಗಿ ಹೂಡಿರುವ ಕಪ್ಪು ಹಣವನ್ನು ಪತ್ತೆ ಹೆಚ್ಚುವುದು ಇನ್ನೂ ಸವಾಲಿನ ಕೆಲಸವಾಗಿದೆ. ಕಳೆದ ವರ್ಷದಿಂದ ಜಾರಿಗೆ ಬಂದ ಭಾರತ–ಅಮೆರಿಕ ವಿದೇಶಿ ಖಾತೆ ತೆರಿಗೆ ಪಾವತಿ ಒಪ್ಪಂದ (ಎಫ್‌ಎಟಿಸಿಎ)ಯಿಂದಾಗಿ ಹೊರ ದೇಶಗಳಲ್ಲಿನ ಸಂಪತ್ತಿನಿಂದ ವರದಿಯಾದ ಆದಾಯಕ್ಕೆ ತೆರಿಗೆ ಪಾವತಿಸುವುದು ಕಡ್ಡಾಯಗೊಳಿಸುವ ಗುರಿ ಇದೆ. ಭಾರತ ಈಗಾಗಲೇ ಎಫ್‌ಎಟಿಸಿಎ ಅನ್ವಯ ಮಾಹಿತಿಯನ್ನು ಸ್ವೀಕರಿಸುತ್ತಿದೆ. 2017ರ ನಂತರ ಭಾರತ ಆಟೊಮೆಟಿಕ್ ಮಾಹಿತಿ ವಿನಿಮಯ ಪದ್ಧತಿಯ ಮೂಲಕ ಇತರ ದೇಶಗಳಿಂದಲೂ ಮಾಹಿತಿಯನ್ನು ಸ್ವೀಕರಿಸಲಿದೆ. ಕಾಲಕಾಲಕ್ಕೆ ಮಾಹಿತಿಗಳನ್ನು ಒದಗಿಸುವುದರಿಂದ ಅದು ಆದಾಯ ತೆರಿಗೆ ಇಲಾಖೆಗೆ ತೆರಿಗೆಗಳ್ಳರ ಹಿಂದಿನ ವಹಿವಾಟುಗಳನ್ನು ಗಮನಿಸಿ, ಅವುಗಳನ್ನು ಪರಿಶೀಲಿಸಿ ತೆರಿಗೆ ವಸೂಲು ಮಾಡಲು ಸಹಾಯವಾಗುತ್ತದೆ. ಹೊರ ದೇಶಗಳಲ್ಲಿ ಎಚ್‌ಎಸ್‌ಬಿಸಿ ಬ್ಯಾಂಕ್‌ಗಳಲ್ಲಿ ಅಕ್ರಮವಾಗಿ ಸುಮಾರು 8 ಸಾವಿರ ಕೋಟಿ ರೂ. ಕಪ್ಪುಹಣ ಹೂಡಿದ್ದವರ ಮೇಲೆ ಸರ್ಕಾರ 175 ಪ್ರಕರಣಗಳಲ್ಲಿ 164ರಲ್ಲಿ ವಿಚಾರಣೆ ಕೈಗೊಂಡಿದೆ. ಐಸಿಐಜೆ–ಅಂತಾರಾಷ್ಟ್ರೀಯ ತನಿಖಾ ಪತ್ರಕರ್ತರ ಒಕ್ಕೂಟ ನಡೆಸಿದ ತನಿಖೆ ಅನ್ವಯ ಸರ್ಕಾರ ವಿದೇಶಿ ಖಾತೆಗಳಲ್ಲಿ ಹೂಡಿದ್ದ ಸುಮಾರು 5 ಸಾವಿರ ಕೋಟಿ ಅಘೋಷಿತ ಠೇವಣಿಗಳನ್ನು ಪತ್ತೆಹಚ್ಚಿದ್ದು, 55 ಮಂದಿ ವಿರುದ್ಧ ಪ್ರಕರಣಗಳನ್ನು ಹೂಡಿದೆ.

ಅದೇ ರೀತಿ ಪನಾಮ ದಾಖಲೆಗಳ ಕುರಿತು ತನಿಖೆ ಪ್ರಗತಿಯಲ್ಲಿದ್ದು, 250ಕ್ಕೂ ಹೆಚ್ಚು ಉಲ್ಲೇಖಗಳನ್ನು ಆಧರಿಸಿ ತೆರಿಗೆಗಳ್ಳರು ಮತ್ತು ಬ್ಯಾಂಕ್ ಖಾತೆಗಳನ್ನು ಹೊಂದಿರುವವರ ವಿರುದ್ಧ ತನಿಖೆ ನಡೆಸಲಾಗುತ್ತಿದೆ. 2015ರಲ್ಲಿ ವಿದೇಶಗಳಲ್ಲಿನ ಅಘೋಷಿತ ಆಸ್ತಿ ಘೋಷಣೆಗೆ ನೀಡಲಾಗಿದ್ದ ಅವಧಿಯಲ್ಲಿ ಸರ್ಕಾರ 4 ಸಾವಿರದ 47 ಕೋಟಿ ಠೇವಣಿಗಳನ್ನು ಪತ್ತೆಹಚ್ಚಿದ್ದು, ಅದರಲ್ಲಿ ಶೇಕಡ 60ರಷ್ಟು ತೆರಿಗೆ ಅಂದರೆ 2428 ಕೋಟಿ ಆದಾಯ ಬಂದಿದೆ. ಪನಾಮ ದಾಖಲೆಗಳ ಸೋರಿಕೆಯಿಂದಾಗಿ 11 ದಶಲಕ್ಷ ದಾಖಲೆಗಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸುಮಾರು 500ಕ್ಕೂ ಅಧಿಕ ಭಾರತೀಯರು ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ಹಣ ಹೂಡಿರುವುದು ಬೆಳಕಿಗೆ ಬಂದಿದೆ.




### ದುಪ್ಪಟ್ಟು ತೆರಿಗೆ ತಡೆ ಒಪ್ಪಂದಗಳ ಪರಿಷ್ಕರಣೆ

ತೆರಿಗೆ ವಂಚನೆದಾರರು ಆಗ್ಗಾಗ್ಗೆ ಹಾಲಿ ಚಾಲ್ತಿಯಲ್ಲಿರುವ ತೆರಿಗೆ ಒಪ್ಪಂದಗಳಲ್ಲಿನ ಲೋಪದೋಷಗಳನ್ನು ಬಳಸಿಕೊಂಡು ತೆರಿಗೆ ವಂಚನೆ ಮಾಡುತ್ತಾರೆ. ಉದಾಹಾರಣೆಗೆ ಮಾರಿಷಸ್, ಸಿಂಗಾಪುರ್ ಮತ್ತು ಸೈಪ್ರಸ್ ಆ ರಾಷ್ಟ್ರಗಳಿಂದ ಅತಿ ಕಡಿಮೆ ಅಥವಾ ಶೂನ್ಯ ತೆರಿಗೆ ಇದೆ. ಇದನ್ನು ಅವರು ಬಳಸಿಕೊಳ್ಳುತ್ತಿದ್ದಾರೆ. ಸಾಗರೋತ್ತರ ರಾಷ್ಟ್ರಗಳಲ್ಲಿ ಹೂಡಿರುವ ಅಘೋಷಿತ ಹಣವನ್ನು ಮರಳಿ ಭಾರತಕ್ಕೆ ತರುವ ಕೆಲಸ ಮಾಡುತ್ತಿವೆ. ಅಲ್ಲದೆ ದುಪ್ಪಟ್ಟು ತೆರಿಗೆ ತಡೆ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, ಎರಡೂ ರಾಷ್ಟ್ರಗಳಲ್ಲಿ ತೆರಿಗೆ ವಂಚನೆ ಮಾಡಿರುವವರಿಗೆ ಉಭಯ ರಾಷ್ಟ್ರಗಳಲ್ಲೂ ದುಪ್ಪಟ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಹಲವು ರಾಷ್ಟ್ರಗಳ ಜತೆ ಕೇಂದ್ರ ಸರ್ಕಾರ ಈ ಕುರಿತು ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತ, ಮಾರಿಷಸ್ ಮತ್ತು ಸೈಪ್ರಸ್ ಜೊತೆ ದುಪ್ಪಟ್ಟು ತೆರಿಗೆ ತಡೆ ಒಪ್ಪಂದಗಳನ್ನು ಪರಿಷ್ಕರಿಸಿದ್ದು, ಸಿಂಗಾಪುರದ ಜೊತೆಯೂ ಒಪ್ಪಂದಕ್ಕೆ ತಿದ್ದುಪಡಿ ಮಾಡಿಕೊಳ್ಳಲಾಗುತ್ತಿದೆ. ಮಾರಿಷಸ್ ಮತ್ತು ಸಿಂಗಾಪುರ ಭಾರತಕ್ಕೆ

ವಿದೇಶಿ ನೇರ ಬಂಡವಾಳ ಒದಗಿಸುವ ಎರಡು ಅತಿ ದೊಡ್ಡ ಮೂಲಗಳಾಗಿವೆ. ಅವು ಹೂಡುವ ಪ್ರಮಾಣ ದೇಶದ ಒಟ್ಟಾರೆ ನೇರ ಹೂಡಿಕೆಯ ಅರ್ಧಕ್ಕೂ ಅಧಿಕ ಮೊತ್ತವಾಗಿವೆ. ಮಾರಿಷಸ್‌ನಿಂದ ಕಳೆದ ಒಂದು ದಶಕದಲ್ಲಿ ಒಟ್ಟಾರೆ ಹರಿದುಬಂದಿರುವ ಬಂಡವಾಳ 95.9 ಬಿಲಿಯನ್ ಅಮೆರಿಕನ್ ಡಾಲರ್‌ಆಗಿದೆ. ಅದೇ ರೀತಿ ಸಿಂಗಾಪುರದಿಂದ 45.8 ಬಿಲಿಯನ್ ಅಮೆರಿಕನ್ ಡಾಲರ್ ಹರಿದುಬಂದಿದೆ, ಸೈಪ್ರೆಸ್‌ಗೆ ಭಾರತದ ಬಂಡವಾಳ ಹೂಡಿಕೆಯಲ್ಲಿ 8ನೇ ಸ್ಥಾನದಲ್ಲಿದ್ದು, ಆ ರಾಷ್ಟ್ರದಿಂದ 8.5 ಬಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆ ಬಂದಿದೆ. ಗಾರ್ (ಜನರಲ್ ಆಂಟಿ ಅವೈಡೆನ್ಸ್ ರೂಲ್ಸ್) ಪದ್ಧತಿ 2017ರ ಏಪ್ರಿಲ್‌ನಿಂದ ಜಾರಿಗೆ ಬರಲಿದ್ದು, ಕಡಿಮೆ ತೆರಿಗೆ ಸಂಗ್ರಹಿಸುತ್ತಿರುವ ರಾಷ್ಟ್ರಗಳು ತಾವಾಗಿಯೇ ಮುಂದೆ ಬಂದು ತೆರಿಗೆ ಸಂಗ್ರಹ ಪದ್ಧತಿಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಒಪ್ಪಂದಗಳನ್ನು ನವೀಕರಿಸುತ್ತವೆ. ಗಾರ್ ಎನ್ನುವುದು ಭಾರತೀಯ ಅಧಿಕಾರಿಗಳು ರೂಪಿಸಿರುವ ನಿಯಮಗಳು. ಅದರಲ್ಲಿ ತೆರಿಗೆ ವಂಚಿಸುವವರನ್ನು ಪರಿಶೀಲಿಸಿ ಅವರ ವಹಿವಾಟುಗಳನ್ನು ತಪಾಸಣೆಗೆ ಒಳಪಡಿಸುವ ಹಕ್ಕಿದೆ.

ಭಾರತ, ಮಾರಿಷಸ್ ರಾಷ್ಟ್ರದೊಂದಿಗೆ ದುಪ್ಪಟ್ಟು ತೆರಿಗೆ ತಡೆ ಒಪ್ಪಂದವನ್ನು ಏಪ್ರಿಲ್‌ನಲ್ಲಿ ಮಾಡಿಕೊಂಡಿದ್ದು, ಆ ಪ್ರಕಾರ ನವದೆಹಲಿ, ಷೇರುಗಳ ಮೇಲೆ ಸಂಪತ್ತು ತೆರಿಗೆಯನ್ನು ವಿಧಿಸಬಹುದಾಗಿದೆ. ಮುಂದಿನ ಹಣಕಾಸು ವರ್ಷದಿಂದ ಭಾರತದಲ್ಲಿ ಬಂಡವಾಳ ಹೂಡುವ ಮಾರಿಷಸ್ ಕಂಪನಿಗಳು ಈಗಿರುವ ಒಪ್ಪಂದದಂತೆ 2017ರ ಏಪ್ರಿಲ್‌ನಿಂದ ಎರಡು ವರ್ಷಗಳ ಕಾಲ ಅಲ್ಪಾವಧಿಯ ಸಂಪತ್ತಿನ ತೆರಿಗೆಯನ್ನು ಶೇಕಡ 50ರಷ್ಟು ಪಾವತಿಸಬೇಕಾಗುತ್ತದೆ. ಪ್ರಸ್ತುತ ಈ ತೆರಿಗೆ ಪ್ರಮಾಣ ಶೇಕಡ 15ರಷ್ಟು ಮಾತ್ರ ಇದೆ. 2019ರ ನಂತರ ಪೂರ್ಣ ಪ್ರಮಾಣದಲ್ಲಿ ತೆರಿಗೆ ದರ ಅನ್ವಯವಾಗಲಿದೆ. ಹೊಸದಾಗಿ ಸೇರಿಸಲಾದ ಲಿಮಿಟೇಶನ್ ಆಫ್ ಬೆನಿಫಿಟ್ (ಎಲ್‌ಓಬಿ) ಷರತ್ತಿನ ಅನ್ವಯ ಶೇಕಡ 50ರಷ್ಟು ತೆರಿಗೆ ದರಕ್ಕೆ ವಿನಾಯಿತಿ ಇದೆ. ಸಿಂಗಾಪುರದ ನಡುವಿನ ಒಪ್ಪಂದದ ತಿದ್ದುಪಡಿಯ ಬಗ್ಗೆ ಉಭಯ ದೇಶಗಳ ನಡುವೆ ಸಮಾಲೋಚನೆಗಳು ನಡೆಯುತ್ತಿವೆ.




ಏಪ್ರಿಲ್ 1, 2017ರಿಂದ ಒಪ್ಪಂದ ತಿದ್ದುಪಡಿ ಸಹಜವಾಗಿಯೇ ಆಗಲಿದೆ. ಅದೇ ರೀತಿ ಮಾರಿಷಸ್ ರಾಷ್ಟ್ರದ ಜೊತೆಗಿನ ಒಪ್ಪಂದವೂ ಕೂಡ ತಿದ್ದುಪಡಿಯಾಗಲಿದೆ.

ಭಾರತ ಈಗಾಗಲೇ ದುಪ್ಪಟ್ಟು ತೆರಿಗೆ ತಡೆ ಒಪ್ಪಂದವನ್ನು 82 ರಾಷ್ಟ್ರಗಳೊಂದಿಗೆ ಮಾಡಿಕೊಂಡಿದ್ದು, ಅವುಗಳೆಲ್ಲ ಜನಪ್ರಿಯ ತೆರಿಗೆ ತಾಣಗಳ ರಾಷ್ಟ್ರಗಳಾಗಿವೆ. ಅವುಗಳಲ್ಲಿ ಭಾರತ 30 ರಾಷ್ಟ್ರಗಳ ಜತೆ ಒಪ್ಪಂದಗಳನ್ನು ವಿಸ್ತರಣೆ ಮಾಡಿಕೊಂಡಿದ್ದು, ಆ ಪ್ರಕಾರ ಪರಸ್ಪರ ತೆರಿಗೆ ಸಂಗ್ರಹಕ್ಕೆ ಜಂಟಿ ಪ್ರಯತ್ನ ನಡೆಸಬಹುದಾಗಿದೆ. ಸೈಪ್ರಸ್ ಕೂಡ ಭಾರತಕ್ಕೆ ತೆರಿಗೆ ಹಕ್ಕುಗಳನ್ನು ನೀಡಲು ಸಮ್ಮತಿಸಿದೆ. ಕಪ್ಪುಪಟ್ಟಿಯಲ್ಲಿರುವವರನ್ನು ಹೊರತೆಗೆದು ಅವರ ಷೇರುಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಮಾಡಿಕೊಡಲಿದೆ.

**ಬೇನಾಮಿ ವಹಿವಾಟು ಕಾಯ್ದೆ**

ಕಳೆದ ಆಗಸ್ಟ್‌ನಲ್ಲಿ ಸಂಸತ್ತಿನಲ್ಲಿ ಅನುಮೋದಿಸಲ್ಪಟ್ಟ ಬೇನಾಮಿ ವಹಿವಾಟು(ನಿಯಂತ್ರಣ) ತಿದ್ದುಪಡಿ ಕಾಯ್ದೆಯಿಂದಾಗಿ ಬೇನಾಮಿ ವ್ಯಾಖ್ಯಾನ ವಿಸ್ತರಣೆಯಾಗಿದ್ದು, ತೆರಿಗೆ ತಡೆಯಲು ಬೇರೆ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ಅಂದರೆ ಬೇನಾಮಿ ಹೆಸರಿನಲ್ಲಿ ಆಸ್ತಿಗಳನ್ನು ಹೊಂದುವುದಕ್ಕೆ ದಂಡ ವಿಧಿಸಲಾಗುವುದು ಮತ್ತು ಅದು ಶಿಕ್ಷಾರ್ಹ ಅಪರಾಧವಾಗಿ ಮಾಡಲಾಗಿದೆ. ಈ ಶಾಸನ ಬೇನಾಮಿ ವಹಿವಾಟುಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವುದಲ್ಲದೆ, ನ್ಯಾಯಯುತವಲ್ಲದ ವಹಿವಾಟು ಪದ್ಧತಿಗಳನ್ನು ತಡೆಯಲಿದೆ. ಬೇನಾಮಿ ವಹಿವಾಟುಗಳ ವ್ಯಾಖ್ಯಾನವನ್ನು ವಿಸ್ತರಿಸಲಾಗಿದ್ದು, ಅದರಲ್ಲಿ ಸಂಶಯಾಸ್ಪದ ವ್ಯಕ್ತಿಯ ಹೆಸರಿನಲ್ಲಿ ನಡೆಸುವ ವಹಿವಾಟು, ಆಸ್ತಿಯ ಮಾಲಿಕರ ಗಮನಕ್ಕೆ ತರದೆ ನಡೆಸುವ ವಹಿವಾಟು ಮತ್ತಿತರ ಅಂಶಗಳನ್ನು ಸೇರಿಸಲಾಗಿದೆ. ಆಸ್ತಿ ಅಥವಾ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸಾಮಾನ್ಯವಾಗಿ ಅಘೋಷಿತ ಹಣವನ್ನು ತೊಡಗಿಸುವುದು ವಾಡಿಕೆ. ರಿಯಲ್ ಎಸ್ಟೇಟ್ ಉದ್ಯಮದ ಬಹುತೇಕ ವಹಿವಾಟುಗಳು ವರದಿಯಾಗುವುದಿಲ್ಲ. ಅಥವಾ ಆದರೂ ಅದು ನಿಜವಾದ ಮೌಲ್ಯಕ್ಕಿಂತ ಕಡಿಮೆ ಮೊತ್ತ ತೋರಿಸಲಾಗುವುದು. ಈ ಬೇನಾಮಿ ಮಸೂದೆ ದಂಡದ ವಿಧಿಸುವುದಲ್ಲದೆ, ಶಿಕ್ಷೆ ವಿಧಿಸುವ ಕಠಿಣ ಅಂಶಗಳನ್ನು ಒಳಗೊಂಡಿದೆ. ಆ ಪ್ರಕಾರ ಒಂದು ವರ್ಷದಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ಬೇನಾಮಿ ಆಸ್ತಿಯ ಮಾರುಕಟ್ಟೆ ಮೌಲ್ಯದ ಶೇಕಡ 25ರಷ್ಟು ದಂಡ ವಿಧಿಸುವುದಲ್ಲದೆ, ಎರಡೂ ಶಿಕ್ಷೆಗಳನ್ನು ಒಟ್ಟಿಗೆ ವಿಧಿಸುವ ಅವಕಾಶವೂ ಇದೆ.

ತಪ್ಪು ಮಾಹಿತಿ ನೀಡಿದರೆ ಕನಿಷ್ಠ ಆರು ತಿಂಗಳಿನಿಂದ 5 ವರ್ಷಗಳವರಗೆ ಜೈಲು ಶಿಕ್ಷೆ ವಿಧಿಸುವ ಮತ್ತು ಬೇನಾಮಿ ಆಸ್ತಿಯ ನೈಜ ಮಾರುಕಟ್ಟೆ ಮೌಲ್ಯದ ಶೇಕಡ 10ರಷ್ಟು ದಂಡ ವಿಧಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿದೆ.

**ಮುನ್ನಡೆ**

ವಿಶ್ವದ ಬಹುತೇಕ ಪ್ರಮುಖ ಆರ್ಥಿಕ ರಾಷ್ಟ್ರಗಳು ಈ ಕಪ್ಪುಹಣ ದಂಧೆಯನ್ನು ನಿರ್ಮೂಲನೆ ಮಾಡಲು ಒಟ್ಟಾಗಿ ಶ್ರಮಿಸುತ್ತಿವೆ. ಬಿಇಪಿಎಸ್(ಮೂಲ ಸವಕಳಿ ಮತ್ತು ಲಾಭ ಹಂಚಿಕೆ)ಒಪ್ಪಂದ ಮತ್ತು ಬಹು ಉಪಯೋಗಿ ಮಾಹಿತಿ ವಿನಿಮಯ ಒಪ್ಪಂದಗಳಿಂದಾಗಿ ತೆರಿಗೆಗಳ್ಳತನ ಮಾಡುವುದು ಅತ್ಯಂತ ಕಷ್ಟಕರವಾಗಿದೆ. ರಾಷ್ಟ್ರಗಳ ನಡುವೆ ಉಚಿತ ಮಾಹಿತಿ ವಿನಿಮಯ ಮಾಡಿಕೊಳ್ಳುತ್ತಿರುವುದರಿಂದ ಅಪರಾಧಿಗಳನ್ನು ಪತ್ತೆ ಹಚ್ಚುವುದು ತೆರಿಗೆ ಅಧಿಕಾರಿಗಳಿಗೆ ಸುಲಭದ ಕೆಲಸವಾಗಿದೆ. ಭಾರತ ಸರ್ಕಾರ ಈ ಕಪ್ಪುಹಣ ಪತ್ತೆಗೆ ಸರ್ವ ರೀತಿಯ ಪ್ರಯತ್ನಗಳನ್ನು ಕೈಗೊಂಡಿದೆ. ಪ್ರಾಜೆಕ್ಟ್ ಇನ್‌ಸೈಟ್ ಎಂಬ ತಾಂತ್ರಿಕ ಯೋಜನೆ ಮೂಲಕ ಅದು ಅಕ್ರಮ ಹಣ ಪತ್ತೆಹಚ್ಚುವ ಈ ಕ್ರಮಗಳನ್ನು ಮತ್ತಷ್ಟು ವಿಸ್ತರಿಸುತ್ತಿದೆ. ಈ ಎಲ್ಲಾ ಪ್ರಯತ್ನಗಳಿಂದಾಗಿ ನಗದು ವರ್ಗಾವಣೆಯನ್ನು ಉತ್ತೇಜಿಸದೆ ಕೇವಲ ಕಾರ್ಡ್‌ಗಳ ಮೂಲಕ ಪಾವತಿಸುವ ವ್ಯವಸ್ಥೆಯನ್ನು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಜಾರಿಗೊಳಿಸಲು ಗಮನ ಕೇಂದ್ರೀಕರಿಸಲಾಗುತ್ತಿದೆ. ಕಪ್ಪುಹಣ ಚಲಾವಣೆಯನ್ನು ನಿಯಂತ್ರಿಸಲು ಇದು ಪ್ರಮುಖ ಅಸ್ತ್ರವಾಗಲಿದೆ. ❑

# ಜಿಎಸ್‌ಟಿ: ಒಂದು ದೇಶ, ಒಂದು ತೆರಿಗೆ

* ಶಿಶಿರ್ ಸಿನ್ಹಾ




**ಹೊಸ ತೆರಿಗೆ ವ್ಯವಸ್ಥೆಯಿಂದ ಕರ ಬಾಹುಳ್ಯ ಕಡಿಮೆಯಾದರೆ, ದ್ವಂದ್ವ ತೆರಿಗೆ ಹೇರಿಕೆ ತಪ್ಪುವಂತಾದರೆ, ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ಅಭಿವೃದ್ಧಿಗೆ ಇದರಿಂದ ನೆರವಾಗುವುದಾದರೆ, ಗ್ರಾಹಕರಿಗೆ ಸರಳೀಕೃತ ತೆರಿಗೆ ವ್ಯವಸ್ಥೆಯ ಲಾಭ ದೊರೆಯಲಿದೆ.**

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನುಷ್ಠಾನವು ದೇಶದ ಆರ್ಥವ್ಯವಸ್ಥೆಯ ನಿರ್ವಹಣೆಗೆ ಸಂಬಂಧಿಸಿದಂತೆ ಸಂಯುಕ್ತ ರೂಪದಲ್ಲಿ ಅತ್ಯುತ್ತಮ ಒಳಿತನ್ನು ತರಲಿದೆ ಎಂಬ ವಿಶ್ವಾಸ ನನಗಿದೆ. ಇದು ರಾಜ್ಯಗಳ ಬಲವರ್ಧನೆ ಮಾಡುತ್ತದೆ. ರಾಜ್ಯ ಸರ್ಕಾರಗಳು ಮಾತ್ರವಲ್ಲದೆ, ಕೇಂದ್ರ ಸರ್ಕಾರದ ಆದಾಯವನ್ನೂ ಇದು ಹೆಚ್ಚಿಸುತ್ತದೆ. ತೆರಿಗೆ ವಂಚನೆಯನ್ನು ತಪ್ಪಿಸುವ, ನಿರುತ್ಸಾಹಗೊಳಿಸುವ ಮತ್ತು ತೆರಿಗೆ ವಂಚನೆ ಪ್ರಮಾಣವನ್ನು ಕಡಿಮೆ ಮಾಡುವ ಪ್ರಯತ್ನವನ್ನು ಜಿಎಸ್‌ಟಿ ಮಾಡಲಿದೆ. ತೆರಿಗೆ ಮೇಲೆ ತೆರಿಗೆ ಹೇರಿಕೆಯಾಗದಂತೆ ಇದು ತಡೆಯುತ್ತದೆ. ಪರಿಣಾಮವಾಗಿ, ಸರಕು–ಸೇವೆಗಳ ಬೆಲೆಯ ಮೇಲೆ ಹೆಚ್ಚುವರಿ ತೆರಿಗೆ ಹೊರೆ ಇಲ್ಲದಂತೆ ಇದು ಕಾಯ್ದುಕೊಳ್ಳುತ್ತದೆ. ಅರ್ಥವ್ಯವಸ್ಥೆಗೆ ಪ್ರಸ್ತುತ ಅತ್ಯಂತ ಅತ್ಯವಶ್ಯವೆನಿಸಿರುವ ಬಲವರ್ಧನೆಯನ್ನು ಇದು ಒದಗಿಸುತ್ತದೆ.

ಇದು ಕೇಂದ್ರ ಹಣಕಾಸು ಸಚಿವರಾದ ಶ್ರೀ ಅರುಣ್ ಜೇಟ್ಲಿ ಅವರು ಆಗಸ್ಟ್ 3, 2016ರಂದು ರಾಜ್ಯಸಭೆಯಲ್ಲಿ ಸಂವಿಧಾನ ತಿದ್ದುಪಡಿ ವಿಧೇಯಕ (ಜಿಎಸ್‌ಟಿಗೆ ಸಂಬಂಧಿಸಿದ) ಮಂಡನೆ ವೇಳೆ ಮಾಡಿದ ಭಾಷಣದ ಆಯ್ದ ಭಾಗ.

ಈ ಭಾಷಣದೊಂದಿಗೆ, ವಿತ್ತ ಸಚಿವರು, ಸ್ವಾತಂತ್ರ್ಯೋತ್ತರ ಭಾರತದ ಅತಿ ದೊಡ್ಡ ಹಾಗೂ ಅತ್ಯಂತ ಮಹತ್ವಾಕಾಂಕ್ಷೆಯ ತೆರಿಗೆ ಸುಧಾರಣೆ – 'ಸರಕು ಮತ್ತು ಸೇವಾ ತೆರಿಗೆ' ಅಥವಾ 'ಜಿಎಸ್‌ಟಿ' ಕುರಿತಾಗಿ ಇದ್ದ ಸುದೀರ್ಘ ಕಾಯುವಿಕೆಗೆ / ಆತಂತಕ್ಕೆ ತೆರೆ ಎಳೆದರು. 122ನೇ ಸಂವಿಧಾನ ತಿದ್ದುಪಡಿ ವಿಧೇಯಕವು ಶಾಸನವಾಗಿ ಬದಲಾಗುವುದರೊಂದಿಗೆ (101ನೇ ಪರಿಷ್ಕರಣೆ), ಕೇಂದ್ರ ಮತ್ತು ರಾಜ್ಯಗಳು ಸಹವರ್ತಿಯಾಗಿ 'ಜಿಎಸ್‌ಟಿ' ವಿಧಿಸಲು ಅನುವಾಗಿದ್ದು, ಹೊಸ ತೆರಿಗೆ ನೀತಿಯೊಂದಿಗೆ ಭಾರತದ ಆರ್ಥಿಕತೆಯು 2017–18ನೇ ಸಾಲಿಗೆ ಕಾಲಿಡಲಿದೆ. ಇದರೊಂದಿಗೆ ಭಾರತವು, ಕೆನಡಾ, ಆಸ್ಟ್ರೇಲಿಯಾ, ಸಿಂಗಪುರ, ಮಲೇಶಿಯಾ ಸೇರಿದಂತೆ ಜಿಎಸ್‌ಟಿ ಮಾದರಿಯ ನೇರ ತೆರಿಗೆ ಪದ್ಧತಿಯನ್ನು ಹೊಂದಿರುವ ವಿಶ್ವದ ಕೆಲವೇ ಆಯ್ದ ದೇಶಗಳ ಗುಂಪಿಗೆ ಸೇರ್ಪಡೆಯಾಗಲಿದೆ.

ಏಪ್ರಿಲ್ 1ರಿಂದ ಜಿಎಸ್‌ಟಿ ಅನುಷ್ಠಾನಗೊಳಿಸಲು ಸರ್ಕಾರ ಕಾರ್ಯೋನ್ಮುಖವಾಗಿದ್ದು, ಈ ಸಂಬಂಧ ಪ್ರಕ್ರಿಯೆಗಳಿಗೆ ತ್ವರಿತ ಚಾಲನೆ ದೊರೆತಿದೆ. ಮೊದಲನೆಯದಾಗಿ, ಕೇಂದ್ರ ಮತ್ತು ರಾಜ್ಯಗಳ ಉನ್ನತ ಮಂಡಳಿ ಎನಿಸಿದ ಸರಕು ಮತ್ತು ಸೇವಾ ತೆರಿಗೆ ಮಂಡಳಿ (ಜಿಎಸ್‌ಟಿ ಮಂಡಳಿ)ಯನ್ನು ಸ್ಥಾಪನೆ ಮಾಡಲಾಗಿದೆ. ಇದಿಷ್ಟೇ ಅಲ್ಲ, ಈ ಮಂಡಳಿಯು ಆರಂಭಿಕ ಸಭೆಗಳಲ್ಲಿ ಈಗಾಗಲೇ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ. ಎರಡನೆಯದಾಗಿ, 'ಜಿಎಸ್‌ಟಿ'ಯನ್ನು ಸಂಪೂರ್ಣ ಕಾರ್ಯಸಾಧುವಾಗಿಸಲು ಅಗತ್ಯವಾದಿ ಮಾಹಿತಿ ತಂತ್ರಜ್ಞಾನದ ನೆರವು ಒದಗಿಸಲು ಜಿಎಸ್‌ಟಿ ಜಾಲ (ಜಿಎಸ್‌ಟಿ ನೆಟ್‌ವರ್ಕ್) ಸ್ಥಾಪನೆ. ಮೂರನೆಯದಾಗಿ, ಮಾದರಿ 'ಜಿಎಸ್‌ಆರ್' ಕಾಯಿದೆಯನ್ನು ಈಗಾಗಲೇ ಜಾರಿಗೊಳಿಸಲಾಗಿದ್ದು, ಅಂತಿಮವಾಗಿ ಇದನ್ನು ಜಿಎಸ್‌ಟಿ ಆಧರಿತ

* ಆರ್ಥಿಕ ಮತ್ತು ವಾಣಿಜ್ಯ ವ್ಯಾಪಾರಗಳ ಪತ್ರಕರ್ತರು. E-mail : hblshishir@gmail.com

ಕಾಯ್ದೆಯನ್ನಾಗಿ ಪರಿವರ್ತಿಸಲಾಗುವುದು. ನಾಲ್ಕನೆಯದಾಗಿ, ನವೆಂಬರ್ 22, 2016ರ ಒಳಗಾಗಿ ಜಿಎಸ್‌ಟಿ ತೆರಿಗೆ ದರ, ವಿನಾಯಿತಿ, ತೆರಿಗೆ ವ್ಯಾಪ್ತಿ ನಿರ್ಧಾರಣೆ ಮತ್ತು ಪ್ರಮುಖ ತೆರಿಗೆ ನೀತಿಗಳನ್ನು ಅಂತಿಮಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

### ಜಿಎಸ್‌ಟಿ ಎಂದರೇನು?

ಜಿಎಸ್‌ಟಿ ಎಂದರೆ, ಸರಕು ಮತ್ತು ಸೇವೆಗಳೆರಡಕ್ಕೂ ಅನ್ವಯವಾಗುವ ಸರಳೀಕೃತ ತೆರಿಗೆ ಪದ್ಧತಿ. ಇದರ ಅಡಿಯಲ್ಲಿ, ಸರಕು ಮತ್ತು ಸೇವೆಗಳ (ಪೂರೈಕೆ ಸರಪಳಿಯ) ಎಲ್ಲಾ ಹಂತಗಳಲ್ಲೂ ತೆರಿಗೆಯನ್ನು ವಿಧಿಸಲಾಗುತ್ತದೆ. ಒಂದು ವೇಳೆ, ಉತ್ಪನ್ನವೊಂದರ ತಯಾರಿಕೆ ಹಂತದಲ್ಲಿ ಯಾವುದಾದರೂ ಕಚ್ಚಾ ವಸ್ತುವಿನ ಮೇಲೆ ತೆರಿಗೆಯನ್ನು ವಿಧಿಸಲಾಗಿದ್ದರೆ, ಆ ಹೆಚ್ಚುವರಿ ತೆರಿಗೆಯನ್ನು ತೆರಿಗೆದಾತ ಹಿಂಪಡೆದುಕೊಳ್ಳಲು (ಖಾತೆಗೆ ಮರು ಜಮಾ) ಜಿಎಸ್‌ಟಿ ಅವಕಾಶಕಲ್ಪಿಸುತ್ತದೆ. ಇದು ಸರಕು ಮತ್ತು ಸೇವೆಗಳ ಪೂರೈಕೆ ಮೇಲೆ ವಿಧಿಸುವ ತೆರಿಗೆಯಾಗಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ತೆರಿಗೆ ವ್ಯವಸ್ಥೆಯಲ್ಲಿ ಸರುಕುಗಳ ಉತ್ಪಾದನೆ ಮೇಲೆ ಅಥವಾ ಸರಕುಗಳ ಮಾರಾಟದ ಮೇಲೆ ಮತ್ತು ಸೇವೆಗಳ ಒದಗಿಸುವಿಕೆ ಮೇಲೆ ತೆರಿಗೆ ವಿಧಿಸಲಾಗುತ್ತಿದೆ. ಪ್ರಸ್ತುತ ತೆರಿಗೆ ವ್ಯವಸ್ಥೆಯು 'ಉತ್ಪಾದನೆ' ಹಂತದ ತೆರಿಗೆಯಾಗಿದ್ದರೆ, 'ಜಿಎಸ್‌ಟಿ'ಯು ಅಂತಿಮ ಹಂತದ ತೆರಿಗೆಯಾಗಿರುತ್ತದೆ.

ಸಂಯುಕ್ತ ವ್ಯವಸ್ಥೆ ಅಸ್ತಿತ್ವದಲ್ಲಿರುವ ಹಿನ್ನೆಲೆಯಲ್ಲಿ ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) ಮತ್ತು ರಾಜ್ಯ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಎಂಬ ಎರಡು ಬಗೆಯ ಜಿಎಸ್‌ಟಿ ದೇಶಾದ್ಯಂತ ಜಾರಿಯಾಗಲಿದೆ. ಅಂದರೆ, ಕೇಂದ್ರ ಮತ್ತು ರಾಜ್ಯಗಳು ಸಾಮಾನ್ಯ ತೆರಿಗೆ ನಿರ್ಧಾರಣಾ ವ್ಯವಸ್ಥೆಗಳನ್ನು ಹೊಂದಿರಲಿವೆ. ಇವುಗಳ ಜತೆಗೆ, ಸಮಗ್ರ ಜಿಎಸ್‌ಟಿ (ಐಜಿಎಸ್‌ಟಿ) ಎಂಬ ಮತ್ತೊಂದು ತೆರಿಗೆಯೂ ಇರಲಿದೆ. ಇದನ್ನು ಅಂತರ–ರಾಜ್ಯ ಸರಕು ಮತ್ತು ಸೇವೆಗಳ ಪೂರೈಕೆ ಮೇಲೆ ವಿಧಿಸಲಾಗುತ್ತದೆ. ತೆರಿಗೆ ಸಂಗ್ರಹ ಮತ್ತು ಜಮಾ ವ್ಯವಸ್ಥೆಗೆ ಅಡಚಣೆ ತಪ್ಪಿಸಲು ಕೇಂದ್ರ ಸರ್ಕಾರವೇ ಈ ತೆರಿಗೆಯನ್ನು ಸಂಗ್ರಹಿಸಲಿದೆ. ಸರಕು ಮತ್ತು ಸೇವೆಗಳ ಆಮದನ್ನು ಅಂತರ–ರಾಜ್ಯ ಪೂರೈಕೆ ವ್ಯಾಪ್ತಿಯಲ್ಲಿ ಪರಿಗಣಿಸಲಾಗುವುದು ಮತ್ತು ಅವುಗಳ ಮೇಲೆ ಸೀಮಾ ಸುಂಕದ ಜತೆಗೆ 'ಐಜಿಎಸ್‌ಟಿ'ಯನ್ನೂ ವಿಧಿಸಲಾಗುವುದು. ಈ ಮೂರು ತೆರಿಗೆ ದರಗಳನ್ನು ಜಿಎಸ್‌ಟಿ ಮಂಡಳಿ ನಿರ್ಧರಿಸಲಿದೆ.

### ಜಿಎಸ್‌ಟಿ ಏಕೆ?

ಸರಕು ಮತ್ತು ಸೇವೆಗಳ ಮೇಲೆ ವಿವಿಧ ಹಂತಗಳಲ್ಲಿ ತೆರಿಗೆ ವಿಧಿಸಲು ಅಗತ್ಯ ಶಾಸನಗಳನ್ನು ರೂಪಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಂವಿಧಾನಬದ್ಧ ಅಧಿಕಾರವಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ದೇಶಾದ್ಯಂತ ಹಲವು ವಿಧದ ತೆರಿಗೆಗಳು ಅಸ್ತಿತ್ವದಲ್ಲಿವೆ. ಉದಾಹರಣೆಗೆ, ಸರಕುಗಳ ಉತ್ಪಾದನೆ ಮೇಲೆ (ಮಾನವ ಸೇವನೆ ಉದ್ದೇಶದ ಮದ್ಯ, ಅಫೀಮು ಮತ್ತು ಮಾದಕ ವಸ್ತುಗಳನ್ನು ಹೊರತುಪಡಿಸಿ) ತೆರಿಗೆ ವಿಧಿಸಲು ಶಾಸನ ಹಾಗೂ ನೀತಿ–ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಕೇಂದ್ರ ಹೊಂದಿದೆ. ಇದೇ ವೇಳೆ, ಸರಕುಗಳ ಮಾರಾಟದ ಮೇಲೆ ತೆರಿಗೆ ವಿಧಿಸುವ ಅಧಿಕಾರವನ್ನು ರಾಜ್ಯಗಳು ಪಡೆದಿವೆ. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಎರಡು ಬಗೆಯ ಅಧಿಕಾರವನ್ನು ಹೊಂದಿದೆ. ಮೊದಲನೆಯದಾಗಿ, ಅಂತರ–ರಾಜ್ಯ ಸರಕುಗಳ ಮಾರಾಟದ ಮೇಲೆ ಅದು ತೆರಿಗೆ ವಿಧಿಸಬಹುದು (ಆದರೆ, ಈ ತೆರಿಗೆಯನ್ನು ರಾಜ್ಯಗಳೇ ಸಂಗ್ರಹಿಸಿ, ತಮ್ಮಲ್ಲಿ ಇರಿಸಿಕೊಳ್ಳುತ್ತವೆ). ಎರಡನೆಯದಾಗಿ, ಸೇವೆಗಳ ಮೇಲೆ ಕೇಂದ್ರ ಸರ್ಕಾರ ಮಾತ್ರ ತೆರಿಗೆ ವಿಧಿಸಬಲ್ಲದು. ಉದಾ. ಸೇವಾ ತೆರಿಗೆ.

ಇಂತಹ ಒಂದು ವ್ಯವಸ್ಥೆಯು ಇಡೀ ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ಸಂಕೀರ್ಣಗೊಳಿಸಿದೆ. ಇದಿಷ್ಟೇ ಅಲ್ಲದೆ, ಈ ವ್ಯವಸ್ಥೆಯು ಇನ್ನೂ ಹಲವು ಅನಾನುಕೂಲಗಳನ್ನೂ ಹೊಂದಿದೆ. ಉದಾಹರಣೆಗೆ: ಉದ್ಯಮಿ ಅಥವಾ ವ್ಯಾಪಾರಿಯು ತೆರಿಗೆಗೆ ಸಂಬಂಧಿಸಿದಂತೆ ಹತ್ತಾರು ದಾಖಲೆಗಳನ್ನು ನಿರ್ವಹಿಸಬೇಕು. ಇದರಿಂದ ವ್ಯವಹಾರ ನಿರ್ವಹಣೆ ವೆಚ್ಚ ಹೆಚ್ಚುವುದಲ್ಲದೆ, ಸುಲಭ ವ್ಯವಹಾರ ವಾತಾವರಣದ ಮೂಲ ನಿಯಮಕ್ಕೇ ಇದು ತದ್ವಿರುದ್ಧವಾಗಿದೆ. ಅದೇ ರೀತಿ, ಹಲವು ವಿಧದ ತೆರಿಗೆಗಳು ದ್ವಂದ್ವ ತೆರಿಗೆಗೆ (ತೆರಿಗೆ ಮೇಲೆ ತೆರಿಗೆ) ದಾರಿ ಮಾಡುತ್ತವೆ. ಇದರಿಂದ ಗ್ರಾಹಕರ ಪಾಲಿಗೆ ಸರಕುಗಳ ಬೆಲೆ ಹೆಚ್ಚಾಗುತ್ತದೆ. 'ಜಿಎಸ್‌ಟಿ' ಕೇವಲ



ಒಂದೇ ತೆರಿಗೆಯಾದ್ದರಿಂದ, ತೆರಿಗೆ ನಿಯಮಗಳ ಅನುಸರಣೆ ಸುಲಭವಾಗುತ್ತದೆ. ವ್ಯವಹಾರ ನಿರ್ವಹಣೆ ವೆಚ್ಚವೂ ತಗ್ಗುವುದಲ್ಲದೆ, ಸುಲಭ ವ್ಯವಹಾರಕ್ಕೆ ದಾರಿಯಾಗುತ್ತದೆ. ಉತ್ಪಾದನೆಯಿಂದ ಹಿಡಿದು ಅನುಭೋಗದವರೆಗೂ ಪ್ರತಿ ಹಂತದಲ್ಲೂ ಜಿಎಸ್‌ಟಿ ವಿಧಿಸುವುದರಿಂದ ಮತ್ತು ಈ ಹಿಂದಿನ ಹಂತದಲ್ಲಿ ವಿಧಿಸಲಾದ ತೆರಿಗೆಯನ್ನು ಮುಂದಿನ ಹಂತದಲ್ಲಿ ಕಡಿತಗೊಳಿಸುವುದರಿಂದ ತೆರಿಗೆ ಮೇಲೆ ತೆರಿಗೆ ವಿಧಿಸುವ ಅಸಾಮಂಜಸ್ಯವನ್ನು ಇದು ನಿರ್ಮೂಲನೆ ಮಾಡಲಿದೆ. ಹೊಸ ತೆರಿಗೆ ನೀತಿಯು ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ ಹೊರೆಯನ್ನು ಭಾರಿ ಪ್ರಮಾಣದಲ್ಲಿ ಇಳಿಸುವುದರಿಂದ (ಪ್ರಸ್ತುತ ಈ ಪ್ರಮಾಣ ಶೇ. 25–30ರಷ್ಟಿದೆ). ಗ್ರಾಹಕರ ಪಾಲಿಗೆ ಸರಕು–ಸೇವೆಗಳು ಅಗ್ಗವಾಗಲಿವೆ ಎಂದು ನಂಬಲಾಗಿದೆ.

### ಜಿಎಸ್‌ಟಿಎನ್

ಜಿಎಸ್‌ಟಿ ಅನುಷ್ಠಾನಕ್ಕೆ ಅಗತ್ಯವಾದ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಒದಗಿಸಲು ಸರ್ಕಾರ ಸರಕು ಮತ್ತು ಸೇವಾ ತೆರಿಗೆ ಜಾಲವನ್ನು (ಜಿಎಸ್‌ಟಿಎನ್) ರಚಿಸಿದೆ. ಇದು 25 ಕಂಪನಿಗಳ ಒಂದು ವರ್ಗವಾಗಿದ್ದು, ಲಾಭಕ್ಕಾಗಿ ಕೆಲಸ ಮಾಡಲಿದೆ. ಇದು ಸರ್ಕಾರೇತರ ಮತ್ತು ಖಾಸಗಿ ನಿಯಮಿತ ಕಂಪನಿ. ಇದರಲ್ಲಿ ಕೇಂದ್ರ ಸರ್ಕಾರ ಶೇ. 24.5ರಷ್ಟು ಪಾಲು ಹೊಂದಿದ್ದರೆ, ದೆಹಲಿಯ ಎನ್‌ಸಿಟಿ, ಪುದುಚೇರಿ, ರಾಜ್ಯಗಳ ವಿತ್ತ ಸಚಿವರ ಉನ್ನತ ಮಟ್ಟದ ಸಮಿತಿ ಹಾಗೂ ಇತರ ಎಲ್ಲಾ ರಾಜ್ಯಗಳು ಸೇರಿ ಒಟ್ಟಾರೆಯಾಗಿ ಶೇ. 24.5ರಷ್ಟು ಪಾಲು ಹೊಂದಿವೆ. ಉಳಿದ ಪಾಲುದಾರಿಕೆಯು ಸರ್ಕಾರೇತರ ಹಣಕಾಸು ಸಂಸ್ಥೆಗಳಿಗೆ ಸೇರಿದೆ. ಈ ಕಂಪನಿ ನಿರ್ವಹಿಸಬೇಕಾದ ಪ್ರಮುಖ ಕಾರ್ಯಗಳು ಮುಂದಿನಂತಿವೆ:

* ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ತೆರಿಗೆದಾತರ ಮತ್ತು ಸಂಬಂಧಪಟ್ಟವರಿಗೆ ಸಾಮಾನ್ಯ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಒದಗಿಸುವುದು.

* ದಕ್ಷ ಹಾಗೂ ಬಳಕೆದಾರ ಸ್ನೇಹಿ ಜಿಎಸ್‌ಟಿ ಪರಿಸರ ವ್ಯವಸ್ಥೆ ನಿರ್ಮಾಣಕ್ಕಾಗಿ ಇತರ ಸಂಸ್ಥೆಗಳೊಂದಿಗೆ ಸಹಭಾಗಿತ್ವ

* ತೆರಿಗೆದಾತರು ಮತ್ತು ಸಂಬಂಧಪಟ್ಟವರಿಗೆ ಸುಲಭ ಸೇವಾ ಪೂರೈಕೆ ಉದ್ದೇಶದ ಜಿಎಸ್‌ಟಿ ತಂತ್ರಾಂಶಗಳ ತಯಾರಿಕೆಗಾಗಿ ಜಿಎಸ್‌ಟಿ ಸುವಿಧ ಪೂರೈಕೆದಾರರನ್ನು (ಜಿಎಸ್‌ಪಿ) ಪ್ರೋತ್ಸಾಹಿಸುವುದು ಮತ್ತು ಈ ಸಂಬಂಧ ವಿವಿಧ ಸಂಸ್ಥೆಗಳ ಜತೆ ಸಹಭಾಗಿತ್ವ ಏರ್ಪಡಿಸುವುದು.

* ತೆರಿಗೆ ಅಧಿಕಾರಿಗಳು ಮತ್ತು ಸಂಬಂಧಪಟ್ಟವರಿಗೆ ತರಬೇತಿ, ಸಲಹೆ ನೀಡುವುದರ ಜೊತೆಗೆ ಸಂಶೋಧನೆ, ಅತ್ಯುತ್ತಮ ತೆರಿಗೆ ವಿಧಾನಗಳ ಬಗ್ಗೆ ಅಧ್ಯಯನ ನಡೆಸುವುದು.

* ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ಇಲಾಖೆಗಳಿಗೆ ಕೋರಿಕೆ ಮೇರೆಗೆ ದಕ್ಷ ರೀತಿಯ ಪರೋಕ್ಷ ಸೇವೆಗಳನ್ನು ಒದಗಿಸುವುದು.

* ಕೇಂದ್ರ ಮತ್ತು ರಾಜ್ಯ ತೆರಿಗೆ ಆಡಳಿತಕ್ಕಾಗಿ 'ಟ್ಯಾಕ್ಸ್ ಪೇಯರ್ ಪ್ರೊಫೈಲಿಂಗ್ ಯುಟಿಲಿಟಿ' (ಟಿಪಿಯು) ತಂತ್ರಾಂಶ ಅಭಿವೃದ್ಧಿ.

* ತೆರಿಗೆ ಆಡಳಿತ ವ್ಯವಸ್ಥೆಯ ಪಾರದರ್ಶಕತೆ ಹೆಚ್ಚಳ ಮತ್ತು ತೆರಿಗೆ ಅನುವರ್ತನೆ ಸುಧಾರಣೆಗಾಗಿ ಪ್ರಾಧಿಕಾರಗಳಿಗೆ ನೆರವು ನೀಡುವುದು.

* ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಇತರ ಸಂಬಂಧಪಟ್ಟವರಿಗೆ ಕೋರಿಕೆ ಮೇರೆಗೆ ತೆರಿಗೆಗೆ ಸಂಬಂಧಿಸಿದ ಇತರ ಸೇವಾ ಸೌಕರ್ಯಗಳನ್ನು ಒದಗಿಸುವುದು.

**ಜಿಎಸ್‌ಟಿ ಮಂಡಳಿ**

101ನೇ ಸಂವಿಧಾನ ತಿದ್ದುಪಡಿ ಬಳಿಕ ನಡೆದ ಅತಿ ದೊಡ್ಡ ಬೆಳವಣಿಗೆಯೆಂದರೆ, ಅದು ಜಿಎಸ್‌ಟಿ ಮಂಡಳಿಯ ಸ್ಥಾಪನೆ. ಜಿಎಸ್‌ಟಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒಳಗೊಂಡ ಅತ್ಯುನ್ನತ ಮಂಡಳಿ ಇದಾಗಿದೆ. ಕೇವಲ ಜಿಎಸ್‌ಟಿಗೆ ಸಂಬಂಧಿಸಿದ ಪ್ರಮುಖ ವಿಚಾರಗಳ ಚರ್ಚೆ, ನಿರ್ಧಾರಗಳ ಜತೆಗೆ, ವಿವಾದಗಳ ಇತ್ಯರ್ಥ ಅಧಿಕಾರವನ್ನೂ ಜಿಎಸ್‌ಟಿ ಮಂಡಳಿಗೆ ನೀಡಲಾಗಿದೆ. ಕೇಂದ್ರ ವಿತ್ತ ಸಚಿವರು ಇದರ ಮುಖ್ಯಸ್ಥರಾಗಿರುತ್ತಾರೆ. ಕೇಂದ್ರ ಸಹಾಯಕ ಹಣಕಾಸು ಸಚಿವರು (ಕಂದಾಯ ಉಸ್ತುವಾರಿ), ರಾಜ್ಯಗಳ ವಿತ್ತ ಅಥವಾ ತೆರಿಗೆ ಉಸ್ತುವಾರಿ ಸಚಿವರು ಅಥವಾ ರಾಜ್ಯ ಸರ್ಕಾರಗಳು ನಾಮಕರಣ ಮಾಡಿದ ಸಚಿವರು ಮಂಡಳಿಯ ಸದಸ್ಯರಾಗಿರುತ್ತಾರೆ. ಮಂಡಳಿಯ ಅಧ್ಯಕ್ಷರೂ ಸೇರಿದಂತೆ ಕೇಂದ್ರದಿಂದ ಇಬ್ಬರು, 29 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಿಂದ (ಶಾಸಕಾಂಗ ಹೊಂದಿರುವ) ತಲಾ ಒಬ್ಬ ಸದಸ್ಯರು ಸೇರಿದಂತೆ ಒಟ್ಟು 33 ಸದಸ್ಯರನ್ನು ಈ ಮಂಡಳಿ ಒಳಗೊಂಡಿರಲಿದೆ. ಕೇಂದ್ರ ಕಂದಾಯ ಕಾರ್ಯದರ್ಶಿಯವರು ಜಿಎಸ್‌ಟಿ ಮಂಡಳಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಅಬಕಾರಿ ಮತ್ತು ಸೀಮಾ ಸುಂಕ ಕೇಂದ್ರೀಯ ಮಂಡಳಿಯ (ಸಿಬಿಇಸಿ) ಅಧ್ಯಕ್ಷರು ಮಂಡಳಿಯ ಎಲ್ಲಾ ಕಲಾಪಗಳಿಗೂ ಶಾಶ್ವತ ಆಹ್ವಾನಿತರಾಗಿರುತ್ತಾರೆ (ಇವರಿಗೆ ಮತ ಚಲಾವಣೆ ಹಕ್ಕು ಇರುವುದಿಲ್ಲ). ತೆರಿಗೆ ವಿನಾಯಿತಿ, ಜಿಎಸ್‌ಟಿ ಮಾದರಿ ನಿಯಮಗಳು, ಪೂರೈಕೆ ಸ್ಥಳವನ್ನು ನಿರ್ಧರಿಸುವ ತತ್ವಗಳು, ತೆರಿಗೆ ವ್ಯಾಪ್ತಿ ನಿರ್ಧಾರ, ಜಿಎಸ್‌ಟಿ ದರಗಳು, ಪ್ರಕೃತಿ ವಿಕೋಪಗಳ ವೇಳೆ ಹೆಚ್ಚುವರಿ ನಿಧಿ ಸಂಗ್ರಹಕ್ಕಾಗಿ ವಿಶೇಷ ತೆರಿಗೆ ದರಗಳು, ಕೆಲ ರಾಜ್ಯಗಳಿಗೆ ವಿಶೇಷ ಹಕ್ಕುಗಳು ಸೇರಿದಂತೆ ಜಿಎಸ್‌ಟಿಗೆ ಸಂಬಂಧಿಸಿದ ಪ್ರಮುಖ ವಿಚರಗಳ ಬಗ್ಗೆ ಕೇಂದ್ರ ಮತ್ತು ರಾಜ್ಯಗಳಿಗೆ ಈ ಮಂಡಳಿ ಶಿಫಾರಸುಗಳನ್ನು ಒದಗಿಸುತ್ತದೆ.

ಮಂಡಳಿಯ ಪ್ರತಿ ನಿರ್ಧಾರವನ್ನೂ ಜಿಎಸ್‌ಟಿ ಮಂಡಳಿಯ ಸಭೆಗಳಲ್ಲಿ ಕೈಗೊಳ್ಳಲಾಗುತ್ತದೆ. ಸಭೆಯಲ್ಲಿ ಉಪಸ್ಥಿತರಿರುವ ನಾಲ್ಕನೇ ಮೂರರಷ್ಟು ಸದಸ್ಯರ ಬಹುಮತವನ್ನು ನಿರ್ಣಾಯಕವಾಗಿ ಪರಿಗಣಿಸಲಾಗುತ್ತದೆ. ಅತ್ತ ಕೇಂದ್ರ ಸರ್ಕಾರ, ಇತ್ತ ರಾಜ್ಯ ಸರ್ಕಾರಗಳು ಏಕಪಕ್ಷೀಯವಾಗಿ ವಿಟೊ ಚಲಾವಣೆ ಮಾಡಲು ಸಾಧ್ಯವಾಗದ ರೀತಿಯಲ್ಲಿ ಮತದಾನ ವ್ಯವಸ್ಥೆಯನ್ನು




ರೂಪಿಸಲಾಗಿದೆ. ಕೇಂದ್ರ ಸರ್ಕಾರದ ವಿಟೊ ಮೂರನೇ ಒಂದರಷ್ಟು ತೂಕ ಹೊಂದಿದ್ದರೆ, ಇತರ ಎಲ್ಲಾ ರಾಜ್ಯಗಳ ವಿಟೊ (ಶಾಸಕಾಂಗ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳು ಸೇರಿದಂತೆ) ಒಟ್ಟು ಚಲಾವಣೆಯಾದ ಮತಗಳಲ್ಲಿ ಮೂರನೇ ಎರಡರಷ್ಟು ತೂಕ ಹೊಂದಿರಲಿದೆ. ಯಾವುದೇ ನಿರ್ಣಯ ಅಂಗಿಕಾರಗೊಳ್ಳಲು ನಾಲ್ಕನೇ ಮೂರರಷ್ಟು ಬಹುಮತ ಅಗತ್ಯವಿದೆ.

**ಜಿಎಸ್‌ಟಿ ಮಂಡಳಿಯ ಪ್ರಮುಖ ನಿರ್ಧಾರಗಳು:**

ಜಿಎಸ್‌ಟಿ ಮಂಡಳಿ ತನ್ನ ಮೊದಲ ಎರಡು ಸಭೆಗಳಲ್ಲಿ ಕೆಲ ಪ್ರಮುಖ ನಿರ್ಧಾರಗಳನ್ನು ಕೈಗೊಂಡಿದೆ:

**ತೆರಿಗೆ ವ್ಯಾಪ್ತಿಗೆ ಆದಾಯ ಮಿತಿ ನಿಗದಿ:** ಜಿಎಇಸ್‌ಟಿ ಅಡಿಯಲ್ಲಿ ತೆರಿಗೆ ವಿನಾಯಿತಿಗೆ ಗರಿಷ್ಠ ಆದಾಯ ಮಿತಿ 20 ಲಕ್ಷ ರೂಪಾಯಿಗಳು. 7 ಈಶಾನ್ಯ ರಾಜ್ಯಗಳಲ್ಲಿನ (ಅಸ್ಸಾಂ, ಮೇಘಾಲಯ, ಮಣಿಪುರ, ನಾಗಾಲ್ಯಾಂಡ್, ಮಿಜೋರಾ, ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ) ಮತ್ತು 3 ಗಿರಿ ರಾಜ್ಯಗಳಲ್ಲಿನ (ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶ) ವ್ಯಾಪಾರ ವಹಿವಾಟುಗಳಿಗೆ ಈ ಪ್ರಮಾಣ 10 ಲಕ್ಷ ರೂಪಾಯಿಗಳು. ಅಂದರೆ, ಇತರ ಎಲ್ಲಾ ರಾಜ್ಯಗಳಲ್ಲಿ ವಾರ್ಷಿಕ 20 ಲಕ್ಷ ರೂ.ಗಿಂತಲೂ ಕಡಿಮೆ ವಹಿವಾಟು ಹೊಂದಿರುವ ವ್ಯಾಪಾರಿಗಳಿಗೆ ಜಿಎಸ್‌ಟಿ ಅಡಿಯಲ್ಲಿ ನೊಂದಣಿಯಿಂದ ವಿನಾಯಿತಿ ನೀಡಲಾಗುತ್ತದೆ. ಈಶಾನ್ಯ ಮತ್ತು ಗಿರಿ ರಾಜ್ಯಗಳಲ್ಲಿ 10 ಲಕ್ಷ ರೂ. ಗಿಂತಲೂ ಕಡಿಮೆ ವಹಿವಾಟು ನಡೆಸುವ ವ್ಯಾಪಾರಿಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಕೈಬಿಡಲಾಗುತ್ತದೆ. ತಜ್ಞರ ಪ್ರಕಾರ, ಈ ತೆರಿಗೆ ವಿನಾಯಿತಿ ಮಿತಿ ನಿಗದಿಯಿಂದಾಗಿ, ಸಣ್ಣ ಪುಟ್ಟ ವ್ಯಾಪಾರಿಗಳು ಮತ್ತು ಸೇವಾದಾತರಿಗೆ ಜಿಎಸ್‌ಟಿ ನಿಯಮಗಳನ್ನು ಅನುಸರಿಸುವುದು

ತಪ್ಪಲಿದೆ. ಜತೆಗೆ, ಸಣ್ಣಪುಟ್ಟ ವ್ಯಾಪಾರಿಗಳ ತೆರಿಗೆ ಮೌಲ್ಯಮಾಪನದ ಹೊರೆಯೂ ತೆರಿಗೆ ಅಧಿಕಾರಿಗಳಿಗೆ ತಪ್ಪಲಿದೆ.

**ಪರಸ್ಪರ ಅಧಿಕಾರ ನೀಡಿಕೆ** – ಕೇಂದ್ರ ಮತ್ತು ರಾಜ್ಯಗಳ ನಡುವೆ ಆಡಳಿತಾತ್ಮಕ ಅಧಿಕಾರಗಳನ್ನು ಹಂಚುವ ವಿಚಾರದಲ್ಲಿ, ಮಧ್ಯಮ ಮಾರ್ಗ ಅನುಸರಿಸಲು ನಿರ್ಧರಿಸಲಾಗಿದೆ. ವಾರ್ಷಿಕ 1.5 ಕೋಟಿ ರೂ. ವಹಿವಾಟು ನಡೆಸುವ ಡೀಲರ್‌ಗಳ ಮೇಲೆ ರಾಜ್ಯಗಳಿಗೆ ವಿಶೇಷ ಅಧಿಕಾರ ಒದಗಿಸಲು ಅಂಗೀಕರಿಸಲಾಗಿದೆ. ವಾರ್ಷಿಕ 1.5 ಕೋಟಿ ರೂ.ಗಿಂತಲೂ ಹೆಚ್ಚಿನ ಆದಾಯ ಹೊಂದಿರುವ ವ್ಯಾಪಾರಿಗಳ ಮೇಲೆ, ನಷ್ಟ ನಿರ್ಧರಣ ಸೂತ್ರಗಳನ್ನು ಆಧರಿಸಿ, ಕೇಂದ್ರ ಮತ್ತು ರಾಜ್ಯದ ಅಧಿಕಾರಿಗಳ ನಡುವೆ ದ್ವಿಮುಖ ನಿಯಂತ್ರಣ ಮತ್ತು ಪರಸ್ಪರ ಅಧಿಕಾರ ನೀಡಿಕೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಎಲ್ಲಾ 11 ಲಕ್ಷ ಸೇವಾ ತೆರಿಗೆ ಡೀಲರ್‌ಗಳನ್ನು ಆದಾಯ ಪ್ರಮಾಣವನ್ನು ಪರಿಗಣಿಸದೆ ಕೇಂದ್ರದ ನಿಯಂತ್ರಣಕ್ಕೆ ನೀಡಲಾಗಿದೆ.

### ಸಂಯುಕ್ತ ತೆರಿಗೆ ಯೋಜನೆ

ಸಂಯುಕ್ತ ತೆರಿಗೆ ಯೋಜನೆಯ ರೂಪುರೇಷೆಗೆ ಸಂಬಂಧಿಸಿದಂತೆಯೂ ಸಹಮತ ವ್ಯಕ್ತವಾಗಿದೆ. ವಾರ್ಷಿಕ ಒಟ್ಟು 50 ಲಕ್ಷ ರೂ.ವರೆಗಿನ ವಹಿವಾಟು ನಡೆಸುವ ವ್ಯಾಪಾರಿಗಳಿಗೆ ಶೇ. 1–2ರಷ್ಟು ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ. ಸಣ್ಣ ವ್ಯಾಪಾರಿಗಳಿಗೆ ಅನುಕೂಲಕ್ಕಾಗಿ ರೂಪಿಸಲಾದ ಯೋಜನೆ ಇದಾಗಿದೆ. ಈ ಯೋಜನೆಯಡಿ, ತೆರಿಗೆದಾತನು ತನ್ನ ಒಟ್ಟು ವಾರ್ಷಿಕ ವ್ಯವಹಾರ ಮೊತ್ತಕ್ಕೆ ಶೇಕಡಾವಾರು ರೂಪದಲ್ಲಿ ತೆರಿಗೆ ಪಾವತಿಸುತ್ತಾನೆ. ಆದರೆ ಇದರಲ್ಲಿ ತೆರಿಗೆದಾತನಿಗೆ ಪೂರ್ವ ಪಾವತಿ ತೆರಿಗೆ ಜಮಾ (ಐಟಿಸಿ) ಸೌಲಭ್ಯದ ಲಾಭ ದೊರೆಯುವುದಿಲ್ಲ. ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ಸಿಜಿಎಸ್‌ಟಿ) ಹಾಗೂ



### ಕೋಷ್ಟಕ 1

**ಸರಕು ಮತ್ತು ಸೇವಾ ತೆರಿಗೆ– ಮೂಲಭೂತ ಅಂಶಗಳು**

**ಅಂತರ್ಗತಗೊಳ್ಳಲಿರುವ ತೆರಿಗೆಗಳು/ ಸುಂಕಗಳು**

**ಕೇಂದ್ರದಿಂದ:**

* ಕೇಂದ್ರ ಅಬಕಾರಿ ಸುಂಕ
* ಅಬಕಾರಿ ಸುಂಕಗಳು (ಔಷಧೀಯ ಮತ್ತು ಶೌಚಾಲಯ ಉತ್ಪನ್ನಗಳ ಮೇಲೆ ವಿಧಿಸಲಾಗುವ)
* ಹೆಚ್ಚುವರಿ ಅಬಕಾರಿ ಸುಂಕಗಳು (ವಿಶೇಷ ಉತ್ಪನ್ನಗಳ ಮೇಲೆ ವಿಧಿಸಲಾಗುವ)
* ಹೆಚ್ಚುವರಿ ಅಬಕಾರಿ ಸುಂಕಗಳು (ಜವಳಿ ಮತ್ತು ಜವಳಿ ಸಂಬಂಧಿತ ಉತ್ಪನ್ನಗಳ ಮೇಲೆ ವಿಧಿಸಲಾಗುವ)
* ಹೆಚ್ಚುವರಿ ಸೀಮಾ ಸುಂಕಗಳು (ಸಾಮಾನ್ಯವಾಗಿ 'ಸಿವಿಡಿ' ಎಂದು ಕರೆಯಲಾಗುವ)
* ವಿಶೇಷ ಹೆಚ್ಚುವರಿ ಸೀಮಾ ಸುಂಕ (ಎಸ್‌ಎಡಿ)
* ಸೇವಾ ತೆರಿಗೆ
* ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದ ಸೆಸ್‌ಗಳು ಮತ್ತು ಸರ್ಚಾರ್ಜ್

**ರಾಜ್ಯಗಳಿಂದ**

* ರಾಜ್ಯ ವ್ಯಾಟ್
* ಕೇಂದ್ರೀಯ ಮಾರಾಟ ತೆರಿಗೆ
* ಖರೀದಿ ತೆರಿಗೆ
* ಐಷಾರಾಮಿ ತೆರಿಗೆ
* ಪ್ರವೇಶ ತೆರಿಗೆ (ಎಲ್ಲಾ ಬಗೆಯ)
* ಮನರಂಜನಾ ತೆರಿಗೆ (ಸ್ಥಳೀಯ ಸಂಸ್ಥೆಗಳಿಂದ ವಿಧಿಸಲಾಗುವ ತೆರಿಗೆಗಳನ್ನು ಹೊರತುಪಡಿಸಿ)
* ಜಾಹಿರಾತುಗಳ ಮೇಲಿನ ತೆರಿಗೆ
* ಲಾಟರಿ, ಬೆಟ್ಟಿಂಗ್ ಮತ್ತು ಜೂಜಿನ ಮೇಲಿನ ತೆರಿಗೆ
* ಸರಕು ಮತ್ತು ಸೇವೆಗಳ ಪೂರೈಕೆಗೆ ಸಂಬಂಧಿಸಿದ ರಾಜ್ಯಗಳ ಸೆಸ್ ಮತ್ತು ಸರ್ಚಾರ್ಜ್‌ಗಳು

**'ಜಿಎಸ್‌ಟಿ'ಯಲ್ಲಿ ಸೇರ್ಪಡೆಯಾಗದ ಉತ್ಪನ್ನಗಳು**

* ಮಾನವ ಸೇವನೆ ಉದ್ದೇಶದ ಆಲ್ಕೊಹಾಲ್
* ವಿದ್ಯುತ್
* ರಿಯಲ್ ಎಸ್ಟೇಟ್

**ಮುಂದಿನ ಹಂತದಲ್ಲಿ ಜಿಎಸ್‌ಟಿಗೆ ಸೇರ್ಪಡೆಯಾಗಲಿರುವ ಉತ್ಪನ್ನಗಳು**

* ಪೆಟ್ರೋಲಿಯಂ ಕಚ್ಚಾತೈಲ
* ಮೋಟರ್ ಸ್ಪಿರಿಟ್ (ಪೆಟ್ರೋಲ್)
* ಹೈಸ್ಪೀಡ್ ಡೀಸೆಲ್
* ನೈಸರ್ಗಿಕ ಅನಿಲ
* ವೈಮಾನಿಕ ಇಂಧನ
* ಈ ಉತ್ಪನ್ನಗಳಿಗೆ ಹಾಲಿ ಇರುವ ವ್ಯಾಟ್ ಹಾಗೂ ಮಾರಾಟ ತೆರಿಗೆ ಮುಂದುವರಿಯಲಿದೆ.

**'ಜಿಎಸ್‌ಟಿ' ಅಡಿಯಲ್ಲಿ ತಂಬಾಕನ್ನು ಹೇಗೆ ಪರಿಗಣಿಸಲಾಗುತ್ತದೆ**

* ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. ಇದರ ಜೊತೆಗೆ, ಈ ಉತ್ಪನ್ನಗಳ ಮೇಲೆ ಕೇಂದ್ರೀಯ ಅಬಕಾರಿ ಸುಂಕವನ್ನೂ ವಿಧಿಸುವ ಅಧಿಕಾರವನ್ನು ಕೇಂದ್ರ ಹೊಂದಿದೆ.

**ಜಿಎಸ್‌ಟಿ ಅನುಷ್ಠಾನದಿಂದ ರಾಜ್ಯಗಳ ಬೊಕ್ಕಸಕ್ಕೆ ಉಂಟಾಗಬಹುದಾದ ನಷ್ಟಕ್ಕೆ ಪರಿಹಾರ**

* ಮೊದಲ ಐದು ವರ್ಷಗಳ ಕಾಲ ರಾಜ್ಯಗಳು ಸಂಪೂರ್ಣ ನಷ್ಟ ಪರಿಹಾರವನ್ನು ಪಡೆಯಲಿವೆ.

**ಆಮದನ್ನು ಹೇಗೆ ಪರಿಗಣಿಸಲಾಗುತ್ತದೆ**

* ಸರಕು ಮತ್ತು ಸೇವೆಗಳ ಆಮದನ್ನು ಅಂತರ–ರಾಜ್ಯ ಪೂರೈಕೆ ಎಂದು ಪರಿಗಣಿಸಲಾಗುತ್ತದೆ ಮತ್ತು ದೇಶದೊಳಗೆ ಆಮದಾಗುವ ವಸ್ತುಗಳ ಮೇಲೆ ಐಜಿಎಸ್‌ಟಿ ವಿಧಿಸಲಾಗುತ್ತದೆ.

**ರಫ್ತನ್ನು ಹೇಗೆ ಪರಿಗಣಿಸಲಾಗುತ್ತದೆ**

* ರಫ್ತುಗಳನ್ನು ಶೂನ್ಯ ದರದ ಪೂರೈಕೆಗಳೆಂದು ಪರಿಗಣಿಸಲಾಗುತ್ತದೆ.

**ವಿನಾಯಿತಿ ಪಡೆಯಲಿರುವ ಸರಕು ಮತ್ತು ಸೇವೆಗಳ ಪಟ್ಟಿ**

* ವಿನಾಯಿತಿ ಪಟ್ಟಿಯನ್ನು ಸಾಧ್ಯವಾದಷ್ಟು ಕನಿಷ್ಠವಾಗಿರಿಸುವ ಪ್ರಯತ್ನ ನಡೆಯುತ್ತಿದೆ. ವಿನಾಯಿತಿ ಪಡೆಯಲಿರುವ ಸರಕು ಮತ್ತು ಸೇವೆಗಳ ಬಗ್ಗೆ ಜಿಎಸ್‌ಟಿ ಮಂಡಳಿ ನಿರ್ಧಾರ ಕೈಗೊಳ್ಳಲಿದೆ.

**ಜಿಎಸ್‌ಟಿ ಅನುಷ್ಠಾನಕ್ಕೆ ಮುನ್ನ ಪೂರ್ವಭಾವಿ ಪ್ರಕ್ರಿಯೆ**

* ಕೇಂದ್ರವು ಎರಡು ಶಾಸನಗಳನ್ನು ಜಾರಿಗೆ ತರಲಿದೆ. ಈ ಪೈಕಿ ಒಂದು ಸಿಜಿಎಸ್‌ಟಿಗೆ ಸಂಬಂಧಿಸಿದ್ದು, ಮತ್ತೊಂದು ಎಸ್‌ಎಸ್‌ಟಿಗೆ ಸಂಬಂಧಪಟ್ಟದ್ದು. ರಾಜ್ಯಗಳು ಮತ್ತು ಶಾಸಕಾಂಗ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳು ಎಸ್‌ಜಿಎಸ್‌ಟಿಗೆ ಸಂಬಂಧಿಸಿದ ಕಾಯಿದೆಗಳನ್ನು ಜಾರಿಗೊಳಿಸಲಿವೆ. ಸಂಸತ್ತು ಅಥವಾ ವಿಧಾನಮಂಡಲದ ಸರಳ ಬಹುಮತದೊಂದಿಗೆ ಅನುಮೋದನೆ ಪಡೆಯಬಹುದಾದ ಸಾಮಾನ್ಯ ಕಾಯ್ದೆಗಳು ಇವಾಗಿವೆ.

ರಾಜ್ಯ ಸರಕು ಮತ್ತು ಸೇವಾ ತೆರಿಗೆ ದರವು ಶೇ. 1ಕ್ಕಿಂತಲೂ ಕಡಿಮೆ ಇರುವಂತಿಲ್ಲ. ಸಂಯುಕ್ತ ತೆರಿಗೆ ಸಂಯೋಜನೆ ಆಯ್ದುಕೊಳ್ಳುವ ವ್ಯಾಪಾರಿಯು, ತನ್ನ ಗ್ರಾಹಕರಿಂದ ತೆರಿಗೆ ಸಂಗ್ರಹಿಸುವಂತಿಲ್ಲ. ಅಂತರ-ರಾಜ್ಯ ಸರಕುಗಳ ಸರಬರಾಜು ಮಾಡುವ ತೆರಿಗೆದಾತರು ಅಥವಾ 'ರಿವರ್ಸ್ ಚಾರ್ಜ್' ವ್ಯವಸ್ಥೆಯಡಿ (ಸೇವೆಯ ಮೇಲೆ ವಿಧಿಸಲಾದ ಸಂಪೂರ್ಣ ತೆರಿಗೆ ಮೊತ್ತವನ್ನು ಸೇವಾದಾತರಿಗೆ ನೀಡುವ ಬದಲು, ತೆರಿಗೆಯ ಒಂದು ಭಾಗವನ್ನು ಗ್ರಾಹಕರೇ ನೇರವಾಗಿ ಸರ್ಕಾರಕ್ಕೆ ಪಾವತಿಸುವ ವ್ಯವಸ್ಥೆ) ತೆರಿಗೆ ಸಲ್ಲಿಸುವವರು ಈ ಯೋಜನೆಗೆ ಅರ್ಹರಲ್ಲ.

ಪ್ರದೇಶ ಆಧರಿತ ವಿನಾಯಿತಿ: ಪ್ರಸ್ತುತ ಗಿರಿ ರಾಜ್ಯಗಳಾದ ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಹಾಗೂ 7 ಈಶಾನ್ಯ ರಾಜ್ಯಗಳು ಪ್ರದೇಶ ಆಧರಿತ ವಿನಾಯಿತಿಯನ್ನು ಪಡೆಯುತ್ತಿವೆ. ಸಂಕಷ್ಟದ ನಡುವೆಯೂ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಸಂಸ್ಥೆಗಳಿಗೆ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ. ಮುಂದಿನ ವರ್ಷದಿಂದ ಜಾರಿಯಾಗಲಿರುವ ಜಿಎಸ್‌ಟಿ ತೆರಿಗೆ ವ್ಯವಸ್ಥೆಯಲ್ಲೂ ಪ್ರದೇಶ ಆಧರಿತ ಅಬಕಾರಿ ಸುಂಕ ವಿನಾಯಿತಿಯನ್ನು ಮುಂದುವರಿಸಲು ನಿರ್ಧರಿಸಲಾಗಿದೆ. ಆದರೆ, ಇಲ್ಲಿ ತೆರಿಗೆ ಸಂಬಂಧಿತ ಲಾಭವನ್ನು ವಿನಾಯಿತಿ ಬದಲಾಗಿ, ಮರುಪಾವತಿ ರೂಪದಲ್ಲಿ ನೀಡಲಾಗುವುದು. ಅಂದರೆ, ವಿನಾಯಿತಿ ಪಡೆದ ಎಲ್ಲಾ ರಾಜ್ಯಗಳಲ್ಲೂ ಜಿಎಸ್‌ಟಿ ಅಡಿಯಲ್ಲಿ ತೆರಿಗೆ ವಿಧಿಸಲಾಗುವುದು. ಆದರೆ, ನಂತರದ ಹಂತದಲ್ಲಿ ತೆರಿಗೆಯನ್ನು ಸಂಗ್ರಹಿಸಿದ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು, ಸಂಬಂಧಪಟ್ಟ ರಾಜ್ಯಕ್ಕೆ ಅದನ್ನು ಮರಳಿಸುತ್ತವೆ. ತೆರಿಗೆ ವಿನಾಯಿತಿ ಪ್ರಯೋಜನ ಪಡೆಯಬಹುದಾದ ನಿರ್ದಿಷ್ಟ ಕೈಗಾರಿಕೆಗಳು ಯಾವುವು ಎಂಬ ಬಗ್ಗೆ ರಾಜ್ಯಗಳು ಇನ್ನಷ್ಟೇ ನಿರ್ಧರಿಸಬೇಕಿದೆ. ಎಲ್ಲಾ ತೆರಿಗೆ ವಿನಾಯಿತಿ ಮೊತ್ತವನ್ನೂ ಹಿಂದಿರುಗಿಸಲಾಗುವುದೇ ಎಂಬ ಬಗ್ಗೆ ನಿಖರವಾಗಿ ನಿರ್ಧಾರವಾಗಬೇಕಿದೆ.



**ಜಿಎಸ್‌ಟಿ ದರಗಳು**

ವಿತ್ತ ಸಚಿವರ ನೇತೃತ್ವದ ಉನ್ನತಾಧಿಕಾರ ಸಮಿತಿಯು, ಜಿಎಸ್‌ಟಿ ದರಗಳ ನಿಗದಿಗೆ ಸಂಬಂಧಿಸಿದಂತೆ ಎರಡು ಮಾರ್ಗದರ್ಶಕ ಸೂತ್ರಗಳನ್ನು ಸೂಚಿಸಿದ್ದು, ಈ ಸೂತ್ರಗಳು ಜಿಎಸ್‌ಟಿ ಮಂಡಳಿಗೂ ಮಾರ್ಗದರ್ಶಕಗಳಾಗಿವೆ. ಮೊದಲನೆಯದಾಗಿ, ತೆರಿಗೆ ದರವು ವಿಧಿಸಲರ್ಹವಾಗಿರಬೇಕು ಮತ್ತು ಜಿಎಸ್‌ಟಿ ಅನುಷ್ಠಾನದ ನಂತರ ಕ್ರಮೇಣ ಈ ದರವು ಈಗಿರುವ ಮಟ್ಟದಿಂದ ಇಳಿಮುಖವಾಗುವ ಮೂಲಕ ಗ್ರಾಹಕ-ಸ್ನೇಹಿಯಾಗಿ ಮಾರ್ಪಡಬೇಕು. ಎರಡನೇ ನಿಯಮವೆಂದರೆ, ಈಗಿರುವ ರೀತಿಯಲ್ಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಕರ್ತವ್ಯ ಹಾಗೂ ಹೊಣೆಗಾರಿಕೆಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಸಾಕಷ್ಟು ಆದಾಯವನ್ನು ತಂದುಕೊಡುವಂತಿರಬೇಕು. ಜಿಎಸ್‌ಟಿ ಮಂಡಳಿಯು ಅಂತಿಮ ತೆರಿಗೆ ದರ ನಿರ್ಧರಿಸುವ ಮುನ್ನ ಈ ಎರಡೂ ನಿಯಮಗಳನ್ನು ಪಾಲಿಸುತ್ತದೆ ಎಂದು ನಂಬಲಾಗಿದೆ. ನಾಲ್ಕು ಬಗೆ ತೆರಿಗೆ ದರಗಳು ಇರಲಿವೆ ಎಂದೂ ನಂಬಲಾಗಿದೆ:

* ಉತ್ಕೃಷ್ಟ ದರ – ಅತ್ಯಗತ್ಯ ಸರಕು ಅಥವಾ ಸೇವೆಗಳು
* ಸಾಮಾನ್ಯ ದರ – ಸಾಮಾನ್ಯ ಸರಕು ಅಥವಾ ಸೇವೆಗಳು
* ವಿಶೇಷ ದರ – ಬೆಲೆಬಾಳುವ ಲೋಹಗಳು
* ಶೂನ್ಯ ದರ – ವಿನಾಯಿತಿ ಪಡೆದ ಸರಕು ಅಥವಾ ಸೇವೆಗಳು

ಜಿಎಸ್‌ಟಿ ಅನುಷ್ಠಾನದ ಅನುಕೂಲವು ಕೇವಲ ಕೈಗಾರಿಕೆಗಳು/ ವ್ಯಾಪಾರಿ ಸಮುದಾಯಕ್ಕೆ ಮಾತ್ರ ಸೀಮಿತವಾಗಿರದೆ, ಅದು ಜನಸಾಮಾನ್ಯರಿಗೂ ತಲುಪಲಿದೆ ಎಂಬುದು ಗಮನಾರ್ಹ ಅಂಶ. ಹೊಸ ತೆರಿಗೆ ವ್ಯವಸ್ಥೆಯಿಂದ ಕರ ಬಾಹುಳ್ಯ ಕಡಿಮೆಯಾದರೆ, ದ್ವಂದ್ವ ತೆರಿಗೆ ಹೇರಿಕೆ ತಪ್ಪುವಂತಾದರೆ, ವಿಶೇಷವಾಗಿ ರಫ್ತಿನ ಮೇಲಿನ ತೆರಿಗೆ ದಕ್ಷ ರೀತಿಯಲ್ಲಿ ತಟಸ್ಥಗೊಳಿಸಲು ಸಾಧ್ಯವಾದರೆ, ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ಅಭಿವರದ್ಧಿಗೆ ಇದರಿಂದ ನೆರವಾಗುವುದಾದರೆ, ಗ್ರಾಹಕರಿಗೆ ಸರಳೀಕೃತ ತೆರಿಗೆ ವ್ಯವಸ್ಥೆಯ ಲಾಭ ದೊರೆಯಲಿದೆ. ತಪ್ಪಿದ ತೆರಿಗೆ ಬಾಹುಳ್ಯ, ದೇಶಾದ್ಯಂತ ಏಕ ರೀತಿಯ ಬೆಲೆಗಳು, ತೆರಿಗೆ ವ್ಯವಸ್ಥೆಯಲ್ಲಿ ಪಾರದರ್ಶಕತೆಯಿಂದ ಸರಕು ಮತ್ತು ಸೇವೆಗಳ ಬೆಲೆಗಳ ಇಳಿಕೆಯನ್ನು ನಿರೀಕ್ಷಿಸಬಹುದು.

ಜತೆಗೆ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಗೂ ಇದು ದಾರಿ ಮಾಡಲಿದೆ. ಜಿಎಸ್‌ಟಿ ಜಾರಿಯಿಂದ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ನಮ್ಮ ಉತ್ಪನ್ನಗಳ ಸ್ಪರ್ಧಾತ್ಮಕತೆ ಹೆಚ್ಚಲಿದೆ. ಅಧ್ಯಯನಗಳ ಪ್ರಕಾರ, ಇದರಿಂದ ರಾಷ್ಟ್ರೀಯ ಆದಾಯ ತತ್‌ಕ್ಷಣವೇ ಶೇ. 2ರವರೆಗೆ ಏರಿಕೆಯಾಗಲಿದೆ.

ತೆರಿಗೆ ವ್ಯಾಪ್ತಿ ವಿಸ್ತರಣೆ, ಹೆಚ್ಚಿದ ವಹಿವಾಟು ಮತ್ತು ಸುಧಾರಿತ ತೆರಿಗೆ ಅನುಸರಣೆಯಿಂದಾಗಿ ಕೇಂದ್ರ ಮತ್ತು ರಾಜ್ಯಗಳ ಆದಾಯದಲ್ಲೂ ಹೆಚ್ಚಳವಾಗಬಹುದು. ಪಾರದರ್ಶಕ ಗುಣದ ಹಿನ್ನೆಲೆಯಲ್ಲಿ ಈ ತೆರಿಗೆಯ ಆಡಳಿತ ನಿರ್ವಹಣೆ ಸುಲಭಸಾಧ್ಯ. ಜಿಎಸ್‌ಟಿ ಅನುಷ್ಠಾನದಿಂದ ಸುಲಭ ವ್ಯವಹಾರ ಸಾಧ್ಯತೆ ವಿಚಾರದಲ್ಲಿ ಭಾರತದ ಶ್ರೇಣಿ ಉನ್ನತ ದರ್ಜೆಗೆ ಏರಲಿದ್ದು, ದೇಶದಲ್ಲಿ ಹೆಚ್ಚುಹೆಚ್ಚು ಬಂಡವಾಳ ಹೂಡಿಕೆಗೆ ವಿದೇಶಿಯರನ್ನು ಆಕರ್ಷಿಸುವಲ್ಲೂ ಇದರಿಂದ ನೆರವಾಗಲಿದೆ ಎಂಬುದು ಗಮನಾರ್ಹ ಅಂಶ. ❑

# ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ತೆರಿಗೆ ವ್ಯವಸ್ಥೆಯ ಸುಧಾರಣೆ

* ಡಾ. ಟಿ. ಆರ್. ಚಂದ್ರಶೇಖರ



ಭಾರತದಲ್ಲಿರುವುದು ಬಹುಹಂತದ ಬಹುಸರ್ಕಾರಗಳ ಒಂದು ರಾಜಕೀಯ ಒಕ್ಕೂಟ ವ್ಯವಸ್ಥೆಯಾಗಿದೆ. ರಾಷ್ಟ್ರಮಟ್ಟದಲ್ಲಿ ಕೇಂದ್ರ ಸರ್ಕಾರವಿದ್ದರೆ ಕೆಳಗೆ ಪ್ರಾಂತಮಟ್ಟದಲ್ಲಿ ರಾಜ್ಯ ಸರ್ಕಾರಗಳಿವೆ. ಹೀಗೆ ನಮ್ಮ ದೇಶದಲ್ಲಿ 1992ರವರೆಗೆ ಎರಡು ಹಂತದ ಒಕ್ಕೂಟ ವ್ಯವಸ್ಥೆಯಿತ್ತು. ಆದರೆ 1992ರಲ್ಲಿನ 73 ಮತ್ತು 74ನೆಯ ಸಂವಿಧಾನದ ತಿದ್ದುಪಡಿಯ ನಂತರ ಸ್ಥಳಿಯ ಸರ್ಕಾರಗಳಿಗೆ ಸಂವಿಧಾನಾತ್ಮಕ ಮನ್ನಣೆ ದೊರತ ಮೇಲೆ ಮೂರು ಹಂತದ ಒಕ್ಕೂಟ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಈ ದಿಶೆಯಲ್ಲಿ 73ನೆಯ ಸಂವಿಧಾನದ ತಿದ್ದುಪಡಿಗೆ ಅನುಗುಣವಾಗಿ 'ಕರ್ನಾಟಕ ಪಂಚಾಯತಿ ಕಾಯಿದೆ'ಯನ್ನು ದೇಶದಲ್ಲಿ 1993ರಲ್ಲಿ ಪ್ರಥಮ ಬಾರಿಗೆ ಜಾರಿಗೊಳಿಸಿದ ರಾಜ್ಯ ಕರ್ನಾಟಕ. ಈ ಕಾಯಿದೆಯ ಮಸೂದೆಯನ್ನು 1 ಏಪ್ರಿಲ್ 1993ರಂದು ಶಾಸನ ಸಭೆಯಲ್ಲಿ ಮಂಡಿಸಲಾಯಿತು ಮತ್ತು ಅದು ಎರಡೂ ಸದನಗಳ ಅನುಮೋದನೆ ಪಡೆಯಿತು. ಹೀಗೆ ಅದು ಏಪ್ರಿಲ್ 13, 1993ರಂದು ಜಾರಿಗೆ ಬಂದಿತು.

ಸ್ಥಳೀಯ ಸರ್ಕಾರಗಳಲ್ಲಿ ಎರಡು ವಿಧಗಳಿವೆ. ಮೊದಲನೆಯದು ಗ್ರಾಮೀಣ ಸ್ಥಳೀಯ ಸರ್ಕಾರಗಳು ಅಥವಾ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಎರಡನೆಯದು ನಗರ ಸ್ಥಳೀಯ ಸರ್ಕಾರಗಳು. ಇವೆರಡೂ ಸರ್ಕಾರಗಳಲ್ಲಿ ಅನೇಕ ಆಂತರಿಕ ವರ್ಗೀಕರಣಗಳಿವೆ(ನೋಡಿ: ಚೌಕಟ್ಟು 1).

ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದ ಸಂವಿಧಾನದ 73 ನೆಯ ತಿದ್ದುಪಡಿಯ ಪ್ರಮುಖ ಲಕ್ಷಣಗಳು ಹೀಗಿವೆ: (1) ಪಂಚಾಯತಿಗಳು 'ಸ್ವಯಮಾಡಳಿತ ಸ್ಥಳೀಯ ಸರ್ಕಾರಗಳು'. (2) ಸ್ಥಳೀಯ ಸಂಸ್ಥೆಗಳನ್ನು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮಮಟ್ಟಗಳಲ್ಲಿ ರಚಿಸಬೇಕು. (3) ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯ ಹಣಕಾಸು ಆಯೋಗವನ್ನು ರಚಿಸಬೇಕು. (4) ಪಂಚಾಯತಿಗಳಿಗೆ ತೆರಿಗೆ ವಿಧಿಸುವ ಅಧಿಕಾರವಿರಬೇಕು, (5) ಮಹಿಳೆಯರು, ಪ.ಜಾ. ಮತ್ತು ಪ.ಪಂ.ಗಳಿಗೆ ಮೀಸಲಾತಿ ಇರಬೇಕು. (6) ಪ್ರತಿ ಐದು ವರ್ಷಗಳಿಗೊಮ್ಮೆ ಚುನಾವಣೆ ಕಡ್ಡಾಯ. ಪಂಚಾಯತಿಗಳು ಸ್ವಯಮಾಡಳಿತ ಸಂಸ್ಥೆಗಳಾಗಬೇಕಾದರೆ ಅವುಗಳಿಗೆ ತಮ್ಮ ಜವಾಬ್ದಾರಿ ನಿರ್ವಹಿಸಲು ಸಾಕಾಗುವಷ್ಟು ಸ್ವಂತ ಹಣಕಾಸು ಸಂಪನ್ಮೂಲವಿರಬೇಕು.

**ಚೌಕಟ್ಟು – 1 ಸ್ಥಳೀಯ ಸರ್ಕಾರಗಳ ವಿಧಗಳು**

| ಗ್ರಾಮೀಣ ಸ್ಥಳಿಯ ಸರ್ಕಾರಗಳು | ನಗರ ಸ್ಥಳಿಯ ಸರ್ಕಾರಗಳು |
|---|---|
| ಜಿಲ್ಲಾ ಪಂಚಾಯತಿ | ಮಹಾ ನಗರಪಾಲಿಕೆಗಳು |
| ತಾಲ್ಲೂಕು ಪಂಚಾಯತಿ | ನಗರಪಾಲಿಕೆಗಳು |
| ಗ್ರಾಮ ಪಂಚಾಯತಿ | ಪುರಸಭೆಗಳು |
| | ಪಟ್ಟಣ ಪಂಚಾಯತಿಗಳು |

**ರಾಜಕೀಯ ಪಕ್ಷಗಳು ತಮ್ಮ ಪಂಚಾಯತಿ ಮಟ್ಟದ ಕಾರ್ಯಕರ್ತರ ಸಾಮರ್ಥ್ಯವನ್ನು ಬಲಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದಂತೆ ಪಂಚಾಯತಿ ಸದಸ್ಯರು ಉತ್ತಮ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ರಾಜಕೀಯ ಪಕ್ಷಗಳು ರಾಜಕೀಯ ಪ್ರೌಢಿಮೆಯನ್ನು ಮೆರೆಯಬೇಕು.**

* ಸಮಾಲೋಚಕರು, ನಾಲ್ಕನೆಯ ರಾಜ್ಯ ಹಣಕಾಸು ಆಯೋಗ. E-mail : trcshekhara@gmail.com

ನಮ್ಮ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಗಳಿಗೆ ಮಾತ್ರ ತೆರಿಗೆ ವಿಧಿಸುವ ಅಧಿಕಾರವಿದೆ. ಪಂಚಾಯತಿಗಳ ತೆರಿಗೆಗಳಲ್ಲಿ ಪ್ರಮುಖವಾದುದೆಂದರೆ ಆಸ್ತಿ ತೆರಿಗೆ. ಜಾಹಿರಾತು, ಬಿತ್ತಿ ಚಿತ್ರಗಳು, ಗೋಮಾಳ, ಬಸ್ ನಿಲ್ದಾಣ ಮುಂತಾದವುಗಳ ಮೇಲಿನ ತೆರಿಗೆಗಳಿಂದ ಸಂಗ್ರಹವಾಗುವ ಪ್ರಮಾಣ ಅತ್ಯಂತ ಕಡಿಮೆ. ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯ ಅತ್ಯಂತ ಕೆಳಮಟ್ಟದಲ್ಲಿದೆ. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ತೆರಿಗೆಯನ್ನು ವಿಧಿಸುವ ಅಧಿಕಾರವಿಲ್ಲ. ಅವುಗಳು ತಮ್ಮ ಆಸ್ತಿಯಿಂದ ಬಾಡಿಗೆ, ಶುಲ್ಕ ಮುಂತಾದ ಕ್ರಮಗಳಲ್ಲಿ ವರಮಾನ ಸಂಗ್ರಹಿಸಬಹುದು. ಅವುಗಳ ಸಂಪನ್ಮೂಲದ ಮೂಲವೆಂದರೆ ರಾಜ್ಯ ಮತ್ತು ಕೇಂದ್ರಗಳಿಂದ ವರ್ಗಾವಣೆಯಾಗುವ ಅನುದಾನ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಗ್ರಾಮ ಪಂಚಾಯತಿಗಳ ತೆರಿಗೆ ಅಧಿಕಾರ, ತೆರಿಗೆ ಸಂಗ್ರಹ, ತೆರಿಗೆ ನಿಯಮಗಳು, ತೆರಿಗೆ ದರಗಳು ಮತ್ತು ತೆರಿಗೆ ಸುಧಾರಣೆ ಮುಂತಾದ ಸಂಗತಿಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಪ್ರಸ್ತಾವನೆಯನ್ನು ಬಿಟ್ಟು ಲೇಖನದಲ್ಲಿ ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯವನ್ನು ವಿಶ್ಲೇಷಿಸಲಾಗಿದೆ. ಎರಡನೆಯ ಭಾಗದಲ್ಲಿ ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಚರ್ಚಿಸಲಾಗಿದೆ. ಮೂರನೆಯ ಭಾಗದಲ್ಲಿ ತೆರಿಗೆ ವ್ಯವಸ್ಥೆಯ ಸುಧಾರಣೆ ಕ್ರಮಗಳನ್ನು ವಿವರಿಸಲಾಗಿದೆ.

### ಶಾಸನಾತ್ಮಕ ತೆರಿಗೆ ವಿಧಿಸುವ ಅಧಿಕಾರ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993(2016 ತಿದ್ದುಪಡಿ)ರ ಭಾಗ 199ರಲ್ಲಿ ಗ್ರಾಮ ಪಂಚಾಯತಿಗಳ ತೆರಿಗೆ ವಿಧಿಸುವ ಅಧಿಕಾರವನ್ನು ನೀಡಲಾಗಿದೆ. ಗ್ರಾಮ ಪಂಚಾಯತಿಗಳು ಮುಂದಿನ ಬಾಬ್ತುಗಳ ಮೇಲೆ ತೆರಿಗೆ ವಿಧಿಸಬಹುದು. 1. ಪಂಚಾಯತಿಯ ವ್ಯಾಪ್ತಿಯಲ್ಲಿನ ಕಟ್ಟಡಗಳು ಮತ್ತು ನಿವೇಶನ ಮೇಲಿನ ಆಸ್ತಿ ತೆರಿಗೆ (ಆಸ್ತಿಯ ಬಂಡವಾಳ ಮೌಲ್ಯವನ್ನು ಆಧರಿಸಿ). ಈ ತೆರಿಗೆ ವ್ಯಾಪ್ತಿಗೆ ಕೃಷಿ ಭೂಮಿಯು ಬರುವುದಿಲ್ಲ. 2. ಕುಡಿಯುವುದಕ್ಕೆ ಮತ್ತು ಇತರೆ ಉದ್ದೇಶಗಳಿಗೆ ಸರಬರಾಜು ಮಾಡುವ ನೀರಿನ ದರ. 3. ಪಂಚಾಯತಿಯು ವಿಧಿಸಬಹುದಾದ ಇತರೆ ತೆರಿಗೆಗಳು ಮತ್ತು ಶುಲ್ಕಗಳು: ಅ) ಸಿನಿಮಾ ಪ್ರದರ್ಶನ ಬಿಟ್ಟು ಉಳಿದ ಮನರಂಜನೆ ಚಟುವಟಿಕೆಗಳ ಮೇಲಿನ ತೆರಿಗೆ, ಆ) ಮೋಟಾರು ವಾಹನಗಳನ್ನು ಬಿಟ್ಟು ಇತರೆ ವಾಹನಗಳ ಮೇಲೆ ತೆರಿಗೆ, ಇ) ಜಾಹಿರಾತು ಮತ್ತು ಭಿತ್ತಿ ಪಲಕಗಳ ಮೇಲಿನ ತೆರಿಗೆ, ಈ) ಮಾರುಕಟ್ಟೆ ಶುಲ್ಕ, ಉ) ಬಸ್ಸು, ಟ್ಯಾಕ್ಸಿ, ರಿಕ್ಷಾ ನಿಲ್ದಾಣ ಶುಲ್ಕ ಮತ್ತು ಗೋಮಾಳ ಬಳಕೆ ಶುಲ್ಕ ಮತ್ತು ಇತರೆ ತೆರಿಗೆಗಳು, ಶುಲ್ಕಗಳು, ಜಕಾತಿ ಇತ್ಯಾದಿ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಭಾಗ 202ರ ಪ್ರಕಾರ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿನ ಕಾರ್ಖಾನೆ ಅಥವಾ ಉದ್ದಿಮೆ ಮೇಲೆ ತೆರಿಗೆ ವಿಧಿಸಬಹುದು. ಕಾಯಿದೆಯ ಭಾಗ 204ರ ಪ್ರಕಾರ ಭೂಕಂದಾಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಉಪಕರವನ್ನು ವಿಧಿಸಬಹುದು. ಆದರೆ ಈ ಉಪಕರದಿಂದ ಸಂಗ್ರಹವಾದ ಮೊತ್ತವನ್ನು ಆಯಾ ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಪೂರ್ಣವಾಗಿ ವರ್ಗಾಹಿಸಬೇಕು. ಕಾಯಿದೆಯ ಭಾಗ 205ರ ಪ್ರಕಾರ ಚರಾಸ್ತಿಯ ವರ್ಗಾವಣೆಯ ಮೇಲೆ ಜಕಾತಿಯನ್ನು ವಿಧಿಸಬಹುದು. ಆಸ್ತಿ ತೆರಿಗೆ, ಇತರೆ ತೆರಿಗೆ ಮತ್ತು ಶುಲ್ಕದರಗಳ ವಿವರಗಳನ್ನು ಕಾಯಿದೆಯ ಅನುಸೂಚಿ 4ರಲ್ಲಿ ನೀಡಲಾಗಿದೆ. ಕಾಯಿದೆಯ ಭಾಗ 199ರಡಿಯಲ್ಲಿನ ತೆರಿಗೆ, ಶುಲ್ಕ, ಜಕಾತಿ ಇತ್ಯಾದಿ ದರಗಳನ್ನು ಎರಡು ವರ್ಷಗಳಿಗೊಮ್ಮೆ ಪರಿಷ್ಕರಣೆ ಮಾಡಲು ಅವಕಾಶ ನೀಡಲಾಗಿದೆ. ಕಟ್ಟಡ ಮತ್ತು ನಿವೇಶನ ತೆರಿಗೆಗಳ ದರಗಳನ್ನು ಎರಡು ವರ್ಷಗಳಿಗೊಮ್ಮೆ ಮತ್ತು ಉಳಿದ ತೆರಿಗೆ, ಶುಲ್ಕ, ಜಕಾತಿ ದರಗಳನ್ನು ವರ್ಷಕೊಮ್ಮೆ ಪರಿಷ್ಕರಿಸಬಹುದು. ಗ್ರಾಮ ಪಂಚಾಯತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಗ್ರಾ. ಪಂ. ಕಾರ್ಯದರ್ಶಿ ಅಥವಾ ಬಿಲ್ ಕಲೆಕ್ಟರುಗಳಿಗೆ ತೆರಿಗೆ/ಶುಲ್ಕ ಇತ್ಯಾದಿ ಸಂಗ್ರಹಿಸುವ ಜವಾಬ್ದಾರಿಯಿದೆ. ತೆರಿಗೆ, ಶುಲ್ಕ ಇತ್ಯಾದಿ ಮೂಲಗಳಿಂದ ಸಂಗ್ರಹಿಸಿದ ಹಣವನ್ನು ಪಂಚಾಯತಿ ವ್ಯಾಪ್ತಿಯಲ್ಲಿರುವ ಅನುಸೂಚಿತ ಬ್ಯಾಂಕು ಅಥವಾ ಸಹಕಾರ ಬ್ಯಾಂಕಿನಲ್ಲಿ ಪಂಚಾಯತಿ ಖಾತೆಗೆ ಜಮಾ ಮಾಡಬೇಕು. ಆಸ್ತಿ ತೆರಿಗೆಯು ಪಂಚಾಯತಿಗಳ ಪ್ರಧಾನ ವರಮಾನದ ಮೂಲವಾಗಿದೆ. ಗ್ರಾಮ ಪಂಚಾಯತಿಗಳ ಒಟ್ಟು ತೆರಿಗೆ ಸಂಪನ್ಮೂಲದಲ್ಲಿ ಆಸ್ತಿ ತೆರಿಗೆ ಪ್ರಮಾಣ ಶೇ 60 ರಿಂದ ಶೇ70ರಷ್ಟಿರುತ್ತದೆ.

### ಭಾಗ 1

### ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯ

ಗ್ರಾಮ ಪಂಚಾಯತಿಗಳ ತೆರಿಗೆ ಬೇಡಿಕೆ ಎಷ್ಟಿದೆಯೋ ಅದರಲ್ಲಿ ಎಷ್ಟನ್ನು ಸಂಗ್ರಹ ಮಾಡುತ್ತವೆ ಎಂಬುದು ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯವಾಗಿದೆ. ಗ್ರಾಮ ಪಂಚಾಯತಿಗಳು ತಮ್ಮ ತೆರಿಗೆ ಸಾಮರ್ಥ್ಯವನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಿಲ್ಲ. ತೆರಿಗೆ ಸಂಗ್ರಹ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಸರಾಸರಿ ಶೇ. 25 ರಿಂದ ಶೇ. 30ರವರೆಗಿದೆ ಎಂದು ಹೇಳಲಾಗಿದೆ.

ಗ್ರಾಮ ಪಂಚಾಯತಿಗಳ ತೆರಿಗೆ ವಿಧಿಸುವ ಕ್ರಮಗಳನ್ನು, ತೆರಿಗೆ ಪರಿಷ್ಕರಣಗಳನ್ನು, ತೆರಿಗೆ ಸಂಗ್ರಹವನ್ನು ಹೇಗೆ ಸುಧಾರಿಸಬೇಕು ಎಂಬ ಸಂಗತಿಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಕೋಷ್ಟಕ – 1ರಲ್ಲಿ ತೋರಿಸಿರುವಂತೆ 8 ಜಿಲ್ಲೆಗಳಲ್ಲಿನ ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯ ಶೇ 10 ರಿಂದ ಶೇ 30 ರೊಳಗಿದ್ದರೆ 6 ಜಿಲ್ಲೆಗಳಲ್ಲಿ ತೆರಿಗೆ ಸಂಗ್ರಹ ಪ್ರಮಾಣ ಶೇ 30 ರಿಂದ ಶೇ40ರಷ್ಟಿದೆ. ಮತ್ತೆ 9 ಜಿಲ್ಲೆಗಳಲ್ಲಿ ಅದು ಶೇ40 ರಿಂದ ಶೇ60ರಷ್ಟಿದ್ದರೆ ಉಳಿದ 7 ಜಿಲ್ಲೆಗಳಲ್ಲಿ ಮಾತ್ರ ಅದು ಶೇ 60ಕ್ಕಿಂತ ಅಧಿಕವಿದೆ. ಒಟ್ಟಾರೆ ಗ್ರಾಮ ಪಂಚಾಯತಿಗಳ ಸ್ವಂತ ಸಂಪನ್ಮೂಲ ಕ್ರೋಢೀಕರಣ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ.

ತೆರಿಗೆ ಸಂಗ್ರಹ ಸಾಮರ್ಥ್ಯದ ಪ್ರಾದೇಶಿಕ ಸ್ವರೂಪವನ್ನು ಪರಿಶೀಲಿಸುವುದು ಅಪೇಕ್ಷಣೀಯ. ಉನ್ನತ ಮಟ್ಟದ ತೆರಿಗೆ ಸಂಗ್ರಹದ ಪಟ್ಟಿಯಲ್ಲಿ(07) ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳಿದ್ದರೆ ಕೆಳಮಟ್ಟದ ತೆರಿಗೆ ಸಂಗ್ರಹ ಪಟ್ಟಿಯಲ್ಲಿ(ಶೇ10 ರಿಂದ ಶೇ30) ಕಲಬುರಗಿ ಮತ್ತು ಬೆಳಗಾವಿ ವಿಭಾಗದ ಜಿಲ್ಲೆಗಳು ಹೆಚ್ಚಿವೆ.

### ಭಾಗ 2

### ತೆರಿಗೆ ಸಂಗ್ರಹದ ಸಮಸ್ಯೆಗಳು

ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹ ಸಾಮರ್ಥ್ಯ ಕೆಳಮಟ್ಟದಲ್ಲಿರುವುದು ಸ್ಪಷ್ಟವಾಗಿದೆ. ಇದಕ್ಕಿರುವ ಕೆಲವು ಕಾರಣಗಳನ್ನು ನಟರಾಜ್. ವಿ.ಕೆ. ಮತ್ತು ಇತರರು (2014:66) ನಡೆಸಿದ ಅಧ್ಯಯನದಲ್ಲಿ ಹೀಗೆ ಪಟ್ಟಿ ಮಾಡಿದ್ದಾರೆ:

| ಕೋಷ್ಟಕ 1 | | | |
|---|---|---|---|
| ತೆರಿಗೆ ಸಂಗ್ರಹ ಸಾಮರ್ಥ್ಯ ಆಧರಿಸಿ ಪಂಚಾಯತಿಗಳ ಜಿಲ್ಲಾವಾರು ವರ್ಗೀಕರಣ:2012–13 | | | |
| ಕ್ರ. ಸಂ. | ತೆರಿಗೆ ಸಂಗ್ರಹಣದ ವ್ಯಾಪ್ತಿ | ಪ್ರತಿ ತೆರಿಗೆ ಸಂಗ್ರಹ ವ್ಯಾಪ್ತಿಯಲ್ಲಿನ ಜಿಲ್ಲೆಗಳ ಹೆಸರು | ಜಿಲ್ಲೆಗಳ ಸಂಖ್ಯೆ |
| 1 | ಶೇ 10 ರಿಂದ ಶೇ 30 ರವರೆಗೆ ತೆರಿಗೆ ಸಂಗ್ರಹ | ಯಾದಗೀರ್, ವಿಜಯಪುರ, ಕಲಬುರಗಿ, ಮಂಡ್ಯ, ಹಾವೇರಿ, ದಾವಣಗೆರೆ, ಚಿತ್ರದುರ್ಗ ಮತ್ತು ಬೀದರ್ | 08 |
| 2 | ಶೇ 31 ರಿಂದ ಶೇ 40 ರವರೆಗೆ ತೆರಿಗೆ ಸಂಗ್ರಹ | ಚಿಕ್ಕಬಳ್ಳಾಪುರ, ರಾಯಚೂರು, ಹಾಸನ, ಗದಗ, ಧಾರವಾಡ, ಚಾಮರಾಜನಗರ | 06 |
| 3 | ಶೇ 41 ರಿಂದ ಶೇ 60 ರವರೆಗೆ ತೆರಿಗೆ ಸಂಗ್ರಹ | ರಾಮನಗರ, ತುಮಕೂರು, ಶಿವಮೊಗ್ಗ, ಕೊಪ್ಪಳ, ಕೋಲಾರ, ಚಿಕ್ಕಮಗಳೂರು, ಬಳ್ಳಾರಿ, ಬಾಗಲಕೋಟೆ ಮತ್ತು ಬೆಂಗಳೂರು ನಗರ | 9 |
| 4 | ತೆರಿಗೆ ಸಂಗ್ರಹ ಶೇ 60 ಕ್ಕಿಂತ ಅಧಿಕ | ಬೆಂಗಳೂರು ಗ್ರಾಮೀಣ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಉತ್ತರ ಕನ್ನಡ ಮತ್ತು ಕೊಡಗು | 07 |
| 5 | | ರಾಜ್ಯದಲ್ಲಿನ ಒಟ್ಟು ಜಿಲ್ಲೆಗಳ ಸಂಖ್ಯೆ | 30 |
| ಮೂಲ : ಕರ್ನಾಟಕ ಸರ್ಕಾರ 2014. ಗ್ರಾಮ ಪಂಚಾಯತಿಗಳ ಸಂಪನ್ಮೂಲ ಕ್ರೋಢೀಕರಣ ಪದ್ಧತಿಯಲ್ಲಿ ನೂತನ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ – ಒಂದು ಚಿಂತನೆ. ಮಹದೇವ. ಜಿ. ಸಿ. ಸಿದ್ದರಾಜು. ಎಚ್. ಬಿ. ರಾಜೇಶ್. ಎಚ್. ಆರ್. | | | |

* ಗ್ರಾಮ ಪಂಚಾಯತಿಗಳ ಗಾತ್ರ–ಜನಸಂಖ್ಯೆ ಮತ್ತು ವಿಸ್ತೀರ್ಣ ಎರಡೂ ದೃಷ್ಟಿಯಿಂದ ಅತ್ಯಂತ ಚಿಕ್ಕದಾಗಿರುವುದು
* ಸಿಬ್ಬಂದಿ ಮತ್ತು ಆಡಳಿತಾತ್ಮಕ ಸಂಪನ್ಮೂಲಗಳ ಕೊರತೆ
* ತೆರಿಗೆ ವಿಧಿಸುವುದರಿಂದ ಜನರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ ಎಂಬ ಪಂಚಾಯತಿ ಸದಸ್ಯರ ನಂಬಿಕೆ
* ಪಂಚಾಯತಿಯು ಸಮರ್ಪಕವಾಗಿ ನಾಗರಿಕ ಸೌಲಭ್ಯ ಒದಗಿಸದಿದ್ದಾಗ ತೆರಿಗೆ ನೀಡುವುದಕ್ಕೆ ಜನರ ನಿರಾಸಕ್ತಿ

ಇಲ್ಲಿ ಅರ್ಥವಾಗದಿರುವ ಸಂಗತಿಯೆಂದರೆ ತೆರಿಗೆ ದರ ಅತ್ಯಂತ ಕನಿಷ್ಠವಿದ್ದಾಗಲೂ ಸಂಗ್ರಹ ಏಕೆ ಕೆಳಮಟ್ಟದಲ್ಲಿದೆ? ಸಾಮಾನ್ಯವಾಗಿ ಆಸ್ತಿ ತೆರಿಗೆಯ ಗರಿಷ್ಠ ದರ ರೂ300 ರಿಂದ ರೂ350 ಎಂದು ಹೇಳಲಾಗಿದೆ. ವಾರ್ಷಿಕ ರೂ350 ಕಟ್ಟುವುದು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸಿಸುವವರಿಗೆ ಕಷ್ಟವಾಗಬಾರದು. ನಿಜವಾಗಿ ತೆರಿಗೆ ದರ ದಿನವಹಿ ರೂ1ಕ್ಕಿಂತ ಕಡಿಮೆಯಿದೆ. ಕೂಲಿಕಾರರೂ ಕಟ್ಟಬಹುದಾದ ತೆರಿಗೆ ದರ ಇದಾಗಿದೆ. ಆದರೂ ಜನರು ತೆರಿಗೆ ಕಟ್ಟುತ್ತಿಲ್ಲ. ಗ್ರಾಮ ಪಂಚಾಯತಿಯ ಆಸ್ತಿ ತೆರಿಗೆಯನ್ನು 'ಸ್ವಯಂ ಇಚ್ಛೆಯ ತೆರಿಗೆ' ಎಂದು ಕರೆಯಲಾಗಿದೆ. ಇಲ್ಲಿ ತೆರಿಗೆ ಕಟ್ಟುವುದಕ್ಕೆ ಯಾವುದೇ ಒತ್ತಡವಿರುವುದಿಲ್ಲ. ಗ್ರಾಮೀಣವಾಸಿಗಳು ತಮಗೆ ಇಷ್ಟ ಬಂದಾಗ ಕಟ್ಟುತ್ತಾರೆ, ಇಲ್ಲದಿದ್ದರೆ ಕಟ್ಟುವುದಿಲ್ಲ. ಇಲ್ಲಿ ನಿಯಮ ಅನ್ನುವುದು ಇಲ್ಲ. ಆಸ್ತಿ ತೆರಿಗೆ ಕಟ್ಟದಿದ್ದರೆ ಏನೂ ಆಗುವುದಿಲ್ಲ. ಆಸ್ತಿ ತೆರಿಗೆ ಕಟ್ಟಿದವರಿಗೂ ಮತ್ತು ಕಟ್ಟದವರಿಗೂ ನಡುವೆ ಭಿನ್ನತೆ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಪಂಚಾಯತಿಯ ಚುನಾಯಿತ ಸದಸ್ಯರೇ ಮನೆತೆರಿಗೆ ಕಟ್ಟಿರುವುದಿಲ್ಲ. ಚುನಾವಣೆ ಸಂದರ್ಭದಲ್ಲಿ ನಾಮಪತ್ರ ಸಲ್ಲಿಸುವುದಕ್ಕೆ ಅಗತ್ಯ ಬಿದ್ದಾಗ ಅವರು ತೆರಿಗೆ ಕಟ್ಟುತ್ತಾರೆ. ತೆರಿಗೆ ವಸೂಲಾತಿಯ ಆಡಳಿತ ವ್ಯವಸ್ಥೆಯು ಉತ್ತಮವಾಗಿಲ್ಲ.

## ಭಾಗ 3

### ತೆರಿಗೆ ವ್ಯವಸ್ಥೆಯ ಸುಧಾರಣೆಗೆ ಕ್ರಮಗಳು

ಈ ಭಾಗದಲ್ಲಿ ಗ್ರಾಮ ಪಂಚಾಯತಿಗಳ ತೆರಿಗೆ ವ್ಯವಸ್ಥೆಯ ಸುಧಾರಣೆ ಬಗ್ಗೆ ಚರ್ಚಿಸಲಾಗಿದೆ. ತೆರಿಗೆ ವಸೂಲಾತಿಯನ್ನು ಉತ್ತಮ ಪಡಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಲಾಗಿದೆ. ಗ್ರಾಮ ಪಂಚಾಯತಿಗಳ ತೆರಿಗೆ ವ್ಯವಸ್ಥೆಯ ಕಾರ್ಯಕ್ಷಮತೆಯ ಬಗ್ಗೆ ಕರ್ನಾಟಕ ಸರ್ಕಾರ ನೇಮಿಸಿದ್ದ 'ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ಯದ ಪಥ–ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯ ವರದಿ' (2014) ಹೀಗೆ ಹೇಳಲಾಗಿದೆ: 'ಯಾವುದೇ ಸರ್ಕಾರದ ಆರ್ಥಿಕ ಜೀವನಾಡಿ ಅಂದರೆ ತೆರಿಗೆ ಮತ್ತು ಗ್ರಾಮ ಪಂಚಾಯತಿಗಳು ತೆರಿಗೆ, ಉಪತೆರಿಗೆ ವಿಧಿಸುವ, ಬಾಡಿಗೆ ಪಡೆಯುವ ಅಧಿಕಾರ ಮತ್ತು ಅವು ಎಲ್ಲ ಸಂಪನ್ಮೂಲಗಳ ಮೇಲೆ ಆಡಳಿತದ ನಿಯಂತ್ರಣ ಹೊದಿವೆ. ಆದಾಗ್ಯೂ ......... ಗ್ರಾಮ ಪಂಚಾಯತಿಗಳು 20 ವರ್ಷಗಳ ಹಿಂದೆ ನಿಗದಿಗೊಳಿಸಿದ ದರ ಒಪ್ಪಿಕೊಳ್ಳುವುದರಲ್ಲಿ ಸಿಕ್ಕಿಹಾಕಿಕೊಂಡಿವೆ ಮತ್ತು ಇವು ಸಂಗ್ರಹಿಸಲ್ಪಟ್ಟರೆ ತೆರಿಗೆ ವಸೂಲು ಮಾಡುವವರ ಕೂಲಿ ಪಾವತಿಸಲು ಸಾಲುವುದಿಲ್ಲ'. ಈ ಕಾರಣಕ್ಕೆ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯು ಗ್ರಾಮ ಪಂಚಾಯತಿಗಳ ತೆರಿಗೆ ದರಗಳನ್ನು ಪರಿಷ್ಕರಿಸಲು ಸಾಧ್ಯವಾಗುವಂತೆ ಮತ್ತು ಪ್ರಸ್ತುತ ಮಾರುಕಟ್ಟೆ ದರಕ್ಕೆ ಸೂಕ್ತವಾದ ತೆರಿಗೆ ದರಗಳ ಬಗ್ಗೆ ತಿದ್ದುಪಡಿ ಮಾಡಿದೆ ಮತ್ತು ಅದನ್ನು ಕಾಯಿದೆಯ ಅನುಸೂಚಿ 4 ರಲ್ಲಿ ನೀಡಲಾಗಿದೆ.

1 ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಕಾಯಿದೆಯಲ್ಲಿಯೇ ಕನಿಷ್ಠ ಮತ್ತು ಗರಿಷ್ಠ ದರವನ್ನು ನಿಗದಿ ಪಡಿಸಲಾಗಿದೆ. ಉದಾಹರಣೆಗೆ ವಾಸದ ಕಟ್ಟಡಗಳಿಗೆ ತೆರಿಗೆಯು ಆಸ್ತಿಯ ಬಂಡವಾಳ ಮೌಲ್ಯದ ಶೇ0.05 ಕ್ಕಿಂತ ಕಡಿಮೆಯಿರಬಾರದು ಮತ್ತು ಶೇ0.10ಕ್ಕಿಂತ ಹೆಚ್ಚಿರಬಾರದು ಎಂದು ನಿಯಮ ಮಾಡಲಾಗಿದೆ. ಇದರಿಂದ ಗ್ರಾಮ ಪಂಚಾಯತಿಗಳ ತೆರಿಗೆ ವಿಧಿಸುವ ಅಧಿಕಾರಕ್ಕೆ ಮಿತಿ ಹೇರಿದಂತಾಗುತ್ತದೆ. ಕಟ್ಟಡದ ವಿನ್ಯಾಸ, ಗುಣಮಟ್ಟ, ವಿಸ್ತೀರ್ಣ, ಕಟ್ಟಡಕ್ಕೆ ಬಳಸಿರುವ

ಸಾಮಗ್ರಿ ಮುಂತಾದವುಗಳ ಆಧಾರದಲ್ಲಿ ಬಂಡವಾಳ ಮೌಲ್ಯವನ್ನು ನಿರ್ಧರಿಸಬೇಕು. ಆದರೆ ಇದಕ್ಕೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಗ್ರಾಮ ಪಂಚಾಯತಿಗಳಿಗೆ ತೆರಿಗೆ ವಿಧಿಸುವ, ತೆರಿಗೆ ದರಗಳನ್ನು ನಿರ್ಧರಿಸುವ ಮತ್ತು ಸಂಗ್ರಹಿಸುವ ಪೂರ್ಣ ಅಧಿಕಾರ ನೀಡಬೇಕು. ಶ್ರೀ ನಟರಾಜ್. ವಿ.ಕೆ. ಮತ್ತು ಇತರರು ಹಾಗೂ ಶ್ರೀ ಗೋವಿಂದ ರಾವ್. ಎಮ್ ಮತ್ತು ಇತರರು ತಮ್ಮ ಅಧ್ಯಯನಗಳಲ್ಲಿ ತೋರಿಸಿರುವಂತೆ ಆಸ್ತಿಯೇತರ ತೆರಿಗೆಯು ಆರ್ಥಿಕ ಸಮೃದ್ಧತೆಯ ಜೊತೆಗೆ ಅನುಲೋಮ ಸಂಬಂಧ ಹೊಂದಿದ್ದರೆ ಆಸ್ತಿ ತೆರಿಗೆಯು ಆರ್ಥಿಕ ಸಮೃದ್ದತೆಯ ಜೊತೆ ವಿಲೋಮ ಸಂಬಂಧ ಹೊಂದಿದೆ (ನಟರಾಜ್. ವಿ.ಕೆ. ಮತ್ತು ಇತರರು: 2014.67). ಮುಂದುವರಿದ ಪ್ರದೇಶದ ಪಂಚಾಯತಿಗಳು ತಮ್ಮ ಸಂಪನ್ಮೂಲಕ್ಕೆ ಆಸ್ತಿಯೇತರ ತೆರಿಗೆಯನ್ನು ಅವಲಂಬಿಸಿದ್ದರೆ ಹಿಂದುಳಿದ ಪ್ರದೇಶ ಪಂಚಾಯತಿಗಳು ಆಸ್ತಿ ತೆರಿಗೆಯನ್ನು ಅವಲಂಬಿಸಿರುತ್ತವೆ.

ಕರ್ನಾಟಕದಲ್ಲಿ ಪಂಚಾಯತಿಗಳು ಸಂಗ್ರಹಿಸುತ್ತಿರುವ ತೆರಿಗೆ ಸಂಪನ್ಮೂಲ ಸಂಗ್ರಹ ಸಾಪೇಕ್ಷವಾಗಿ ತೀವ್ರ ಕೆಳಮಟ್ಟದಲ್ಲಿದೆ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಇಡೀ ದೇಶದ ಒಟ್ಟು ಪಂಚಾಯತಿಗಳ ಸಂಖ್ಯೆಯಲ್ಲಿ ಕರ್ನಾಟಕದ ಪಂಚಾಯತಿಗಳ ಪಾಲು ಶೇ.2 ರಷ್ಟಾದರೆ ದೇಶದ ಎಲ್ಲ ಪಂಚಾಯತಿಗಳು ಕೂಡಿ ಸಂಗ್ರಹಿಸಿರುವ ತೆರಿಗೆ ಮೊತ್ತದಲ್ಲಿ ಕರ್ನಾಟಕದ ತೆರಿಗೆ ಮೊತ್ತದ ಪಾಲು ಶೇ. 12 (ನಟರಾಜ್. ವಿ. ಕೆ. ಮತ್ತು ಇತರರು). ಇದು ಸಾಪೇಕ್ಷವಾಗಿ ಉತ್ತಮವಾದ ಸಂಗತಿಯಿರಬಹುದು. ಆದರೆ ಪಂಚಾಯತಿಗಳು ತಮ್ಮ ತೆರಿಗೆ ಸಂಗ್ರಹ ಸಾಮರ್ಥ್ಯವನ್ನು ಉತ್ತಮ ಪಡಿಸಿಕೊಳ್ಳುವ ಅಗತ್ಯವಿದೆ. ತೆರಿಗೆಯೇತರ ಮೂಲಗಳ ಉತ್ಪತ್ತಿಯನ್ನು ಉತ್ತಮ ಪಡಿಸುವ ಅಗತ್ಯವಿದೆ.

### 3 ತೆರಿಗೆ ಸಂಗ್ರಹ ವೆಚ್ಚ

ಶ್ರೀ ಗೋವಿಂದ ರಾವ್ ಮತ್ತು ಇತರರು ನಡೆಸಿದ ಅಧ್ಯಯನದಲ್ಲಿ ಕಂಡು ಬಂದಿರುವಂತೆ ಕರ್ನಾಟಕದ ನಾಲ್ಕು ಜಿಲ್ಲೆಗಳ ಗ್ರಾಮ ಪಂಚಾಯತಿಗಳಲ್ಲಿ 1999–2000ದಲ್ಲಿ ತೆರಿಗೆ ಸಂಗ್ರಹ ವೆಚ್ಚದ ಪ್ರಮಾಣವು ತೆರಿಗೆ ಸಂಗ್ರಹ ಮೊತ್ತದ ಶೇ 58.44ರಷ್ಟಿದ್ದರೆ 2000–01ರಲ್ಲಿ ಅದು ಶೇ72ಕ್ಕೇರಿದೆ. ಇದೇ ಸ್ಥಿತಿ ಇತರೆ ಪಂಚಾಯತಿಗಳಲ್ಲಿಯೂ ಇರುವುದಿಲ್ಲ ಅನ್ನುವುದಕ್ಕೆ ಆಧಾರಗಳೇನಿಲ್ಲ. ತೆರಿಗೆ ಮೂಲಕ ಸಂಗ್ರಹವಾದ ಸಂಪನ್ಮೂಲವನ್ನು ತೆರಿಗೆ ಸಂಗ್ರಹದ ವೆಚ್ಚಕ್ಕೆ ಬಳಕೆಯಾದರೆ ಅದರಿಂದ ಏನು ಪ್ರಯೋಜನ!. ಬಿಲ್ ಕಲೆಕ್ಟರ್ ಮತ್ತು ಪಂಪ್ ಆಪರೇಟರುಗಳ ಸಂಬಳಕ್ಕಾಗಿ ತೆರಿಗೆ ಸಂಗ್ರಹಿಸುತ್ತಿರುವ ಸ್ಥಿತಿ ಇದೆ. ತೆರಿಗೆ ಸಂಗ್ರಹಿಸುವ ವೆಚ್ಚವು ತೆರಿಗೆ ಸಂಗ್ರಹ ಮೊತ್ತದ ಶೇ. 10 ರಿಂದ ಶೇ. 20 ಮೀರಬಾರದು.

### 4 ತೆರಿಗೆ ಆಡಳಿತ ಸುಧಾರಣೆ

ಗ್ರಾಮ ಪಂಚಾಯತಿಗಳ ತೆರಿಗೆ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯವಿದೆ. ಈಗ ನಿಗದಿ ಪಡಿಸಿರುವ ಆಸ್ತಿ ತೆರಿಗೆ ದರ ಅತ್ಯಂತ ಕನಿಷ್ಠವಾದುದು. ಅದನ್ನು ಸಂಗ್ರಹಿಸುವುದರಲ್ಲಿ ಪಂಚಾಯತಿಗಳು ನಿರಾಸಕ್ತವಾಗಿವೆ. ತೆರಿಗೆ ಉತ್ಪಾದಕತೆಯನ್ನು ಉತ್ತಮ ಪಡಿಸುವ ಅಗತ್ಯವಿದೆ. ತೆರಿಗೆಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು.

### 5 ತೆರಿಗೆ ವ್ಯಾಪ್ತಿಗೆ ಗ್ರಾಮ ಪಂಚಾಯತಿ ಎಲ್ಲ ಆಸ್ತಿಗಳನ್ನು ತರುವುದು

ಗ್ರಾಮ ಪಂಚಾಯತಿಗಳ ತೆರಿಗೆ ಅಡಿಪಾಯ ತುಂಬಾ ಸೀಮಿತವಾದುದಾಗಿದೆ. ಆಸ್ತಿ ತೆರಿಗೆ ದರ ಅತ್ಯಂತ ಕೆಳಮಟ್ಟದಲ್ಲಿದೆ. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಎಲ್ಲ ಆಸ್ತಿಗಳನ್ನು ತೆರಿಗೆ ಜಾಲಕ್ಕೆ ಒಳಪಡಿಸಿಲ್ಲ. ಗ್ರಾಮ ಪಂಚಾಯತಿಗಳು ಮೊದಲು ತನ್ನ ಪ್ರದೇಶದಲ್ಲಿರುವ ಆಸ್ತಿಗಳ ಸಮೀಕ್ಷೆಯನ್ನು ನಡೆಸುವ ಅಗತ್ಯವಿದೆ. ಅವುಗಳ ಬಂಡವಾಳ ಮೌಲ್ಯವನ್ನು ಖಚಿತವಾಗಿ ನಿರ್ಧರಿಸುವ ಅಗತ್ಯವಿದೆ. ಹೀಗೆ ತೆರಿಗೆ ವ್ಯವಸ್ಥೆಯನ್ನು ಸುಧಾರಿಸಬಹುದು.

### 6 ಜನರು ವಿದ್ಯುತ್ ಬಿಲ್ಲನ್ನು ಕಟ್ಟುತ್ತಾರೆ, ಏಕೆ?

ಗ್ರಾಮಗಳಲ್ಲಿ ಸಾರ್ವಜನಿಕರು ತಮ್ಮ ಮನೆಗಳ ವಿದ್ಯುತ್ ಬಳಕೆ ಬಿಲ್ಲನ್ನು ಪ್ರತಿ ತಿಂಗಳು ಸರದಿಯಲ್ಲಿ ನಿಂತುಕೊಂಡು ಕಟ್ಟುತ್ತಾರೆ. ಕಟ್ಟದಿದ್ದರೆ ವಿದ್ಯುತ್ ಸಂಪರ್ಕ ಕಡಿತ ಮಾಡುತ್ತಾರೆ ಎಂಬುದು ಜನರಿಗೆ ಗೊತ್ತು. ಅದೇ ರೀತಿಯಲ್ಲಿ ಮೊಬೈಲ್ ಬಿಲ್ಲನ್ನು ಸಮಯಕ್ಕೆ ಸರಿಯಾಗಿ ಕಟ್ಟುತ್ತಾರೆ. ಇವೆಲ್ಲ ಸೇರಿ ಪ್ರತಿ ಕುಟುಂಬಕ್ಕೆ ಸುಮಾರು ತಿಂಗಳಿಗೆ ರೂ50 ಮೀರುತ್ತದೆ. ಅಂದರೆ ವರ್ಷಕ್ಕೆ ರೂ600. ಆದರೆ ಆಸ್ತಿ ತೆರಿಗೆಯು ವಾರ್ಷಿಕ ರೂ 200 ರಿಂದ ರೂ300ರಷ್ಟಿರುತ್ತದೆ. ಅದನ್ನು ವರ್ಷ ಪ್ರತಿ ಕಟ್ಟುವುದಿಲ್ಲ. ಇದಕ್ಕೆ ಕಾರಣವೇನು? ಪಂಚಾಯತಿಗಳು ತೆರಿಗೆ ಸಂಗ್ರಹಕ್ಕೆ ಶಿಸ್ತುಬದ್ಧ ಪ್ರಯತ್ನ ಮಾಡುತ್ತಿಲ್ಲ. ಪಂಚಾಯತಿಯ ಚುನಾಯಿತ ಸದಸ್ಯರು ಇದರ ಬಗ್ಗೆ ಗಮನ ನೀಡುವುದಿಲ್ಲ. ಅವರು ಎಲ್ಲದಕ್ಕೂ ಸರ್ಕಾರವನ್ನು ಎದುರು ನೋಡುತ್ತಿರುತ್ತಾರೆ. ಜನರೇ ಪಂಚಾಯತಿಗೆ ಬಂದು ತೆರಿಗೆ ಕಟ್ಟಬೇಕು. ಕಟ್ಟದಿದ್ದರೆ ದಂಡವಿಲ್ಲ, ಹೆಚ್ಚುವರಿ ಶುಲ್ಕವಿಲ್ಲ. ಯಾವುದೇ ಬಗೆಯ ಶಿಕ್ಷೆಯಿಲ್ಲ. ಒಟ್ಟಾರೆ ತೆರಿಗೆ ಸಂಗ್ರಹ ಅಡಳಿತದ ಸುಧಾರಣೆಯ ಅಗತ್ಯವಿದೆ.

ಆಸ್ತಿ ತೆರಿಗೆ ಕಟ್ಟುವುದು ಜನರಿಗೆ ಅನಿವಾರ್ಯ ಸಂಗತಿಯಾಗಿಲ್ಲ. ಕಟ್ಟಿದರೆ ಕಟ್ಟಬಹುದು: ಕಟ್ಟದಿದ್ದರೆ ಇಲ್ಲ ಅನ್ನುವಂತೆ ತೆರಿಗೆ ವಸೂಲಾತಿಯು ಆಯ್ಕೆಯ ಸಂಗತಿಯಾಗಿ ಬಿಟ್ಟಿದೆ. ಅಂತಿಮವಾಗಿ ನಮ್ಮಲ್ಲಿ ನಿಜವಾದ ಅರ್ಥದಲ್ಲಿ ವಿಕೇಂದ್ರೀಕೃತ ಸಂಸ್ಥೆಯೆಂದರೆ ಗ್ರಾಮ ಪಂಚಾಯತಿಗಳಾಗಿವೆ. ತೆರಿಗೆ ವಿಧಿಸುವ ಸ್ವತಂತ್ರ ಅಧಿಕಾರ ಅವುಗಳಿಗೆ ಮಾತ್ರವಿದೆ. ಅವುಗಳ ವರಮಾನದಲ್ಲಿ ಆಸ್ತಿ ತೆರಿಗೆಯು ಏಕೈಕ ಮೂಲವಾಗಿದೆ.

ತೆರಿಗೆಗಳಿಂದ ಸಂಗ್ರಹವಾಗುತ್ತಿರು ಸಂಪನ್ಮೂಲ ಅತ್ಯಂತ ಕನಿಷ್ಠತಮವಾಗಿದೆ. ಪಂಚಾಯತಿಗಳು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅನುದಾನವನ್ನು ಅವವಲಂಬಿಸಿವೆ. ಹೀಗಾದರೆ ಅವುಗಳನ್ನು 'ಸ್ಥಳೀಯ ಸ್ವಯಮಾಡಳಿತ ಸರ್ಕಾರ' ಎಂದು ಹೇಗೆ ಕರೆಯುವುದು? ಸಂವಿಧಾನಾತ್ಮಕವಾಗಿ ಪಂಚಾಯತಿಗಳಿಗೆ ಪ್ರಾಪ್ತವಾಗಿರುವ ಅಧಿಕಾರವನ್ನು ಚಲಾಯಿಸದೆ ಇರುವುದರಿಂದ ಅವು ದುರ್ಬಲವಾಗಿಬಿಟ್ಟಿವೆ. ಇದಕ್ಕೆ ಪರಿಹಾರವೆಂದರೆ ರಾಜಕೀಯ ಪಕ್ಷಗಳು ತಮ್ಮ ಪಂಚಾಯತಿ ಮಟ್ಟದ ಕಾರ್ಯಕರ್ತರ ಸಾಮರ್ಥ್ಯವನ್ನು ಬಲಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು. ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದಂತೆ ಪಂಚಾಯತಿ ಸದಸ್ಯರು ಉತ್ತಮ ಕ್ರಮ ತೆಗೆದುಕೊಳ್ಳಬೇಕು. ಈ ಬಗ್ಗೆ ರಾಜಕೀಯ ಪಕ್ಷಗಳು ರಾಜಕೀಯ ಪ್ರೌಢಿಮೆಯನ್ನು ಮೆರೆಯಬೇಕು. ❑

# ತೆರಿಗೆ ಸುಧಾರಣೆ: ಜಿ.ಎಸ್.ಟಿ–ಒಂದು ಮಹತ್ತರ ಹೆಜ್ಜೆ

* ಜಿ. ಸತೀಶ್




ತೆರಿಗೆ ಪದ್ಧತಿಯಲ್ಲಾಗುವ ಈ ಮಹತ್ತರವಾದ ಸುಧಾರಣೆಯಿಂದಾಗಿ, ತೆರಿಗೆ ತಳಹದಿಯ ವಿಸ್ತರಣೆ, ತೆರಿಗೆ ನೀಡಿಕೆಯ ಅನುಸರಣೆಯಲ್ಲಾಗುವ ಹೆಚ್ಚಳ ಮತ್ತು ಪ್ರತಿಯೊಂದು ರಾಜ್ಯಗಳಲ್ಲಿನ ತೆರಿಗೆ ವೈವಿಧ್ಯತೆಯಿಂದಾಗಿ ಆರ್ಥಿಕ ವಲಯದಲ್ಲಾಗುತ್ತಿರುವ ದುಷ್ಪರಿಣಾಮಗಳು ನಿವಾರಣೆಗೊಂಡು, ದೇಶದ ಆರ್ಥಿಕ ಚಟುವಟಿಕೆ ಉದ್ದೀಪನಗೊಳ್ಳುತ್ತದೆ.

ಒಂದು ದೇಶ ಅಥವಾ ರಾಜ್ಯದ ಶಾಂತಿಯುತ ಅಭಿವೃದ್ಧಿಗೆ ಅತ್ಯಾವಶಕವಾದ ಅಂಶಗಳೆಂದರೆ, ಕಾನೂನು ಸುವ್ಯವಸ್ಥೆ ಮತ್ತು ಆರ್ಥಿಕ/ಹಣಕಾಸು ಸ್ಥಿರತೆ. ಹಾಗೆಯೇ, ಸದೃಢವಾದ ಆರ್ಥಿಕ/ಹಣಕಾಸು ವ್ಯವಸ್ಥೆಗೆ ಅನಿವಾರ್ಯವಾದುದೆಂದರೆ ತೆರಿಗೆ ಸಂಗ್ರಹಣೆ. ಪ್ರಪಂಚಾದ್ಯಂತ ಪ್ರತಿಯೊಂದು ದೇಶವು, ತನ್ನ ಅನುಕೂಲಕ್ಕೆ ತಕ್ಕಂತೆ, ತನ್ನದೇ ಆದಂತಹ ಹಣಕಾಸು ವ್ಯವಸ್ಥೆ ಹಾಗೂ ತೆರಿಗೆ ಆಡಳಿತವನ್ನು ರೂಪಿಸಿಕೊಂಡಿದೆ. ಹಾಗೆಯೇ ನಮ್ಮ ಭಾರತ ದೇಶದಲ್ಲಿಯೂ ಸಹ ನಮ್ಮ ದೇಶಕ್ಕೆ ಅನುಗುಣವಾಗುವಂತಹ ಆರ್ಥಿಕ/ ಹಣಕಾಸು ಹಾಗೂ ತೆರಿಗೆ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ಇದರಂತೆ ಸಂವಿಧಾನದ ಏಳನೇ ಷೆಡ್ಯೂಲ್ನಲ್ಲಿ / ಅನುಚ್ಛೇದದಲ್ಲಿ ಮೂರು ಪಟ್ಟಿಗಳೂ ಹೀಗಿವೆ, ಪಟ್ಟಿ – 1 – ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಅಂಶಗಳು, ಪಟ್ಟಿ – 2 – ರಾಜ್ಯ ಸರ್ಕಾರಗಳಿಗೆ ಸಂಬಂಧಿಸಿದ ಅಂಶಗಳು, ಪಟ್ಟಿ – 3 – ಸಹವರ್ತಿ ಪಟ್ಟಿ, ಅಂದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸಹವರ್ತಿಯಾಗಿ ಒಳಪಡುವ ಅಂಶಗಳು. ಈ ಪಟ್ಟಿಗಳ ಆಧಾರದ ಮೇರೆಗೆ ಸಂವಿಧಾನದ 268 – 271 ಪರಿಚ್ಛೇದ/ವಿಧಿಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ತೆರಿಗೆ ವಿಧಿಸುವ ಅಧಿಕಾರ, ಸಂಗ್ರಹಣೆ ಮತ್ತು ತೆರಿಗೆ ಆದಾಯದ ಹಂಚಿಕೆಯ ವಿಧಾನವನ್ನು ಮಂಡಿಸಲಾಗಿದೆ. ಅದರಂತೆ ಈವರೆವಿಗೂ ಇರುವ ವಿವಿಧ ತೆರಿಗೆಗಳು ಈ ಮುಂದಿನಂತಿವೆ.


ಈವರೆವಿಗೂ, ನಮ್ಮ ದೇಶದಲ್ಲಿ ಏನೇ ಖರೀದಿ ಅಥವಾ ಯಾವುದೇ ರೀತಿಯಾದ ವಾಣಿಜ್ಯ ವಹಿವಾಟು ನಡೆಸಿದ್ದಲ್ಲಿ ಅಂತಹ ವಹಿವಾಟುಗಳು ಬಹುತೇಕ ಪರೋಕ್ಷ ತೆರಿಗೆಗಳಿಗೆ ಒಳಪಟ್ಟಿರುತ್ತವೆ. ಅದಾಗಿಯೂ, ನೇರ ತೆರಿಗೆಯಾದ ಆದಾಯ ತೆರಿಗೆಯನ್ನು ಆದಾಯದ ಮೇಲೆ ಪ್ರತ್ಯೇಕವಾಗಿ ಹೇರಲಾಗುತ್ತದೆ. ಹೀಗಾಗಿ, ನಮ್ಮ ದೇಶದಲ್ಲಿ ತೆರಿಗೆಗೆ ಒಳಪಟ್ಟ ನಾಗರಿಕರು ಒಟ್ಟಾರೆ ಸುಮಾರು 20 ತೆರಿಗೆಗಳಿಗೆ ಹೊಣೆಗಾರರಾಗಿರುತ್ತಾರೆ. ಇವುಗಳ ಪೈಕಿ ನೇರ ತೆರಿಗೆಯನ್ನು ಹೊರತುಪಡಿಸಿದರೆ ಬಹುತೇಕ ತೆರಿಗೆಗಳು ಪರೋಕ್ಷವಾಗಿರುವುದರಿಂದ ಕೆಳಮುಖ ಸರಣಿ ಪರಿಣಾಮಕ್ಕೆ ಒಳಪಟ್ಟು, ಇದರಿಂದ ಅನಾವಶ್ಯಕವಾಗಿ ಸಾಮಗ್ರಿಗಳು ಹಾಗೂ ಸೇವೆಗಳ ಬೆಲೆಗಳಲ್ಲಿ ಹೆಚ್ಚಳವುಂಟಾಗುವುದು ಅನಿವಾರ್ಯವಾಗಿತ್ತು. ಇದು ಸಾಮಾನ್ಯ ಜನ ಜೀವನದ ಮೇಲೆ ಅಲ್ಲದೆ ದೇಶದ ಆರ್ಥಿಕ ಸ್ಥಿತಿಗತಿಗಳ ಮೇಲೂ ಹಾನಿಕರ ಪ್ರಭಾವ ಬೀರುವ ಸಾಧ್ಯತೆ ಹೆಚ್ಚು. ಆದ್ದರಿಂದ ಪರೋಕ್ಷ ತೆರಿಗೆಗಳ ರಚನೆಯಲ್ಲಿ ಸುಧಾರಣೆಯನ್ನು ತರಬೇಕೆಂಬ ಚಿಂತೆಯೊಂದು ಮೂಡಿತು. ಈ ನಿಟ್ಟಿನಲ್ಲಿ ಮುಂದುವರೆದು ಮೊದಲು ರಾಷ್ಟ್ರಮಟ್ಟದಲ್ಲಿ ಜಾರಿಯಲ್ಲಿದ್ದ ಕೇಂದ್ರೀಯ ಅಬಕಾರಿ ಸುಂಕ ಹಾಗೂ ರಾಜ್ಯ ಮಟ್ಟದಲ್ಲಿದ್ದ ಮಾರಾಟ ತೆರಿಗೆ ಪದ್ಧತಿಗಳಿಗಿಂತ ಮೌಲ್ಯವರ್ಧಿತ ತೆರಿಗೆಯು ಒಂದು ಪ್ರಮುಖ ಸುಧಾರಣೆ ಎಂದು ಪರಿಗಣಿಸಿ ಹಾಗೆಯೇ ಮುಂದುವರೆದು ಸರಕು ಮತ್ತು ಸೇವಾ ತೆರಿಗೆಯನ್ನು ಜಾರಿಗೊಳಿಸಬೇಕೆಂಬ ಮಹತ್ತರ ಹೆಜ್ಜೆಯೊಂದು ಇಡಲಾಯಿತು.

### ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ಎಂದರೇನು?

ಈ ತೆರಿಗೆ, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಜಾರಿಯಲ್ಲಿರುವ ವಿವಿಧ ಬಗೆಯ

* ಸಹಾಯಕ ಆಯುಕ್ತರು, ಕೇಂದ್ರೀಯ ಅಬಕಾರಿ ಹಾಗೂ ಸೇವಾ ತೆರಿಗೆ, ಭಾರತ ಸರ್ಕಾರ. E-mail : satishbg77@gmail.com

ಪರೋಕ್ಷ ತೆರಿಗೆಗಳನ್ನು (ಅಂದರೆ, ಕೇಂದ್ರ ಅಬಕಾರಿ ಸುಂಕ, ಹೆಚ್ಚುವರಿ ಅಬಕಾರಿ ಸುಂಕಗಳು, ಕೌಂಟರ್‌ವೇಲಿಂಗ್ ಡ್ಯೂಟಿ, ಕೇಂದ್ರ ಸರ್ಕಾರದ ಸೇವಾ ತೆರಿಗೆ, ರಾಜ್ಯ ಸರ್ಕಾರಗಳ ಮಾರಾಟ ತೆರಿಗೆ, ಸಿ.ಎಸ್.ಟಿ, ಐಶಾರಾಮ ತೆರಿಗೆ, ಪ್ರವೇಶ ತೆರಿಗೆ, ಮೌಜು ತೆರಿಗೆ, ಜೂಜು / ಲಾಟರಿ / ಬೆಟ್ಟಿಂಗ್ ತೆರಿಗೆ ಇತ್ಯಾದಿಗಳು) ವಿಲೀನಗೊಳಿಸಿಕೊಂಡು ಏಕರೂಪ ತೆರಿಗೆಯಾಗಿ ಜಾರಿಗೆಬರುವ ಪದ್ಧತಿಯಾಗಿದೆ. ಈ ಪದ್ಧತಿಯಲ್ಲಿ ಪ್ರತಿಯೊಂದು ಹಿಂದಿನ ಹಂತದ ಪೂರೈಕೆಗೆ ಪಾವತಿಸಿದತೆರಿಗೆಯನ್ನು ಕಡಿತ ಮಾಡುವುದರಿಂದಾಗಿ, "ತೆರಿಗೆಯ ಮೇಲೆ ತೆರಿಗೆಯ" ಅಥವಾ ಕೆಳಮುಖ "ಕ್ಯಾಸ್ಕೇಡಿಂಗ್" ದುಷ್ಪರಿಣಾಮಗಳನ್ನು ನಿವಾರಿಸಿ, ರಾಷ್ಟ್ರಾದ್ಯಂತ ಒಂದೇ ಬಗೆಯ ಮಾರುಕಟ್ಟೆ ರೂಪುಗೊಳ್ಳಲಿದೆ.




### ಜಿ.ಎಸ್.ಟಿ ಉಗಮ

ಕೇಂದ್ರ ಸರ್ಕಾರ ಮಂಡಿಸಿದ 2006–07ನೇ ಮುಂಗಡಪತ್ರದಲ್ಲಿ ಮೊಟ್ಟ ಮೊದಲ ಬಾರಿಗೆ ಸರಕು ಮತ್ತು ಸೇವಾ ತೆರಿಗೆಯ ವಿಚಾರವನ್ನು ಪ್ರಸ್ತಾಪಿಸಲಾಗಿತ್ತು.ಆರಂಭದಲ್ಲಿ, ಈ ಸರಕು ಮತ್ತು ಸೇವಾ ತೆರಿಗೆಯನ್ನು ದಿನಾಂಕ: 01–04–2010ರಿಂದ ಜಾರಿಗೆ ತರಲು ಉದ್ದೇಶಿಸಲಾಗಿತ್ತು. ಮೌಲ್ಯ ವರ್ಧಿತ ತೆರಿಗೆ ಪದ್ಧತಿಯ ರೂಪುರೇಷೆಗಳನ್ನು ರೂಪಿಸಿದ ರಾಜ್ಯ ಹಣಕಾಸು ಸಚಿವರುಗಳ ಅಧಿಕಾರಯುಕ್ತ ಸಮಿತಿಯನ್ನೇ, ಜಿಎಸ್‌ಟಿ ಕುರಿತು ಮಾರ್ಗಸೂಚಿ ಹಾಗೂ ಅದರ ವಿನ್ಯಾಸವನ್ನು ನೀಡುವಂತೆ ಕೋರಲಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಅಧಿಕಾರಿಗಳನ್ನು ಒಳಗೊಂಡ ಜಂಟಿ ಕಾರ್ಯಕಾರಿ ಸಮಿತಿಗಳನ್ನು ರಚಿಸಿ, ಸರಕು ಮತ್ತು ಸೇವಾತೆರಿಗೆಯ ವಿವಿಧ ಅಂಶಗಳನ್ನು ಪರಿಶೀಲಿಸುವಂತೆ, ವಿಶೇಷವಾಗಿ ವಿನಾಯಿತಿಗಳು ಮತ್ತು ಆರಂಭಿಕ ವಹಿವಾಟು ಮಿತಿಗಳು, ಸೇವೆಗಳು ಮತ್ತು ಅಂತಾ ರಾಜ್ಯ ಪೂರೈಕೆಗಳ ಮೇಲೆ ಹೇಗೆ ತೆರಿಗೆ ವಿಧಿಸಬೇಕೆಂಬುದನ್ನು ಕುರಿತಂತೆ ವಿಸ್ತೃತ ವರದಿಗಳನ್ನು ತಯಾರಿಸಲು ಸೂಚಿಸಲಾಯಿತು. ಕೇಂದ್ರಸರ್ಕಾರದೊಂದಿಗೆ ಹಾಗೂ ತಾನು ಆಂತರಿಕವಾಗಿ ಸುದೀರ್ಘ ಸಮಾಲೋಚನೆ ನಡೆಸಿದ ನಂತರ ಅಧಿಕಾರಯುಕ್ತ ಸಮಿತಿಯು, ಸರಕು ಮತ್ತು ಸೇವೆಗಳ ತೆರಿಗೆ ಬಗೆಗೆ 2009ರಲ್ಲಿ ತನ್ನ ಮೊದಲನೆಯ ಚರ್ಚಾಪತ್ರವನ್ನು ಬಿಡುಗಡೆಗೊಳಿಸಿತು, ಈ ಪತ್ರವು ಉದ್ದೇಶಿತ ಸರಕು ಮತ್ತು ಸೇವೆಗಳ ತೆರಿಗೆಯ ರೂಪುರೇಷೆಗಳನ್ನು ವಿವರಿಸುತ್ತದೆ. ಹಾಗೆಯೇ, ಕೇಂದ್ರ ಹಾಗು ರಾಜ್ಯಗಳ ನಡುವೆ ಜಿಎಸ್‌ಟಿ ಕುರಿತು ಇದುವರೆಗೂ ನಡೆದಿರುವ ಚರ್ಚೆಗೆ ಈ ಪತ್ರವೇ ತಳಹದಿಯಾಗಿದೆ.

### ಜಿ.ಎಸ್.ಟಿ ಪ್ರಮುಖ ಲಕ್ಷಣಗಳು

ಸರಕು ಮತ್ತು ಸೇವಾ ತೆರಿಗೆಯ ಪ್ರಮುಖ ಲಕ್ಷಣಗಳು ಈ ಮುಂದಿನಂತೆ ಇರುತ್ತವೆ:

(1) ಪ್ರಸ್ತುತ ಜಾರಿಯಲ್ಲಿರುವ ಸರಕು ಉತ್ಪಾದನೆ ಮತ್ತು ಮಾರಾಟ ಅಥವಾ ಪೂರೈಸಿದ ಸೇವೆಗಳಿಗೆ ಅನ್ವಯಿಸುವ ತೆರಿಗೆ ಪದ್ಧತಿಗೆ ಬದಲಾಗಿ ಜಿಎಸ್‌ಟಿ ಸರಕು ಮತ್ತು ಸೇವೆಗಳ ಪೂರೈಕೆಗೆ ಅನ್ವಯಿಸುತ್ತದೆ. ಇದು ಪೂರೈಸಲಾದ ಸರಕು ಮತ್ತು ಸೇವೆಗಳ ಬಳಕೆಯ ಸ್ಥಳ ಆಧರಿತ ತೆರಿಗೆ (ಡೆಸ್ಟಿನೇಷನ್ ಬೇಸ್ಡ್ ಕಂಸಂಷನ್ ಟ್ಯಾಕ್ಸ್) ಆಗಿರುತ್ತದೆ.

(2) ಇದು ಕೇಂದ್ರ ಹಾಗೂ ರಾಜ್ಯಗಳೆರಡೂ ಏಕಕಾಲಕ್ಕೆ ಒಂದೇ ತೆರಿಗೆ ವ್ಯಾಪ್ತಿ ಅಥವಾ ನೆಲೆಗಟ್ಟಿನಲ್ಲಿ ಸರಕು ಮತ್ತು ಸೇವೆಗಳ ಮೇಲೆ ವಿಧಿಸುವ ದ್ವಿಮುಖ ತೆರಿಗೆಯಾಗಿರುತ್ತದೆ, ರಾಜ್ಯದೊಳಗೆ ಪೂರೈಕೆಯಾಗುವ ಸರಕು ಮತ್ತು / ಅಥವಾ ಸೇವೆಗಳಿಗೆ ಕೇಂದ್ರ ಸರ್ಕಾರ ವಿಧಿಸುವ ತೆರಿಗೆಯನ್ನು ಸೆಂಟ್ರಲ್ ಜಿಎಸ್‌ಟಿ (ಸಿಜಿಎಸ್‌ಟಿ) ಎಂತಲೂ, ರಾಜ್ಯಗಳು ವಿಧಿಸುವ ತೆರಿಗೆಯನ್ನು ಸ್ಟೇಟ್ ಜಿಎಸ್‌ಟಿ (ಎಸ್‌ಜಿಎಸ್‌ಟಿ) ಎಂತಲೂ ಕರೆಯಲಾಗುತ್ತದೆ.

(3) ಈ ತೆರಿಗೆಯು ಮಾದಕ ಪಾನೀಯಗಳು ಮತ್ತು ಐದು ಪೆಟ್ರೋಲಿಯಮ್ ಪದಾರ್ಥಗಳಾದ – ಕಚ್ಚಾ

ಪೆಟ್ರೋಲಿಯಮ್, ಮೋಟಾರ್ ಸ್ಪಿರಿಟ್ (ಪೆಟ್ರೋಲ್), ಹೈಸ್ಪೀಡ್ ಡೀಸೆಲ್, ನೈಸರ್ಗಿಕ ಅನಿಲ ಮತ್ತು ವೈಮಾನಿಕ ಇಂಧನ ಹೊರತು ಪಡಿಸಿದಂತೆ ಉಳಿದೆಲ್ಲಾ ಸರಕುಗಳಿಗೆ ಮತ್ತು ಕೆಲವೊಂದು ಹೆಸರಿಸಲಾದ ನಿರ್ದಿಷ್ಟ ಸೇವೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸೇವೆಗಳಿಗೆ ಅನ್ವಯವಾಗುತ್ತದೆ.

(4) ತಂಬಾಕು ಮತ್ತು ತಂಬಾಕು ಉತ್ಪನ್ನಗಳಿಗೆ ಜಿಎಸ್‌ಟಿ ವಿಧಿಸಲಾಗುತ್ತದೆ.


(5) ಪ್ರಸ್ತುತ ಕೇಂದ್ರ ಸರ್ಕಾರ ವಿಧಿಸುತ್ತಿರುವ ಮತ್ತು ಸಂಗ್ರಹಿಸುತ್ತಿರುವ ಈ ಮುಂದಿನ ತೆರಿಗೆಗಳು ಸರಕು ಮತ್ತು ಸೇವಾ ತೆರಿಗೆಯಲ್ಲಿ ವಿಲೀನಗೊಳ್ಳಲಿವೆ.

* ಕೇಂದ್ರ ಅಬಕಾರಿ ಸುಂಕ. * ಅಬಕಾರಿ ಸುಂಕಗಳು (ಔಷಧ ಹಾಗೂ ಪ್ರಸಾದನ ವಸ್ತುಗಳು). * ಹೆಚ್ಚುವರಿ ಅಬಕಾರಿ ಸುಂಕಗಳು (ವಿಶೇಷ ಪ್ರಾಮುಖ್ಯತೆಯ ಸರಕುಗಳು). * ಹೆಚ್ಚುವರಿ ಅಬಕಾರಿ ಸುಂಕಗಳು (ಜವಳಿ ಮತ್ತು ಜವಳಿ ಉತ್ಪನ್ನಗಳು). * ಹೆಚ್ಚುವರಿ ಅಬಕಾರಿ ಸುಂಕಗಳು (ಸಿವಿಡಿ ಎಂದು ಕರೆಯಲ್ಪಡುವ). * ವಿಶೇಷ ಹೆಚ್ಚುವರಿ ಅಬಕಾರಿ ಸುಂಕಗಳು (ಎಸ್‌ಎಡಿ ಎಂದು ಕರೆಯಲ್ಪಡುವ). * ಸೇವಾ ತೆರಿಗೆ. * ಸರಕು ಹಾಗೂ ಸೇವೆಗಳ ಪೂರೈಕೆಗೆ ಸಂಬಂಧಿಸಿದ ಕೇಂದ್ರ ವಿಧಿಸುತ್ತಿರುವ ಸುಂಕಗಳು ಹಾಗೂ ಸರ್ಚಾರ್ಜುಗಳು.

ಸರಕು ಮತ್ತು ಸೇವಾ ತೆರಿಗೆಯಲ್ಲಿ ವಿಲೀನವಾಗುವ ರಾಜ್ಯ ಸರ್ಕಾರದ ತೆರಿಗೆಗಳು:

* ರಾಜ್ಯಗಳ ಮೌಲ್ಯ ವರ್ಧಿತ ತೆರಿಗೆ. * ಕೇಂದ್ರ ಮಾರಾಟ ತೆರಿಗೆ. * ವಿಲಾಸ ತೆರಿಗೆ. * ಪ್ರವೇಶ ತೆರಿಗೆ (ಎಲ್ಲಾ ವಿಧದ). * ಮನರಂಜನಾ ತೆರಿಗೆ (ಸ್ಥಳೀಯ ಸಂಸ್ಥೆಗಳು ವಿಧಿಸದೇ ಇದ್ದಲ್ಲಿ). * ಜಾಹೀರಾತುಗಳ ಮೇಲಿನ ತೆರಿಗೆ. * ಖರೀದಿ ತೆರಿಗೆ. * ಲಾಟರಿ, ಪಣ ಮತ್ತು ಜೂಜುಗಳ ಮೇಲಿನ ತೆರಿಗೆಗಳು. * ಸರಕು ಹಾಗೂ ಸೇವೆಗಳ ಪೂರೈಕೆಗೆ ಸಂಬಂಧಿಸಿದ ರಾಜ್ಯ ವಿಧಿಸುತ್ತಿರುವಸುಂಕಗಳು ಹಾಗೂ ಸರ್ಚಾರ್ಜುಗಳು.

(6) ಜಿಎಸ್‌ಟಿ ಪರಿಷತ್ತಿನ ಶಿಫಾರಸ್ಸಿನಂತೆ ದರಗಳನ್ನು ನಿರ್ಧರಿಸಿ




ಸಿಜಿಎಸ್‌ಟಿ ಮತ್ತುಎಸ್‌ಜಿಎಸ್‌ಟಿ ವಿಧಿಸಲಾಗುತ್ತದೆ,

(7 ರಾಜ್ಯಗಳು ಎಸ್.ಜಿ.ಎಸ್.ಟಿ ದರಗಳನ್ನು ನಿಗದಿ ಮಾಡುವುದಕ್ಕಾಗಿ ಒಂದು ತಳಮಟ್ಟದತೆರಿಗೆಯನ್ನು ಸೂಚಿಸಿ, ತೆರಿಗೆ ದರಗಳ ಸಣ್ಣಪಟ್ಟಿ ಇರುತ್ತದೆ.

(8) ಜಿಎಸ್‌ಟಿ ಪರಿಷತ್ತಿನ ತೀರ್ಮಾನದಂತೆ, ಕೇಂದ್ರ ಮತ್ತು ರಾಜ್ಯಗಳ ಸರಕು ಹಾಗೂಸೇವೆಗಳ ವಿನಾಯಿತಿ ತೆರಿಗೆಗಳ ಪಟ್ಟಿ ಒಂದೇ ಆಗಿರುತ್ತದೆ.

(9) ಸರಕು ಮತ್ತು ಸೇವೆಗಳ ಅಂತರರಾಜ್ಯ ಪೂರೈಕೆಯ ಮೇಲೆ ಕೇಂದ್ರ ಸಕಾರವು ಸಂಯುಕ್ತ ಜಿಎಸ್‌ಟಿಯನ್ನು (ಐಜಿಎಸ್‌ಟಿ) ವಿಧಿಸಿ ವಸೂಲು ಮಾಡುತ್ತದೆ. ಐಜಿಎಸ್‌ಟಿಯಲ್ಲಿನ ಎಸ್‌ಜಿಎಸ್‌ಟಿ ಭಾಗವನ್ನು ಸರಕು ಅಥವಾ ಸೇವೆಗಳು ಯಾವ ರಾಜ್ಯದಲ್ಲಿ ಅಂತಿಮವಾಗಿ ಬಳಸಲ್ಪಡುತ್ತವೆಯೋ ಆ ರಾಜ್ಯಕ್ಕೆ ವರ್ಗಾಯಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ರಾಜ್ಯಗಳು ಮತ್ತು ಕೇಂದ್ರದ ನಡುವೆ ಕಾಲಕಾಲಕ್ಕೆ ಲೆಕ್ಕಹೊಂದಾಣಿಕೆಮಾಡಲಾಗುತ್ತದೆ.

(10) ಕರದಾತನು ಹೂಡುವಳಿಗಳ ಮೇಲೆ ಪಾವತಿಸಿದ ತೆರಿಗೆಯನ್ನು(ಹೂಡುವಳಿ ತೆರಿಗೆಜಮೆ) ಬಳಸಿಕೊಳ್ಳಬಹುದು ಅಂದರೆ, ಹುಟ್ಟುವಳಿ ತೆರಿಗೆ ಪಾವತಿಗೆ ಜಮೆ ತೆಗೆದುಕೊಳ್ಳಬಹುದು ಆದರೆ ಸಿಜಿಎಸ್‌ಟಿ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು ಎಸ್‌ಜಿಎಸ್‌ಟಿ ಪಾವತಿಗೆ ಬಳಸುವಂತಿಲ್ಲ ಅಥವಾ ಜಮೆ ತೆಗೆದುಕೊಳ್ಳುವಂತಿಲ್ಲ. ಹಾಗೆಯೇ ಎಸ್‌ಜಿಎಸ್‌ಟಿ ಮೇಲಿನ ಹೂಡುವಳಿ ತೆರಿಗೆ ಜಮೆಯನ್ನು ಸಿಜಿಎಸ್‌ಟಿ

ಪಾವತಿಗೆ ಬಳಸುವಂತಿಲ್ಲ. ಐಜಿಎಸ್‌ಟಿ ಜಮೆಯನ್ನು ಐಜಿಎಸ್‌ಟಿ, ಸಿಜಿಎಸ್‌ಟಿ, ಮತ್ತು ಎಸ್‌ಜಿಎಸ್‌ಟಿ ಪಾವತಿಗೆ ಇದೇ ಕ್ರಮದಲ್ಲಿ ಬಳಸಿಕೊಳ್ಳಬಹುದಾಗಿದೆ.

(11) ಜಿಎಸ್‌ಟಿ ಆಡಳಿತದಲ್ಲಿ ಸರಕುಗಳನ್ನು ವರ್ಗೀಕರಿಸಲು ಸುಸಂಗತ ಸರಕು ವಿವರಣೆ ಮತ್ತು ಕೋಡ್‌ಗಳನ್ನು (ಹೆಚ್.ಎಸ್.ಎನ್ ಕೋಡ್) ಬಳಸತಕ್ಕದ್ದು. ಕರದಾತರ ವಾರ್ಷಿಕ ವಹಿವಾಟು 1.5 ಕೋಟಿಗಿಂತಲೂ ಹೆಚ್ಚು ಮತ್ತು 5 ಕೋಟಿಗಿಂತಲೂ ಕಡಿಮೆ ಇದ್ದಲ್ಲಿ 2 ಅಂಕೆಗಳ ಕೋಡ್ ಅನ್ನು ಮತ್ತು 5 ಕೋಟಿಗಿಂತಲೂ ಹೆಚ್ಚಾಗಿದ್ದಲ್ಲಿ 4 ಅಂಕೆಗಳಕೋಡ್ ಅನ್ನು ಬಳಸಬೇಕೆಂದು ಪ್ರಸ್ತಾವನೆ ಮಾಡಲಾಗಿದೆ. 1.5 ಕೋಟಿಗಿಂತಲೂ ಕಡಮೆ ವಹಿವಾಟು ಇರುವ ಕರದಾತರು ಈ ಕೋಡನ್ನು ತಮ್ಮ ಇನ್‌ವಾಯ್ಸ್‌ಗಳಲ್ಲಿ ದಾಖಲಿಸುವ ಅಗತ್ಯವಿರುವುದಿಲ್ಲ.

(12) ರಫ್ತುಗಳನ್ನು ಶೂನ್ಯ ದರದಲ್ಲಿಯ ಪೂರೈಕೆಯೆಂದು ಪರಿಗಣಿಸಲಾಗುತ್ತದೆ. ಅಂದರೆ ರಫ್ತು

ಪೂರೈಕೆಗಳ ಮೇಲೆ ಯಾವುದೇ ಬಗೆಯ ತೆರಿಗೆ ಬಾಧ್ಯತೆ ಇರುವುದಿಲ್ಲ. ಆದರೆ, ರಫ್ತಿಗೆ ಸಂಬಂಧಪಟ್ಟ ಹಿಂದಿನ ಪೂರೈಕೆಗಳ ಮೇಲೆ ಪಾವತಿಸಿದ ಹೂಡುವಳಿ ತೆರಿಗೆಯನ್ನು ಜಮ ತೆಗೆದುಕೊಳ್ಳಲು ಮತ್ತು ಅದನ್ನು ಮರುಪಾವತಿ ಪಡೆಯಲು ರಫ್ತುದಾರರು ಅರ್ಹರಿರುತ್ತಾರೆ.

(13) ಸರಕು ಮತ್ತು ಸೇವೆಗಳ ಆಮದುಗಳ ಮೇಲೆ ನಿಗದಿತ ಸೀಮಾ ಸುಂಕದ ಜೊತೆಗೆ ಅವುಗಳನ್ನು ಅಂತಾರಾಜ್ಯ ಪೂರೈಕೆಗಳೆಂದು ಪರಿಗಣಿಸಿ ಐಜಿಎಸ್‌ಟಿ ವಿಧಿಸಲಾಗುತ್ತದೆ. ಹೀಗೆ ಪಾವತಿಸಿದ ಐಜಿಎಸ್‌ಟಿ ಅನ್ನು ಮುಂದಿನ ಪೂರೈಕೆಗಳಿಗೆ ಹೂಡುವಳಿ ತೆರಿಗೆಯೆಂದು ಜಮೆ ಪಡೆಯಬಹುದು. ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ತೆರಿಗೆಗಳನ್ನು ವಿಧಿಸಿ ಸಂಗ್ರಹಣೆ ಮಾಡಲು ಸಾಕಷ್ಟು ಸಾಮರಸ್ಯವಿರುವ ಕಾಯ್ದೆ ಮತ್ತು ನಿಯಮ ಗಳನ್ನುರೂಪಿಸಲಾಗುವುದು.

**ಆರ್ಥಿಕ ಸಂಬಂಧಗಳು**

ಸದ್ಯಕ್ಕೆ ಸಂವಿಧಾನದಲ್ಲಿ ಕೇಂದ್ರ ಹಾಗೂ ರಾಜ್ಯಗಳ ವಿತ್ತೀಯ ಅಧಿಕಾರಗಳ ವ್ಯಾಪ್ತಿ ಒಂದರ ಕಾರ್ಯಕ್ಷೇತ್ರದ ಮೇಲೆ ಮತ್ತೊಂದರ ಅತಿಕ್ರಮಣ ಇರದಂತೆ ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿದೆ. ಕೇಂದ್ರಕ್ಕೆ ಸರಕುಗಳ ಉತ್ಪಾದನೆಯ ಮೇಲೆ (ಮಾದಕ ಪಾನೀಯಗಳು, ಅಫೀಮು, ಮಾದಕ ವಸ್ತುಗಳು ಮುಂತಾದವುಗಳನ್ನು ಹೊರತುಪಡಿಸಿದಂತೆ) ತೆರಿಗೆ ವಿಧಿಸುವ ಅಧಿಕಾರವಿದ್ದರೆ, ರಾಜ್ಯಗಳಿಗೆ ಸರಕುಗಳ ಮಾರಾಟದ ಮೇಲೆ ತೆರಿಗೆ ವಿಧಿಸುವ ಅಧಿಕಾರವಿರುತ್ತದೆ. ಅಂತರ ರಾಜ್ಯಸರಕುಗಳ ಮಾರಾಟದ ಮೇಲೆ ತೆರಿಗೆ ವಿಧಿಸುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಇದ್ದರೂ ಸಹ (ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಅಧಿನಿಯಮ) ಈ ತೆರಿಗೆಯನ್ನು ವಸೂಲಿ ಮಾಡಿ, ಪೂರ್ತಿಯಾಗಿ ರಾಜ್ಯಗಳೇ ಇಟ್ಟುಕೊಳ್ಳುತ್ತವೆ. ಸೇವೆಗಳನ್ನು ಕುರಿತು ಹೇಳುವುದಾದರೆ, ಸೇವಾ ತೆರಿಗೆಯನ್ನು ವಿಧಿಸುವಅಧಿಕಾರ ಕೇಂದ್ರಕ್ಕೆ ಮಾತ್ರ ಇರುತ್ತದೆ. ಏಕ ಕಾಲದಲ್ಲಿ ಕೇಂದ್ರ ಮತ್ತು ರಾಜ್ಯಗಳೆರಡಕ್ಕೂ ಜಿಎಸ್‌ಟಿ ವಿಧಿಸಿ ವಸೂಲಿಮಾಡಬಹುದಾದ ಅಧಿಕಾರವನ್ನು ನೀಡಬೇಕೆಂದರೆ, ಸಂವಿಧಾನವನ್ನು ಸೂಕ್ತ ತಿದ್ದುಪಡಿ ಮಾಡುವ ಅವಶ್ಯಕತೆ ಇದ್ದು, ಕೇಂದ್ರಕ್ಕೆ ಹಾಗೂ ಎಲ್ಲಾ ರಾಜ್ಯಗಳಿಗೆ ಏಕ ಕಾಲದಲ್ಲಿ ತೆರಿಗೆ ವಿಧಿಸುವ ಹಾಗೂ ಸಂಗ್ರಹಿಸುವ ಅಧಿಕಾರ ವ್ಯಾಪ್ತಿಯನ್ನು ನೀಡಲು, ವಿಶೇಷವಾದ ಸಾಂಸ್ಥಿಕ ಸ್ವರೂಪದ ಪ್ರಕ್ರಿಯೆಯ ಅವಶ್ಯಕತೆ ಇರುತ್ತದೆ. ಆ ಮೂಲಕ, ಕಾಯ್ದೆಯ ಸ್ವರೂಪ, ಆಕಾರ, ರಚನೆ ಮತ್ತು ಕಾರ್ಯಚರಣೆಗಳನ್ನು ಕುರಿತಂತೆ, ಕೇಂದ್ರ ಮತ್ತು ಎಲ್ಲಾ ರಾಜ್ಯಗಳೂ ಒಟ್ಟುಗೂಡಿ ಸಾಮರಸ್ಯದಿಂದ ತೀರ್ಮಾನಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಬೇಕಾದರೆ ಸಂವಿಧಾನಿಕ ಬಲ ಅಷ್ಟೇ ಅಗತ್ಯವಾಗಿದೆ.

**ಸಂವಿಧಾನ ತಿದ್ದುಪಡಿ ಮತ್ತು ಇತರೆ ಶಾಸನಾತ್ಮಕ ಅಗತ್ಯತೆಗಳು**

**ಸಂವಿಧಾನ (122) ತಿದ್ದುಪಡಿ ವಿಧೇಯಕ – 2014**

ಮೇಲಿನ ಎಲ್ಲ ಅಂಶಗಳನ್ನು ಹಾಗೂ ಇತರ ಪೂರಕ ವಿಷಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು, ಸಂವಿಧಾನ ತಿದ್ದುಪಡಿ ವಿಧೇಯಕವನ್ನು (122ನೇ ತಿದ್ದುಪಡಿ ವಿಧೇಯಕ) ಸಂಸತ್ತಿನ ಉಭಯ ಸದನಗಳು ಈಗಾಗಲೇ ಅಂಗೀಕರಿಸಿದ್ದು (ಆಗಸ್ಟ್–2016), ಸದರಿ ವಿಧೇಯಕದ ಪ್ರಮುಖ ಅಂಶಗಳು ಈ ಮುಂದಿನಂತಿರುತ್ತವೆ. 1) ಮದ್ಯಪಾನೀಯಗಳನ್ನು ಹೊರತು ಪಡಿಸಿದಂತೆ ಜಿಎಸ್‌ಟಿಯನ್ನು ಎಲ್ಲಾ ಸರಕು ಮತ್ತು ಸೇವೆಗಳ ಮೇಲೆ ವಿಧಿಸತಕ್ಕದ್ದು. 2) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಪ್ರತ್ಯೇಕವಾಗಿ ಎರಡು ಬಗೆಯ ಜಿಎಸ್‌ಟಿ ಯನ್ನು ವಿಧಿಸತಕ್ಕದ್ದು. 3) ಕೇಂದ್ರ ಸರ್ಕಾರ ಜಿಎಸ್‌ಟಿ ವಿಧಿಸಲು ಅಗತ್ಯವಾದ ಕಾನೂನನ್ನು ರೂಪಿಸುವ ಅಧಿಕಾರ ಸಂಸತ್‌ಗಿದ್ದರೆ (ಸಿಜಿಎಸ್‌ಟಿ), ರಾಜ್ಯಗಳು ವಿಧಿಸುವ ಜಿಎಸ್‌ಟಿ ಕಾನೂನನ್ನು ರೂಪಿಸುವ ಅಧಿಕಾರ ಆಯಾ ರಾಜ್ಯದ ಶಾಸನ ಸಭೆಗಳಿಗೆ ಇರುತ್ತದೆ (ಎಸ್‌ಜಿಎಸ್‌ಟಿ) 4) ಅಂತಾರಾಜ್ಯ ಸರಕು ಮತ್ತು / ಅಥವಾ ಸೇವೆಗಳ ಪೂರೈಕೆಗಳಿಗೆ ಜಿಎಸ್‌ಟಿ ವಿಧಿಸುವಂಥ ಕಾನೂನನ್ನು ರೂಪಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇರುತ್ತದೆ (ಐಜಿಎಸ್‌ಟಿ) 5) ಅಂತಾರಾಜ್ಯ ಸರಕು ಮತ್ತು/ಅಥವಾ ಸೇವೆಗಳ ಪೂರೈಕೆಯ ಮೇಲೆ ಜಿಎಸ್‌ಟಿ ವಿಧಿಸುವ ಅಧಿಕಾರ ಭಾರತ ಸರ್ಕಾರಕ್ಕೆ ಮಾತ್ರ ಇರುತ್ತದೆ. ಈ ತೆರಿಗೆಯನ್ನು ಜಿಎಸ್‌ಟಿ ಮಂಡಳಿ ಶಿಫಾರಸ್ಸಿನಂತೆ ಕೇಂದ್ರ ಹಾಗೂ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತದೆ. 6) ಪೆಟ್ರೋಲಿಯಮ್ ಮತ್ತು ಪೆಟ್ರೋಲಿಯಮ್ ಉತ್ಪನ್ನಗಳ ಮೇಲೆ ಜಿಎಸ್‌ಟಿ ವಿಧಿಸಲಾಗುತ್ತದೆ. [ಆದರೆ, ಜಿಎಸ್‌ಟಿ ಜಾರಿಯ ನಂತರದ ಕೆಲವೊಂದು ವರ್ಷಗಳ ಕಾಲ ಅವುಗಳನ್ನು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ತೀರ್ಮಾನಿಸಲಾಗಿದೆ] ತಂಬಾಕು ಮತ್ತು ತಂಬಾಕು ಉತ್ಪನ್ನಗಳಿಗೆ ಜಿಎಸ್‌ಟಿ ಜೊತೆಗೆ ಅಬಕಾರಿ ಸುಂಕವನ್ನೂ ಸಹ ವಿಧಿಸಲು ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿರುತ್ತದೆ. 7) ಪಂಚಾಯತಿ ಅಥವಾ ಪುರಸಭೆ ಅಥವಾ ಪ್ರಾದೇಶಿಕ ಆಡಳಿತ ಮಂಡಳಿ (ರೀಜನಲ್ ಕೌನ್ಸಿಲ್) ಅಥವಾ ಜಿಲ್ಲಾಡಳಿತ ಮಂಡಳಿಗಳು (ಡಿಸ್ಟ್ರಿಕ್ಟ್ ಕೌನ್ಸಿಲ್‌ಗಳು), ಮನರಂಜನೆಗಳ ಮತ್ತು ಮೋಜು ಕ್ರೀಡೆಗಳ ಮೇಲೆ ತೆರಿಗೆ ವಿಧಿಸುತ್ತಿದ್ದಲ್ಲಿ ಅಂಥ ತೆರಿಗೆಗಳು ಜಿಎಸ್‌ಟಿಯಲ್ಲಿ ವಿಲೀನವಾಗುವುದಿಲ್ಲ. ಸದ್ಯಕ್ಕೆ ಸ್ಥಳೀಯ ಸಂಸ್ಥೆಗಳು ಅಂತಹ ತೆರಿಗೆಗಳನ್ನು ವಿಧಿಸುವುದನ್ನು ಮುಂದುವರೆಸಬಹುದು. 8) ಜಿಎಸ್‌ಟಿ ಜಾರಿಯಿಂದಾಗಿ ರಾಜ್ಯಗಳಿಗೆ ಉಂಟಾಗಬಹುದಾದ ಆದಾಯ ನಷ್ಟವನ್ನು, ಸಂಸತ್ತು ಕಾನೂನಿನ ಮೂಲಕ ಜಿಎಸ್‌ಟಿ ಮಂಡಳಿ ಶಿಫಾರಸ್ಸಿನ ಅನ್ವಯ ಪರಿಹಾರವನ್ನು ನೀಡಬಹುದು. ಈ ರೀತಿ ನಷ್ಟ \ ಪರಿಹಾರವನ್ನು 5 ವರ್ಷಗಳ ಕಾಲ ನೀಡಬಹುದಾಗಿದೆ. 9) ಕೇಂದ್ರ ಸರ್ಕಾರದ ಹಣಕಾಸು ಸಚಿವರು (ಮಂಡಳಿ ಅಧ್ಯಕ್ಷ), ರಾಜ್ಯ ಸಚಿವರು (ರಾಜಸ್ವ) ಮತ್ತು ರಾಜ್ಯಗಳ ಹಣಕಾಸು / ತೆರಿಗೆಗಳ ಸಚಿವರನ್ನೊಳಗೊಂಡ ಜಿಎಸ್‌ಟಿ ಮಂಡಳಿಯನ್ನು ರಚಿಸಲಾಗುತ್ತದೆ. ಹೀಗೆ ರಚಿಸಿದ ಮಂಡಳಿ ಮುಂದಿನ ವಿಷಯಗಳನ್ನು ಕುರಿತಂತೆ ಶಿಫಾರಸ್ಸು ಮಾಡುತ್ತದೆ.

**ಜಿ.ಎಸ್.ಟಿ – ಹಣದುಬ್ಬರದ ಮೇಲೆ ತಕ್ಷಣದ ಪರಿಣಾಮ**

ಇದರಿಂದ ಸೇವಾ ಕ್ಷೇತ್ರಕ್ಕೆ ಸಂಬಂಧಿಸಿದ ಖರ್ಚು ವೆಚ್ಚಗಳು ಹೆಚ್ಚಾಗಲಿವೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ ಏಕೆಂದರೆ, ಈವರೆವಿಗೂ ಕೇಂದ್ರ ಸರ್ಕಾರ ವಿಧಿಸುತ್ತಿದ್ದ 15% ಸೇವಾ ತೆರಿಗೆ ಹೆಚ್ಚಳಗೊಂಡು ಶೇ. 18% ಆಗುವ ಸಂಭವವಿದೆ. ಆದರೆ, ಉತ್ಪಾದನಾ ಹಾಗೂ ಮಾರಾಟ ತೆರಿಗೆಗೆ ಸಹವರ್ತಿಯಾಗಿ ಶೇ 20% ಕ್ಕೂ ತೆರಿಗೆಗೆ ಒಳಪಡುತ್ತಿದ್ದಂತ

ವಸ್ತುಗಳು ಈಗ ಕಡಿಮೆ ತೆರಿಗೆಗೆ ಒಳಪಡುತ್ತವೆ. ಆದಾಗ್ಯೂ, ಮಧ್ಯಮ ಹಾಗೂ ದೀರ್ಘಕಾಲದಲ್ಲಿ ತೆರಿಗೆ ಸಮತೋಲನವನ್ನು ಇದು ತರುವುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಒಟ್ಟಾರೆ, ಹಣದುಬ್ಬರಕ್ಕೆ ಜಿ.ಎಸ್.ಟಿ ಒಂದು ಪ್ರತಿವಿಷವೆಂದು ಪರಿಗಣಿಸಲಾಗಿದೆ. ಅಲ್ಲದೆ ಇದು, ಜನಸಾಮಾನ್ಯರಿಗೆ, ವ್ಯಾಪಾರಕ್ಕೆ ಹಾಗೂ ಉದ್ಯಮಗಳಿಗೆ ಸ್ನೇಹಿಯಾಗಿರುತ್ತದೆಂದು ಭಾವಿಸಿದ್ದಾರೆ. ಹಾಗೆಯೆ, ಅಸಂಘಟಿತ ಆರ್ಥಿಕ ಕ್ಷೇತ್ರವನ್ನು ಇದು ಮುಖ್ಯವಾಹಿನಿಗೆ ತರುವುದರಲ್ಲಿ ಯಶಸ್ವಿಯನ್ನು ಕಾಣುತ್ತದೆಂದು ಅಭಿಪ್ರಯಿಸುತ್ತಾರೆ.

### ಜಿ.ಎಸ್.ಟಿ – ಅನುಕೂಲವೇನು?

ಸದ್ಯಕ್ಕೆ ಭಾರತದಲ್ಲಿರುವ ತೆರಿಗೆ ಪದ್ಧತಿ ಅತ್ಯಂತ ಸಂಕೀರ್ಣವಾದದ್ದು. ಯಾವುದೇ ವ್ಯಾಪಾರ–ವಹಿವಾಟು ನಡೆಸಲು ಅನೇಕ ಕಾನೂನು ಕಟ್ಟಳೆಗಳನ್ನು ಈಡೇರಿಸಬೇಕಾಗುತ್ತದೆ. ಜಿ.ಎಸ್.ಟಿತೆರಿಗೆ ವಿಧಾನಗಳನ್ನು ಸರಳಗೊಳಿಸಿ ನಿರ್ವಹಣಾ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇದರಿಂದ ಅಂತಿಮವಾಗಿ ಗ್ರಾಹಕರಿಗೆ ಅನುಕೂಲವಾಗುತ್ತದೆ. ಅಲ್ಲದೆ ನಮ್ಮದೇಶದ ಜಿ.ಡಿ.ಪಿ (ಸಮಗ್ರ ದೇಶೀಯ ಉತ್ಪನ್ನ) ಮತ್ತು ಆದಾಯ ಹೆಚ್ಚಾಗಲಿದ್ದು, ಗ್ರಾಹಕರಿಗೆ ಈ ತೆರಿಗೆಯಿಂದ ಪರೋಕ್ಷ ಲಾಭ ಹೆಚ್ಚಿದೆ. ಭಾರತದ ಆದಾಯ ಹೆಚ್ಚಲು ಹೆಚ್ಚು ಅನುಕೂಲವಾಗಿದೆ. ವಿದೇಶಗಳಿಗೆ ಹೆಚ್ಚು ರಫ್ತು ಆಗಲಿದ್ದು, ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುತ್ತದೆ. ಉದ್ಯೋಗ ಉತ್ತೇಜಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

### ರಾಜ್ಯಗಳ ಸಮಸ್ಯೆ

ಬಹುತೇಕ ಎಲ್ಲಾ ರಾಜ್ಯಗಳಿಗೆ ಅಬಕಾರಿ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿಂದ ಬರುವ ಆದಾಯ ಪ್ರಮುಖವಾದುದು. ಆದ್ದರಿಂದ ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗೆ ಇಡಬೇಕು ಎಂದು ಹಲವು ರಾಜ್ಯಗಳು ಮನವಿ ಮಾಡಿದ್ದವು ಅದರಂತೆ ಕೇಂದ್ರ ಸರ್ಕಾರವು ಒಪ್ಪಿ ರಾಜ್ಯಗಳ ಈ ಬೇಡಿಕೆಗೆ ದಾರಿ ಮಾಡಿಕೊಟ್ಟಿದೆ. ಜಿ.ಎಸ್.ಟಿ ಜಾರಿಯಿಂದ ತಮಗೆ ಭಾರೀ ಆದಾಯ ನಷ್ಟ ಆಗುತ್ತದೆ ಇದನ್ನು ಕೇಂದ್ರ ಸರ್ಕಾರ ಭರಿಸಬೇಕೆಂದು ಬಹುತೇಕ ರಾಜ್ಯಗಳ ಬೇಡಿಕೆಯಾಗಿತ್ತು ಹಾಗಾಗಿ ಕೇಂದ್ರ ಸರ್ಕಾರ ಈ ಬೇಡಿಕೆಯನ್ನು ಮುಂಬರುವ 5 ವರ್ಷಗಳಲ್ಲಿ ಪೂರೈಸುವುದಾಗಿ ಆಶ್ವಾಸನೆ ನೀಡಿದೆ. ಕೆಲ ಉತ್ಪಾದನಾ ರಾಜ್ಯಗಳಿಗೆ ಜಿಎಸ್‌ಟಿ ಜಾರಿಯಿಂದ ಆಗುವ ನಷ್ಟದ ಕಾರಣ ರಾಜ್ಯಗಳು ಅಂತಾರಾಜ್ಯ ವಹಿವಾಟಿನ ಮೇಲೆ ಶೇ. 1 ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪವನ್ನು ವಿರೋಧಿಸಿವೆ. ಮಸೂದೆ ಜಾರಿಯಿಂದ ಬರುವ ಪ್ರಶ್ನೆಗಳನ್ನು ಬಗೆಹರಿಸಲು ನ್ಯಾಯಾಧಿಕರಣ ಸ್ಥಾಪಿಸಬೇಕೆಂಬ ಒತ್ತಾಯ ರಾಜ್ಯಗಳಿಂದ ಇದೆ. ಈವರೆವಿಗೆ ರಾಜ್ಯಗಳು ಪ್ರತಿ ವರ್ಷ ತಮ್ಮ ಮುಂಗಡ ಪತ್ರದಲ್ಲಿ ತಮ್ಮ ಅನುಕೂಲಕ್ಕೆ ತಕ್ಕಂತೆ ತೆರಿಗೆಯನ್ನು ವಿಧಿಸಲು ಇದ್ದ ಸ್ವಾತಂತ್ರ್ಯವನ್ನು ಇನ್ನು ಮುಂದೆ ಕಳೆದುಕೊಂಡಂತೆ ಅನಿಸುತ್ತದೆ.

### ಕರ್ನಾಟಕ ದೃಷ್ಟಿಕೋನ

ನಮ್ಮ ರಾಷ್ಟ್ರದ ರಾಜ್ಯಗಳ ಪೈಕಿ ಕರ್ನಾಟಕದ ಆರ್ಥಿಕ ಅಭಿವೃದ್ಧಿಯು ಗಣಣೀಯವಾದದ್ದು. ರಾಜ್ಯದ ಸಮಗ್ರ ಆಂತರಿಕ ಉತ್ಪನ್ನ ರಾಷ್ಟ್ರೀಯ ಸಮಗ್ರ ಉತ್ಪನ್ನದ ಬೆಳವಣಿಗೆ ಶೇ 7.6% ರ ಹೋಲಿಕೆಯಲ್ಲಿ ಶೇ 6.2% ರಷ್ಟು ಬೆಳೆಯುವ ಅಂದಾಜು ಇದ್ದು, ಅದು ರೂ. 780805 ಕೋಟಿಗಳು ಮುಟ್ಟುವ ನಿರೀಕ್ಷೆ ಇದೆ. ಇದರ ಪೈಕಿ ಸುಮಾರು ಶೇ 23.6% ರಷ್ಟು ಕೊಡುಗೆ ಕೈಗಾರಿಕಾ ಕ್ಷೇತ್ರದಿಂದ ಬರಲಿದೆ ಹಾಗೂ ಸೇವಾ ವಲಯದಲ್ಲಿ ಶೇ 61.8% ರಿಂದ ಶೇ 64.1% ಅಲ್ಪ ಆದರೂ ಗಮನಾರ್ಹ ಏರಿಕೆಯಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇತೀಚಿನ ಕೆಲವು ವರ್ಷಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ಸೇವಾ ವಲಯದ ಕೊಡುಗೆ ಅತ್ಯಧಿಕವಾಗಿದೆ. ಇದನ್ನು ಜಿ.ಎಸ್.ಟಿ ಯ ಹಿನ್ನಲೆಯಲ್ಲಿ ಪರಿಗಣಿಸಿದರೆ ಈವರೆವಿಗೂ ಶೇ 15% ರಷ್ಟಿದ್ದ ಸೇವಾ ತೆರಿಗೆ ಇನ್ನು ಮುಂದೆ ಸುಮಾರು ಶೇ 18% ಕ್ಕೆ ಏರಿದಾಗ ಮತ್ತು ಈ ತೆರಿಗೆಯ ಬಹುತೇಕ ಭಾಗ ರಾಜ್ಯ ಸರ್ಕಾರಕ್ಕೆ ಸೇರುವಂತಾದರೆ ರಾಜ್ಯದ ಸಮಗ್ರ ಆಂತರಿಕ ಉತ್ಪನ್ನಕ್ಕೆ ಸೇವಾ ವಲದ ಕೊಡುಯಲ್ಲಿ ಗಣನೀಯ ಹೆಚ್ಚಳವನ್ನು ಕಾಣಬಹುದು. ಆದರೆ ಇದರಿಂದ ಬಹುತೇಕ ಸೇವೆಗಳು ದುಬಾರಿಯಾಗುವ ಸಂಭವವಿದೆ. ಸದ್ಯಕ್ಕೆ ಮೌಲ್ಯವರ್ಧಿತ ತೆರಿಗೆಯಿಂದ ಕರ್ನಾಟಕಕ್ಕೆ ಬರುತ್ತಿರುವ ಆದಾಯ ರೂ. 41329 ಕೋಟಿಗಳು (ಆಯವ್ಯಯ ಅಂದಾಜು) ಇದರಲ್ಲಿ ಕೆಲ ಭಾಗ, ಜಿ.ಎಸ್.ಟಿ ಯ ನಂತರ ಕೇಂದ್ರಕ್ಕೆ ಸೇರುವ ಸಂಭವವಿದೆ ಆದರೆ ಜಿ.ಎಸ್.ಟಿ ಯಿಂದ ರಾಜ್ಯಗಳಿಗೆ ಆಗುವ ಯಾವುದೇ ನಷ್ಟವನ್ನು ಮುಂದಿನ ಐದು ವರ್ಷಗಳವರೆಗೆ ತಾನು ಭರಿಸುವುದಾಗಿ ಕೇಂದ್ರವು ಆಶ್ವಾಸನೆ ನೀಡಿದೆ. ಅಲ್ಲದೆ ಜಿ.ಎಸ್.ಟಿ ಒಂದು ಗಮ್ಯಸ್ಥಾನ ಆದಾರಿತ ತೆರಿಗೆ (Destination based tax) ಆದುದರಿಂದ ಮಹಾನಗರಗಳನ್ನು ಹೊಂದಿರುವ ರಾಜ್ಯಗಳಿಗೆ ಉಪಯುಕ್ತಕರವಾದದೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಏಕೆಂದರೆ, ಜಿ.ಎಸ್.ಟಿ ಯನ್ನು ಬಳಿಕೆಯ ಆಧಾರದ ಮೇಲೆ ವಿಧಿಸಲು ನಿರ್ಧರಿಸಿರುವುದರಿಂದ ಯಾವ ರಾಜ್ಯದಲ್ಲಿ ಹೆಚ್ಚು ವಸ್ತು ಹಾಗು ಸೇವೆಗಳ ಬಳಿಕೆ ಇರುತ್ತದೆಯೋ ಆ ರಾಜ್ಯಕ್ಕೆ ಹೆಚ್ಚು ಆದಾಯ ಬರುವ ಸಾಧ್ಯತೆ ಇರುತ್ತದೆ. ಹೀಗೆ ನೋಡಿದರೆ ಇತ್ತೀಚಿನ ದಿನಗಳಲ್ಲಿ ಕರ್ನಾಟಕದ ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ ಮುಂತಾದ ನಗರಗಳಲ್ಲಿ ಗ್ರಾಹಕೀಕರಣ ಅತ್ಯಾಧಿಕವಾಗಿ ಹೆಚ್ಚಾಗುತ್ತಿರುವುದರಿಂದ ಜಿ.ಎಸ್.ಟಿ.ಯಿಂದ ಬರುವ ಆದಾಯವೂ ಹೆಚ್ಚುವುದೆಂದು ಅಭಿಪ್ರಾಯಪಡಬಹುದು.

### ಉಪಸಂಹಾರ

ಒಟ್ಟಾರೆ ಹೇಳುವುದಾದರೆ, ದಿನಾಂಕ : 01–04–2017 ರಿಂದ ಜಿಎಸ್‌ಟಿ ಜಾರಿಗೊಳಿಸಬೇಕೆಂಬ ಗುರಿ ಹೊಂದಲಾಗಿದೆ. ತೆರಿಗೆ ಪದ್ಧತಿಯಲ್ಲಾಗುವ ಈ ಮಹತ್ತರವಾದ ಸುಧಾರಣೆಯಿಂದಾಗಿ, ತೆರಿಗೆ ತಳಹದಿಯ ವಿಸ್ತರಣೆ, ತೆರಿಗೆ ನೀಡಿಕೆಯ ಅನುಸರಣೆಯಲ್ಲಾಗುವ ಹೆಚ್ಚಳ ಮತ್ತು ಪ್ರತಿಯೊಂದು ರಾಜ್ಯಗಳಲ್ಲಿನ ತೆರಿಗೆ ವೈವಿಧ್ಯತೆಯಿಂದಾಗಿ ಆರ್ಥಿಕ ವಲಯದಲ್ಲಾಗುತ್ತಿರುವ ದುಷ್ಪರಿಣಾಮಗಳು ನಿವಾರಣೆಗೊಂಡು, ದೇಶದ ಆರ್ಥಿಕ ಚಟುವಟಿಕೆಗಳನ್ನು ಉದ್ದೀಪನಗೊಳಿಸುತ್ತದೆ ಮತ್ತುಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ. ಜೊತೆಗೆ ಜಿಎಸ್‌ಟಿಯು ತೆರಿಗೆ ಆಡಳಿತವನ್ನು ಸುಸೂತ್ರಗೊಳಿಸುತ್ತದೆಯಲ್ಲದೆ ವ್ಯಾಪಾರೋದ್ಯಮಕ್ಕೆ ಇದ್ದಂಥ ಕಿರುಕುಳವೆಲ್ಲಾ ನಿವಾರಣೆಯಾಗುತ್ತದೆ ಮತ್ತು ಕೇಂದ್ರ ಹಾಗೂ ರಾಜ್ಯಗಳ ಆದಾಯ ಗಣನೀಯವಾಗಿಹೆಚ್ಚಾಗುತ್ತದೆ. ಇಡೀ ವ್ಯಾಪಾರೋದ್ಯಮದ ಅನುಸರಣೆ ವೆಚ್ಚ ಕಡಿಮೆಯಾಗುತ್ತದೆ. ಅಂತಿಮವಾಗಿ ಜಿಎಸ್‌ಟಿಯಿಂದಾಗಿ ಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತದೆ. ಒಟ್ಟಿನಲ್ಲಿ ಜಿಎಸ್‌ಟಿಯಿಂದಾಗಿ ತೆರಿಗೆದಾರರಿಗೆ, ಸರ್ಕಾರಗಳಿಗೆ, ಬಳಕೆದಾರರಿಗೆ ಎಲ್ಲರಿಗೂ ಲಾಭವಾಗುತ್ತದೆ. ❑

ಸಕ್ಷಮ್, ಕೇಂದ್ರ ಅಬ್ಕಾರಿ ಮತ್ತು ಸೀಮಾಶುಲ್ಕ ಮಂಡಳಿ ಸಿಬಿಇಸಿಯ ಸಿಸ್ಟಂ ಇಂಟಿಗ್ರೇಷನ್– ವ್ಯವಸ್ಥೆ ಸಮಗ್ರೀಕರಣಕ್ಕೆ ಸಂಬಂಧಿಸಿದ ಒಂದು ಹೊಸ ಪರೋಕ್ಷ ತೆರಿಗೆ ಕಾರ್ಯ ಜಾಲವಾಗಿದೆ. ಆರ್ಥಿಕ ವ್ಯವಹಾರ ಕುರಿತಾದ ಕೇಂದ್ರ ಸಚಿವ ಸಂಪುಟ ಇದಕ್ಕೆ ಅನುಮೋದನೆ ನೀಡಿದೆ. ಈ ಯೋಜನೆ ಸರಕು ಮತ್ತು ಸೇವಾ ತೆರಿಗೆ ಅನುಷ್ಠಾನ, ವಾಣಿಜ್ಯ ವಹಿವಾಟಿಗೆ ಅವಕಾಶ ಕಲ್ಪಿಸುವ ಕಸ್ಟಮ್ಸ್‌ನ ಏಕಗವಾಕ್ಷ (ಸ್ವಿಫ್ಟ್) ವಿಸ್ತರಣೆ, ಡಿಜಿಟಲ್ ಇಂಡಿಯಾ ಅಡಿ ಗ್ರಾಹಕ ಸ್ನೇಹಿ ಉಪಕ್ರಮಗಳಿಗೆ ಅವಕಾಶ ಕಲ್ಪಿಸಲು ಹಾಗೂ ಕೇಂದ್ರ ಅಬ್ಕಾರಿ ಮತ್ತು ಸೀಮಾ ಶುಲ್ಕ ಮಂಡಳಿಯ ಸುಲಭ ವ್ಯವಹಾರ ನಿರ್ವಹಣೆಗೆ ನೆರವಾಗಲಿದೆ.

ಜಿಎಸ್‌ಟಿ ಜಾರಿಗೊಳ್ಳುವ ವೇಳೆಗೆ ಅಂದರೆ ಏಪ್ರಿಲ್, 2017ರ ವೇಳೆಗೆ ಮಂಡಳಿಯ ಸನ್ನದ್ಧತೆಯನ್ನು ಖಾತರಿಪಡಿಸುವುದು ಈ ಯೋಜನೆಯ ಉದ್ದೇಶ. ಸದ್ಯ ಪರೋಕ್ಷ

## ನಿಮಗಿದು ತಿಳಿದಿದೆಯೇ?

ತೆರಿಗೆ ಪಾವತಿದಾರರ ಸಂಖ್ಯೆ 36 ಲಕ್ಷ ಇದ್ದು, ಜಿಎಸ್‌ಟಿ ಜಾರಿಗೆ ಬಂತೆಂದರೆ, ಈ ಸಂಖ್ಯೆ 65 ಲಕ್ಷದ ಗಡಿದಾಟುವ ನಿರೀಕ್ಷೆ ಇದೆ. ಈ ಎಲ್ಲ ತೆರಿಗೆ ಪಾವತಿದಾರರು ಆಮದು, ರಫ್ತುದಾರರು, ಡೀಲರ್‌ಗಳ ಸೇವಾ ಅಗತ್ಯತೆ ಲಕ್ಷ್ಯದಲ್ಲಿರಿಸಿ ಈ ಯೋಜನೆ ರೂಪಿಸಲಾಗಿದೆ. 2008ರಲ್ಲಿ ರೂಪಿಸಲಾದ ಸದ್ಯದ ಐಟಿ ವ್ಯವಸ್ಥೆ, ಹೊಸ ಸವಾಲನ್ನು ನಿಭಾಯಿಸುವಂತೆ ಅದರ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಿ, ಆಧುನೀಕರಿಸಲಾಗುತ್ತಿದೆ.

ಸರಕು ಮತ್ತು ಸೇವಾ ತೆರಿಗೆ ಕಾರ್ಯಜಾಲ ಸಿಬಿಇಸಿಗೆ ಕಳಿಸಿದ ನೊಂದಣಿ, ಪಾವತಿ, ರಿಟರ್ನ್ ದಾಖಲೆಗಳನ್ನು ವ್ಯವಸ್ಥಿತಗೊಳಿಸಲು ಎರಡೂ ವ್ಯವಸ್ಥೆಗಳನ್ನು ಸಮನ್ವಯಗೊಳಿಸಬೇಕಾಗುತ್ತದೆ. ಇದಲ್ಲದೆ ಅವು ಲೆಕ್ಕ ಪರಿಶೀಲನೆ, ಮನವಿ, ಅನುಶೋಧನೆಗೂ ಸಿದ್ಧವಾಗಿರಬೇಕಾಗುತ್ತದೆ. ಕಸ್ಟಮ್ಸ್, ಕೇಂದ್ರ ಅಬ್ಕಾರಿ ಸೇವಾ ತೆರಿಗೆ ವ್ಯವಸ್ಥೆಗಳಲ್ಲಿ ಸಿಬಿಐಸಿ ಸೇವೆ ಒದಗಿಸಲು ಮತ್ತು ಏಕಗವಾಕ್ಷ ಸೌಲಭ್ಯ ಹಾಗೂ ಇ–ನಿವೇಶ್, ಇ–ತಾಲ್, ಇ–ಸೈನ್‌ಗಳಂತಹ ಉಪಕ್ರಮಗಳ ಜತೆಗೂ ಸಮನ್ವಯ–ಗೊಳ್ಳಬೇಕಾಗುತ್ತದೆ. ಇವೆಲ್ಲ ಸರಳ ಹಾಗೂ ತ್ವರಿತಗತಿಯಲ್ಲಿ ನಡೆಯಬೇಕಾಗುತ್ತದೆ. ಕಸ್ಟಮ್ಸ್‌ನ ಇಡಿಐ ವ್ಯವಸ್ಥೆ ದೇಶದ 140 ಸ್ಥಳಗಳಲ್ಲಿ ಕಾರ್ಯಾಚರಣೆಯಲ್ಲಿದ್ದು ಇವುಗಳನ್ನು ತ್ವರಿತ, ಉತ್ತಮ ಸೇವೆಗಳೊಂದಿಗೆ ಇನ್ನೂ ಅನೇಕ ಸ್ಥಳಗಳಿಗೆ ವಿಸ್ತರಿಸಬೇಕಾಗಿದೆ. ಪಾವತಿದಾರರಿಗೆ ಅಲೆದಾಟ ಆಗದೇ ಅನುಕೂಲವಾಗುವಂತೆ ಡಿಜಿಟಲ್ ಸಹಿಯ ಸ್ಕ್ಯಾನ್ಡ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಅವಕಾಶ ಕಲ್ಪಿಸಬೇಕಾಗುತ್ತದೆ. 2256 ಕೋಟಿ ರೂಪಾಯಿ ವೆಚ್ಚದ ಈ ಯೋಜನೆಯ ಪೂರ್ಣಾವಧಿ, ಏಳು ವರ್ಷಗಳಾಗಿವೆ. ❑

(11ನೇ ಪುಟದಿಂದ)

## ಬಯಲು ಬಹಿರ್ದೆಸೆಮುಕ್ತದತ್ತ ದೃಢ ಹೆಜ್ಜೆ

* 2016–17ನೇ ಸಾಲಿನ ಸೆಪ್ಟೆಂಬರ್– 2016ರ ಅಂತ್ಯಕ್ಕೆ ಒಟ್ಟು 2.70ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳ ಪ್ರಗತಿಯಾಗಿದ್ದು, 2.01ಲಕ್ಷ ಕಾರ್ಯಾದೇಶ ವಿತರಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತವೆ. * ಒಟ್ಟಾರೆ 25.15ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳ ಪ್ರಗತಿ ಸಾಧಿಸಲಾಗಿದ್ದು, ಅಗತ್ಯವಿರುವ ಇನ್ನೂ 29.14 ಲಕ್ಷ ವೈಯಕ್ತಿಕ ಗೃಹ ಶೌಚಾಲಯಗಳನ್ನು ಅಕ್ಟೋಬರ್ 2, 2018ರೊಳಗೆ "ಬಯಲು ಬಹಿರ್ದೆಸೆ ಮುಕ್ತ" ರಾಜ್ಯವನ್ನಾಗಿಸಲು ಗುರಿ ಹೊಂದಿದೆ. * ಅಕ್ಟೋಬರ್ 2, 2016ರೊಳಗೆ ಸುಮಾರು 25.15ಲಕ್ಷ ಶೌಚಾಲಯಗಳನ್ನು ನಿರ್ಮಿಸಿ 5 ಜಿಲ್ಲೆಗಳನ್ನು ಬಯಲು ಬಹಿರ್ದೆಸೆ ಮುಕ್ತಗೊಳಿಸಿರುತ್ತದೆ. ಉಳಿದ 8 ಜಿಲ್ಲೆಗಳು (ಶಿವಮೊಗ್ಗ, ಚಿಕ್ಕಮಗಳೂರು, ರಾಮನಗರ, ಉತ್ತರ ಕನ್ನಡ, ಧಾರವಾಡ, ಮಂಡ್ಯ, ಕೊಪ್ಪಳ ಹಾಗೂ ಚಿಕ್ಕಬಳ್ಳಾಪುರ) ಶೇ.70%ಕ್ಕಿಂತಲ್ಲೂ ಅಧಿಕ ಪ್ರಮಾಣದಲ್ಲಿ ಶೌಚಾಲಯಗಳನ್ನು ನಿರ್ಮಿಸಿ ಬಯಲು ಬಹಿರ್ದೆಸೆ ಮುಕ್ತವಾಗುವ ನಿಟ್ಟಿನಲ್ಲಿ ಮುನ್ನುಗ್ಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿನ ಈ ಅದ್ಭುತ ಸಾಧನೆಯನ್ನು ಗ್ರಾಮಾಭ್ಯುದಯ ಜಯಂತಿಯನ್ನಾಗಿ ದಿನಾಂಕ 02.10.2016ರಂದು ಮಹಾತ್ಮಗಾಂಧಿಜಿಯವರ ಜಯಂತಿಯಂದು ಆಚರಿಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮೀಣ ಸ್ವಚ್ಛತೆಗೆ ಪ್ರೇರೇಪಿಸಿದ ಹಾಗೂ ಪ್ರೇರೇಪಣೆಯಾದ ಮಹನೀಯರನ್ನು ಮುಖ್ಯ ಮಂತ್ರಿಗಳಿಂದ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಬಹುತೇಕ ಎಲ್ಲಾ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ವರ್ಗದ ಅಧಿಕಾರಿಗಳ ಸಮರ್ಥ ನಾಯಕತ್ವದಲ್ಲಿ ಮತ್ತು ಸಮನ್ವಯದೊಂದಿಗೆ ಈ ಪ್ರಗತಿಯನ್ನು ಸಾಧಿಸಬೇಕಾಗಿರುತ್ತದೆ. ಕೇಂದ್ರ ಸರ್ಕಾರವು ಮಹಾತ್ಮಗಾಂಧೀಜಿಯವರ ಅಕ್ಟೋಬರ್ 2, 2019ರ 150ನೇ ಜನ್ಮ ದಿನದಂದು ಇಡೀ ರಾಷ್ಟ್ರವನ್ನು ಬಯಲು ಬಹಿರ್ದೆಸೆ ಮುಕ್ತವಾಗಿಸುವ ಉದ್ದೇಶ ಹೊಂದಿರುತ್ತದೆ.

ಆದರೆ ಕರ್ನಾಟಕ ಸರ್ಕಾರವು ಅದಕ್ಕಿಂತಲ್ಲೂ 1 ವರ್ಷ ಮುಂಚಿತವಾಗಿ ಅಂದರೆ 02.10.2018ರೊಳಗೆ ಕರ್ನಾಟಕ ಗ್ರಾಮೀಣ ಪ್ರದೇಶವನ್ನು "ಬಯಲು ಬಹಿರ್ದೆಸೆ ಮುಕ್ತ"ವಾಗಿಸಲು ಪಣತೊಟ್ಟಿರುತ್ತದೆ. ಅದರಂತೆ "ಬಯಲು ಬಹಿರ್ದೆಸೆ ಮುಕ್ತ"ಗೊಳಿಸುವ ಜಿಲ್ಲಾವಾರು ಗುರಿ ಹಮ್ಮಿಕೊಳ್ಳಲಾಗಿದೆ. ಸರ್ಕಾರದ ಈ ಎಲ್ಲಾ ದೃಢ ನಿರ್ಧಾರ ಹಾಗೂ ನಿಲುವನ್ನು ಎಲ್ಲಾ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರು, ಶಾಸಕರು, ಸಂಸದರು, ಹಾಗೂ ಎಲ್ಲಾ ಅಧಿಕಾರಿಗಳು ಸವಾಲಾಗಿ ಸ್ವೀಕರಿಸಿ ಸಮಗ್ರ ಅನುಷ್ಠಾನವನ್ನು ಮಾಡುವ ಮೂಲಕ ಬಯಲು ಬಹಿರ್ದೆಸೆ ಮುಕ್ತ ಸ್ವಚ್ಛ ಹಾಗೂ ಸುಂದರ ನಿರ್ಮಲ ಕರ್ನಾಟಕವನ್ನು ನಿರ್ಮಿಸುವತ್ತ ದೃಢ ಹೆಜ್ಜೆ ಇಡಲಾಗಿದೆ. ❑

ಆಹಾರ ಧಾನ್ಯಗಳು ಸೇರಿದಂತೆ ಗ್ರಾಹಕ ದರ ಸೂಚ್ಯಂಕದಲ್ಲಿರುವ ಸುಮಾರು ಅರ್ಧದಷ್ಟು ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ ತಿಳಿಸಿದ್ದಾರೆ. ಹಣದುಬ್ಬರ ನಿಯಂತ್ರಿಸಲು ಮತ್ತು ಬಡವರ ಹಿತರಕ್ಷಣೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ದೆಹಲಿಯಲ್ಲಿ ಸರಕು ಮತ್ತು ಸೇವಾ ತೆರಿಗೆ – ಜಿಎಸ್‌ಟಿ ಮಂಡಳಿ ಸಭೆಯ ನಂತರ ಸುದ್ದಿಗಾರರಿಗೆ ವಿವರ ನೀಡಿದ ಅವರು, ಜನಸಾಮಾನ್ಯರು ಬಳಸುವ ಉಪಭೋಗಿ ವಸ್ತುಗಳಿಗೆ ಶೇಕಡ 5ರಷ್ಟು ತೆರಿಗೆ ವಿಧಿಸಲಾಗುವುದು ಎಂದರು. ಇದಕ್ಕೂ ಮುನ್ನ ನಡೆದ ಮಂಡಳಿ ಸಭೆಯಲ್ಲಿ ಶೇಕಡ 5, 12, 18 ಮತ್ತು 28ರ ನಾಲ್ಕು ಹಂತದ ಜಿಎಸ್‌ಟಿ ತೆರಿಗೆ ವ್ಯವಸ್ಥೆಗೆ ಅಂತಿಮ ಅಂಗೀಕಾರ ನೀಡಲಾಯಿತು. ಸದ್ಯ ಶೇಕಡ 30 ರಿಂದ 31ರಷ್ಟು ತೆರಿಗೆ ವಿಧಿಸಲಾಗುತ್ತಿರುವ ವಸ್ತುಗಳಿಗೆ ಜಿಎಸ್‌ಟಿ ಅಡಿ ಶೇಕಡ 28 ರಷ್ಟು ತೆರಿಗೆ ವಿಧಿಸಲಾಗುವುದು. ಇದಲ್ಲದೆ, ಐಷರಾಮಿ

## ವಾರ್ತಾ ವಿಶೇಷ

ಕಾರುಗಳು, ವಿಲಾಸಿ ವಸ್ತುಗಳು, ತಂಬಾಕು ಉತ್ಪನ್ನ ಹಾಗೂ ತಂಪು ಪಾನೀಯಗಳ ಮೇಲೆ ಗರಿಷ್ಠ ತೆರಿಗೆ ವಿಧಿಸಲಾಗುವುದು ಎಂದು ಅವರು ಹೇಳಿದ್ದಾರೆ. ಮುಂದಿನ ವರ್ಷ ಏಪ್ರಿಲ್ 1ರಿಂದ ಜಿಎಸ್‌ಟಿ ಜಾರಿಗೆ ಬರಲಿದೆ.

* * *

ಭಾರತದ ಆಧುನಿಕ ಸಂವಹನ ಉಪಗ್ರಹ ಜಿಸ್ಯಾಟ್ 18 ಉಪಗ್ರಹವನ್ನು ಫ್ರೆಂಚ್ ಗಯಾನಾದ ಕೌರುದಿಂದ ಇತ್ತೀಚೆಗೆ ಯಶಸ್ವಿಯಾಗಿ ಹಾರಿಬಿಡಲಾಗಿದೆ. ಭಾರತೀಯ ಬಾಹ್ಯಾಕಾಶ ಜಿಸ್ಯಾಟ್–18 ಉಪಗ್ರಹ ದೂರಸಂಪರ್ಕ ಸೇವೆಯನ್ನು ಬಲಪಡಿಸಲಿದೆ. 3,404 ಕೆ.ಜಿ. ಭಾರದ ಜಿಸ್ಯಾಟ್ ಉಪಗ್ರಹ ಸಿಬ್ಯಾಂಡ್, ವಿಸ್ತೃತ ಸಿ ಬ್ಯಾಂಡ್ ಮತ್ತು ಕೆಯುಬ್ಯಾಂಡ್ ತರಂಗಗಳಲ್ಲಿ ಸೇವೆ ಸಲ್ಲಿಸುವ 48 ಸಂವಹನ ಟ್ರಾನ್ಸ್ ಪಾಂಡರುಗಳನ್ನು ಹೊಂದಿದೆ.

* * *

ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿದ ಪ್ರಸಕ್ತ ವರ್ಷದ ಲಿಂಗ ಸಮಾನತೆಯ ಪಟ್ಟಿಯಲ್ಲಿ ಭಾರತಕ್ಕೆ 87ನೇ ಸ್ಥಾನ ಲಭಿಸಿದೆ.

ಭಾರತ 21 ಸ್ಥಾನ ಮೇಲಕ್ಕೇರಿದ್ದು, ಕಳೆದ ವರ್ಷ 108ನೇ ಸ್ಥಾನದಲ್ಲಿತ್ತು. ಜಿನಿವಾ ದೇಶದ ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿದ ಪಟ್ಟಿಯಲ್ಲಿ ಒಟ್ಟು 144 ದೇಶಗಳಿದ್ದವು.

ಈ ಪಟ್ಟಿಯಲ್ಲಿ ಚೀನಾ 99ನೇ ಸ್ಥಾನ ಹಾಗೂ ಪಾಕಿಸ್ತಾನ 143ನೇ ಸ್ಥಾನಗಳನ್ನು ಪಡೆದುಕೊಂಡಿವೆ.

ಶಿಕ್ಷಣ, ಅರ್ಥವ್ಯವಸ್ಥೆ, ಆರೋಗ್ಯ ಹಾಗೂ ರಾಜಕೀಯ ಪ್ರಾತಿನಿಧ್ಯ ಕ್ಷೇತ್ರಗಳನ್ನು ಮಾನದಂಡಗಳಾಗಿ ಪರಿಶೀಲಿಸಿ ಲಿಂಗ ಸಮಾನತೆಯ ಪ್ರಮಾಣವನ್ನು ವರದಿ ಮಾಡಲಾಗಿದೆ. ಭಾರತ ಶಿಕ್ಷಣ ವಲಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಸುಧಾರಣೆ ಕಂಡಿದ್ದು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಲಿಂಗ ಅಸಮಾನತೆ ಸಂಪೂರ್ಣವಾಗಿ ನಿವಾರಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

* * *